# ಬೌದ್ಧ ಧರ್ಮದ ಮೂಲ ಬೋಧನೆಗಳು

## ಮಹಾಬೋಧಿ ಪಾಲಿ ಮತ್ತು ಬೌದ್ಧ ಅಧ್ಯಯನ ಕೇಂದ್ರದ ಡಿಪ್ಲೊಮಾ ಪಠ್ಯಪುಸ್ತಕ
## ಭಾಗ–I

ಇಂಗ್ಲಿಷ್ ಮೂಲ

**ಪೂಜ್ಯ ಆಚಾರ್ಯ ಬುದ್ಧರಕ್ಷಿತ**

ಕನ್ನಡಕ್ಕೆ

**ಮೊಳಕಾಲ್ಮೂರು ಶ್ರೀನಿವಾಸಮೂರ್ತಿ**

**ಬುದ್ಧ ವಚನ ಟ್ರಸ್ಟ್**
**ಮಹಾ ಬೋಧಿ ಸೊಸೈಟಿ**
**ಗಾಂಧಿನಗರ, ಬೆಂಗಳೂರು–560 009**



ಪ್ರಕಾಶನ :
**ಬುದ್ಧ ವಚನ ಟ್ರಸ್ಟ್**
14, ಕಾಳಿದಾಸ ಮಾರ್ಗ
ಗಾಂಧಿನಗರ, ಬೆಂಗಳೂರು–560 009
ದೂರವಾಣಿ : 080–22250684
ಫ್ಯಾಕ್ಸ್ : 080–22264438
E-mail : books@mahabodhi.info

ಹಕ್ಕು ಬುದ್ಧ ವಚನ ಟ್ರಸ್ಟ್ – ಎಲ್ಲ ಹಕ್ಕುಗಳನ್ನು ಕಾಯ್ದಿರಿಸಿದೆ.

ಪ್ರತಿಗಳು : 1000 (ಜುಲೈ 2008)

**ಬೆಲೆ : ರೂ. 60/–**

ಮುಖಪುಟ ವಿನ್ಯಾಸ : **ಶ್ರೀ ಸಿ. ಚಂದ್ರಶೇಖರ**

ಮುದ್ರಕರು :
**ಶ್ರೀ ಅರವಿಂದ್ ಪ್ರಿಂಟರ್ಸ್**
ಸರಸ್ವತಿಪುರಂ, ಬೆಂಗಳೂರು–560 096
ದೂ : 080–23498198, ಮೊ : 9916461691

## ಮುನ್ನುಡಿ

ಬೌದ್ಧ ಧರ್ಮದ ಮೂಲ ಬೋಧನೆಗಳು, ಭಾಗ–1 ಪುಸ್ತಕವು ಡಿಬಿಸ್ (ಡಿಪ್ಲೊಮಾ ಇನ್ ಬುದ್ಧಿಸ್ಟ್ ಸ್ಟಡೀಸ್) ಕೋರ್ಸಿಗೆ ಗೊತ್ತು ಮಾಡಲಾದ ಪಠ್ಯಪುಸ್ತಕ. ಮಹಾಬೋಧಿ ಬುದ್ಧಿಸ್ಟ್ ಓಪನ್ ಯುನಿವರ್ಸಿಟಿಯು (ಎಂಬಿಓಯು) ಈ ಕೋರ್ಸನ್ನು ನಡೆಸುತ್ತಿದ್ದು, ಈ ಪುಸ್ತಕವು ಮಹಾಬೋಧಿ ಮೊನಾಸ್ಟಿಕ್ ಇನ್‌ಸ್ಟಿಟ್ಯೂಟ್‌ನಲ್ಲಿನ ಸಂನ್ಯಾಸಿಗಳಿಗೂ ನಿಯಮಿಸಲಾದ ಪಠ್ಯ ಪುಸ್ತಕವಾಗಿದೆ.

ಈ ಪುಸ್ತಕದಲ್ಲಿ ಒಟ್ಟು ಒಂಭತ್ತು ಅಧ್ಯಾಯಗಳಿದ್ದು, ಈ ಪುಸ್ತಕದ ಆಧಾರದ ಮೇಲೆಯೇ ಡಿಬಿಎಸ್ ಕರೆಸ್ಪಾಂಡೆನ್ಸ್ ಕೋರ್ಸ್‌ನ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಲಾಗುತ್ತದೆ. ಈ ಕೋರ್ಸ್‌ನ ಮುಖ್ಯ ಉದ್ದೇಶವೆಂದರೆ ಬುದ್ಧನ ತತ್ವಗಳನ್ನು ಸ್ಪಷ್ಟವಾಗಿ ತಿಳಿಹೇಳಿ ಜನರನ್ನು ಬೌದ್ಧ ಧ್ಯಾನಗಳತ್ತ ಮತ್ತು ಪಂಚಶೀಲಗಳತ್ತ ಸೆಳೆದು ಸಾಧನಾಪಥದಲ್ಲಿ ಅವರನ್ನು ಮುಂದುವರಿಸುವುದು.

ಈ ಕೋರ್ಸಿನಲ್ಲಿ ಜ್ಞಾನಾರ್ಜನೆ ಮತ್ತು ಸಾಧನೆಗೆ ಸಂಬಂಧಿಸಿದ ಸಂಗತಿಗಳನ್ನು ಒಟ್ಟಿಗೆ ಸೇರಿಸಲಾಗಿದೆ. ಹೀಗೆ ಕೋರ್ಸ್ ಮುಗಿಯುವ ಹೊತ್ತಿಗೆ ವಿದ್ಯಾರ್ಥಿಗಳು ಬೌದ್ಧ ಧರ್ಮದಲ್ಲಿ ಅಡಗಿರುವ ಅತ್ಯುತ್ತಮ ವಿಚಾರಗಳನ್ನು ಭಿಕ್ಷುಗಳಾಗಿಯೊ ಇಲ್ಲವೇ ಉಪಾಸಕರಾಗಿಯೋ ಜಗತ್ತಿನಾದ್ಯಂತ ಪಸರಿಸಬಹುದು.

ಡಿಬಿಎಸ್ ಕೋರ್ಸಿಗೆ ಸೇರಿಕೊಂಡ ವಿದ್ಯಾರ್ಥಿಗಳು ಪ್ರತಿ ತಿಂಗಳ ಮೊದಲ ವಾರದಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಅಂಚೆ ಮುಖಾಂತರವಾಗಲಿ, ಇಲ್ಲವೆ ಇ–ಮೇಲ್ ಮೂಲಕವಾಗಲಿ ಪಡೆಯುತ್ತಾರೆ. ಇಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಹೇಗೆ ರೂಪಿಸಲಾಗಿದೆ ಎಂದರೆ ಅವುಗಳನ್ನು ಉತ್ತರಿಸುತ್ತಾ ಹೋದಂತೆ ಭಗವಾನ್ ಬುದ್ಧನ ಬೋಧನೆಗಳನ್ನು ಹಂತಹಂತವಾಗಿ ಅರಿಯುತ್ತಾ ಹೋಗಬಹುದು. ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಗಳನ್ನು ಪಡೆದ ಇಪ್ಪತ್ತು ದಿನಗಳೊಳಗಾಗಿ ಉತ್ತರ ಬರೆದು ಅಂಚೆ ಅಥವಾ ಇ–ಮೇಲ್ ಮೂಲಕ ಕಳಿಸಬೇಕಾಗುತ್ತದೆ.

ಎಂಬಿಓಯು ಮುಂದಿನ ತಿಂಗಳಲ್ಲಿ ಸರಿ ಉತ್ತರ ಪತ್ರಿಕೆಯನ್ನು ವಿದ್ಯಾರ್ಥಿಗಳಿಗೆ ಕಳಿಸುತ್ತದೆ. ಹೀಗೆ ವಿದ್ಯಾರ್ಥಿಯು ತಾನು ಈ ಹಿಂದೆ ಬರೆದು ಕಳಿಸಿದ ಉತ್ತರಗಳು ಸರಿ ಇವೆಯೇ ಎಂಬುದನ್ನು ಅವರೇ ಪರಿಶೀಲಿಸಿಕೊಳ್ಳಬಹುದು. ವರ್ಷದ ಕೊನೆಯಲ್ಲಿ ಪರೀಕ್ಷೆಗಳನ್ನು ನಡೆಸಲಾಗುವುದು. ಪ್ರತಿ ವರ್ಷ ಮೇ ತಿಂಗಳಲ್ಲಿ ನಡೆಯುವ ಬುದ್ಧ ಜಯಂತಿಯ ದಿನ ಡಿಪ್ಲೊಮಾಗಳನ್ನು ವಿಶೇಷ ಘಟಿಕೋತ್ಸವ ಸಮಾರಂಭದಲ್ಲಿ ವಿತರಿಸಲಾಗುವುದು.

ಡಿಬಿಎಸ್ ಕೋರ್ಸ್‌ನ್ನು ಎರಡು ಭಾಗಗಳನ್ನಾಗಿ ಮಾಡಲಾಗಿದೆ. ಮೊದಲ ಭಾಗಕ್ಕೆ ಇದು ಪಠ್ಯಪುಸ್ತಕವಾಗಿದೆ.

**ಪೂಜ್ಯ ಆಚಾರ್ಯ ಬುದ್ಧರಕ್ಖಿತ**
ಮಹಾಬೋಧಿ ಸೊಸೈಟಿ, ಬೆಂಗಳೂರು



## ಅನುವಾದಕನ ಮಾತು

ಪರಮ ಪೂಜ್ಯ ಆಚಾರ್ಯ ಬುದ್ಧರಕ್ಖಿತರ ಪುಸ್ತಕವೊಂದನ್ನು ಕನ್ನಡಕ್ಕೆ ಅನುವಾದ ಮಾಡುವುದೇ ಒಂದು ಪುಣ್ಯದ ಕೆಲಸ. ಭಗವಾನ್ ಬುದ್ಧನನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ನನಗೊಂದು ಸುವರ್ಣ ಅವಕಾಶ ಸಿಕ್ಕಿದೆ. ಪುಸ್ತಕವನ್ನು ಅನುವಾದ ಮಾಡುತ್ತಾ ಹೋದಂತೆ ಅರ್ಧಂಬರ್ಧ ಗೊತ್ತಿರುವ ಸಂಗತಿಗಳು ಪೂರ್ಣವಾಗಿ ಅರಿವಾಗಿ 'ಬುದ್ಧ' ಎಂದರೆ ಇಷ್ಟು ಸರಳ, ಸುಂದರವೇ ಎನಿಸುತ್ತದೆ. ನನಗಂತೂ ಈ ಪುಸ್ತಕವನ್ನು ಅನುವಾದಗೊಳಿಸಿದ ಮೇಲೆ ಅರಣ್ಯದ ಗುಹೆಯೊಂದರ ಒಳಗೆ ಹೋಗಿ ಧ್ಯಾನ ಮಾಡಿ ಬಂದ ನಂತರ ಯಾವ ಪ್ರಸನ್ನ ಚಿತ್ತವಿರುವುದೋ ಆ ರೀತಿ ನನಗಾಗಿದೆ. ಇಂತಹ ಪ್ರಸನ್ನತೆಯನ್ನು ನೀಡಿದ ಪರಮ ಪೂಜ್ಯರಿಗೆ ಮನಸಾರೆ ವಂದಿಸುತ್ತೇನೆ.

**– ಮೊಳಕಾಲ್ಮೂರು ಶ್ರೀನಿವಾಸಮೂರ್ತಿ**

18–7–2008
ಬೆಂಗಳೂರು

## ಪರಿವಿಡಿ


**ಅಧ್ಯಾಯ–1**

**ಬೌದ್ಧೋಪಾಸನೆ** **1**

1. ಕ್ಷಮಾಪಣೆ 1
2. ಶೀಲಯಾಚನೆ 1
3. ತಿಸರಣ 2
4. ಪಂಚ ಶೀಲಗಳು 3
5. ಅಷ್ಟ ಶೀಲಗಳು 4
6. ದಶ ಶೀಲಗಳು 4
7. ಬುದ್ಧ ವಂದನೆ 5
8. ಧಮ್ಮ ವಂದನೆ 7
9. ಸಂಘ ವಂದನೆ 8
10. ರತ್ನತ್ತಯ ಬಲ 9
11. ಪ್ರದೀಪ ಪೂಜೆ 9
12. ಧೂಪ ಪೂಜೆ 9
13. ಹೂವಿನಿಂದ ಪೂಜೆ 10
14. ಸುಗಂದ ಪೂಜೆ 10
15. ಆಹಾರ ಪೂಜೆ 10
16. ಎಲ್ಲ ಬುದ್ಧರ ಪೂಜೆ 10
17. ಪಟಿಪತ್ತಿ ಪೂಜೆ 11
18. ಚೈತ್ಯ ವಂದನೆ 12
19. ಬೋಧಿ ವಂದನೆ 12
20. ಕ್ಷಮಾಯಾಚನೆ 12
21. ಪುಣ್ಯಾನುಮೋದನೆ 13
22. ಸಂಕಲ್ಪ 14

**ಅಧ್ಯಾಯ–2**

**ರಕ್ಷಣಾ ಪಠನೆ** **15**

1. ಆವಾಹನೆ 15
2. ಮಹಾಮಂಗಳ ಸುತ್ತ 18
3. ರತನಸುತ್ತ 22
4. ಕರಣೀಯ ಮೆತ್ತಾ ಸುತ್ತ 29





**ಅಧ್ಯಾಯ–3**

**ಬುದ್ಧ ಪದದ ಅರ್ಥ** **33**

1. ದೋಣ ಸುತ್ತ; ಬುದ್ಧತ್ವದ ಬಗ್ಗೆ ಸ್ವಯಂ ಬುದ್ಧನೇ ನೀಡಿದ ವಿವರಣೆ 37
2. ಬುದ್ಧ ಉಪಕನನ್ನು ಸಂಧಿಸಿದ್ದು 40

**ಅಧ್ಯಾಯ–4**

**ಬೋಧಿಸತ್ತ ಆದರ್ಶ** **43**

**1. ಬೋಧಿಸತ್ತ ಸುಮೇಧ ಪಂಡಿತ 43**

**2. ಇಪ್ಪತ್ತೆಂಟು ಬುದ್ಧರಿಗೆ ನಮನಗಳು 53**

**ಅಧ್ಯಾಯ–5**

**ಗೌತಮ ಬುದ್ಧನ ಚಾರಿತ್ರಿಕ ಹಿನ್ನೆಲೆ (ಹುಟ್ಟಿನಿಂದ ಜ್ಞಾನೋದಯದವರೆಗೆ)**

1. ಬೋಧಿಸತ್ತ ಸೇತಕೇತು 58
2. ಬೋಧಿಸತ್ತನ ಹುಟ್ಟು 59
3. ರಾಣಿ ಮಹಾಮಾಯಾದೇವಿಯ ಕನಸು 59
4. ಸಿದ್ಧಾರ್ಥನ ಹುಟ್ಟು 60
5. ಋಷಿಯ ಭವಿಷ್ಯವಾಣಿ 60
6. ಬಾಲಕನಿದ್ದಾಗಲೇ ರಕ್ಷಣೆ ಮಾಡಿದ್ದು 61
7. ರಾಜಕುಮಾರ ಸಿದ್ಧಾರ್ಥನ ಮದುವೆ 61
8. ನಾಲ್ಕು ದೃಶ್ಯಗಳು 62
9. ಮಹಾ ಪರಿತ್ಯಾಗ 63
10. ಜೀವಂತ ಅಸ್ಥಿಪಂಜರ 64
11. ಸುಜಾತಳ ಕೊಡುಗೆ 65
12. ಅಂತಿಮ ಹೋರಾಟ 66
13. ಧರ್ಮಚಕ್ರ ಪ್ರವರ್ತನೆ 69

**ಅಧ್ಯಾಯ–6**

**ಧಮ್ಮಚಕ್ಕ ಪವತ್ತನ ಸುತ್ತ** **73**

1. ಎರಡು ಅತಿರೇಖಗಳು 73
2. ಮಧ್ಯಮ ಮಾರ್ಗ 73
3. ಆರ್ಯ ಅಷ್ಟಾಂಗಿಕ ಮಾರ್ಗ 73
4. ಚತುರಾರ್ಯಸತ್ಯಗಳು 74
5. ಧರ್ಮಚಕ್ರ ಪವತ್ತನ ಸುತ್ತದ ಮೇಲೆ ಒಂದು ಕಿರು ವ್ಯಾಖ್ಯಾನ 78

## ಅಧ್ಯಾಯ–7

**ಸತ್ಯದ ಸಂದೇಶಕರು**


1. ಮೊದಲ ಮಳೆಗಾಲದ ವಾಸ 84
2. ಅರಹತ ಯಸನ ಕಥೆ 84
3. ಅರವತ್ತು ಧರ್ಮ ಪ್ರಚಾರಕರು 88


## ಅಧ್ಯಾಯ–8


**ಎಲ್ಲ ಬುದ್ಧರ ಬೋಧನೆಯ ತಿರುಳು 91**

1. ಬೌದ್ಧ ಧರ್ಮದಲ್ಲಿ ಕೆಡಕು, ಒಳಿತು, ಮತ್ತು ಸ್ವಯಂ ಪರಿಶುದ್ಧಿಗಳ ಅರ್ಥ 94
2. ಬದುಕಿನ ಉದ್ದೇಶ 98
3. ಎರಡು ಸತ್ಯಗಳು 100


## ಅಧ್ಯಾಯ–9


**ಮೂಲ ಧ್ಯಾನಗಳು 102**

1. ಅನುಸ್ಸತಿ – ಮೂರು ಸ್ಮರಣೆಗಳು 102
   - i. ಬುದ್ಧಾನುಸ್ಸತಿ 102
   - ii. ಧಮ್ಮಾನುಸ್ಸತಿ 106
   - iii. ಸಂಘಾನುಸ್ಸತಿ 109
2. ಚತುರಾರಖ್ಖಾ ಭಾವನಾ – ನಾಲ್ಕು ರಕ್ಷಣಾ ಧ್ಯಾನಗಳು 112
   - i. ಬುದ್ಧಾನುಸ್ಸತಿ – ಬುದ್ಧನ ಅಸಮಾನ ಗುಣಗಳ ಸ್ಮರಣೆ 112
   - ii. ಮೆತ್ತಾ ಭಾವನಾ 114
   - iii. ಅಸುಭ ಸಞ್ಞಾ 116
   - iv. ಮರಣಾನುಸ್ಸತಿ 117
3. ಅಭಿಣ್ಹ ಪಚ್ಚವೇಕ್ಖಿತಬ್ಬಂ ವಾಸ್ತವತೆಗಳ ನಿರಂತರ ಸ್ಮರಣೆ 119

## ಅಧ್ಯಾಯ–1

# ಬೌದ್ಧೋಪಾಸನೆ

**1. ಖಮಾಪನಾ – ಕ್ಷಮಾಪಣೆ (ಸ್ವಯಂ ಶುದ್ಧೀಕರಣ)**

**ಓಕಾಸ ! ದ್ವಾರತ್ತಯೇನ ಕತಂ ಸಬ್ಬಂ ಅಪರಾಧಂ ಖಮಥ ಮೇ ಭಂತೇ !**

ಪೂಜ್ಯರೇ, ಮೂರು ದ್ವಾರಗಳಾದ ಕಾಯಾ, ವಾಚಾ, ಮನಸ್ಸುಗಳಿಂದ ಮಾಡಿದ ನನ್ನ ಎಲ್ಲ ಅಪರಾಧಗಳನ್ನು ಕ್ಷಮಿಸಿರಿ.

**ದುತಿಯಂಪಿ ಓಕಾಸ ! ದ್ವಾರತ್ತಯೇನ ಕತಂ ಸಬ್ಬಂ ಅಪರಾಧಂ ಖಮಥ ಮೇ ಭಂತೇ !**

ಎರಡನೇಬಾರಿ. ಪೂಜ್ಯರೇ, ಮೂರು ದ್ವಾರಗಳಾದ ಕಾಯಾ ವಾಚಾ ಮನಸ್ಸುಗಳಿಂದ ಮಾಡಿದ ನನ್ನ ಎಲ್ಲ ಅಪರಾಧಗಳನ್ನು ಕ್ಷಮಿಸಿರಿ.

**ತತಿಯಂಪಿ ಓಕಾಸ ! ದ್ವಾರತ್ತಯೇನ ಕತಂ ಸಬ್ಬಂ ಅಪರಾಧಂ ಖಮಥ ಮೇ ಭಂತೇ ! ಅನುಕಂಪಂ ಉಪಾದಾಯ.**

ಮೂರನೆಯ ಬಾರಿ. ಪೂಜ್ಯರೇ, ಮೂರು ದ್ವಾರಗಳಿಂದ ಕಾಯಾ, ವಾಚಾ, ಮನಸ್ಸುಗಳಿಂದ ಮಾಡಿದ ನನ್ನ ಎಲ್ಲ ಅಪರಾಧಗಳನ್ನು ಕ್ಷಮಿಸಿರಿ.

**2. ಸೀಲಯಾಚನಾ–ಶೀಲಯಾಚನೆ**

ಉಪಾಸಕ :

**ಓಕಾಸ ! ಅಹಂ ಭನ್ತೆ, ತಿಸರಣೇನ ಸದ್ಧಿಂ ಪಂಚಸೀಲಂ ಧಮ್ಮಂ ಯಾಚಾಮಿ, ಅನುಗ್ಗಹಂ ಕತ್ವಾ ಸೀಲಂ ದೇಥ ಮೇ ಭನ್ತೆ ! ಅನುಕಂಪಂ ಉಪಾದಾಯ**

ಪೂಜ್ಯರೇ, ನಾನು ತ್ರಿಸರಣದೊಡನೆ ಪಂಚಶೀಲಗಳನ್ನು, ಧಮ್ಮವನ್ನು ಬೇಡುತ್ತೇನೆ. ದಯವಿಟ್ಟು ಅನುಗ್ರಹಿಸಿ, ನನಗೆ ಶೀಲವನ್ನು ನೀಡಿ ಅನುಕಂಪವನ್ನು ತೋರಿಸಿ.

**ದುತಿಯಂಪಿ ! ಓಕಾಸ ! ಅಹಂ ಭನ್ತೇ, ತಿಸರಣೇನ ಸದ್ದಿಂ ಪಂಚಸೀಲಂ ಧಮ್ಮಂ ಯಾಚಾಮಿ, ಅನುಗ್ಗಹಂ ಕತ್ವಾ ಸೀಲಂ ದೇಥ ಮೆ ಭಂತೇ ! ಅನುಕಂಪಂ ಉಪಾದಾಯ.**

ಪೂಜ್ಯರೇ, ನಾನು ತ್ರಿಶರಣದೊಡನೆ ಪಂಚಶೀಲಗಳನ್ನು, ಧರ್ಮವನ್ನೂ ಎರಡನೆಯ ಬಾರಿ ಬೇಡುತ್ತೇನೆ. ದಯವಿಟ್ಟು ಅನುಗ್ರಹಿಸಿ, ನನಗೆ ಶೀಲವನ್ನು ನೀಡಿ ಅನುಕಂಪವನ್ನು ತೋರಿಸಿ.





**ತತಿಯಂಪಿ ! ಓಕಾಸ ! ಅಹಂ ಭನ್ತೆ, ತಿಸರಣೇನ ಸದ್ದಿಂ ಪಂಚಸೀಲಂ ಧಮ್ಮಂ ಯಾಚಾಮಿ ! ಅನುಗ್ಗಹಂ ಕತ್ವಾ ಸೀಲಂ ಧೇಥ ಮೆ ಭಂತೇ ಅನುಕಂಪಂ ಉಪಾದಾಯ!**

ಪೂಜ್ಯರೇ ನಾನು ತ್ರಿಸರಣದೊಡನೆ ಪಂಚಶೀಲವನ್ನು ಧಮ್ಮವನ್ನು ಮೂರನೇಬಾರಿ ಬೇಡುತ್ತೇನೆ, ದಯವಿಟ್ಟು ಅನುಗ್ರಹಿಸಿ, ನನಗೆ ಸೀಲವನ್ನು ನೀಡಿ ಅನುಕಂಪವನ್ನು ತೋರಿಸಿ.

ಗುರು : **ಯಮಹಂ ವದಾಮಿ ತಂ ವದೇಥ.**

ಗುರು : ನಾನು ಹೇಳಿ ಕೊಟ್ಟಂತೆ ಹೇಳು.

ಉಪಾಸಕ : **ಆಮ ಭಂತೆ**

ಉಪಾಸಕ : ಹಾಗೆಯೇ ಆಗಲಿ ಪೂಜ್ಯರೇ

**3. ತಿಸರಣ – ಮೂರು ಬಗೆಯ ಶರಣು**

(ಗುರುವು ಹೇಳಿದಂತೆ ಉಪಾಸಕನು ಹೇಳಬೇಕು)

**ನಮೋ ತಸ್ಸ ಭಗವತೋ ಅರಹತೋ ಸಮ್ಮಾ ಸಂಬುದ್ಧಸ್ಸ !**

ಭಗವಂತರೂ, ಅರ್ಹಂತರೂ ಆದ ಸಮ್ಯಕ್ ಸಂಬುದ್ಧರಿಗೆ ನಮಿಸುತ್ತೇನೆ. (ಮೂರು ಬಾರಿ)

**ಬುದ್ಧಂ ಸರಣಂ ಗಚ್ಛಾಮಿ**

ನಾನು ಬುದ್ಧನಿಗೆ ಶರಣು ಹೋಗುತ್ತೇನೆ.

**ಧಮ್ಮಂ ಸರಣಂ ಗಚ್ಛಾಮಿ**

ನಾನು ಧರ್ಮಕ್ಕೆ ಶರಣು ಹೋಗುತ್ತೇನೆ.

**ಸಂಘಂ ಸರಣಂ ಗಚ್ಛಾಮಿ**

ನಾನು ಬುದ್ಧರ ಸಂಘಕ್ಕೆ ಶರಣು ಹೋಗುತ್ತೇನೆ.

**ದುತಿಯಂಪಿ ಬುದ್ಧಂ ಸರಣಂ ಗಚ್ಛಾಮಿ**

ನಾನು ಎರಡನೆಯ ಬಾರಿ ಬುದ್ಧನಿಗೆ ಶರಣು ಹೋಗುತ್ತೇನೆ.

**ದುತಿಯಂಪಿ ಧಮ್ಮಂ ಸರಣಂ ಗಚ್ಛಾಮಿ**

ನಾನು ಎರಡನೆಯ ಬಾರಿ ಧರ್ಮಕ್ಕೆ ಶರಣು ಹೋಗುತ್ತೇನೆ.

**ದುತಿಯಂಪಿ, ಸಂಘಂ ಸರಣಂ ಗಚ್ಛಾಮಿ**

ನಾನು ಎರಡನೆಯ ಬಾರಿ ಬುದ್ಧರ ಸಂಘಕ್ಕೆ ಶರಣು ಹೋಗುತ್ತೇನೆ.

**ತತಿಯಂಪಿ ಬುದ್ಧಂ ಸರಣಂ ಗಚ್ಛಾಮಿ**

ನಾನು ಮೂರನೆಯ ಬಾರಿ ಬುದ್ಧನಿಗೆ ಶರಣು ಹೋಗುತ್ತೇನೆ.

**ತತಿಯಂಪಿ ಧಮ್ಮಂ ಸರಣಂ ಗಚ್ಛಾಮಿ**

ನಾನು ಮೂರನೆಯ ಬಾರಿ ಧರ್ಮಕ್ಕೆ ಶರಣು ಹೋಗುತ್ತೇನೆ.

**ತತಿಯಂಪಿ ಸಂಘಂ ಸರಣಂ ಗಚ್ಛಾಮಿ**

ನಾನು ಮೂರನೆಯ ಬಾರಿ ಬುದ್ಧರ ಸಂಘಕ್ಕೆ ಶರಣು ಹೋಗುತ್ತೇನೆ.

**ಗುರು : ಸರಣಗಮನಂ ಪರಿಪುಣ್ಣಂ**

ಮೂರು ಬಗೆಯ ಶರಣಗಮನವು ಇಲ್ಲಿಗೆ ಪರಿಪೂರ್ಣಗೊಂಡಿತು.

ಉಪಾಸಕ : **ಅಮ ಭಂತೇ.**

ಉಪಾಸಕ : ಹಾಗೆಯೇ ಆಗಲಿ, ಪೂಜ್ಯರೇ.

## 4. ಪಂಚಸೀಲಂ–ಪಂಚ ಶೀಲಗಳು

1. **ಪಾಣಾತಿಪಾತಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ**

   ನಾನು ಪ್ರಾಣಿಹತ್ಯೆ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
2. **ಅದಿನ್ನಾದಾನಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಕಳ್ಳತನ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
3. **ಕಾಮೇಸು ಮಿಚ್ಛಾಚಾರಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ**

   ವ್ಯಭಿಚಾರ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
4. **ಮುಸಾವಾದಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಸುಳ್ಳು ಹೇಳುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
5. **ಸುರಾ–ಮೇರಯ–ಮಜ್ಜ–ಪಮಾದಟ್ಠಾನಾ ವೇರಮಣಿ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಸುರೆ, ಹೆಂಡ ಅಥವಾ ಪ್ರಜ್ಞಾಹೀನತೆಗೆ ಕಾರಣವಾಗಿರುವ ಮಾದಕ ಪದಾರ್ಥಗಳ ಸೇವನೆಯನ್ನು ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

**ಬಿಕ್ಕು : ತಿಸರಣೇನ ಸದ್ಧಿಂ ಪಂಚಸೀಲಂ ಧಮ್ಮಂ ಸಾಧುಕಂ ಸುರಕ್ಖಿತಂ ಕತ್ವಾ ಅಪ್ಪಮಾದೇನ ಸಂಪಾದೇಥ !**

ಬಿಕ್ಕು : ತ್ರಿಶರಣದೊಂದಿಗೆ ಪಂಚಶೀಲಗಳನ್ನು ಪಾಲಿಸಿ ಎಚ್ಚರಿಕೆಯಿಂದಿರು.

ಉಪಾಸಕ : **ಅಮ ಭಂತೇ**

ಉಪಾಸಕ : ಹಾಗೆಯೇ ಆಗಲಿ ಪೂಜ್ಯರೇ.





## 5. ಅಟ್ಠಸೀಲಂ–ಅಷ್ಟ ಶೀಲಗಳು

1. **ಪಾಣಾತಿಪಾತಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಪ್ರಾಣಿಹತ್ಯೆ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
2. **ಅದಿನ್ನಾದಾನಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಕಳ್ಳತನ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
3. **ಕಾಮೇಸು ಮಿಚ್ಛಾಚಾರಾ ವೇರಮಣೀ ಸಿಕ್ಖಾಪದಂ ಸಮಾದಿಯಾನಿ**

   ವ್ಯಭಿಚಾರ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
4. **ಮುಸಾವಾದಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಸುಳ್ಳು ಹೇಳುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
5. **ಸುರಾ–ಮೇರಯ–ಮಜ್ಜ–ಪಮಾದಟ್ಠಾನಾ ವೇರಮಣಿ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಸುರೆ, ಹೆಂಡ ಅಥವಾ ಪ್ರಜ್ಞಾಹೀನತೆಗೆ ಕಾರಣವಾಗಿರುವ ಮಾದಕ ಪದಾರ್ಥಗಳ ಸೇವನೆಯನ್ನು ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
6. **ವಿಕಾಲಭೋಜನಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ವಿಕಾಲದಲ್ಲಿ ಭೋಜನವನ್ನು ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
7. **ನಚ್ಚ–ಗೀತ–ವಾದಿತ–ವಿಸೂಕದಸ್ಸನ–ಮಾಲಾಗಂಧ–ವಿಲೇಪನ–ಧಾರಣ–ಮಂಡನ–ವಿಭೂಸನಟ್ಠಾನಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ನೃತ್ಯ – ಗೀತೆ – ವಾದ್ಯ – ಉತ್ಸವ ಪ್ರದರ್ಶನಗಳನ್ನು ನೋಡುವುದಿಲ್ಲವೆಂಬ ಮತ್ತು ಮಾಲಾ–ಗಂಧ–ಲೇಪನ–ಸೌಂದರ್ಯವರ್ಧಕ ಮತ್ತು ಅಲಂಕಾರಿಕ ವಸ್ತುಗಳನ್ನು ಧರಿಸುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
8. **ಉಚ್ಚಾಸಯನ–ಮಹಾ ಸಯನ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ**

   ನಾನು ಉನ್ನತವಾದ ಮತ್ತು ವಿಲಾಸಕರ ಆಸನಗಳನ್ನು ಉಪಯೋಗಿಸುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

## 6. ದಸ ಸೀಲಂ – ಹತ್ತು ಶೀಲಗಳು

1. **ಪಾಣಾತಿಪಾತಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಪ್ರಾಣಿಹತ್ಯೆ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.
2. **ಅದಿನ್ನಾದಾನಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

   ನಾನು ಕಳ್ಳತನ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

3. **ಕಾಮೇಸು ಮಿಚ್ಛಾಚಾರಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ**

ವ್ಯಭಿಚಾರ ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

4. **ಮುಸಾವಾದಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

ನಾನು ಸುಳ್ಳು ಹೇಳುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

5. **ಸುರಾ–ಮೇರಯು–ಮಜ್ಜ–ಪಮಾದಟ್ಠಾನಾ ವೇರಮಣಿ ಸಿಕ್ಖಾಪದಂ ಸಮಾದಿಯಾಮಿ.**

ನಾನು ಸುರೆ, ಹೆಂಡ ಅಥವಾ ಪ್ರಜ್ಞಾಹೀನತೆಗೆ ಕಾರಣವಾಗಿರುವ ಮಾದಕ ಪದಾರ್ಥಗಳ ಸೇವನೆಯನ್ನು ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

6. **ವಿಕಾಲಭೋಜನಾ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ**

ನಾನು ವಿಕಾಲದಲ್ಲಿ ಭೋಜನವನ್ನು ಮಾಡುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

7. **ನಚ್ಚ–ಗೀತ–ವಾದಿತ–ವಿಸೂಕದಸ್ಸನ ವೇರಮಣೀ ಸಿಕ್ಖಾಪದಂ ಸಮಾದಿಯಾಮಿ.**

ನಾನು ನೃತ್ಯ–ಗೀತೆ–ವಾದ್ಯ–ಅನುಚಿತ ಪ್ರದರ್ಶನಗಳಲ್ಲಿ ನೋಡುವುದಿಲ್ಲವೆಂಬ ಶೀಲವನ್ನೂ ಸ್ವೀಕರಿಸುತ್ತೇನೆ.

8. **ಮಾಲಾ ಗಂಧ ವಿಲೇಪನ ಧಾರಣ–ಮಂಡನ ವಿಭೂಸನಟ್ಠಾನ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.**

ನಾನು ಮಾಲಾ–ಗಂಧ–ಲೇಪನ–ಸೌಂದರ್ಯವರ್ಧನ ಮತ್ತು ಅಲಂಕಾರಿಕ ವಸ್ತುಗಳನ್ನು ಧರಿಸುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

9. **ಉಚ್ಚಾಸಯನ ಮಹಾಸಯನ ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.**

ನಾನು ಎತ್ತರವಾದ ವಿಲಾಸ ಭೋಗ ಶಯನಾಸಗಳನ್ನು ಉಪಯೋಗಿಸುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

10. **ಜಾತರೂಪ–ರಜತ–ಪಟಿಗ್ಗಹನಾ–ವೇರಮಣೀ ಸಿಕ್ಖಾಪದಂ ಸಮಾಧಿಯಾಮಿ.**

ನಾನು ಬಂಗಾರ ಬೆಳ್ಳಿಯನ್ನು ಸ್ವೀಕರಿಸುವುದಿಲ್ಲವೆಂಬ ಶೀಲವನ್ನು ಸ್ವೀಕರಿಸುತ್ತೇನೆ.

## 7. ಬುದ್ಧ ವಂದನಾ – ಬುದ್ಧರ ವಂದನೆ

ಇತಿ ಪಿ ಸೋ ಭಗವಾ ಅರಹಂ, ಸಮ್ಮಾಸಂಬುದ್ಧೋ
ವಿಜ್ಜಾಚರಣ ಸಂಪನ್ನೊ, ಸುಗತೋ, ಲೋಕವಿದೂ, ಅನುತ್ತರೋ
ಪುರಿಸ ದಮ್ಮ ಸಾರಥೀ, ಸತ್ಥಾ ದೇವಮನುಸ್ಸಾನಂ
ಬುದ್ಧೋ ಭಗವಾತಿ
ನಮೋ ತಸ್ಸ ಸಮ್ಮಾ ಸಂಬುದ್ಧಸ್ಸ !





**ಯೇಚ ಬುದ್ಧಾ ಅತೀತಾ ಚ**
**ಯೇಚ ಬುದ್ಧಾ ಅನಾಗತಾ**
**ಪಚ್ಚುಪ್ಪನ್ನಾಚಯೇ ಬುದ್ಧಾ**
**ಅಹಂ ವಂದಾಮಿ ಸಬ್ಬದಾ**

**ನತ್ಥಿಮೇ ಸರಣಂ ಅಞ್ಞಂ**
**ಬುದ್ಧೋಮೆ ಸರಣಂ ವರಂ.**
**ಏತೇನ ಸಚ್ಚವಜ್ಜೇನ,**
**ಹೋತು ನೊ ಜಯಮಙ್ಗಳಂ**

**ಉತ್ತಮಙ್ಗೇನ ವನೇಹಂ**
**ಪಾದಪಂಸು ವರುತ್ತಮಂ**
**ಬುದ್ಧೇ ಯೋ ಖಲಿತೋ ದೋಸೋ**
**ಬುದ್ಧೋ ಖಮತು ತಂ ಮಮಂ**

**ಬುದ್ಧಂ ಯಾವ ನಿಬ್ಬಾಣ ಪರಿಯಂತಂ**
**ಸರಣಂ ಗಚ್ಛಾಮಿ !**

ಭಗವಂತರು ಇಂತಿರುವವರು : ಅವರು ಅರ್ಹಂತರು ಸಮ್ಯಕ್ ಸಂಬುದ್ಧರು, ವಿದ್ಯಾಚರಣ ಸಂಪನ್ನರು, ಸುಗತರು, ಲೋಕಜ್ಞಾನಿಗಳು, ವ್ಯಕ್ತಿಗಳನ್ನು ಪಳಗಿಸುವ ಅಸಮಾನ ಮಾರ್ಗದರ್ಶಿಗಳು, ದೇವತೆಗಳ ಹಾಗೂ ಮಾನವರ ಗುರು, ಬೋಧಿ ಜ್ಞಾನವನ್ನು ಕೊಡುವವರು ಮತ್ತು ಭಗವಂತರು.

ಸಮ್ಯಕ್ ಸಂಬುದ್ಧರಿಗೆ ನನ್ನ ನಮನಗಳು.

ಹಿಂದೆ ಬಂದು ಹೋದ ಬುದ್ಧರೆಲ್ಲರಿಗೂ

ಮುಂದೆ ಬರಲಿರುವ ಬುದ್ಧರೆಲ್ಲರಿಗೂ

ಮತ್ತು ವರ್ತಮಾನದಲ್ಲಿ ಇರುವ ಬುದ್ಧರೆಲ್ಲರಿಗೂ

ನಾನು ಯಾವಾಗಲೂ ವಿನಯ ಪೂರ್ವಕವಾಗಿ ನಮಸ್ಕರಿಸುತ್ತೇನೆ.

ಬೇರೆಲ್ಲಿಯೂ ನನಗೆ ರಕ್ಷಣೆ ಇಲ್ಲ.

ಬುದ್ಧರು ನನ್ನ ಶ್ರೇಷ್ಠ ರಕ್ಷಕರು

ಈ ಸತ್ಯವಚನದಿಂದ ನನಗೆ ಜಯಮಂಗಳವಾಗಲಿ !

ಅವರ ಪವಿತ್ರ ಪಾದಧೂಳಿಯನ್ನು ನನ್ನ ಶಿರಸ್ಸಿನಿಂದ ಪೂಜಿಸುತ್ತೇನೆ.

ನಾನೇನಾದರೂ ಬುದ್ಧರಲ್ಲಿ ಎಸಗಿದ ತಪ್ಪಿದ್ದರೆ ಬುದ್ಧರು ನನ್ನನ್ನು ಕ್ಷಮಿಸಲಿ. ನಾನು ನಿಬ್ಬಾಣ ಸಾಧಿಸುವವರೆಗೂ ಬುದ್ಧರಲ್ಲಿ ಶರಣು ಹೋಗುತ್ತೇನೆ.

**8. ಧಮ್ಮ ವಂದನಾ–ಧರ್ಮ ವಂದನೆ**

**ಸ್ವಾಕ್ಖಾತೋ ಭಗವತಾ ದಮ್ಮೋ, ಸನ್ದಿಟ್ಠಿಕೊ ಅಕಾಲಿಕೋ**
**ಏಹಿಪಸ್ಸಿಕೋ, ಓಪನಯಿಕೋ, ಪಚ್ಚತ್ತಂ ವೇದಿತಬ್ಬೋ ವಿಞ್ಞೂಹೀ'ತಿ**
**ನಮೋ ತಸ್ಸ ನಿಯಾನಿಕಸ್ಸ ಧಮ್ಮಸ್ಸ !**

**ಯೇ ಚ ಧಮ್ಮಾ ಅತೀತಾ ಚ**
**ಯೇಚ ಧಮ್ಮಾ ಅನಾಗತಾ**
**ಪಚ್ಚುಪ್ಪನ್ನಾಚಯೇ ಧಮ್ಮಾ**
**ಅಹಂ ವನ್ದಾಮಿ ಸಬ್ಬದಾ.**

**ನತ್ಥಿ ಮೆ ಸರಣಂ ಅಞ್ಞಂ**
**ಧಮ್ಮೋ ಮೇ ಸರಣಂ ವರಂ**
**ಏತೇನ ಸಚ್ಚ ವಜ್ಜೇನ**
**ಹೋತು ನೊ ಜಯಮಂಗಳಂ**

**ಉತ್ತಮಙ್ಗೆನ ವನ್ದೇ ಹಂ**
**ಧಮ್ಮಂ ಚ ತಿವಿಧಂ ವರಂ**
**ಧಮ್ಮೇ ಯೋ ಖಲಿತೋ ದೋಸೋ**
**ಧಮ್ಮೋ ಖಮತು ತಂ ಮಮಂ**

**ಧಮ್ಮಂ ಯಾವ ನಿಬ್ಬಾಣ ಪರಿಯಂತಂ**
**ಸರಣಂ ಗಚ್ಛಾಮಿ.**

ಭಗವಂತರಿಂದ ಈ ರೀತಿ ಸಂಬೋಧಿತವಾದ ಧರ್ಮವು ಸಮ್ಯಕ್ ದೃಷ್ಟಿಯುಳ್ಳದ್ದು. ತತ್‌ಕ್ಷಣವೇ ಫಲವನ್ನು ತರುವಂಥಾದ್ದು. ಬಂದು ನೋಡಿ ಎಂದು ಆಹ್ವಾನಿಸುವಂಥಾದ್ದು, ಊರ್ಧ್ವಮುಖವಾಗಿ ನಡೆಸುವಂಥಾದ್ದು, ಜ್ಞಾನಿಯಾದ ಪ್ರತಿಯೊಬ್ಬನೂ ತಾನೇ ತಿಳಿದುಕೊಳ್ಳುವಂಥಾದ್ದು.

ಹಿಂದಿನ (ಬುದ್ಧ) ಧರ್ಮಗಳಿಗೂ, ಮುಂದೆ ಬರುವ (ಬುದ್ಧ) ಧರ್ಮಗಳಿಗೂ ಪ್ರಕೃತದಲ್ಲಿರುವ (ಬುದ್ಧ) ಧರ್ಮಗಳಿಗೂ ನಾನು ಯಾವಾಗಲೂ ನಮಸ್ಕರಿಸುತ್ತೇನೆ.

ಬೇರೆಲ್ಲೂ ನನಗೆ ರಕ್ಷಣೆ ಇಲ್ಲ, ಧರ್ಮವೇ ನನ್ನ ಶರಣು.

ಈ ಸತ್ಯವಚನದಿಂದ ನನಗೆ ಜಯ ಮಂಗಳವಾಗಲಿ.

ತ್ರಿವಿಧವಾದ ಹಾಗೂ ಶ್ರೇಷ್ಠವಾದ ಧರ್ಮವನ್ನು ನಾನು ಶಿರಸ್ಸಿನಿಂದ ವಂದಿಸುತ್ತೇನೆ. ನಾನೇನಾದರೂ ಧರ್ಮಕ್ಕೆ ಅಪಚಾರವನ್ನೆಸಗಿದ್ದರೆ ಧರ್ಮವು ನನಗೆ ಕ್ಷಮಿಸಲಿ ! ನಿಬ್ಬಾಣ ಪಡೆಯುವವರೆಗೂ ಧರ್ಮಕ್ಕೆ ಶರಣು ಹೋಗುತ್ತೇನೆ.





**9. ಸಂಘ ವಂದನಾ–ಸಂಘ ವಂದನೆ**

**ಸುಪಟಿಪನ್ನೋ ಭಗವತೋ ಸಾವಕ ಸಂಘೋ**
**ಉಜು ಪಟಿಪನ್ನೋ ಭಗವತೋ ಸಾವಕಸಂಘೋ**
**ಞಾಯ ಪಟಿಪನ್ನೋ ಭಗವತೋ ಸಾವಕ ಸಂಘೋ**
**ಸಾಮೀಚಿ ಪಟಿಪನ್ನೋ ಭಗವತೋ ಸಾವಕ ಸಂಘೋ**
**ಯದಿದಂ ಚತ್ತಾರಿ ಪುರಿಸ ಯುಗಾನಿ ಅಟ್ಠಪುರಿಸ ಪುಗ್ಗಲಾ**
**ಏಸ ಭಗವತೋ ಸಾವಕ ಸಂಘೋ**

**ಆಹುನೇಯ್ಯೋ ಪಾಹುನೇಯ್ಯೋ ದಕ್ಖಿಣೆಯ್ಯೋ ಅಞ್ಜಲಿ ಕರಣೀಯೋ**
**ಅನುತ್ತರಂ ಪುಞ್ಞಕ್ಖೆತ್ತಂ ಲೋಕಸ್ಸಾತಿ**
**ನಮೋ ತಸ್ಸ ಅಟ್ಠ ಅರಿಯ ಪುಗ್ಗಲಾ ಮಹಾ ಸಂಘಸ್ಸ !**

**ಯೇ ಚ ಸಂಘಾ ಅತೀತಾಚ**
**ಯೇ ಚ ಸಂಘಾ ಅನಾಗತ**
**ಪಚ್ಚುಪ್ಪನ್ನಾ ಚಯೇ ಸಂಘಾ**
**ಅಹಂ ವನ್ದಾಮಿ ಸಬ್ಬದಾ**

**ನತ್ಥಿ ಮೇ ಸರಣಂ ಅಞ್ಞಂ**
**ಸಂಘೋಮೆ ಸರಣಂ ವರಂ**
**ಏತೇನ ಸಚ್ಚ ವಜ್ಜೇನ**
**ಹೋತು ನೊ ಜಯಮಂಗಳಂ**

**ಉತ್ತಮಙ್ಗೇನ ವಂದೇಹಂ**
**ಸಂಘಂಚ ತಿವಿಧೋತ್ತಮಂ**
**ಸಂಘೇ ಯೋ ಖಲಿತೋ ದೋಸೋ**
**ಸಂಘೋ ಖಮತು ತಂ ಮಮಂ**

**ಸಂಘಂ ಯಾವ ನಿಬ್ಬಾಣ ಪರಿಯನ್ತಂ**
**ಸರಣಂ ಗಚ್ಛಾಮಿ**

ಸಚ್ಚಾರಿತ್ರ್ಯದಿಂದ ಕೂಡಿದುದು ಭಗವಂತನ ಈ ಶ್ರಾವಕ ಸಂಘ.
ಋಜು ಚಾರಿತ್ರ್ಯದಿಂದ ಕೂಡಿದುದು ಭಗವಂತನ ಶ್ರಾವಕ ಸಂಘ.
ನ್ಯಾಯದಿಂದ ಕೂಡಿದುದು ಭಗವಂತನ ಶ್ರಾವಕ ಸಂಘ.
ಸರಿಯಾದ ದಾರಿಯಲ್ಲಿ ಕೂಡಿದುದು ಭಗವಂತನ ಶ್ರಾವಕ ಸಂಘ.
ಭಗವಂತನ ಈ ಶ್ರಾವಕ ಸಂಘವು ಯಾವುದೆಂದರೆ
ನಾಲ್ಕು ಜೋಡಿಯ ವ್ಯಕ್ತಿಗಳು ಅಂದರೆ ಎಂಟು ವ್ಯಕ್ತಿಗಳಿಂದ ಕೂಡಿದ
ಭಗವಂತನ ಶ್ರಾವಕ ಸಂಘ.
ಗೌರವಿಸಲು ಅರ್ಹವಾದದ್ದು,

ಸತ್ಕಾರಕ್ಕೆ ಅರ್ಹವಾದದ್ದು.
ದಾನಕ್ಕೆ ಅರ್ಹವಾದುದು.
ನಮಸ್ಕಾರಕ್ಕೆ ಅರ್ಹವಾದುದು.
ಲೋಕದಲ್ಲಿ ಅಸಮಾನವಾದ ಒಂದು ಪುಣ್ಯ ಕ್ಷೇತ್ರ.
ಎಂಟು ಆರ್ಯ ವ್ಯಕ್ತಿಗಳಿಂದ ಕೂಡಿದ ಆ ಮಹಾ ಸಂಘಕ್ಕೆ ನಮನಗಳು
ಹಿಂದೆ ಬಂದುಹೋದ ಸಂಘಗಳಿಗೂ
ಮುಂದೆ ಬರಲಿರುವ ಸಂಘಗಳಿಗೂ
ಪ್ರಕೃತದ ಸಂಘಗಳಿಗೂ ನಾನು ಯಾವಾಗಲೂ ನಮಸ್ಕರಿಸುತ್ತೇನೆ.
ಬೇರೆಲ್ಲೂ ನನಗೆ ರಕ್ಷಣೆ ಇಲ್ಲ
ಸಂಘವೇ ನನ್ನ ರಕ್ಷಣೆ
ಈ ಸತ್ಯ ವಚನದಿಂದ ನನಗೆ ಜಯಮಂಗಳವಾಗಲಿ !
ತ್ರಿವಿಧದಲ್ಲಿ ಉತ್ತಮವಾಗಿರುವ ಸಂಘವನ್ನು ನಾನು ಶಿರಸ್ಸಿನಿಂದ ವಂದಿಸುತ್ತೇನೆ.
ನಾನೇನಾದರೂ ಸಂಘಕ್ಕೆ ಅಪಚಾರವನ್ನೆಸಗಿದ್ದರೆ ಸಂಘವು ಕ್ಷಮಿಸಲಿ !
ನಿಬ್ಬಾಣ ಪಡೆಯುವವರೆಗೂ ನಾನು ಸಂಘಕ್ಕೆ ಶರಣು ಹೋಗುತ್ತೇನೆ.

**10. ರತನತ್ತಯ ಬಲಂ – ರತನತ್ರಯದ ಬಲ**

**ಏವಂ ಬುದ್ಧಂ ಸರಂತಾನಂ**
**ಧಮ್ಮಂ ಸಂಘಂಚ ಭಿಕ್ಖವೋ**
**ಭಯಂ ವಾ ಛಂಬಿತತ್ತಂ ವಾ**
**ಲೋಮಹಂಸೋ ನ ಹೆಸ್ಸತಿ !**

ಈ ರೀತಿ ಬುದ್ಧ ಧಮ್ಮ ಮತ್ತು ಸಂಘದಲ್ಲಿ ಶರಣು ಹೋದವನಿಗೆ ಭಯವಾಗಲಿ, ಭೀತಿಯಾಗಲಿ, ದಿಗಿಲಾಗಲಿ ಉಂಟಾಗುವುದಿಲ್ಲ !

**11. ಪದೀಪ ಪೂಜಾ – ಪ್ರದೀಪ ಪೂಜೆ**

**ಘನಸಾರಪ್ಪದಿತ್ತೇನ ದೀಪೇನ ತಮಧಂಸಿನಾ**
**ತಿಲೋಕ ದೀಪಂ ಸಂಬುದ್ಧಂ ಪೂಜಯಾಮಿ ತಮೋನುದಂ**

ಬೆಳಗುತ್ತಿರುವ ದೀಪದಿಂದ ಕತ್ತಲೆಯನ್ನು ಹೋಗಲಾಡಿಸುತ್ತಾ, ಅಜ್ಞಾನದ ಅಂಧಕಾರವನ್ನು ತೊಡೆದು ಹಾಕುವ ತ್ರಿಲೋಕ ದೀಪನಾದ ಸಂಬುದ್ಧನನ್ನು ಪೂಜಿಸುತ್ತೇನೆ.

**12. ಧೂಪ ಪೂಜಾ – ಧೂಪ ಪೂಜೆ**

**ಗನ್ಧ ಸಮ್ಭಾರಯುತ್ತೇನ ಧೂಪೇನಾ ಹಂ ಸುಗನ್ಧಿನಾ**
**ಪೂಜಯೇ ಪೂಜನೀಯಂ ತಂ ಪೂಜಾಭಾಜನ ಮುತ್ತಮಂ**

ಗಂಧ ಸಂಭಾರಗಳಿಂದ ಕೂಡಿದ ಸುಗಂಧವಾದ ಧೂಪದಿಂದ ನಾನು ಪೂಜ್ಯನೂ ಮತ್ತು ಆ ಶ್ರೇಷ್ಠ ಪೂಜಾ ಭಾಜನನೂ ಆದ ಬುದ್ಧನನ್ನು ಪೂಜಿಸುತ್ತೇನೆ.





**13. ಪುಪ್ಫ ಪೂಜಾ – ಹೂವಿನಿಂದ ಪೂಜೆ**

**ವಣ್ಣ ಗನ್ಧ ಗುಣೋಪೇತಂ ಏತಂ**
**ಕುಸುಮ ಸನ್ತತೀಂ**
**ಪೂಜಯಾಮಿ ಮುನಿನ್ದಸ್ಸ ಸಿರೀಪಾದ ಸರೋರುಹೆ**
**ಪೂಜೇಮಿ ಬುದ್ಧಂ ಕುಸುಮೇನನೇನ**
**ಪುಞ್ಞೇನ ಮೇತೇನ ಚ ಹೋತು ಮೋಕ್ಖಂ**
**ಪುಪ್ಫಂ ಮಿಲಾಯಾತಿ ಯಥಾ ಇದಮ್ಮೇ**
**ಕಾಯೋ ತಥಾಯಾತಿ ವಿನಾಸ ಭಾವಂ**

ಸುಂದರ ವರ್ಣ ಮತ್ತು ಸುಗಂಧಯುಕ್ತವಾದ ಈ ಹೂವಿನ ಸಮೂಹದಿಂದ ಮುನೀಂದ್ರನ ಶ್ರೀ ಪಾದ ಪದ್ಮಗಳನ್ನು ಪೂಜಿಸುತ್ತೇನೆ.
ಈ ವಿವಿಧ ಹೂಗಳಿಂದ ನಾನು ಬುದ್ಧರನ್ನು ಪೂಜಿಸುತ್ತೇನೆ
ಈ ಪುಣ್ಯದಿಂದಾಗಿ ನನಗೆ ಮೋಕ್ಷ ಉಂಟಾಗಲಿ !
ಯಾವ ರೀತಿ ಹೂವು ಬಾಡಿ ಹೋಗುತ್ತದೆಯೋ
ಅದೇರೀತಿ ಈ ಶರೀರವೂ ಕೂಡ ನಾಶವಾಗುತ್ತದೆ.

**14. ಸುಗಂಧ ಪೂಜಾ – ಸುಗಂಧ ಪೂಜೆ**

**ಸುಗನ್ಧಿಕಾಯ ವದನಂ ಅನನ್ತ ಗುಣ ಗನ್ಧಿನಂ**
**ಸುಗನ್ಧಿನಾಹಂ ಗನ್ಧೇನ ಪೂಜಯಾಮಿ ತಥಾಗತಂ**

ಸುಪ್ರಸನ್ನವಾದ ಕಾಯ ಮತ್ತು ಮುಖಗಳಿಂದ ಕೂಡಿದ ಅನಂತ ಗುಣಸಂಪನ್ನರಾದ ತಥಾಗತರನ್ನು ನಾನು ಸುಂಗಧಯುಕ್ತವಾದ ಗಂಧಗಳಿಂದ ಪೂಜಿಸುತ್ತೇನೆ.

**15. ಆಹಾರ ಪೂಜಾ – ಆಹಾರ ಪೂಜೆ**

**ಅಧಿವಾಸೇತು ನೋ ಭನ್ತೆ ಭೋಜನಂ ಉಪನಾಮಿತಂ**
**ಅನುಕಮ್ಪಂ ಉಪಾದಾಯ ಪತಿಗಣ್ಹಾತುಮುತ್ತಮಂ**

ಭಂತೆ, ನಮ್ಮ ಮೇಲೆ ಕರುಣೆ ಇಟ್ಟು ಸಮರ್ಪಿಸಲಾದ ಆಹಾರನ್ನು ಸ್ವೀಕರಿಸುವಂತರಾಗಿ, ಶ್ರೇಷ್ಠರೇ, ಪರಿಗ್ರಹಿಸಿರಿ.

**16. ಸಕಲ ಬುದ್ಧ ಪೂಜಾ – ಎಲ್ಲ ಬುದ್ಧರ ಪೂಜೆ**

**ನಿರೋಧಸಮಾಪತ್ತಿತ್ತೋ ಉಟ್ಠಹಿತ್ವಾ ನಿಸಿನ್ನಸ್ಸ ವಿಯ**
**ಭಗವತೋ ಅರಹತೋ ಸಮ್ಮಾಸಂಬುದ್ಧಸ್ಸ**
**ಇಮಿನಾ ದೀಪೇನ, ಧೂಪೇನ, ಪುಪ್ಫೇನ ಪೂಜೇಮಿ, ಪೂಜೇಮಿ ಪೂಜೇಮಿ !**
**ಇದಂ ದೀಪ ಧೂಪ, ಪುಪ್ಫ ಪೂಜಾದಿ ನಾಮ ಸಕಲ**
**ಸಂಬುದ್ಧಾನಂ, ಪಚ್ಚೇಕ ಬುದ್ಧಾನಂ**

**ಅಗ್ಗಸಾವಕಾನಂ, ಮಹಾಸಾವಕಾನಂ**
**ಅರಹಂತಾನಂ ಪಕತಿಸೀಲಂ**
**ಅಹಂಪಿ ತೇಸಂ ಅನುವತ್ತಕೋ ಹೋಮಿ**
**ಇಮಾಮಿ ಪುಪ್ಫಾನಿ ವಣ್ಣೇನ ಪಿ ಸುವಣ್ಣಂ**
**ಗಂಧೇನ ಪಿ ಸುಗಂಧಂ**
**ಸಂಠಾನೇನ ಪಿ ಸುಸಂಠಾನಂ**
**ಖಿಪ್ಪಮೇವ ದುಬ್ಬಣ್ಣಂ ದುಗ್ಗಂಧಂ**
**ದುಸ್ಸಂಠಾನಂ ಪಾಪುನಿಸ್ಸತಿ**
**ಏವಮೇವ ಸಬ್ಬೆ ಸಂಖಾರಾ ಅನಿಚ್ಚಾ**
**ಸಬ್ಬೆ ಸಂಖಾರಾ ದುಕ್ಖಾ**
**ಸಬ್ಬೆ ಧಮ್ಮಾ ಅನತ್ತಾತಿ !**

ನಿರೋಧ ಸಮಾಪತ್ತಿಯಿಂದ ಎದ್ದು ಕುಳಿತಿರುವಂತೆ ಭಗವಂತರೂ ಅಹರಂತರೂ ಆದ ಸಮ್ಯಕ್ ಸಂಬುದ್ಧರಿಗೆ ಈ ದೀಪ, ಧೂಪ ಮತ್ತು ಪುಷ್ಪಗಳಿಂದ ಪೂಜಿಸುತ್ತೇನೆ, ಪೂಜಿಸುತ್ತೇನೆ, ಪೂಜಿಸುತ್ತೇನೆ. ಈ ರೀತಿ ದೀಪ, ಧೂಪ, ಹೂವಿನ ಪೂಜೆ ಎಲ್ಲಾ ಸಂಬುದ್ಧರಿಗೆ, ಪಚ್ಚೇಕ ಬುದ್ಧರಿಗೆ, ಅಗ್ರಶ್ರಾವಕರಿಗೆ, ಮಹಾಶ್ರಾವಕರಿಗೆ ಅರಹಂತರಿಗೆ ಸಲ್ಲಿಸುತ್ತೇನೆ. ನಾನೂ ಕೂಡ ಅವರ ಅನುವರ್ತಕನಾಗಲಿ !

ನೋಡಿ, ಯಾವ ಈ ಹೂಗಳು ಬಣ್ಣದಿಂದ ಕೂಡಿವೆಯೋ
ಸುವಾಸನೆಯಿಂದ ಕೂಡಿವೆಯೋ
ಮತ್ತು ಸುಂದರವಾಗಿವೆಯೋ ಅವೆಲ್ಲ ಬಹುಬೇಗ
ಬಣ್ಣ ಕಳೆದುಕೊಂಡು, ಸುವಾಸನೆ ಕಳೆದುಕೊಂಡು
ಬಾಡಿ ಹೋಗಿ ಸುಂದರತೆಯನ್ನು ಕಳೆದುಕೊಳ್ಳುತ್ತವೆ.
ಅದೇರೀತಿ ಎಲ್ಲಾ ಸಂಖಾರಗಳು (ಅವಲಂಬಿತ ವಸ್ತುಗಳು) ಅನಿತ್ಯವಾಗಿವೆ.
ಎಲ್ಲ ಸಂಖಾರಗಳು ದುಃಖಕ್ಕೆ ಬಲಿಯಾಗಿವೆ
ಎಲ್ಲಾ ವಸ್ತುಗಳು ಅನಾತ್ಮವಾದುವು.

## 17. ಪಟಿಪತ್ತಿ ಪೂಜಾ – ಧಮ್ಮ ಆಚರಣೆಯ ಪೂಜೆ

**ಇಮಾಯ ಧಮ್ಮಾನು ಧಮ್ಮ ಪಟಪತ್ತಿಯಾ ಬುದ್ಧಂ ಪೂಜೇಮಿ !**
**ಇಮಾಯ ಧಮ್ಮಾನುಧಮ್ಮಪಟಿಪತ್ತಿಯಾ ಧಮ್ಮಂ ಪೂಜೇಮಿ !**
**ಇಮಾಯ ಧಮ್ಮನುಧಮ್ಮಪಟಪತ್ತಿಯಾ ಸಂಘಂ ಪೂಜೇಮಿ !**

ಈ ಧರ್ಮದ ಆಚರಣೆಯನ್ನು ಮಾಡಿ ನಾನು ಬುದ್ಧರನ್ನು ಪೂಜಿಸುತ್ತೇನೆ.
ಈ ಧರ್ಮದ ಆಚರಣೆಯನ್ನು ಮಾಡಿ ನಾನು ಧರ್ಮವನ್ನು ಪೂಜಿಸುತ್ತೇನೆ
ಈ ಧಮ್ಮ ಆಚರಣೆಯನ್ನು ಮಾಡಿ ನಾನು ಸಂಘವನ್ನು ಪೂಜಿಸುತ್ತೇನೆ.





## 18. ಚೇತಿಯ ವಂದನಾ – ಚೈತ್ಯ ವಂದನೆ

**ವನ್ದಾಮಿ ಚೇತಿಯಂ ಸಬ್ಬಂ ಸಬ್ಬ ಠಾನೇಸು ಪತಿಟ್ಠಿತಂ**
**ಸಾರೀರಿಕ ಧಾತು ಮಹಾಬೋಧಿಂ ಬುದ್ಧ ರೂಪಂ ಸಕಲಂ ಸದಾ**

ಎಲ್ಲ ಸ್ಥಳಗಳಲ್ಲೂ ಪ್ರತಿಷ್ಠಿತವಾಗಿರುವ ಎಲ್ಲ ಚೈತ್ಯಗಳಿಗೂ, ಶಾರೀರಿಕ ಧಾತುವಿಗೂ ಮಹಾಬೋಧಿಗೂ, ಎಲ್ಲ ಬುದ್ಧ ರೂಪಗಳಿಗೂ ಯಾವಾಗಲೂ ನಾನು ವಂದಿಸುತ್ತೇನೆ.

## 19. ಬೋಧಿ ವಂದನಾ – ಬೋಧಿ ವಂದನೆ

**ಯಸ್ಸ ಮೂಲೆ ನಿಸಿನ್ನೋವ ಸಬ್ಬಾರಿ ವಿಜಯಂ ಅಕಾ**
**ಪತ್ತೋ ಸಬ್ಬಞ್ಞುತ್ತಂ ಸತ್ಥಾ ವಂದೇತಂ ಬೋಧಿ ಪಾದಪಂ**
**ಇಮೆ ಏತೆ ಮಹಾಬೋಧಿ ಲೋಕನಾಥೇನ ಪೂಜಿತಂ**
**ಅಹಂ' ಪಿ ತೇ ನಮಸ್ಸಾಮಿ ಬೋಧಿರಾಜ ನಮತ್ಥುತೇ !**

ಯಾವುದರ ಬುಡದಲ್ಲಿ ಕುಳಿತುಕೊಂಡೇ ಗುರುವು ಎಲ್ಲ ಶತ್ರುಗಳನ್ನು ಜಯಿಸಿ ಸರ್ವಜ್ಞತ್ವವನ್ನು ಪಡೆದನೋ, ಆ ಬೋಧಿ ವೃಕ್ಷಕ್ಕೆ ನಾನು ವಂದಿಸುತ್ತೇನೆ.

ಲೋಕನಾಥನಿಂದ ಪೂಜಿತವಾದ ಮಹಾಬೋಧಿ ವೃಕ್ಷವೇ, ನಾನೂ ಕೂಡ ಈ ಬೋಧಿ ರಾಜನಿಗೆ ನಮಸ್ಕರಿಸುವೆ !

## 20. ಖಮಾ ಯಾಚನಾ – ಕ್ಷಮಾ ಯಾಚನೆ

**ಕಾಯೇನ ವಾಚಾ ಚಿತ್ತೇನ**
**ಪಮಾದೇನ ಮಯಾ ಕತಂ**
**ಅಚ್ಚಯಂ ಖಮ ಮೇ ಭಂತೆ**
**ಭೂರಿಪಞ್ಞ ತಥಾಗತ**

ಶರೀರದಿಂದ, ಮಾತಿನಿಂದ ಮತ್ತು ಮನಸ್ಸಿನಿಂದ ಎಚ್ಚರಿಕೆ ಇಲ್ಲದೆ ಏನೆಲ್ಲ ತಪ್ಪನ್ನು ಮಾಡಿರುವೆನೋ ಅಸೀಮ ಪ್ರಜ್ಞಯುಳ್ಳ ತಥಾಗತರೇ. ಭದಂತರೇ, ನನ್ನನ್ನು ಕ್ಷಮಿಸಿರಿ.

## 21. ಪುಞ್ಞಾನುಮೋದನಾ – ಪುಣ್ಯಾನುಮೋದನೆ

**ಅಕಾಸಟ್ಠಾಚ ಬುಮ್ಮಟ್ಠಾ**
**ದೇವಾನಾಗಾ ಮಹಿದ್ದಿಕಾ**
**ಪುಞ್ಞಂತಂ ಅನುಮೋದಿತ್ವಾ**
**ಚಿರಂ ರಕ್ಖಂತು ಸಾಸನಂ**

ಆಕಾಶದಲ್ಲಿ ನೆಲೆಯಾಗಿರುವ ಮತ್ತು ಭೂಮಿಯಲ್ಲಿ ನೆಲೆಸಿರುವ ಮಹಾಶಕ್ತಿ ಸಂಪನ್ನರಾದ ದೇವತೆಗಳು ಮತ್ತು ನಾಗರು ಈ ಪುಣ್ಯವನ್ನು ಹಂಚಿಕೊಂಡು ಬುದ್ಧ ಶಾಸನವನ್ನು ಚಿರಕಾಲ ಕಾಪಾಡಲಿ !

**ಅಕಾಸಟ್ಠಾಚ ಬುಮ್ಮಟ್ಠಾ**
**ದೇವಾನಾಗಾ ಮಹಿದ್ಧಿಕಾ**
**ಪುಞ್ಞಂತಂ ಅನುಮೋದಿತ್ವಾ**
**ಚಿರಂ ರಕ್ಖಂತು ದೇಸನಂ**

ಆಕಾಶದಲ್ಲಿ ನೆಲೆಯಾಗಿರುವ ಮತ್ತು ಭೂಮಿಯಲ್ಲಿ ನೆಲೆಸಿರುವ ಮಹಾಶಕ್ತಿ ಸಂಪನ್ನ ದೇವತೆಗಳು ಮತ್ತು ನಾಗರು ಈ ಪುಣ್ಯವನ್ನು ಹಂಚಿಕೊಂಡು ಬುದ್ಧರ ಉಪದೇಶವನ್ನು ಚಿರಕಾಲ ಕಾಪಾಡಲಿ !

**ಆಕಾಸಟ್ಠಾಚ ಬುಮ್ಮಟ್ಠಾ**
**ದೇವಾನಾಗಾ ಮಹಿದ್ಧಿಕಾ**
**ಪುಞ್ಞಂ ತಂ ಅನುಮೋದಿತ್ವಾ**
**ಚಿರಂ ರಕ್ಖಂತು ಮಂ ಪರಂ**

ಆಕಾಶದಲ್ಲಿ ನೆಲೆಯಾಗಿರುವ ಮತ್ತು ಭೂಮಿಯ ಮಹಾಶಕ್ತಿ ಸಂಪನ್ನರಾದ ದೇವತೆಗಳು ಮತ್ತು ನಾಗರು ಈ ಪುಣ್ಯವನ್ನು ಹಂಚಿಕೊಂಡು ನನ್ನನ್ನು ಮತ್ತು ಇತರರನ್ನು ಚಿರಕಾಲ ಕಾಪಾಡಲಿ !

**ಎತ್ತಾವತಾಚ ಅಮ್ಹೇಹಿ**
**ಸಂಭತಂ ಪುಞ್ಞಸಂಪದಂ**
**ಸಬ್ಬೇ ದೇವಾ ಅನುಮೋದನ್ತು**
**ಸಬ್ಬ ಸಂಪತ್ತಿ ಸಿದ್ಧಿಯಾ**

ನಮ್ಮಿಂದ ಈ ರೀತಿ ಕೂಡಿಸಲ್ಪಟ್ಟ ಪುಣ್ಯ ಸಂಪದವನ್ನು ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ದೇವತೆಗಳೂ ಹಂಚಿಕೊಳ್ಳಲಿ !

**ಎತ್ತಾವತಾಚ ಅಮ್ಹೇಹಿ**
**ಸಂಭತಂ ಪುಞ್ಞಸಂಪದಂ**
**ಸಬ್ಬೇ ಭೂತಾ ಅನುಮೋದನ್ತು**
**ಸಬ್ಬ ಸಂಪತ್ತಿ ಸಿದ್ಧಿಯಾ**

ನಮ್ಮಿಂದ ಈ ರೀತಿ ಕೂಡಿಸಲ್ಪಟ್ಟ ಪುಣ್ಯ ಸಂಪದವನ್ನು ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ಜೀವಿಗಳು ಹಂಚಿಕೊಳ್ಳಲಿ

**ಎತ್ತಾವತಾಚ ಅಮ್ಹೇಹಿ**
**ಸಂಭತಂ ಪುಞ್ಞಸಂಪದಂ**
**ಸಬ್ಬೇ ಸತ್ತಾ ಅನುಮೋದನ್ತು**
**ನಿಬ್ಬಾನ ಸಂಪತ್ತಿ ಸಿದ್ಧಿಯಾ**





ನಮ್ಮಿಂದ ಈ ರೀತಿ ಕೂಡಿಸಲ್ಪಟ್ಟ ಪುಣ್ಯ ಸಂಪದವನ್ನು ನಿಬ್ಬಾಣ ಸಿದ್ಧಿಗಾಗಿ ಎಲ್ಲ ಜೀವಸತ್ವಗಳು ಹಂಚಿಕೊಳ್ಳಲಿ

**ಇದಂ ಮೇ ಞಾತಿನಂ ಹೋತು**
**ಸುಖಿತಾ ಹೊನ್ತು ಞಾತಯೋ !** (ಮೂರು ಸಾರಿ)

ಈ ಪುಣ್ಯ ನನ್ನ ಬಂಧುಗಳಿಗೆ ಉಂಟಾಗಲಿ ! ಬಂಧುಗಳು ಸುಖಿಯಾಗಲಿ ! (ಮೂರು ಸಾರಿ)

## 22. ಸಂಕಪ್ಪೋ–ಸಂಕಲ್ಪ

**ಇಮಿನಾ ಪುಞ್ಞಕಮ್ಮೇನ**
**ಮಾ ಮೇ ಬಾಲಸಮಾಗಮೋ**
**ಸತಂ ಸಮಾಗಮೋ ಹೋತು**
**ಯಾವ ನಿಬ್ಬಾನ ಪತ್ತಿಯಾ**

ಈ ಪುಣ್ಯ ಕರ್ಮದಿಂದ ನಾನು ಎಂದೂ ಮೂರ್ಖರೊಂದಿಗೆ ಸೇರದೆ ಇರಲಿ! ನನಗೆ ನಿಬ್ಬಾಣ ದೊರೆಯುವವರೆಗೂ ಸತ್ಪುರಷರೊಂದಿಗೆ ಸಮಾಗಮವಾಗಲಿ!

**ಇದಂ ಮೇ ಪುಞ್ಞಕಮ್ಮಂ**
**ಆಸವಕ್ಖಯಂ ವಹಂ ಹೋತು**
**ಸಬ್ಬದುಕ್ಖಾ ಪಮುಚ್ಚತು**
**ನಿಬ್ಬಾಣಸ್ಸ ಪಚ್ಚಯೋ ಹೋತು**

ಈ ಪುಣ್ಯಕರ್ಮದಿಂದ ಆಸವಗಳು ಕ್ಷಯವಾಗಲಿ, ಎಲ್ಲ ದುಃಖಗಳಿಂದ ಮುಕ್ತನಾಗಲಿ, ನಿಬ್ಬಾಣವನ್ನು ಪಡೆಯಲು ಕಾರಣವಾಗಲಿ !

# ಅಧ್ಯಾಯ–2

# ಪರಿತ್ತ ಪಾಠ – ರಕ್ಷಣಾ ಪಠನೆ

## 1. ಆವಾಹನಂ – ಪ್ರಾರ್ಥನೆ

**ವಿಪತ್ತಿ ಪಟಿವಾಹಾಯ,**
**ಸಬ್ಬಸಮ್ಪತ್ತಿ ಸಿದ್ಧಿಯಾ**
**ಸಬ್ಬದುಕ್ಖಂ ವಿನಾಸಾಯ**
**ಸಬ್ಬ ಭಯಂ ವಿನಾಸಾಯ**
**ಸಬ್ಬರೋಗಂ ವಿನಾಸಾಯ**
**ಭವೇದೀಘಾಯುಕದಾಯಕಂ**
**ಸಬ್ಬಲೋಕಂ ಹಿತತ್ತಾಯ**
**ಪರಿತ್ತಂ ತಂ ಭಣಾಮಹೇ**

ವಿಪತ್ತು ನಿವಾರಿಸುವುದಕ್ಕಾಗಿ, ಎಲ್ಲ ಸಂಪತ್ತಿನ ಸಿದ್ಧಿಗಾಗಿ ಎಲ್ಲ ದುಃಖಗಳನ್ನು ತೊಡೆದು ಹಾಕುವುದಕ್ಕಾಗಿ, ಎಲ್ಲ ಭಯಗಳನ್ನು ನಾಶ ಮಾಡುವುದಕ್ಕಾಗಿ, ಎಲ್ಲ ರೋಗಗಳನ್ನು ನಿವಾರಿಸುವುದಕ್ಕಾಗಿ, ದೀರ್ಘಾಯುಸ್ಸನ್ನು ಕೊಡಲೆಂದು ಇಡೀ ಲೋಕದ ಹಿತಕ್ಕಾಗಿ ರಕ್ಷಣಾ ಪಠನೆಯನ್ನು ಮಾಡುತ್ತೇನೆ.

**ಸಮನ್ತಾ ಚಕ್ಕವಾಲೇಸು**
**ಅತ್ರಾಗಚ್ಛನ್ತು ದೇವತಾ**
**ಸದ್ಧಮ್ಮಂ ಮುನಿರಾಜಸ್ಸ**
**ಸುನನ್ತು ಸಗ್ಗ ಮೋಕ್ಖದಂ**
**ಧಮ್ಮಸ್ಸವಣಕಾಲೋ ಅಯಂ ಭದನ್ತಾ** (ಮೂರು ಬಾರಿ)

ಸುತ್ತಲೂ ಚಕ್ರವಾಳದಲ್ಲಿರುವ ಎಲ್ಲೈ ದೇವತೆಗಳೇ, ಇಲ್ಲಿ ದಯ ಮಾಡಿಸಿ ಸ್ವರ್ಗ ಮತ್ತು ಮೋಕ್ಷವನ್ನು ಕೊಡುವ ಮುನಿರಾಜನ ಸದ್ಧರ್ಮವನ್ನು ಕೇಳಿರಿ.

ಎಲ್ಲೈ ಭದಂತರೆ, ಇದು ಧರ್ಮ ಶ್ರವಣದ ಕಾಲ. ಭದಂತರೆ ಇದು ಧರ್ಮ ಶ್ರವಣದ ಕಾಲ. ಭದಂತರೆ ಇದು ಧರ್ಮ ಶ್ರವಣದ ಕಾಲ !

**ಯೇ ಸಂತಾ ಸಂತಚಿತ್ತಾ ತಿಸರಣಸರಣಾ ಎತ್ಥಾಲೋಕಂತರೇ ವಾ,**
**ಭುಮ್ಮಾ ಭುಮ್ಮಾ ಚ ದೇವಾ ಗುಣಗಣಾ–ಗಹಣಾ ಬ್ಯಾವಟಾ ಸಬ್ಬಕಾಲಂ**





**ಏತೆ ಆಯಂತು ದೇವತಾ ವರಕಣಕಮಾಯೆ ಮೇರುರಾಜೆವಸಂತೊ**
**ಸಂತೊ ಸಂತೋಸಹೇತುಂ ಮುನಿವರವಚನಂ ಸೋತುಮಗ್ಗಂ ಸಮಗ್ಗಂ,**
**ಸಬ್ಬೇಸು ಚಕ್ಕವಾಲೇಸು ಯಕ್ಖಾ ದೇವಾ ಚ ಬ್ರಾಹ್ಮನೋ,**
**ಯಂ ಅಮೇಹಿ ಕತಂ ಪುನ್ನಂ ಸಬ್ಬಾ–ಸಂಪತ್ತಿ ಸಾಧಕಂ**
**ಸಬ್ಬೇ ತಂ ಅನುಮೋದಿತ್ವಾ ಸಮಗ್ಗಾ ಸಾಸನೇರತಾ**
**ಪಮಾದರಹಿತಾ ಹೊಂತು ಆರಕ್ಖಾಸು ವಿಸೇಸತೊ.**
**ಸಾಸನಸ್ಸ ಚ ಲೋಕಸ್ಸ ವುದ್ಧಿ ಭವತು ಸಬ್ಬದಾ,**
**ಸಾಸನಸ್ಸ ಚ ಲೋಕಂಚ ದೇವಾ ರಕ್ಖಂತು ಸಬ್ಬದಾ,**
**ಸದ್ಧಿಂ ಹೊಂತು ಸುಖೀ ಸಬ್ಬೇ ಪರಿವಾರೇಹಿ ಅತ್ತನೊ**
**ಅನೀಘಾಸುಮನಾ ಹೊಂತು ಸಹ ಸಬ್ಬೇಹಿ ಞಾತಿಭಿ !**

ತ್ರಿಸರಣದಲ್ಲಿ ನೆಲೆಗೊಂಡಿರುವ, ಪರಿಶುದ್ಧ ಮನಸ್ಸಿನವರಾದ ಆ ದಿವ್ಯ ಜೀವಿಗಳು ಲೋಕಾಂತರದಲ್ಲಿರಲಿ, ಭೂಮಿಯಲ್ಲಿರಲಿ ಅಥವಾ ಪರ್ವತಗಳ ರಾಜನಾದ ಭವ್ಯ ಸುಮೇರು ಪರ್ವತದ ಎತ್ತರದಲ್ಲಿರಲಿ – ಈ ಎಲ್ಲ ಸಂತಸ ಮನದ ದೇವತೆಗಳು ಇಲ್ಲಿ ಸೇರಿ ಮುನಿವರನ ವಚನವನ್ನು ಕೇಳಲಿ.

ಚಕ್ರವಾಳದಲ್ಲಿರುವ ಎಲ್ಲ ಯಕ್ಷರು, ದೇವತೆಗಳು, ಬ್ರಹ್ಮ ಜೀವಿಗಳು, ನಾವು ಗಳಿಸಿಕೊಂಡಿರುವ ಪುಣ್ಯವನ್ನು ಹಂಚಿಕೊಂಡು ನಮಗೆ ಒಳ್ಳೆಯದನ್ನು ಪರಸ್ಪರ ಸೌಹಾರ್ದತೆಯನ್ನು ಹರಸಲಿ, ಬುದ್ಧನ ಬೋಧನೆಯನ್ನು ಆನಂದಿಸುವಂತೆ ಮಾಡಿ ನಮಗೆ ವಿಶೇಷ ರಕ್ಷಣೆ ನೀಡಲಿ. ಭಗವಾನರ ಬೋಧನೆ ಎಂದಿಗೂ ಹಸಿರಾಗಿದ್ದು, ಲೋಕವು ಬೆಳಗಲಿ. ದೇವತೆಗಳು ಈ ಪವಿತ್ರ ಬೋಧನೆಯನ್ನು ಮತ್ತು ಪ್ರಪಂಚವನ್ನು ಕಾಪಾಡಲಿ.

ಎಲ್ಲ ಜೀವಿಗಳು, ಅವರ ಕುಟುಂಬಗಳು, ಬಂಧುಗಳು ಸುಖವಾಗಿ ಬಾಳಲಿ, ಅವರ ದುಃಖ ದೂರವಾಗಲಿ, ಅವರ ಶಾರೀರಿಕ ಮಾನಸಿಕ ಆರೋಗ್ಯ ಸದಾ ಚೆನ್ನಾಗಿರಲಿ.

**ದೇವೊ ವಸ್ಸತು ಕಾಲೇನ,**
**ಸಸ್ಸ–ಸಂಪತ್ತಿ ಹೇತು ಚ**
**ಫೀತೊ ಭವತು ಲೋಕೋ ಚ**
**ರಾಜ ಭವತು ಧಮ್ಮಿಕೋ**

**ರಾಜತೋ ವಾ ಚೋರತೋ ವಾ, ಮನುಸ್ಸತೋ ವಾ,**
**ಅಮನುಸ್ಸತೋ ವಾ, ಅಗ್ಗಿತೋ ವಾ,**
**ಉದಕತೋ ವಾ, ಪಿಸಾಚತೋ ವಾ, ಖಾನುಕತೋ ವಾ,**
**ಕಂಟಕತೋ ವಾ, ನಖತತ್ತೋ ವಾ,**

**ಜನಪದರೋಗತೋ ವಾ, ಅಸದ್ಧಮ್ಮತೋ ವಾ,**
**ಚಂಡಹತ್ಥಿಯಸ್ಸ–ಮಿಗ–ಗೋನ–ಕುಕ್ಕುರ–ಅಹಿ–**
**ವಿಚ್ಛಿಕ–ಮಣಿಸಪ್ಪ–ದೀಪಿ–ಅಚ್ಛ–ತರಚ್ಛ–ಸೂಕರ–**
**ಮಹಿಸ–ಯಕ್ಖ–ರಕ್ಖಸಾದಿಹಿ ನಾನಾ ಭಯತೋ ವಾ,**
**ನಾನಾ ರೋಗತೋ ವಾ, ನಾನಾ ಉಪದ್ದವತೋ ವಾ,**
**ಆರಕ್ಖಂ ಗಣಹಂತು ದೇವತಾ.**

ಒಳ್ಳೆಯ ಸುಗ್ಗಿಯನ್ನು ತರಲು,
ಸಕಾಲದಲ್ಲಿ ಮಳೆಯು ಸುರಿಯಲಿ.
ಲೋಕವು ಸಂಪದ್ಭರಿತವಾಗಿರಲಿ,
ರಾಜರು ಧರ್ಮಿಷ್ಠರಾಗಿ ಬಾಳಲಿ.

ರಾಜರುಗಳಿಂದ, ಚೋರರಿಂದ
ಮಾನವರಿಂದ, ಮಾನವರಲ್ಲದವರಿಂದ,
ಬೆಂಕಿ, ನೀರು, ದುಷ್ಟ ಚೈತನ್ಯಗಳಿಂದ,
ಗಿಡಗಂಟಿ, ಮುಳ್ಳುಗಳಿಂದ, ಜನಪದ ರೋಗಗಳಿಂದ,
ಅಸದ್ಧರ್ಮಗಳಿಂದ, ಮೂಢನಂಬಿಕೆಗಳಿಂದ,
ಕೆಟ್ಟ ಜನರಿಂದ, ರೋಷ ಸಲಗ–ಕುದುರೆ–ಜಿಂಕೆ
ಗೂಳಿ–ನಾಯಿಗಳಿಂದ, ವಿಷಪೂರಿತ ಸರ್ಪ, ಚೇಳು,
ನಾಗರಹಾವು–ಹುಲಿಗಳಿಂದ, ಕರಡಿ–ಚಿರತೆ–ಮುಳ್ಳುಹಂದಿ
ಕಾಡೆಮ್ಮೆ, ದೆವ್ವ–ರಾಕ್ಷಸ ಹೀಗೆ ಇವೆಲ್ಲವುಗಳಿಂದ
ಆಗುವ ಅನಾಹುತಗಳಿಂದ ರಕ್ಷಣೆ ಸಿಗುವಂತೆ ದೇವತೆಗಳು ಮಾಡಲಿ.

**ಯೇ ಕೇಚಿ ಬುದ್ಧಂ ಸರಣಂ ಗತಾಸೆ**
**ನತೆ ಗಮಿಸ್ಸಂತಿ ಅಪಾಯಂ**
**ಪಹಾಯ ಮಾನುಸಂ ದೇಹಂ**
**ದೇವಲೋಕಾಯಂ ಪರಿಪೂರೆಸ್ಸಂತೀ' ತಿ.**

ಯಾರು ಬುದ್ಧನಿಗೆ ಶರಣು ಹೋಗುತ್ತಾರೊ
ಅವರ್‍ಯಾರೂ ಅಪಾಯಕ್ಕೊಳಗಾಗುವುದಿಲ್ಲ.
ಈ ಮಾನವ ಶರೀರವನ್ನು ತೊರೆದ ನಂತರ ಅಂದರೆ ಸತ್ತಮೇಲೆ
ಅವರು ದೇವಲೋಕದಲ್ಲಿ ಹುಟ್ಟುತ್ತಾರೆ.





## 2. ಮಹಾಮಂಗಳ ಸುತ್ತ
## ಶ್ರೇಷ್ಠ ಮಂಗಳಗಳ ಬಗ್ಗೆ ಪ್ರವಚನ

**ನಿದಾನಂ**

**ಯಂ ಮಂಗಳಂ ದ್ವಾದಸಹಿ ಚಿಂತಯಿಂಸು ಸದೇವಕಾ**
**ಸೋತ್ಥಾನಂ ನಾಧಿಗಚ್ಛಂತಿ ಅಟ್ಠಾತಿಂಸಚಮಂಗಳಂ**
**ದೇಸಿತಂ ದೇವದೇವೇನ ಸಬ್ಬಪಾಪ ವಿನಾಸನಂ**
**ಸಬ್ಬಾಲೋಕಹಿತತ್ಥಾಯಾ ಮಂಗಳಂ ತಂ ಭಣಾಮಹೆ**

**ಸಂದರ್ಭ**

ನಿಜವಾದ ಮಂಗಳ ಎಲ್ಲಿ ಸಿಗುತ್ತದೆ ಎಂಬುದನ್ನು ದೇವತೆಗಳು ಮತ್ತು ಮನುಷ್ಯರು ಜೊತೆಗೂಡಿ ಸುದೀರ್ಘ ಹನ್ನೆರಡು ವರ್ಷಗಳ ಕಾಲ ಧ್ಯಾನಿಸಿದರು. ಆದರೆ ಉತ್ತರ ಕಾಣದೆ ಸೋತರು. ಅಂತಹ ಸಂದರ್ಭದಲ್ಲಿ ದೇವತೆಗಳ ಗುರುವಾದ ಬುದ್ಧರು ಎಲ್ಲಬಗೆಯ ಕೇಡುಗಳನ್ನು ನಾಶ ಮಾಡಬಲ್ಲ ಮೂವತ್ತೆಂಟು ವಿಧಗಳ ಮಂಗಳಗಳನ್ನು ಪ್ರತಿಪಾದಿಸಿದರು. ಲೋಕದ ಎಲ್ಲರ ಒಳಿತಿಗಾಗಿ ಈ ಮಂಗಳಗಳನ್ನು ಪಠಿಸುತ್ತೇನೆ.

**ಏವಂ ಮೇ ಸುತಂ, ಏಕಂ ಸಮಯಂ ಭಗವಾ ಸಾವತ್ಥಿಯಂ ವಿಹರತಿ ಜೇತವನೆ ಅನಾಥಪಿಣ್ಡಿಕಸ್ಸ ಆರಾಮೆ. ಅಥ ಖೊ ಅಞ್ಞತರಾ ದೇವತಾ ಅಭಿಕ್ಕನ್ತಾಯ ರತ್ತಿಯಾ ಅಭಿಕ್ಕನ್ತವಣ್ಣಾ ಕೇವಲ ಕಪ್ಪಂ ಜೇತವನಂ ಓಭಾಸೇತ್ವಾ ಏನ ಭಗವಾ ತೇನುಪಸಂಕಮಿ. ಉಪ ಸಂಕಮಿತ್ವಾ ಭಗವನ್ತಂ ಅಭಿವಾದೆತ್ವಾ ಏಕಮನ್ತಂ ಅಟ್ಠಾಸಿ, ಏಕಮನ್ತಂ ಠಿತಾ ಖೋ ಸಾ ದೇವತಾ ಭಗವನ್ತಂ ಗಾಥಾಯ ಅಜ್ಝಭಾಸಿ.**

ಇಂತು ನಾನು ಕೇಳಿರುವೆನು, ಒಂದು ಸಮಯದಲ್ಲಿ ಭಗವಂತರು ಶ್ರಾವಸ್ಥಿಯ ಜೇತವನದ ಅನಾಥಪಿಂಡಿಕನ ವಿಹಾರದಲ್ಲಿ ತಂಗಿದ್ದರು. ಆಗ ಒಬ್ಬ ದೇವತೆಯು ರಾತ್ರಿ ಕಳೆದಾಗ (ಬೆಳಗಿನ ಜಾವ) ವಿಶೇಷವಾದ ಕಾಂತಿಯಿಂದ ಇಡೀ ಜೇತವನವನ್ನು ಬೆಳಗಿಸುತ್ತಾ ಭಗವಾನರ ಹತ್ತಿರ ಬಂದು ಭಗವಾನರಿಗೆ ನಮಸ್ಕರಿಸಿ ಒಂದೆಡೆಯಲ್ಲಿ ನಿಂತುಕೊಂಡನು ಮತ್ತು ಭಗವಂತನನ್ನ ಗಾಥೆಯ ಮೂಲಕ ಹೀಗೆ ಸಂಬೋಧಿಸಿದನು:

**ದೇವತೆ**

1. **ಬಹುದೇವಾ ಮನುಸ್ಸಾಚ**
   **ಮಙ್ಗಳಾನಿ ಅಚಿನ್ತಯುಂ**
   **ಆಕಙ್ಖಮಾನಾ ಸೊತ್ಥಾನಂ**
   **ಬ್ರೂಹಿ ಮಙ್ಗಳ ಮುತ್ತಮಂ**

   ಅನೇಕ ದೇವತೆಗಳು ಮತ್ತು ಮಾನವರು
   ಸ್ವಸ್ತಿಗಳನ್ನು ಬಯಸುತ್ತಾ
   ಮಂಗಳಗಳನ್ನು ಕುರಿತು ಚಿಂತನೆ ನಡೆಸಿದರು.
   ಉತ್ತಮವಾದ ಮಂಗಳ ಯಾವುದೆಂಬುದು ನಮಗೆ ತಿಳಿಸಿ

ಭಗವಾನರು :

2. **ಅಸೇವನಾ ಚ ಬಾಲಾನಂ**
**ಪಂಡಿ ತಾನಞ್ಚ ಸೇವಾನಾ**
**ಪೂಜಾ ಚ ಪೂಜನೀಯಾನಂ**
**ಏತಂ ಮಙ್ಗಳಮುತ್ತಮಂ**

ಮೂರ್ಖರ ಸಂಘವನ್ನು ತೊರೆಯುವುದು
ಜ್ಞಾನಿಗಳ ಜೊತೆಗೆ ಬೆರೆಯುವುದು
ಮತ್ತು ಯಾರು ಪೂಜೆಗೆ ಅರ್ಹರೋ ಅಂಥವರನ್ನು ಪೂಜಿಸುವುದು
ಇವು ಉತ್ತಮ ಮಂಗಳವನ್ನು ತರುತ್ತವೆ.

3. **ಪಟಿರೂಪ ದೇಸವಾಸೋ ಚ**
**ಪುಬ್ಬೇ ಚ ಕತಪುಞ್ಞತಾ**
**ಅತ್ತ ಸಮ್ಮಾ ಪಣಿಧಿ ಚ**
**ಏತಂ ಮಙ್ಗಳಮುತ್ತಮಂ**

ಸೂಕ್ತವಾದ ಪರಿಸರದಲ್ಲಿ ವಾಸ ಮಾಡುವುದು
ಹಿಂದಿನ ಕರ್ಮಗಳಿಂದಾಗಿ ಗಳಿಸಿದ ಪುಣ್ಯ
ಮತ್ತು ತನ್ನನ್ನು ತಾನು ಸರಿ ಮಾರ್ಗದಲ್ಲಿ ನಡೆಸಿಕೊಳ್ಳುವುದು
ಇವು ಉತ್ತಮ ಮಂಗಳವನ್ನು ತರುತ್ತವೆ.

4. **ಬಾಹುಸಚ್ಚಞ್ಚ ಸಿಪ್ಪಞ್ಚ**
**ವಿನಯೋ ಚ ಸುಸಿಕ್ಖಿತೊ**
**ಸುಭಾಷಿತಾ ಚ ಯಾ ವಾಚಾ**
**ಏತಂ ಮಙ್ಗಳಮುತ್ತಮಂ**

ಆಳವಾದ ಅಧ್ಯಯನ, ನೈಪುಣ್ಯತೆ,
ಅಸೀಮವಾದ ಶಿಸ್ತು, ತತ್ವ ಪರಿಪಾಲನೆ
ಇವೆಲ್ಲದರ ಜೊತೆ ಸದಾ ಚೆನ್ನಾಗಿ ಮಾತನಾಡುವ ಗುಣ
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

5. **ಮಾತಪಿತು ಉಪಟ್ಠಾನಂ**
**ಪುತ್ತದಾರಸ್ಸ ಸಙ್ಗಹೊ**
**ಅನಾಕುಲ ಚ ಕಮ್ಮನ್ತಾ**
**ಏತಂ ಮಙ್ಗಳಮುತ್ತಮಂ**





ತಂದೆ ತಾಯಿಗಳ ಸೇವೆ ಮಾಡುವುದು
ಹೆಂಡತಿ ಮತ್ತು ಮಕ್ಕಳನ್ನು ಪೋಷಿಸುವುದು
ಕಳಂಕರಹಿತ ಮಾರ್ಗದಲ್ಲಿ ಮುನ್ನಡೆಯುವುದು
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

6. **ದಾನಞ್ಚ ಧಮ್ಮ ಚರಿಯಾ ಚ**
**ಞಾತಕಾನಞ್ಚ ಸಙ್ಗಹೊ**
**ಅನವಜ್ಜಾನಿ ಕಮ್ಮಾನಿ**
**ಏತಂ ಮಂಗಳಮುತ್ತಮಂ**

ದಾನ ಮತ್ತು ಧರ್ಮಕ್ಕೆ ಅನುಸಾರವಾಗಿ ನಡೆಯುವುದು
ಬಂಧು ಬಾಂಧವರಿಗೆ ಸಹಾಯವನ್ನು ಮಾಡುವುದು
ದುಷ್ಟ ಪರಿಣಾಮವನ್ನು ತರುವ ಕರ್ಮದಿಂದ ದೂರವಿರುವುದು
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

7. **ಆರತಿ ವಿರತಿ ಪಾಪಾ**
**ಮಜ್ಜಪಾನಾ ಚ ಸಞ್ಞಮೊ**
**ಅಪ್ಪಮಾದೊ ಚ ಧಮ್ಮೇಸು**
**ಏತಂ ಮಙ್ಗಳಮುತ್ತಮಂ**

ಕೇಡು ಮತ್ತು ಪಾಪದಿಂದ ದೂರವಿರುವದು
ನಶೆಯನ್ನು ತರುವ ಮಧ್ಯಪಾನವನ್ನು ತಿರಸ್ಕರಿಸುವದು
ಆಧ್ಯಾತ್ಮಿಕ ಮನೋಭಾವವನ್ನು ರೂಢಿಸಿಕೊಳ್ಳುವಲ್ಲಿ ಜಾಗ್ರತನಾಗಿರುವುದು
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

8. **ಗಾರವೊ ಚ ನಿವಾತೊ ಚ**
**ಸಂತುಟ್ಠೀ ಚ ಕತಞ್ಞುತಾ**
**ಕಾಲೇನ ಧಮ್ಮಸವಣಂ**
**ಏತಂ ಮಙ್ಗಳಮುತ್ತಮಂ**

ಬದುಕಿನ ಬಗ್ಗೆ ಪೂಜ್ಯತೆ ಮತ್ತು ವಿನೀತ ಭಾವನೆಯುಳ್ಳವನಾಗಿರು
ಸಂತುಷ್ಟತೆ ಮತ್ತು ಉಪಕಾರ ಸ್ಮರಣೆಯುಳ್ಳವನಾಗಿರು
ಮತ್ತು ಧರ್ಮ ಪ್ರವಚನವನ್ನು ಆಲಿಸುವಂತವನಾಗು
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

9. **ಖನ್ತಿ ಚ ಸೋವಚಸ್ಸತಾ**
**ಸಮಣಾಜಞ್ಚ ದಸ್ಸನಂ**
**ಕಾಲೇನ ಧಮ್ಮಸಾಕಚ್ಛಾ**
**ಏತಂ ಮಙ್ಗಳಮುತಮಂ**

ತಾಳ್ಮೆಯಿಂದಿರುವುದು ಮತ್ತು ತೆರೆದ ಮನದಿಂದ ತಪ್ಪು ತಿದ್ದಿಕೊಳ್ಳುವುದು
ಭಿಕ್ಕುಗಳನ್ನು ಗೌರವಪೂರ್ವಕವಾಗಿ ಆದರಿಸುವುದು
ಮತ್ತು ಸಕಾಲದಲ್ಲಿ ಧರ್ಮವನ್ನು ಕುರಿತು ಚರ್ಚಿಸುವುದು
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ

10. **ತಪೋಚ ಬ್ರಹ್ಮಚರಿಯಾ ಚ**
**ಅರಿಯಸಚ್ಚಾನದಸ್ಸನಂ**
**ನಿಬ್ಬಾನ ಸಚ್ಛಿಕಿರಿಯಾ ಚ**
**ಏತಂ ಮಙ್ಗಳಮುತ್ತಮಂ**

ತಪಸ್ಸು ಮತ್ತು ಬ್ರಹ್ಮಚರ್ಯೆಯನ್ನು ರೂಢಿಸಿಕೊಳ್ಳುವುದು
ಚತುರಾರ್ಯ ಸತ್ಯಗಳ ದರ್ಶನ ಹೊಂದುವುದು
ಪರಮಶಾಂತಿಯನ್ನು ನೀಡುವ ನಿಬ್ಬಾಣವನ್ನು ಅರಿಯುವುದು
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

11. **ಪುಟ್ಠಸ್ಸ ಲೋಕಧಮ್ಮೇಹಿ**
**ಚಿತ್ತಂ ಯಸ್ಸ ನ ಕಮ್ಪತಿ**
**ಅಸೋಕಂ ವಿರಜಂ ಖೇಮಂ**
**ಏತಂ ಮಙ್ಗಳಮುತ್ತಮಂ**

ಲೋಕ ಧರ್ಮಗಳಿಂದ ಸೋಂಕಲ್ಪಟ್ಟರೂ
ಯಾರ ಚಿತ್ತವು ಕಂಪಿತವಾಗದಿರುತ್ತದೆಯೋ
ಅವರು ಶೋಕವಿಲ್ಲದೆ ವಿರಜವಾಗಿಯು ಕ್ಷೇಮವಾಗಿಯೂ ಇರುತ್ತಾರೆ
ಇವೆಲ್ಲ ಮಂಗಳವನ್ನುಂಟು ಮಾಡುತ್ತವೆ.

12. **ಏತಾದಿಸಾನಿ ಕತ್ವಾನ**
**ಸಬ್ಬತ್ಥಮ ಪರಾಜಿತಾ**
**ಸಬ್ಬತ್ಥ ಸೋತ್ಥಿಂ ಗಚ್ಛನ್ತಿ**
**ತಂತೇಸಂ ಮಙ್ಗಳಮುತಮನ್ತಿ**

ಈ ಮಾರ್ಗದಲ್ಲಿ ನಡೆದು ಹೋಗುವವರಿಗೆ ಎಲ್ಲಿಯೂ
ಅಪಜಯವೆಂಬುದೇ ಇಲ್ಲ,
ಅವರು ಸದಾ ಕ್ಷೇಮದಿಂದಿರುತ್ತಾರೆ.
ಅಂತಹವರಿಗೆ ಇದು ಉತ್ತಮವಾದ ಮಂಗಳ





## 3. ರತನ ಸುತ್ತ
## ತ್ರಿರತ್ನದ ಬಗ್ಗೆ ಪ್ರವಚನ

ನಿದಾನಂ

**ಪಣಿದಾನತೊ ಪಟ್ಠಾಯ**
**ತಥಾಗತಸ್ಸಾದಸಪಾರಮಿಯೋ**
**ದಶ ಉಪಾಪರಾಮಿಯೋ**
**ದಶ ಪರಮತ್ತಾಪಾರಮಿಯೋತಿ**
**ಸಮತಿಂಸ ಪಾರಮಿಯೋ;**
**ಪಂಚ ಮಹಾಪರಿಚ್ಚಾಗೆ**
**ಲೋಕತ್ತಾಚರಿಯಂ ಞಾತತ್ಥಾ ಚರಿಯಂ**
**ಬುದ್ಧತ್ತಾಚರಿಯನ್ತಿ,**
**ತಿಸ್ಸೋ ಚರಿಯಾಯೋ**
**ಪಚ್ಛಿಮಭಾವೆ ಗಬ್ಭೊಕ್ಕಂತಿಂ,**
**ಜಾತಿಂ, ಅಭಿನಿಕ್ಖಾಮನಂ,**
**ಪದಾನಚರಿಯಂ;**
**ಬೋಧಿಪಲ್ಲಂಕ ಮಾರವಿಜಯಂ,**
**ಸಬ್ಬನ್ನೂತಞಾನ ಪಟಿವೇದಂ**
**ಧಮ್ಮಚಕ್ಕ ಪವತ್ತನಂ**
**ನವ ಲೋಕುತ್ತರ ಧಮ್ಮೇತಿ,**
**ಸಬ್ಬೇ ಪಿ ಮೆ ಬುದ್ಧಗುಣೆ**
**ಆವಜ್ಜೇತವಾ ವೆಸಾಲಿಯಾ ತೀಸು**
**ಪಾಕಾರನತರೆಸು ತಿಯಾಮರತ್ತಿಂ**
**ಪರಿತ್ತಂ ಕರೊನ್ತೊ,**
**ಆಯಸ್ಮಾ ಆನಂದ ಥೇರೊ ವಿಯಾ**
**ಕಾರುನ್ನಮ್ ಚಿತ್ತಂ ಉಪಟ್ಠಾಪೆತ್ವಾ,**
**ಕೋಟೀಸತಸಹಸ್ಸೇಸು**
**ಚಕ್ಕಾವಾಲೆಸು ದೇವತಾ**
**ಯಸ್ಸಾನಂ ಪಟಿಗ್ಗಣಹಂತಿ**
**ಯನ್ಚಾವೆಸಾಲಿಯಾ ಪುರೆ,**
**ರೋಗಾಮನುಸ್ಸಾ ದುಬ್ಭಿಕ್ಖಾ**
**ಸಂಭೂತಂ ತಿವಿಧಂ ಭಯಂ;**
**ಖಿಪ್ಪಮನ್ತರಧಾಪೇಸಿ**
**ಪರಿತಂ ತಂ ಭಣಾಮಹೆ**

**ಸಂದರ್ಭ :**

ವೇಸಾಲಿಯ ಜನ ಮೇಲಿಂದ ಮೇಲೆ ಬಂದ ಬರ, ಸೋಂಕು ರೋಗ, ದುಷ್ಟ ಶಕ್ತಿಗಳ ಪ್ರಭಾವಗಳಿಗೆ ತತ್ತರಿಸಿ ಹೋದುದನ್ನು ಕಂಡ ಹಿರಿಯನಾದ ಆನಂದ ಮರುಗಿದ. ಅವರ ಮೇಲೆ ಅಪಾರ ಕರುಣೆಯಿಂದ ಒಂದು ಇಡೀ ರಾತ್ರಿ ತ್ರಿರತ್ನ ಭಜನೆ ಮಾಡಿ ದುಷ್ಟ ಶಕ್ತಿಗಳನ್ನು ಓಡಿಸಿದ. ಮೊದಲು, ಬುದ್ಧನ ಅಲೌಕಿಕ ಗುಣಗಳನ್ನು ಧ್ಯಾನಿಸಿ ತನ್ನನ್ನು ತಾನು ಶಕ್ತಿಶಾಲಿಯನ್ನಾಗಿ ಮಾಡಿಕೊಂಡನು. ನಂತರ ಬುದ್ಧ ಕಂಡುಕೊಂಡ ಒಂಬತ್ತು ಲೋಕೋತ್ತರ ಧಮ್ಮಗಳ ಮೇಲೆ ಧ್ಯಾನಿಸಿ ತನ್ನನ್ನು ತಾನು ಚೈತನ್ಯಮಯವಾಗಿ ಮಾಡಿಕೊಂಡನು. ತಥಾಗತ ಬುದ್ಧನಿಗೆ ಮಾತ್ರ ಈ ರೀತಿಯ ಅನುಪಮ ಸಿದ್ಧಿಗಳನ್ನು ಪಡೆಯಲು ಸಾಧ್ಯ.

ತಥಾಗತ ಬುದ್ಧನು ದಶ ಪಾರಮಿಗಳನ್ನು, ಹತ್ತು ಉಪ ಪಾರಮಿಗಳನ್ನು ಮತ್ತು ಹತ್ತು ಪರಮಾರ್ಥ ಪಾರಮಿಗಳನ್ನು ಹೀಗೆ ಒಟ್ಟು ಮೂವತ್ತು ಪಾರಮಿಗಳನ್ನು ಸಾಧಿಸಿದವನು.

ಹಾಗೆಯೇ ಇವೆ ಆತನ ವೀರಗಾಥೆಗಳೂ ಕೂಡ. ಅವು (1) ಐದು ಮಹಾ ಪರಿತ್ಯಾಗಗಳು; (2) ಲೋಕ ಕಲ್ಯಾಣ, ಬಂಧುಗಳ ಕಲ್ಯಾಣ, ಮೂರನೆಯದಾಗಿ ಜ್ಞಾನೋದಯ ಸಿದ್ಧಿಗಾಗಿ ತನ್ನ ಕಲ್ಯಾಣ. ಹೀಗೆ ಮೂರು ಬಗೆಯ ಸಾಧನೆಗಳು; (3) ದೇವಲೋಕದ ರಾಜನಾಗಿದ್ದವನು ಕೊನೆಯ ಜನ್ಮವಾಗಿ ಮಾನವ ಲೋಕವನ್ನು ಭವ್ಯವಾಗಿ ಪ್ರವೇಶಿಸಿದನು; ಅಸಮಾನವಾದ ಜನನ, ಮಹಾ ಪರಿತ್ಯಾಗ, ಸರಳ ಹಾಗೂ ಗಂಭೀರ ಸಾಧನೆ, ಬೋಧಿ ವೃಕ್ಷದ ಅಡಿಯಲ್ಲಿ ಮಾರನೊಂದಿಗೆ ಸೆಣಸಾಟ, ಧರ್ಮಚಕ್ರ ಪ್ರವರ್ತನೆ, ನವ ಲೋಕೋತ್ತರ ಧಮ್ಮಗಳ ಸಾಧನೆ. ಆನಂತರ ಬುದ್ಧನ ನವಾಂಶಗುಣಗಳ ಮೇಲೆ ಧ್ಯಾನಿಸಿ ತ್ರಿರತ್ನಗಳನ್ನು ಹಿರಿಯನಾದ ಆನಂದನು ಉಚ್ಚರಿಸಿದನು.

ಯಾವ ರೀತಿಯಲ್ಲಿ ಹಿರಿಯನಾದ ಆನಂದನು ಮುಂದೆ ನಡೆದನೋ ಅದೇರೀತಿಯಲ್ಲಿ ನಾವೂ ನಮ್ಮೆದೆಯೊಳಗೆ ಅನುಕಂಪವನ್ನು ತುಂಬಿಕೊಂಡು ಈ ಪರಿತ್ತ ಸುತ್ತವನ್ನು ಪಠಿಸೋಣ. ಚಕ್ರವಾಳದಲ್ಲಿರುವ ಕೋಟ್ಯಾನುಕೋಟಿ ದೇವತೆಗಳು ಈ ಬೋಧನೆಯನ್ನು ಭಕ್ತಿಯಿಂದ ಪಾಲಿಸುತ್ತಾರೆ. ಆನಂದ ಥೇರನು ವೇಸಾಲಿಯಲ್ಲಿ ಈ ಸುತ್ತವನ್ನು ಪಠಿಸುತ್ತಿದ್ದಂತೆ ದುರ್ಭಿಕ್ಷೆ, ರೋಗ, ಸಂಭೂತ (ಕೆಟ್ಟ ಶಕ್ತಿಗಳು)ವೆಂಬ ಮೂರು ವಿಧದ ಭಯಗಳು ದೂರವಾದವು. ಅಂತಹ ಪರಿತ್ತ ಸುತ್ತವನ್ನೇ ನಾವು ಈಗ ಪಠಿಸೋಣ :

1. **ಯಾನೀಧ ಭೂತಾನಿ ಸಮಾಗತಾನಿ**
   **ಭುಮ್ಮಾನಿ ವಾ ಯಾನಿ ವಾ ಅನ್ತಲಿಕ್ಖೇ**
   **ಸಬ್ಬೇವ ಭೂತಾ ಸುಮನಾ ಭವನ್ತು**
   **ಅಥೋ ಪಿ ಸಕ್ಕಚ್ಚ ಸುಣನ್ತು ಭಾಸಿತಂ**





   ಭೂಮಿಯಲ್ಲಾಗಲಿ ಅಥವಾ ಅಂತರಿಕ್ಷದಲ್ಲಾಗಲೀ ಇರುವ
   ಯಾವ ಭೂತಗಣಗಳು ಇಲ್ಲಿ ನೆರೆದಿವೆಯೋ
   ಆ ಎಲ್ಲ ಜೀವಿಗಳು ನಿರ್ಮಲ ಚಿತ್ತರಾಗಲಿ.
   ಈ ಮಾತುಗಳನ್ನು ಎಚ್ಚರದಿಂದ ಕೇಳಿಸಿಕೊಳ್ಳಿ

2. **ತಸ್ಮಾಹಿ ಭೂತಾ ನಿಸಾಮೇಥ ಸಬ್ಬೇ**
   **ಮೆತ್ತಂ ಕರೋಥ ಮಾನುಸಿಯಾ ಪಜಾಯ**
   **ದಿವಾ ಚ ರತ್ತೋ ಚ ಹರನ್ತಿಯೇ ಬಲಿಂ**
   **ತಸ್ಮಾ ಹಿ ನೇ ರಕ್ಖಥಾ ಅಪ್ಪಮತ್ತಾ.**

   ಎಲೈ ಭೂತಗಳೇ, ಎಲ್ಲರೂ ಸರಿಯಾಗಿ ಕೇಳಿರಿ
   ಮಾನವರು ನಿಮಗೆ ಹಗಲು ಮತ್ತು ರಾತ್ರಿಗಳಲ್ಲಿ ದಾನವನ್ನು ಅರ್ಪಿಸುವುದರಿಂದ
   ಅವರ ಬಗ್ಗೆ ನೀವು ಮೈತ್ರಿಯನ್ನು ತೋರಿಸಿ
   ಮತ್ತು ಜಾಗರೂಕತೆಯಿಂದ ಅವರನ್ನು ಕಾಪಾಡಿ.

3. **ಯಂ ಕಿಂಚಿ ವಿತ್ತಂ ಇಧ ವಾ ಹುರಂ ವಾ**
   **ಸಗ್ಗೇಸು ವಾ ಯಂ ರತನಂ ಪಣೀತಂ**
   **ನ ನೋ ಸಮಂ ಅತ್ಥಿ ತಥಾಗತೇನ**
   **ಇದಂ ಪಿ ಬುದ್ಧೇ ರತನಂ ಪಣೀತಂ**
   **ಏತೇನ ಸಚ್ಚೇನ ಸುವತ್ಥಿ ಹೋತು !**

   ಇಹದಲ್ಲೇ ಆಗಲಿ ಅಥವಾ ಪರದಲ್ಲೇ ಆಗಲಿ ಯಾವ ಐಶ್ವರ್ಯವಿದ್ದರೂ
   ಅಥವಾ ಸ್ವರ್ಗಗಳಲ್ಲಿ ಯಾವುದೇ ಶ್ರೇಷ್ಠ ರತ್ನವಿದ್ದರೂ
   ಅವಾವುವೂ ತಥಾಗತನಿಗೆ ಸಮನಲ್ಲ.
   ಇದು ನಿಜವಾಗಿಯೂ ಬುದ್ಧರಲ್ಲಿನ ಶ್ರೇಷ್ಠರತ್ನ
   ಈ ಸತ್ಯದಿಂದ ಸ್ವಸ್ತಿಯಾಗಲಿ !

4. **ಖಯಂ ವಿರಾಗಂ ಅಮತಂ ಪಣೀತಂ**
   **ಯದಜ್ಝಗಾ ಸಾಕ್ಯಮುನೀ ಸಮಾಹಿತೋ**
   **ನ ತೇನ ಧಮ್ಮೇನ ಸಮತ್ಥಿ ಕಿಂಚಿ**
   **ಇದಂ ಪಿ ಧಮ್ಮೇ ರತನಂ ಪಣೀತಂ**
   **ಏತೇನ ಸಚ್ಚೇನ ಸುವತ್ಥಿ ಹೋತು !**

   ಯಾವ ತೃಷ್ಣೆಯ ನಾಶವನ್ನು ವೈರಾಗ್ಯವನ್ನು
   ಮತ್ತು ಶ್ರೇಷ್ಠವಾದ ಅಮೃತವನ್ನು
   ಶಾಕ್ಯಮುನಿಯು ಸಮಾಧಿಯಿಂದ ಪಡೆದುಕೊಂಡರೋ
   ಅದಕ್ಕೆ ಸಮನಾದ ಧರ್ಮವಾವುದೂ ಇಲ್ಲ.

ಇದು ನಿಜವಾಗಿಯೂ ಧರ್ಮದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿಯಾಗಲಿ !

5. **ಯಂ ಬುದ್ಧ ಸೆಟ್ಠೊ ಪರಿವಣ್ಣಯೀ ಸುಚಿಂ**
**ಸಮಾಧಿಮಾನನ್ತ ರಿಕಞ್ಞಮಾಹು,**
**ಸಮಾಧಿನಾ ತೇನ ಸಮೋ ನ ವಿಜ್ಜತಿ**
**ಇದಂ ಪಿ ಧಮ್ಮೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಬುದ್ಧಶ್ರೇಷ್ಠರು ಯಾವ ಪರಿಶುದ್ಧವಾದ
ಹಾಗೂ ಆಗಿಂದಾಗಲೇ ಫಲವನ್ನು ಕೊಡುವ
ಸಮಾಧಿಯನ್ನು ಹೊಗಳಿದರೋ
ಆ ಸಮಾಧಿಗೆ ಸಮನಾದುದು ಇಲ್ಲ.
ಇದು ನಿಜವಾಗಿಯೂ ಧರ್ಮದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

6. **ಯೆ ಪುಗ್ಗಲಾ ಅಟ್ಠಸತಂ ಪಸತ್ಥಾ**
**ಚತ್ತಾರಿ ಏತಾನಿ ಯುಗಾನಿ ಹೊನ್ತಿ**
**ತೇ ದಕ್ಕಿಣೆಯ್ಯಾ ಸುಗತಸ್ಸ ಸಾವಕಾ**
**ಏತೇಸು ದಿನ್ನಾನಿ ಮಹಪ್ಫಲಾನಿ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಮಹಾ ಸಂತ ಬುದ್ಧರಿಂದ ಹೊಗಳಲ್ಪಟ್ಟ ಆ ಎಂಟು ಸಂತರು
ನಾಲ್ಕು ಜೋಡಿ ಪವಿತ್ರ ಸಾಧಕರು
ಸುಗತನಾದ ಬುದ್ಧನ ಈ ಶ್ರಾವಕರು ದಾನಕ್ಕೆ ಅರ್ಹರಾದವರು
ಇವರಿಗೆ ಕೊಟ್ಟದ್ದೆಲ್ಲ ಮಹಾಫಲದಾಯಕವು.
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

7. **ಯೇ ಸುಪ್ಪಯುತ್ತಾ ಮನಸಾದಳ್ಹೇನ**
**ನಿಕ್ಕಾಮಿನೋ ಗೋತಮ ಸಾಸನಮ್ಹಿ**
**ತೇ ಪತ್ತಿಪತ್ತಾ ಅಮತಂ ವಿಗಯ್ಹ**
**ಲದ್ಧಾ ಮುಧಾ ನಿಬ್ಬುತಿಂ ಭುಂಜಮಾನಾ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**





ಯಾರು ನಿಷ್ಕಾಮಿಗಳಾಗಿ ಗೌತಮರ ಶಾಸನದಲ್ಲಿ ದೃಢಮನಸ್ಕರಾಗಿ
ತಮ್ಮನ್ನು ತಾವು ನಿಯೋಜಿಸಿಕೊಂಡಿರುತ್ತಾರೋ
ಅವರು ಅಮೃತತ್ವದಲ್ಲಿ ಮುಳುಗಿ ಪಡೆಯಬೇಕಾದುದನ್ನು ಪಡೆದವರಾಗಿರುತ್ತಾರೆ.
ಸೂಕ್ತವಾಗಿ ಅವರು ಶಾಂತಿಯನ್ನು ಅನುಭವಿಸುತ್ತಾರೆ
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

8. **ಯಥಿಂದಖೀಲೋ ಪಠವಿಂ ಸಿತೊಸಿಯಾ**
**ಚತುಬ್ಬಿವಾತೇಹಿ ಅಸಮ್ಮಕಮ್ಪಿಯೋ**
**ತಥೂಪಮಂ ಸಪ್ಪುರಿಸಂ ವದಾಮಿ**
**ಯೋ ಅರಿಯಸಚ್ಚಾನಿ ಅವೆಚ್ಚ ಪಸ್ಸತಿ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಯಾವ ರೀತಿ ಭೂಮಿಯಲ್ಲಿ ಹುಗಿಯಲ್ಪಟ್ಟ
ನಗರ ದ್ವಾರದ ಕಂಬವು ನಾಲ್ಕು ದಿಕ್ಕಿನ ಗಾಳಿಯಿಂದ ಅಲ್ಲಾಡದೆ ಇರುತ್ತದೋ
ಅದೇರೀತಿ ಆರ್ಯ ಸತ್ಯಗಳನ್ನು ಸುಸ್ಪಷ್ಟವಾಗಿ ನೋಡಿದ
ಸತ್ಪುರುಷನಿರುತ್ತಾನೆ ಎಂಬುದಾಗಿ ಸಾರುತ್ತೇನೆ.
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

9. **ಯೆ ಅರಿಯ ಸಚ್ಚಾನಿ ವಿಭಾವಯನ್ತಿ**
**ಗಮ್ಭೀರ ಪಞ್ಞೇನ ಸು ದೇಸಿತಾನಿ**
**ಕಿಂಚಾಪಿ ತೇ ಹೊನ್ತಿ ಭುಸಪ್ಪಮತ್ತಾ**
**ನ ತೇ ಭವಂ ಅಟ್ಟಮಂ ಆದಿಯನ್ತಿ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಗಂಭೀರ ಪ್ರಾಜ್ಞನಿಂದ ಸಂಬೋಧಿತವಾದ
ಆರ್ಯ ಸತ್ಯಗಳನ್ನು ಯಾರು ಸರಿಯಾಗಿ ತಿಳಿದುಕೊಳ್ಳುತ್ತಾರೋ
ಅವರು ಅದೆಷ್ಟು ಹೆಚ್ಚಿನ ಪ್ರಮತ್ತರಾದರೂ ಕೂಡ
ಎಂಟನೆಯ ಜನ್ಮವನ್ನು ತಳೆಯುವುದಿಲ್ಲ.
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

10. **ಸಹಾವಸ್ಸ ದಸ್ಸನ ಸಮ್ಪದಾಯ**
**ತಯಸ್ಸು ಧಮ್ಮಾ ಜಹಿತಾ ಭವನ್ತಿ**
**ಸಕ್ಕಾಯ ದಿಟ್ಠಿ ವಿಚಿಕಿಚ್ಛಿತಂಚ**
**ಸೀಲಬ್ಬತಂ ವಾಪಿ ಯದತ್ತಿಕಿಂಚಿ**
**ಚತೂಹ ಪಾಯೇಹಿ ಚ ವಿಪ್ಪಮುತ್ತೊ**
**ಛಚಾಭಿಠಾನಾನಿ ಅಭಬ್ಬೊ ಕಾತುಂ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ದರ್ಶನವು ಹುಟ್ಟಿಕೊಂಡೊಡನೆಯೆ ಮೂರು ಧರ್ಮಗಳಾದ
ಸ್ವಕಾಯ ದೃಷ್ಟಿ ಸಂದೇಹ ಮತ್ತು ಶೀಲ ವ್ರತಕ್ಕೆ ಅಂಟಿಕೊಂಡಿದ್ದರೆ
ಅದು ಆತನಿಂದ ತೊಡೆದು ಹಾಕಲ್ಪಡುತ್ತದೆ.
ಆತನು ನಾಲ್ಕು ನರಕ ಸ್ಥಿತಿಗಳಿಂದ ಸಂಪೂರ್ಣವಾಗಿ ಮುಕ್ತವಾಗುತ್ತಾನೆ
ಆರು ಘೋರ ಕೃತ್ಯಗಳನ್ನು ಎಸಗಲು ಆತನು ಅಸಮರ್ಥನಾಗುತ್ತಾನೆ.
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

11. **ಕಿಂಚಾಪಿ ಸೋ ಕಮ್ಮಂ ಕರೋತಿ ಪಾಪಕಂ**
**ಕಾಯೇನ ವಾಚಾ ಉದ ಚೇತಸಾ ವಾ**
**ಅಭಬ್ಬೋ ಸೋ ತಸ್ಸ ಪಟಿಚ್ಛಾದಾಯ**
**ಅಭಬ್ಬತಾ ದಿಟ್ಟ ಪದಸ್ಸ ವುತ್ತಾ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಕಾರ್ಯದಿಂದಾಗಲಿ, ಮಾತಿನಿಂದಾಗಲಿ ಅಥವಾ ಮನಸ್ಸಿನಿಂದಾಲಿ
ಪಾಪಕಾರ್ಯವನ್ನೇನಾದರೂ ಆತನು ಮಾಡಿದ ಪಕ್ಷದಲ್ಲಿ
ಅದನ್ನು ಮುಚ್ಚಿಡುವುದು ಆತನಿಗೆ ಅಸಾಧ್ಯ.
ಏಕೆಂದರೆ ನಿರ್ವಾಣವನ್ನು ಕಂಡವನಿಗೆ ಅಂತಹದೊಂದು ಅಸಾಧ್ಯ.
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠ ರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

12. **ವನಪ್ಪಗುಮ್ಬೇ ಯಥಾ ಪುಸ್ಸಿತಗ್ಗೇ**
**ಗಿಮ್ಹಾನಮಾಸೇ ಪಠಮಸ್ಮಿಂ ಗಿಮ್ಹೇ**
**ತಥೂಪಮಂ ಧಮ್ಮವರಂ ಅದೇಸಯಿ**





**ನಿಬ್ಬಾನಗಾಮಿಂ ಪರಮಂ ಹಿತಾಯ**
**ಇದಂ ಪಿ ಬುದ್ಧೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಬೇಸಿಗೆಯ ಪ್ರಾರಂಭದಲ್ಲಿ
ಸಾಂದ್ರವಾದ ವನವು ಯಾವರೀತಿ ವಿಕಸಿತ ಕುಸುಮಗಳಿಂದ
ಕೂಡಿರುತ್ತದೊ, ಅದೇರೀತಿ ಪರಮ ಹಿತಕ್ಕಾಗಿ ನಿಬ್ಬಾಣಕ್ಕೆ
ಕೊಂಡೊಯ್ಯುವ ಶ್ರೇಷ್ಠ ಧರ್ಮವನ್ನು ಭಗವಾನರು ಬೋಧಿಸಿದರು.
ಇದು ನಿಜವಾಗಿಯೂ ಬುದ್ಧರಲ್ಲಿನ ಶ್ರೇಷ್ಠ ತ್ನ ಈ ಸತ್ಯವಚನದಿಂದ ಸ್ವಸ್ತಿಯಾಗಲಿ.

13. **ವರೋ ವರಞ್ಞುವರದೋ ವರಾಹರೋ**
**ಅನುತ್ತರೋ ಧಮ್ಮವರಂ ಅದೇಸಯಿ**
**ಇದಂ ಪಿ ಬುದ್ಧೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಸರ್ವಶ್ರೇಷ್ಠ ನಿಬ್ಬಾಣ ದಾತನೂ, ಶ್ರೇಷ್ಠ ಧರ್ಮವನ್ನು ಅರಿತಿರುವವನೂ
ಶ್ರೇಷ್ಠತೆಯನ್ನು ತರುವವರೂ ಮತ್ತು ಅಸಮಾನರೂ ಆದ ಬುದ್ಧರು
ಶ್ರೇಷ್ಠ ಧರ್ಮವನ್ನು ಬೋಧಿಸಿದರು.
ಇದು ನಿಜವಾಗಿಯೂ ಬುದ್ಧರಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

14. **ಖೀಣಮ್ ಪುರಾಣಂ ನವಂ ನತ್ಥಿ ಸಮ್ಭವಂ**
**ವಿರತ್ತ ಚಿತ್ತಾ ಆಯತಿಕೆ ಭವಸ್ಮಿಂ**
**ತೇ ಖೀಣಬೀಜಾ ಅವಿರೂಳ್ಹಿಚ್ಛನ್ದಾ**
**ನಿಬ್ಬನ್ತಿ ಧೀರಾ ಯಥಾ ಯಂ ಪದೀಪೊ**
**ಇದಂ ಪಿ ಸಂಘೇ ರತನಂ ಪಣೀತಂ**
**ಏತೇನ ಸಚ್ಚೇನ ಸುವತ್ಥಿ ಹೋತು !**

ಹಿಂದಿನದು ನಶಿಸಿ ಹೋಯಿತು ! ಹೊಸದಾಗಿ ಹುಟ್ಟುವಿಕೆ ಇಲ್ಲ
ಮುಂದಿನ ಭವದ ಬಗ್ಗೆ ಚಿತ್ತವು ವಿರಕ್ತವಾಯಿತು
ಭವದ ಬೀಜವನ್ನು ನಾಶ ಮಾಡಿಕೊಂಡ
ಮತ್ತು ವಿಕಾರರಹಿತವಾದ ಧೀರರು ಈ ಪ್ರದೀಪದಂತೆ ಆರಿಹೋಗುತ್ತಾರೆ.
ಇದು ನಿಜವಾಗಿಯೂ ಸಂಘದಲ್ಲಿನ ಶ್ರೇಷ್ಠರತ್ನ
ಈ ಸತ್ಯದಿಂದ ಸ್ವಸ್ತಿ ಆಗಲಿ !

15. **ಯಾನೀಧ ಭೂತಾನಿ ಸಮಾಗತಾನಿ**
**ಭುಮ್ಮಾನಿ ವಾ ಯಾನಿ ವಾ ಅನ್ತಲಿಕ್ಖೇ**

**ತಥಾಗತಂ ದೇವಮನುಸ್ಸ ಪೂಜಿತಂ**
**ಬುದ್ಧಂ ನಮಸ್ಸಾಮ ಸುವತ್ಥಿ ಹೋತು !**

ಇಲ್ಲಿ ಯಾವ ಭೂತಗಣಗಳು ನೆರೆದಿರಲಿ
ಭೂಮಿಯಲ್ಲಾಗಲಿ ಅಥವಾ ಅಂತರಿಕ್ಷದಲ್ಲಾಗಲಿ
ದೇವಮಾನವರಿಂದ ಪೂಜಿತರಾದ
ತಥಾಗತ ಬುದ್ಧರಿಗೆ ನಾವು ನಮಸ್ಕರಿಸೋಣ. ಸ್ವಸ್ತಿ ಆಗಲಿ !

16. **ಯಾನೀಧ ಭೂತಾನಿ ಸಮಾಗತಾನಿ**
**ಭುಮ್ಮಾನಿ ವಾಯಾನಿ ವಾ ಅನ್ತಲಿಕ್ಖೇ**
**ತಥಾಗತಂ ದೇವಮನುಸ್ಸ ಪೂಜಿತಂ**
**ಧಮ್ಮಂ ನಮಸ್ಸಾಮ ಸುವತ್ಥಿ ಹೋತು !**

ಇಲ್ಲಿ ಯಾವ ಭೂತಗಣಗಳು ನೆರೆದಿರಲಿ
ಭೂಮಿಯಲ್ಲಿ ನೆಲೆಸಿರುವವಾಗಲಿ ಅಥವಾ ಆಕಾಶದಲ್ಲಿ ನೆಲೆಸಿರುವವಾಗಲಿ
ದೇವ ಮಾನವರಿಂದ ಪೂಜಿತರಾಗಿರುವ ತಥಾಗತರಿಗೆ
ಮತ್ತು ಧರ್ಮಕ್ಕೆ ನಾವು ನಮಸ್ಕರಿಸೋಣ. ಸ್ವಸ್ತಿ ಆಗಲಿ !

17. **ಯಾನೀಧ ಭೂತಾನಿ ಸಮಾಗತಾನಿ**
**ಭುಮ್ಮಾನಿ ವಾಯಾನಿ ವಾ ಅನ್ತಲಿಕ್ಖೇ**
**ತಥಾಗತಂ ದೇವಮನುಸ್ಸ ಪೂಜಿತಂ**
**ಸಂಘಂ ನಮಸ್ಸಾಮ ಸುವತ್ಥಿ ಹೋತು !**

ಇಲ್ಲಿ ಯಾವ ಭೂತಗಣಗಳು ನೆರೆದಿರಲಿ
ಭೂಮಿಯಲ್ಲಾಗಲಿ ಅಥವಾ ಅಂತರಿಕ್ಷದಲ್ಲಾಗಲೀ
ದೇವಮಾನವರಿಂದ ಪೂಜಿತರಾದ
ತಥಾಗತರಿಗೆ ಮತ್ತು ಸಂಘಕ್ಕೆ ನಾವು ನಮಸ್ಕರಿಸೋಣ. ಸ್ವಸ್ತಿ ಆಗಲಿ !

## 4. ಕರಣೀಯ ಮೆತ್ತಾ ಸುತ್ತ – ವಿಶ್ವಪ್ರೇಮದ ಮೇಲೊಂದು ಉಪದೇಶ

ನಿದಾನಂ

**ಯಸ್ಸಾನುಭೂವತೊ ಯಕ್ಖಾ**
**ನೆವ ದಸ್ಸೇನ್ತಿವಿಮ್ಸನಂ**
**ಯಮೀಹಿ ಚೆವಾನುಯುಂಜನ್ತೊ**
**ರತ್ತೀನಿದಿವಮತನದಿತೋ**
**ಸುಖಾಂ ಸುಪತಿ ಸುತ್ತೊ ಚ**





**ಪಾಪಂ ಕಿನ್ಸಿನ ಪಸ್ಸತಿ**
**ಇವಮಾದಿ ಗುಣ್ಣೇತಂ**
**ಪರಿತ್ತನಂ ತಂ ಬಣಾಮಹೆ**

**ಸಂದರ್ಭ**

ಯಾರು ಈ ಆಧ್ಯಾತ್ಮ ಶಕ್ತಿಯನ್ನು ಹಗಲು–ರಾತ್ರಿ ಬಿಡದೆ ಸಾಧಿಸುತ್ತಾರೋ ಅವರಿಗೆ ದುಷ್ಟ ಶಕ್ತಿಗಳು ತಮ್ಮ ರೌದ್ರಾಕಾರದಿಂದ ಕಾಣಿಸಿಕೊಳ್ಳುವುದಿಲ್ಲ; ಅವರು ನಿರಾಳವಾಗಿ ನಿದ್ದೆ ಮಾಡುವುದಲ್ಲದೆ ಕೆಟ್ಟ ಕನಸುಗಳು ಬೀಳವು. ನಾನೀಗ ಈ ರಕ್ಷಣಾ ಸ್ತೋತ್ರವನ್ನು ಪಠಿಸುತ್ತೇನೆ.

1. **ಕರಣೀಯ ಮತ್ಥ ಕುಸಲೇನ**
**ಯಂ ತಂ ಸಂತಂ ಪದಂ ಅಭಿಸಮೆಚ್ಚ**
**ಸಕ್ಕೊ ಉಜೂ ಚ ಸೂಜೂ ಚ**
**ಸುವಚೋ ಚ ಸ್ಸಮುದು ಅನತಿಮಾನೀ**

ತನ್ನ ಕಲ್ಯಾಣವನ್ನು ಸಾಧಿಸಿಕೊಂಡು ನಿರ್ವಾಣ ಸ್ಥಿತಿಯನ್ನು ಪಡೆಯಲು ಇಚ್ಛಿಸುವವನು ಈ ರೀತಿ ವರ್ತಿಸತಕ್ಕದ್ದು. ಆತನು ಶಕ್ತನಾಗಿಯೂ, ಸಮರ್ಪಕವಾದ ನೇರ ನಡವಳಿಕೆಯವನಾಗಿಯೂ, ಮಾತನಾಡಿಸಲು ಸುಲಭನೂ, ಮೃದು ಸ್ವಾಭಾವದವನೂ ಮತ್ತು ಅಹಂಕಾರವಿಲ್ಲದವನೂ ಆಗಿರುತ್ತಾನೆ.

2. **ಸಂತುಸ್ಸಕೋ ಚ ಸುಭರೋ ಚ**
**ಅಪ್ಪಕಿಚ್ಚೋ ಚ ಸಲ್ಲಹುಕ ವುತ್ತಿ,**
**ಸನಿನ್ದ್ರಿಯೋ ಚ ನಿಪಕೋ ಚ**
**ಅಪ್ಪಗಬ್ಬೋ ಕುಲೇಸು ಅನನುಗಿದ್ದೋ**

ಸದಾ ಸಂತುಷ್ಟನೂ ಯಾರಿಗೂ ಹೊರೆಯಾಗದವನೂ
ಕರ್ತವ್ಯ ನಿರತನೂ ಸದ್ಭಾವನೆಯುಳ್ಳವನೂ
ಇಂದ್ರೀಯಗಳನ್ನು ಶಾಂತವಾಗಿಸಿರುವವನೂ ಪ್ರಜ್ಞಾವಂತನೂ
ಜಾತಿ ಕುಲಗಳಲ್ಲಿ ಮಿಥ್ಯಾಭಿಮಾನವಿಲ್ಲದವನೂ ಆಗಿರುತ್ತಾನೆ.

3. **ನಚ ಖುದ್ದಂ ಸಮಾಚರೆ ಕಿಞಚಿ**
**ಯೇನ ವಿಞ್ಞಾಪರೆ ಉಪವದೆಯ್ಯುಂ**
**ಸುಖಿನೋ ವಾ ಖೇಮಿನೋ ಹೊನ್ತು**
**ಸಬ್ಬೇ ಸತ್ತಾಭವನ್ತು ಸುಖಿತತ್ತಾ**

ಯಾವ ಕರ್ಮಗಳು ಅಪೇಕ್ಷಣಾರ್ಹವೋ
ಅಂತಹವನ್ನು ಬುದ್ಧಿಪೂರ್ವಕವಾಗಿ ಕೈಬಿಡಬೇಕು

ಎಲ್ಲ ಜೀವಿಗಳು ಸುಖವಾಗಿರಲಿ ಮತ್ತು ನಿರ್ಭಯವಾಗಿರಲಿ
ಎಲ್ಲರ ಹೃದಯಗಳು ಆನಂದವಾಗಿರಲಿ

4. **ಯೇ ಕೇಚಿ ಪಾಣಭೂತತ್ಥಿ**
**ತಸಾ ವಾ ಥಾವರಾ ವಾ ಅನವಸೇಸಾ**
**ದೀಘಾ ವಾ ಯೇ ಮಹನ್ತಾವಾ**
**ಮಜ್ಝಿಮಾ ರಸ್ಸಕಾಅನುಕಥೂಲಾ**
ಒಂದೂ ಬಿಡದಂತೆ ಯಾವೆಲ್ಲ ಜೀವಿಗಳು ಇವೆಯೋ
ಅವು ಬಲಿಷ್ಠವಿರಲಿ, ಬಲಹೀನವರಲಿ
ಉದ್ಧವಾಗಿರಲಿ ಅಥವಾ ವಿಶಾಲವಾಗಿರಲಿ ಸುಮಾರು ಗಾತ್ರದ್ದಿರಲಿ
ಸಣ್ಣದಿಂದ ಅತಿ ಸೂಕ್ಷ್ಮದ್ದಾಗಿರಲಿ ಅಥವಾ ಸ್ಥೂಲ ಕಾಯದ್ದಾಗಿರಲಿ

5. **ದಿಟ್ಠಾವಾ ಯೇವ ಅದ್ದಿಟ್ಠಾ**
**ಯೇ ಚ ದೂರೇ ವಸನ್ತಿ ಅವಿದೂರೇ**
**ಭೂತಾ ವಾ ಸಮ್ಭವೇಸೀ ವಾ**
**ಸಬ್ಬೇ ಸತ್ತಾಭವನ್ತು ಸುಖಿತತ್ತಾ**
ಕಣ್ಣಿಗೆ ಕಾಣುವಂಥದ್ದಿರಲಿ ಅಥವಾ ಕಾಣದೆ ಇರುವಂಥದ್ದಿರಲಿ
ಅವುಗಳು ಹತ್ತಿರವಿರಲಿ ಅಥವಾ ದೂರವಿರಲಿ
ಹುಟ್ಟಿರಲಿ ಅಥವಾ ಹುಟ್ಟುವ ಹಂತದಲ್ಲಿರಲಿ
ಈ ಎಲ್ಲ ಜೀವಿಗಳು ಸಂತೋಷದಿಂದ ಬಾಳಲಿ !

6. **ನ ಪರೋ ಪರಂ ನಿಕುಬ್ಬೇಥ**
**ನಾ ತಿ ಮಞ್ಞೇಥ ಕತ್ಥಚಿ ನಂ ಕಂಚಿ**
**ಬ್ಯಾರೋಸನಾ ಪಟಿಘಸ ಞ್ಞಾ**
**ನಾಞ್ಞಮಞ್ಞ ಸದುಕ್ಖಮಿಚ್ಛೆಯ್ಯ**
ಯಾರು ಯಾರನ್ನೂ ಎಲ್ಲಿಯೂ
ವಂಚಿಸದಿರಲಿ ಅಥವಾ ನಿಂದಿಸದಿರಲಿ
ಕೋಪಿಸಿಕೊಳ್ಳದಿರಲಿ ಅಥವಾ ದ್ವೇಷಿಸದಿರಲಿ
ಯಾರೂ ಇನ್ನೊಬ್ಬರ ಕೇಡನ್ನ ಬಯಸದಿರಲಿ

7. **ಮಾತಾ ಯಥಾ ನಿಯಂ ಪುತ್ತಂ**
**ಆಯುಸಾ ಏಕಪುತ್ತಮನುರಕ್ಖೆ**
**ಏವಂಪಿ ಸಬ್ಬಭೂತೇಸು**
**ಮಾನಸಂ ಭಾವಯೇ ಅಪರಿಮಾಣಂ**





ತಾಯಿಯೊಬ್ಬಳು ಯಾವರೀತಿ ತನ್ನ ಜೀವವನ್ನೇ ಬೇಕಾದರೆ ತೊರೆದು
ತನ್ನ ಏಕಮಾತ್ರ ಮಗನನ್ನು ಕಾಪಾಡುತ್ತಾಳೋ
ಅದೇರೀತಿ ಎಲ್ಲ ಜೀವಿಗಳ ಬಗ್ಗೆಯೂ
ಆತನು ಅಪರಿಮಿತವಾದ ಸಹೃದಯತೆಯನ್ನು ಬೆಳೆಸಿಕೊಳ್ಳಲಿ

8. **ಮೆತ್ತಂಚ ಸಬ್ಬಲೋಕಸ್ಮಿಂ**
**ಮಾನಸಂ ಬಾವಯೇ ಅಪರಿಮಾಣಂ**
**ಉದ್ಧಂ ಅಧೋ ಚ ತಿರಿಯಂಚ**
**ಅಸಮ್ಬಾದ್ಧಂ ಅವೇರಂ ಅಸಪತ್ತಂ**
ಈ ವಿಶ್ವದ ಎತ್ತರ, ಆಳ, ವೈಶಾಲ್ಯದ ತುಂಬೆಲ್ಲ
ಇರುವ ಜೀವಿಗಳಿಗೆ ಅನಂತ ಪ್ರೀತಿಯನ್ನು
ಹರಿಸುವಂತಹ, ದ್ವೇಷ ವೈರತ್ವಗಳನ್ನು ಮೀರಿ
ಆವರಿಸುವಂತಹ ಪ್ರೇಮಮಯೀ ಮನಸ್ಸು ಅವನಲ್ಲಿ ಬೆಳೆಯಲಿ

9. **ತಿಟ್ಠಂ ಚರಂ ನಿಸ್ಸಿನ್ನೋವಾ**
**ಸಯಾನೋ ವಾ ಯಾವತಸ್ಸ ವಿಗತಮಿದ್ಧೋ**
**ಏತಂ ಸತಿಂ ಅಧಿಟ್ಠೆಯ್ಯ**
**ಬ್ರಹ್ಮಮೇತಂ ವಿಹಾರಂ ಇಧ ಮಾಹು**
ಅವನು ನಿಂತಿರಲಿ, ನಡೆಯುತ್ತಿರಲಿ, ಕುಳಿತಿರಲಿ ಅಥವಾ ಮಲಗಿರಲಿ
ಎಚ್ಚರವಾದ ಈ ಎಲ್ಲ ಸ್ಥಿತಿಗಳಲ್ಲಿ
ಸದಾ ಮೈತ್ರಿ ಭಾವದಿಂದಿರಲಿ. ಇದನ್ನೇ
ಬ್ರಹ್ಮವಿಹಾರವೆಂದು ಕರೆಯುವುದು.

10. **ಧಿಟ್ಠಿಂಚ ಅನುಪಗಮ್ಮ**
**ಸೀಲವಾ ದಸ್ಸನೇನ ಸಂಪನ್ನೊ**
**ಕಾಮೇಸು ವಿನೆಯ್ಯ ಗೇಧಂ**
**ನಹಿ ಜಾತು ಗಬ್ಬಿಸೆಯಂ ಪುನರೇತೀ ತಿ**
ಮಿಥ್ಯಾ ದೃಷ್ಟಿಗೆ ಒಳಗಾಗದೆ, ಶೀಲವಂತನೂ (ಜ್ಞಾನ)
ಸಂಪನ್ನನೂ ಕಾಮಗಳಲ್ಲಿ ಆಸಕ್ತಿಯನ್ನು
ತೊಡೆದುಹಾಕಿಕೊಂಡವನೂ ಆಗಿದ್ದು ಅವನು
ಮತ್ತೆಂದಿಗೂ ಗರ್ಭವನ್ನು ಆಶ್ರಯಿಸಿ ಹುಟ್ಟಿ ಬರುವುದಿಲ್ಲ !

## ಅಧ್ಯಾಯ–3

# ‘ಬುದ್ಧ’ ಪದದ ಅರ್ಥ

‘ಬುದ್ಧ’ ಎನ್ನುವ ಪದವು ಸಿದ್ಧಾರ್ಥ ಗೌತಮನ ಹೆಸರಲ್ಲ. ಶಾಕ್ಯ ದೊರೆ ಸುದ್ಧೋಧನನ ಮಗನಾದ ಸಿದ್ಧಾರ್ಥನು ಬೋಧಿಸತ್ವನೆಂದು ಜ್ಯೋತಿಷಿಗಳು ಅಂದು ಭವಿಷ್ಯ ನುಡಿದಿದ್ದರು. ಮುಂದೆ ಆಗುವ ಬುದ್ಧನನ್ನು ಬೋಧಿಸತ್ವನೆಂದು ಕರೆಯುತ್ತಾರೆ. ಯಾರು ಎಲ್ಲ ಪಾರಮಿಗಳನ್ನು ಸಿದ್ಧಿಸಿಕೊಂಡು ಜ್ಞಾನೋದಯ ಹೊಂದುತ್ತಾರೋ ಅವರನ್ನು ‘ಬುದ್ಧ’ನೆಂದು ಕರೆಯುತ್ತಾರೆ.

ಸಿದ್ಧಾರ್ಥನು ತನ್ನ ಮೂವತ್ತೈದನೆ ವಯಸ್ಸಿಗೆ ಗೌತಮ ಬುದ್ಧನಾದ. ‘ಬುದ್ಧ’ ಎನ್ನುವುದು ಒಬ್ಬ ವ್ಯಕ್ತಿ ಇಟ್ಟುಕೊಳ್ಳುವ ಹೆಸರಲ್ಲ. ಯಾರು ಪರಮ ಜ್ಞಾನೋದಯವನ್ನು ಹೊಂದುತ್ತಾರೋ ಅಂತಹವರಿಗೆ ಮಾತ್ರ ‘ಬುದ್ಧ’ ಅನ್ವಯಿಸುತ್ತದೆ ಎನ್ನುವ ಅಂಶ ಮುಖ್ಯವಾದದ್ದು. ಯಾರು ಇಂತಹ ಆಧ್ಯಾತ್ಮದ ಅತ್ಯುನ್ನತ ಶಿಖರವನ್ನೇರುತ್ತಾರೊ ಅವರನ್ನು ಸಮ್ಮಾ ಸಂಬುದ್ಧರೆಂದು ಕರೆಯಲಾಗುತ್ತದೆ. ಈ ಔನ್ನತ್ಯವನ್ನು ಸಾಧಿಸಿದವರು ಮತ್ತೇನನ್ನೂ ಸಾಧಿಸಬೇಕಾದ್ದಿರುವುದಿಲ್ಲ. ಕಾರಣ ಅವರು ದಶ ಪಾರಮಿಗಳನ್ನು ಅನುಸರಿಸಿ ಬಂದಿರುತ್ತಾರೆ. ಅವರು ಮಾತ್ರವೇ ಜ್ಞಾನೋದಯ ಹೊಂದಲು ಸಾಧ್ಯವಾಗುತ್ತದೆ. ಇಲ್ಲಿ ಮೂರು ರೀತಿಯ ಜ್ಞಾನೋದಯಗಳಿವೆ :

1. ಅರ್ಹತ ಬೋಧಿ – ಸಾಧನಾಶೀಲ ಬುದ್ಧನ ಶಿಷ್ಯನ ಜ್ಞಾನೋದಯ.
2. ಪಚ್ಚೇಕ ಬೋಧಿ – ವನವಾಸಿ ಬುದ್ಧನ ಜ್ಞಾನೋದಯ.
3. ಸಮ್ಮಾಸಂಬೋಧಿ – ಪರಮ ಜ್ಞಾನೋದಯದ ಬುದ್ಧನಿಗೆ ಜ್ಞಾನೋದಯ ವಾಗುವುದು.

ಸಾವಿರಾರು ಕಲ್ಪಗಳ ವ್ಯಾಪ್ತಿಯಲ್ಲಿ ಲಕ್ಷಾಂತರ ಜನ್ಮಗಳನ್ನು ತಳೆದು ಆ ಜನ್ಮಗಳ ಮೂಲಕ ದಶ ಪಾರಮಿಗಳನ್ನು ಸಿದ್ಧಿಸಿಕೊಂಡ ಪರಮ ಬುದ್ಧನ ಶಿಷ್ಯನು ಮಾತ್ರ ಜ್ಞಾನೋದಯದ ಜೀವಿಯಾಗಲು ಅಗತ್ಯ ಅರ್ಹತೆಗಳನ್ನು ಹೊಂದುತ್ತಾನೆ. ಅಂತಹ ಶಿಷ್ಯನು ಸಮ್ಮಾಸಂಬುದ್ಧರನ್ನಾಗಲಿ ಅಥವಾ ಅವರ ಜ್ಞಾನೋದಯ ಪಡೆದ ಶಿಷ್ಯರನ್ನಾಗಲಿ ಸಂದರ್ಶಿಸಿ, ಅವರ ಮಾತುಗಳನ್ನು, ಬೋಧನೆಗಳನ್ನು ಕೇಳಿ ಚತುರಾರ್ಯ ಸತ್ಯಗಳ ತಿರುಳುಗಳನ್ನು ತಿಳಿದುಕೊಳ್ಳುತ್ತಾನೆ. ಇಷ್ಟೆಲ್ಲ ಸಂಸ್ಕಾರದ ನಂತರವೇ ಅವನು ಅರ್ಹತನಾಗುವುದು ಅರ್ಥಾತ್ ಬುದ್ಧನ ಜ್ಞಾನೋದಯ ಹೊಂದಿದ ಶಿಷ್ಯನಾಗುವುದು.

ಪಚ್ಚೇಕ ಬುದ್ಧನು ರೂಪುಗೊಳ್ಳುವುದು ಹೇಗೆಂದರೆ ದಶ ಪಾರಮಿಗಳನ್ನು ಎರಡುಸಾರಿ ಸಿದ್ಧಿಸಿಕೊಂಡು ಅಂದರೆ ಇಪ್ಪತ್ತು ಪಾರಮಿಗಳನ್ನು ಬಹಳಕಾಲ ಸಾಧನೆಯಲ್ಲಿದ್ದುಕೊಂಡೇ





ಬಂದು, ಸಮ್ಮಾಸಂಬುದ್ಧನ ಎಲ್ಲ ಬೋಧನೆಗಳು ಮಾಯವಾಗಿ ಜೀವಿಗಳು ಅಜ್ಞಾನವೆಂಬ ಕತ್ತಲಲ್ಲಿ ತೊಳಲಾಡುತ್ತಿರುವ ಸಂದರ್ಭದಲ್ಲಿ ಪಚ್ಚೇಕ ಬುದ್ಧನು ಕಾಣಿಸಿಕೊಳ್ಳುತ್ತಾನೆ. ಯಾರ ಮಾರ್ಗದರ್ಶನವೂ ಇಲ್ಲದೆ ತಾನಾಗಿಯೇ ಇಂತಹ ಪಚ್ಚೇಕ ಬುದ್ಧನು ಜ್ಞಾನೋದಯ ಹೊಂದುತ್ತಾನೆ. ಅನಂತರ ಪಚ್ಚೇಕ ಬುದ್ಧನು ಸಹಜವಾಗಿ ಮಾನವ ವಸತಿಯಿಲ್ಲದ ಹಿಮಾಲಯಕ್ಕೊ ಇಲ್ಲವೇ ಯಾವುದಾದರೂ ಪರ್ವತಕ್ಕೋ, ಅರಣ್ಯಕ್ಕೋ ತೆರಳಿ ಏಕಾಂತದಲ್ಲಿ ಖುಷಿಯಾಗಿ ಬದುಕುತ್ತಾನೆ. ಪಚ್ಚೇಕ ಬುದ್ಧನು ಒಬ್ಬನೇ ಎದ್ದುಬರುವುದಿಲ್ಲ. ಹೇಗೆ ನೂರಾರು ಅರ್ಹತರು ಸೃಷ್ಟಿಯಾಗುವರೋ ಹಾಗೆ ಬಹುಸಂಖ್ಯೆಯ ಪಚ್ಚೇಕ ಬುದ್ಧರು ಸೃಷ್ಟಿಯಾಗುತ್ತಾರೆ. ಐನೂರು ಜನ ಪಚ್ಚೇಕ ಬುದ್ಧರು ಇದ್ದ ಬಗ್ಗೆ ಇಸಿಗಿಲಿ ಸುತ್ತದಲ್ಲಿ ದಾಖಲೆ ಇದೆ (ಮಜ್ಜಿಮ ನಿಕಾಯ–116).

**ಅರ್ಹತ ಮತ್ತು ಪಚ್ಚೇಕ ಬುದ್ಧರ ನಡುವಿನ ವ್ಯತ್ಯಾಸ ಹೀಗಿದೆ :** ಸಮ್ಮಾ ಸಂಬುದ್ಧನಿಂದಾಗಲಿ ಅಥವಾ ಆತನ ಜ್ಞಾನೋದಯ ಹೊಂದಿದ ಶಿಷ್ಯರಿಂದಾಗಲಿ ಧಮ್ಮವನ್ನು ಅರಿತಮೇಲೆ ಅರ್ಹತನು ಜ್ಞಾನೋದಯ ಜೀವಿಯಾಗುತ್ತಾನೆ. ಆದರೆ ಪಚ್ಚೇಕ ಬುದ್ಧನು ಯಾರ ಮಾರ್ಗದರ್ಶನವೂ ಇಲ್ಲದೆ ಜ್ಞಾನೋದಯ ಹೊಂದುತ್ತಾನೆ. ಪಚ್ಚೇಕ ಬುದ್ಧನು ಜ್ಞಾನೋದಯದ ತನ್ನ ಅನುಭವವನ್ನು ಇನ್ನೊಬ್ಬರಿಗೆ ಮುಟ್ಟಿಸಲಾರ ಮತ್ತು ಅವರನ್ನು ಜ್ಞಾನೋದಯಗೊಳಿಸಲಾರ. ಆದರೆ ಅರ್ಹತನು ಜ್ಞಾನೋದಯದ ಅನುಭವವನ್ನು ಇನ್ನೊಬ್ಬರಿಗೆ ಕೊಡಬಲ್ಲ. ಬುದ್ಧನ ಧಮ್ಮವನ್ನು ಇನ್ನೊಬ್ಬರಿಗೆ ಬೋಧಿಸುವುದರ ಮೂಲಕ ಅವರಲ್ಲಿ ಜ್ಞಾನೋದಯ ತರಲು ಅರ್ಹತನಿಗೆ ಶಕ್ಯವಿದೆ.

ಸಮ್ಮಾಸಂಬುದ್ಧನು ಒಬ್ಬ ಅಪ್ರತಿಮ ಜೀವಿ. ಮೂವತ್ತು ಪಾರಮಿಗಳನ್ನು ಸಿದ್ಧಿಸಿಕೊಂಡು ಅಂದರೆ ಹತ್ತು ಪಾರಮಿಗಳನ್ನು ಮೂರು ಸಾರಿ ಅಸಂಖ್ಯ ವರ್ಷಗಳಲ್ಲಿ ಮತ್ತು ಅಸಂಖ್ಯ ಜನ್ಮಗಳ ಮೂಲಕ ಸಾಕ್ಷಾತ್ಕರಿಸಿಕೊಂಡು ಪಾರಮಿಗಳ ಅತ್ಯುನ್ನತ ಶಿಖರವಾದ ಸಮ್ಮಾಸಂಬುದ್ಧನಾಗಿ ಮೈದಾಳುತ್ತಾನೆ. ಸಮ್ಮಾಸಂಬುದ್ಧರು ತಾವೇ ಜ್ಞಾನೋದಯ ಹೊಂದಿದವರಲ್ಲದೆ ಬೇರೆಯವರಿಗೆ ಜ್ಞಾನೋದಯ ಕೊಡುವವರು ಸಹ. ದೇವ, ಮಾನವರ ಗುರುವಾದ ಬುದ್ಧನು ಜಗತ್ತಿಗೆಲ್ಲ ಜ್ಞಾನೋದಯ ತರುವವನು. ಬುದ್ಧ ಹುಟ್ಟಿದನೆಂದರೆ ಪ್ರಪಂಚದಲ್ಲಿ ಮಹತ್ ಬದಲಾವಣೆಗಳಾಗುತ್ತವೆ. ಬುದ್ಧ ಇತಿಹಾಸವನ್ನು ಸೃಷ್ಟಿಸುತ್ತಾನೆ. ಅವನು ಇತಿಹಾಸಕರ್ತ, ಇತಿಹಾಸದ ಕೂಸಲ್ಲ.

ಈ ಹಿಂದೆ ಬಹಳ ಬುದ್ಧರು ಆಗಿ ಹೋಗಿದ್ದಾರೆ. ಮುಂದೆ ಬಹಳ ಬುದ್ಧರು ಬರುವವರಿದ್ದಾರೆ. ಈಗಿನ ಬುದ್ಧ ಅಂದರೆ ನಮ್ಮ ಗೌತಮ ಬುದ್ಧ ಈ ಹಿಂದಿನ ಎಲ್ಲ ಬುದ್ಧರುಗಳಿಂದ ಆಧ್ಯಾತ್ಮಿಕ ಮಾರ್ಗದರ್ಶನವನ್ನು ಪಡೆದಿದ್ದಾನೆ. ಮುಂದೆ ಬರಲಿರುವ ಬುದ್ಧನ ಹೆಸರು ಮೈತ್ರೇಯ ಬುದ್ಧ. ಈತನೂ ಕೂಡ ಗೌತಮ ಬುದ್ಧನೂ ಸೇರಿದಂತೆ ಎಲ್ಲ ಹಿಂದಿನ ಬುದ್ಧರುಗಳ ಆಶೀರ್ವಾದವನ್ನು, ಮಾರ್ಗದರ್ಶನವನ್ನು ಪಡೆದಿರುತ್ತಾನೆ.

ಮನುಷ್ಯನಾಗಿ ಹುಟ್ಟಿದರೂ ಬುದ್ಧ ಕೇವಲ ಮಹಾ ಮಾನವನಲ್ಲ, ಲೋಕೋತ್ತರ ಮಾನವ. ಆತ ಮಹೋನ್ನತ ಗುಣಗಳನ್ನು, ಊಹೆಗೆ ನಿಲುಕದ ಅಲೌಕಿಕ ಶಕ್ತಿಯನ್ನು ಪ್ರಜ್ಞೆಯನ್ನು ಹೊಂದಿದವನಾಗಿದ್ದಾನೆ. ಬುದ್ಧನ ಜ್ಞಾನೋದಯವೆಂದರೆ ಬೋಧಿಸತ್ತನ ಆಧ್ಯಾತ್ಮಿಕ ಉನ್ನತಿಯ ಸೂಚಕ. (ಬೋಧಿಸತ್ತನೆಂದರೆ ಪರಮ ಜ್ಞಾನೋದಯ ಹೊಂದಲು ಕಟಿಬದ್ಧನಾದವನು ಎಂದರ್ಥ).

ಬುದ್ಧತ್ವ ಎನ್ನುವುದು ತಕ್ಷಣದ ಸಿದ್ಧಿಯಲ್ಲ, ತಕ್ಷಣದ ಜ್ಞಾನೋದಯವನ್ನು ನಂಬುವ ಈಗಿನ ಕೆಲವು ಬೌದ್ಧರಂತೆ, ಅದಕ್ಕೆ ಕಿರುದಾರಿಗಳಿಲ್ಲ. ಬುದ್ಧನ ಮೂಲ ತತ್ವಗಳನ್ನು ಕಾದಿರಿಸಿದ ತಿಪಿಟಕಗಳಲ್ಲೂ ಈ ರೀತಿಯ ವ್ಯಾಖ್ಯಾನವಿಲ್ಲ. ಬುದ್ಧತ್ವವನ್ನು ನೋವಿನಿಂದ ಕೂಡಿದ ನಿರಂತರ ಪ್ರಯತ್ನದಿಂದಲೇ ಪಡೆಯುವಂತಹುದು. ಪರಮ ಜ್ಞಾನೋದಯದ ಪ್ರಾಪ್ತಿಗಾಗಿ (ಬುದ್ಧತ್ವಕ್ಕಾಗಿ) ಅಸಂಖ್ಯ ವರ್ಷಗಳನ್ನೇ ಕಳೆಯಬೇಕಾಗುತ್ತದೆ.

## ಬೋಧಿ ಪ್ರಾಪ್ತಿಗೆ ಬೇಕಾದ ಪೂರ್ವಾಗತ್ಯಗಳು

ಜ್ಞಾನೋದಯವಾಗಬೇಕಾದರೆ ಈ ಕೆಳಗೆ ಕಾಣಿಸಿದ ದಶ ಪಾರಮಿಗಳನ್ನು ನೆರವೇರಿಸಬೇಕು ಇಲ್ಲವೇ ಅನುಷ್ಠಾನಗೊಳಿಸಿರಬೇಕು.

1. ದಾನ (ಕೊಡುವುದು)
2. ಶೀಲ (ಒಳ್ಳೆಯ ಗುಣ)
3. ನೇಕ್ಖಮ್ಮ (ತ್ಯಾಗ)
4. ಪಜ್ಞಾ (ಪ್ರಜ್ಞೆ)
5. ವಿರಿಯ (ಸ್ವ-ಪ್ರಯತ್ನ)
6. ಖಂತಿ (ಶಾಂತಿ)
7. ಸಚ್ಚ (ಸತ್ಯ)
8. ಅಧಿಟ್ಠಾಣ (ದೃಢನಿರ್ಧಾರ)
9. ಮೆತ್ತಾ (ಮೈತ್ರೀಭಾವ)
10. ಉಪೇಕ್ಖಾ (ಉಪೇಕ್ಷೆ)

ಮೇಲಿನ ಉತ್ತಮೋತ್ತಮ ಗುಣಗಳ ಪಟ್ಟಿಯನ್ನು ನೋಡಿದರೆ ಬುದ್ಧತ್ವದ ಹಾದಿ ವೈಶಿಷ್ಟ್ಯಪೂರ್ಣವೆಂದು ಮತ್ತು ಆ ಹಾದಿಯಲ್ಲಿ ನಡೆಯುವವರು ಆಧ್ಯಾತ್ಮಿಕವಾಗಿ ಮೈದಳೆದ, ಪಳಗಿದ ವಿಶೇಷ ವ್ಯಕ್ತಿಯೇ ಆಗಿರಬೇಕಾಗುತ್ತದೆ. ಯಾರು ಬೇಕೆಂದರೆ ಅವರು ಅಥವಾ ಎಲ್ಲ ಜನ ಈ ಯಾತ್ರೆಯನ್ನು ಕೈಗೊಳ್ಳಲು ಸಾಧ್ಯವಿಲ್ಲ. ಬೋಧಿ ಶಿಖರವನ್ನು ಮುಟ್ಟಲು ಅಪಾರ ಕರುಣೆಯುಳ್ಳ ಬುದ್ಧನಿಗೆ ಮಾತ್ರ ಸಾಧ್ಯ.

ಕೆಲವು ಬೌದ್ಧ ವಿದ್ವಾಂಸರು ಮತ್ತು ಬರಹಗಾರರು ತಮ್ಮ ವಿದ್ವತ್ತಿನಿಂದಲೇ ಕುರುಡಾಗಿ ಬೋಧಿಸತ್ತರು ಬಹು ಸಂಖ್ಯೆಯಲ್ಲಿ ಸೃಷ್ಟಿಯಾಗಬಹುದೆಂದು ಅಭಿಪ್ರಾಯಪಡುತ್ತಾರೆ.





ಇನ್ನು ಕೆಲವರು ಬುದ್ಧ ದೇವರೆಂದು ಅಥವಾ ದೇವರ ಅವತಾರವೆಂದು ತಿಳಿಯುತ್ತಾರೆ. ವಿಶಿಷ್ಟವಾದ ಜ್ಞಾನೋದಯದ ಸಂಗತಿಯನ್ನು ಹೀಗೆ ಅಶುದ್ಧಗೊಳಿಸುವುದಲ್ಲದೆ ಒಂದುರೀತಿಯ ಸೊಕ್ಕಿನ ಅಸಹನೆಯನ್ನು ತೋರಿಸುತ್ತಾರೆ ಮತ್ತು ಬೇರೆಯವರನ್ನು ಕೀಳು ಮಾರ್ಗದ ಅನುಯಾಯಿಗಳೆಂದು ಕಡೆಗಣಿಸುತ್ತಾರೆ. ತಾವು ಮಹಾಯಾನದ ಅನುಯಾಯಿಗಳೆಂದು ಹೆಮ್ಮೆಯಿಂದ ಗುರುತಿಸಿಕೊಂಡು, ಬೋಧಿಸತ್ತರು ಬಹು ಸಂಖ್ಯೆಯಲ್ಲಿ ಜನ್ಮ ತಳೆಯಬಹುದೆಂದು ಹೇಳುತ್ತಲೇ ಹೀನಯಾನದ ಅನುಯಾಯಿಗಳನ್ನು ಕೀಳಾಗಿ ನೋಡುತ್ತಾರೆ. ವಾಸ್ತವವಾಗಿ ಹೀನ ಯಾನದಲ್ಲಿ ಮೂಲ ಬೋಧನೆಗಳನ್ನು ಪಾಲಿಸಲಾಗುತ್ತದೆ ಮತ್ತು ಭಗವಾನ್ ಬುದ್ಧನ ಮಾತುಗಳನ್ನು ಜೋಪಾನವಾಗಿ ಕಾಪಾಡಿಕೊಂಡು ಬಂದಿದ್ದಾರೆ. ಮಹಾಯಾನದವರು ಅರ್ಹತತ್ವವನ್ನು ಸಹ ಕೀಳುಮಟ್ಟದ್ದೆಂದು ತಿಳಿಯುತ್ತಾರೆ.

ನಿಜದ ಸಂಗತಿ ಎಂದರೆ 'ಬೋಧಿಸತ್ತ' ಎನ್ನುವ ಪದ ಜ್ಞಾನೋದಯದ ಜೀವಿ ಅಥವಾ ಜ್ಞಾನೋದಯದ ಪ್ರಾಪ್ತಿಗಾಗಿ ತನ್ನನ್ನೇ ಮುಡುಪಾಗಿಟ್ಟುಕೊಂಡವನು ಎಂಬ ಅರ್ಥ ಕೊಡುತ್ತದೆ. ಇದು ಕೆಳಗೆ ಹೇಳಿದ ಮೂರು ರೀತಿಯ ಜ್ಞಾನೋದಯಗಳಲ್ಲಿ ಅನ್ವಯಿಸುತ್ತದೆ :-

1. ಅರ್ಹತ ಬೋಧಿ
2. ಪಚ್ಚೇಕ ಬೋಧಿ
3. ಸಮ್ಮಾ ಸಂಬೋಧಿ

ಈ ತೆರನಾಗಿಯೇ ಅರ್ಹತ ಪದವಿಗಾಗಿ ಅರ್ಪಿಸಿಕೊಂಡ ಶ್ರಾವಕ ಬೋಧಿಸತ್ತರು, ಪಚ್ಚೇಕ ಬೋಧಿಗಾಗಿ ಅರ್ಪಿಸಿಕೊಂಡ ಪಚ್ಚೇಕ ಬೋಧಿಸತ್ತರು ಮತ್ತು ಸಮ್ಮಾಸಂಬೋಧಿ ಪ್ರಾಪ್ತಿಗಾಗಿ ತಮ್ಮನ್ನು ತಾವೇ ಅರ್ಪಿಸಿಕೊಂಡ ಸಮ್ಮಾಸಂಬೋಧಿ ಬೋಧಿಸತ್ತರು ಇರುವರು. ಅರ್ಹತನ ಜ್ಞಾನೋದಯ, ಪಚ್ಚೇಕ ಬೋಧಿಯ ಜ್ಞಾನೋದಯ ಮತ್ತು ಸಮ್ಮಾಸಂಬೋಧಿಯ ಜ್ಞಾನೋದಯಗಳ ನಡುವಿನ ವ್ಯತ್ಯಾಸಗಳನ್ನು ಹೀಗೆ ನೋಡಬಹುದು. ಉದಾಹರಣೆಗೆ ದಾನ ಪಾರಮಿ ಅಥವಾ ಯಾವುದಾದರೂ ಒಂದು ಪಾರಮಿಯು ಮೇಲೆ ಹೇಳಿದ ಮೂರು ರೀತಿಯ ಜ್ಞಾನೋದಯಗಳಿಗೆ ಸಂಬಂಧಪಟ್ಟಂತೆ ತೀವ್ರತೆಯಲ್ಲಿ ಮತ್ತು ಗಾತ್ರದಲ್ಲಿ ಭಿನ್ನವಾಗುತ್ತಾ ಹೋಗುತ್ತದೆ. ಅರ್ಹತ ಬೋಧಿಯ ವಿಚಾರದಲ್ಲಿ ದಾನ ಪಾರಮಿ ಎಂದರೆ ತನ್ನಲ್ಲಿರುವ ರಾಜ್ಯ, ಕೋಶವೂ ಸೇರಿದಂತೆ ಎಲ್ಲ ಪ್ರಾಪಂಚಿಕ ವಸ್ತುಗಳನ್ನು ಸಂತೋಷದಿಂದ ಕೊಡುವುದು; ಪಚ್ಚೇಕ ಬೋಧಿಯ ವಿಚಾರದಲ್ಲಿ ದಾನ ಉಪಪಾರಮಿ ಎಂದರೆ ತನ್ನಲ್ಲಿರುವ ವಸ್ತುಗಳನ್ನು ಇಚ್ಛಾಪೂರ್ವಕವಾಗಿ ಮತ್ತು ಸಂತೋಷವಾಗಿ ಕೊಡುವುದಲ್ಲದೆ ತನ್ನ ದೇಹದ ಭಾಗಗಳನ್ನು ಕೊಡುವುದು (ಸತ್ತ ದೇಹವನ್ನಲ್ಲ). ಇನ್ನು ಸಮ್ಮಾಸಂಬೋಧಿಯ ವಿಚಾರದಲ್ಲಿ ದಾನ ಪರಮಾರ್ಥ ಪಾರಮಿಯು ಮೇಲೆ ಹೇಳಿದವುಗಳನ್ನು ದಾನ ಮಾಡುವುದಲ್ಲದೆ ತನ್ನ ಜೀವವನ್ನೇ

ಪ್ರೀತಿ ಕರುಣೆಯಿಂದ ದಾನ ಮಾಡುವುದು. ಹೀಗೆ ಸಮ್ಮಾಸಂಬೋಧಿ ಬೋಧಿಸತ್ತನ ಪರಮಾರ್ಥ ಪಾರಮಿಗಳು ನಿಜವಾಗಿಯೂ ಶೌರ್ಯದಿಂದ ಕೂಡಿದ ಪರಿಪೂರ್ಣ ಸ್ವಯಂ ತ್ಯಾಗ, ಅಂತಹ ತ್ಯಾಗ ಪ್ರಜ್ಞಾಪೂರ್ವಕ ಮತ್ತು ಕರುಣೆಯಿಂದ ಕೂಡಿದುದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಸಮ್ಮಾಸಂಬೋಧಿ ಬೋಧಿಸತ್ತನು ಅಸಂಖ್ಯ ಜನ್ಮಗಳನ್ನು ತಳೆದು ಮೇಲೆ ಹೇಳಿದ ಪಾರಮಿಗಳನ್ನು ಗಂಭೀರವಾಗಿ ನಿಯಮಬದ್ಧವಾಗಿ ಪ್ರಜ್ಞಾಪೂರ್ವಕವಾಗಿ, ಪ್ರೀತಿಯಿಂದ ಪರಿಪಾಲಿಸುತ್ತಾ ಬಂದಲ್ಲಿ ಸಮ್ಮಾ ಸಂಬುದ್ಧನು ಅರಳುವನು.

## ಪ್ರಶ್ನೆಗಳು

1. **'ಬುದ್ಧ' ಎಂದರೆ ಯಾರು ?**
2. **'ಬುದ್ಧ' ಎಂದು ಏಕೆ ಕರೆಯುತ್ತಾರೆ ?**
3. **ಬುದ್ಧನಾಗಲು ಇರಬೇಕಾದ ಅರ್ಹತೆಗಳೇನು ?**
4. **ಬೋಧಿಸತ್ತನೆಂದರೆ ಯಾರು ?**
5. **ಎಷ್ಟು ರೀತಿಯ ಜ್ಞಾನೋದಯ (ಬೋಧಿ)ಗಳು ಇವೆ ?**
6. **ಇವರುಗಳ ನಡುವಿನ ವ್ಯತ್ಯಾಸ ತಿಳಿಸಿ :**
   **ಅ) ಬುದ್ಧ ಮತ್ತು ಪಚ್ಚೇಕ ಬುದ್ಧ**
   **ಆ) ಪಚ್ಚೇಕ ಬುದ್ಧ ಮತ್ತು ಅರ್ಹತ**
7. **ಈ ಎಲ್ಲ ಬುದ್ಧರುಗಳ ಜ್ಞಾನೋದಯಗಳಲ್ಲಿ ಏನಾದರು ವ್ಯತ್ಯಾಸವಿದೆಯೇ?**
8. **ಯಾವುದು ಅಂತಹ ವ್ಯತ್ಯಾಸಗಳು ?**
9. **ಪಾರಮಿಗಳ ಸಂಖ್ಯೆ ಭಿನ್ನತೆ ಮಾತ್ರ ಕಾರಣವೆ ? ಇಲ್ಲವೆ ಮತ್ತೇನಾದರೂ ಕಾರಣಗಳಿವೆಯೇ?**

# ದೋಣ ಸುತ್ತ (ಅಂ.ನಿ. 4.4.6)

## ಬುದ್ಧತ್ವದ ಬಗ್ಗೆ ಸ್ವಯಂ ಬುದ್ಧನೇ ನೀಡಿದ ವಿವರಣೆ

ಪವಿತ್ರ ಪಾಳಿ ಗ್ರಂಥ ತಿಪಿಟಕದ ಅಂಗುತ್ತರ ನಿಕಾಯದಲ್ಲಿ ಬರುವ ದೋಣ ಸುತ್ತದಲ್ಲಿ ದೋಣ ಎಂಬ ಪ್ರಸಿದ್ಧ ಬ್ರಾಹ್ಮಣ ಗುರುವಿಗೆ ಬುದ್ಧನು ಬುದ್ಧನ ಲಕ್ಷಣಗಳ ಬಗ್ಗೆ ಹೇಳುತ್ತಾನೆ. ದೋಣ ಕೇವಲ ಜ್ಯೋತಿಷ್ಯ ಶಾಸ್ತ್ರದಲ್ಲಿ ಪಾಂಡಿತ್ಯ ಹೊಂದಿರುವುದಲ್ಲದೆ, ಜ್ಞಾನೋದಯ ಹೊಂದಿದ ವ್ಯಕ್ತಿಯೊಬ್ಬನು ಯಾವ ಗುಣ ಲಕ್ಷಣಗಳನ್ನು ಹೊಂದಿರುತ್ತಾನೆಂಬ ವಿಷಯಗಳ ಬಗ್ಗೆಯೂ ಸಾಕಷ್ಟು ತಿಳಿದುಕೊಂಡಿದ್ದನು. ಉದಾಹರಣೆಗೆ ಅಂತಹ ವ್ಯಕ್ತಿಯ ಹೆಜ್ಜೆ ಗುರುತುಗಳು ಅಥವಾ ದೇಹದ ಇತರೆ ಭಾಗಗಳ ಗುರುತುಗಳು ಎಷ್ಟು ಆಧ್ಯಾತ್ಮಿಕ ಔನ್ನತ್ಯವನ್ನು ಪ್ರತಿನಿಧಿಸುತ್ತವೆ ಎಂಬುದನ್ನು ದೋಣನು ಅರಿತಿದ್ದನು.





ಒಮ್ಮೆ ಭಗವಾನ್ ಬುದ್ಧನು ಉಕತ್ಥಾ ಮತ್ತು ಸೇತವ್ಯ ಊರುಗಳ ನಡುವಿನ ಹೆದ್ದಾರಿಯ ಮೇಲೆ ನಡೆದು ಹೋಗುತ್ತಿದ್ದನು. ಅದೇ ಹಾದಿಯಲ್ಲಿಯೇ ಬ್ರಾಹ್ಮಣ ದೋಣನೂ ನಡೆದು ಹೋಗುತ್ತಿದ್ದನು. ಬುದ್ಧ ನಡೆದು ಹೋದ ದಾರಿಯಲ್ಲಿ ಬುದ್ಧನ ಹೆಜ್ಜೆ ಗುರುತುಗಳನ್ನು ದೋಣನು ನೋಡಿದನು. ಆ ಹೆಜ್ಜೆ ಗುರುತುಗಳ ಮೇಲೆ ಸಾವಿರ ಅರೆಗಳೂ ಅವಕ್ಕೆ ತಕ್ಕುದಾದ ನೇಮಿನಾಭಿಗಳೂ ಇರುವ ಪರಿಪೂರ್ಣ ಚಕ್ರಗಳಿದ್ದವು. ಈ ರೀತಿ ಹೆಜ್ಜೆ ಗುರುತನ್ನು ಗಮನಿಸಿದ ದೋಣ ತನಗೆ ತಾನೇ ಅಂದುಕೊಂಡನು. 'ಓ, ಇದು ಅದ್ಭುತ. ಈ ಹೆಜ್ಜೆ ಗುರುತು ಮಾನವನದಂತೂ ಅಲ್ಲ'.

ಭಗವಾನ್ ಬುದ್ಧ ಹೆದ್ದಾರಿಯ ಅನತಿ ದೂರದಲ್ಲಿ ಮರವೊಂದರ ಕೆಳಗೆ ಕುಳಿತಿದ್ದರು. ಸುಖಾಸನದಲ್ಲಿ ಕುಳಿತು, ಬೆನ್ನನ್ನು ನೇರವಾಗಿಟ್ಟುಕೊಂಡು ಏಕಾಗ್ರಚಿತ್ತರಾಗಿದ್ದರು. ಹೆಜ್ಜೆ ಗುರುತುಗಳನ್ನೇ ಹಿಂಬಾಲಿಸಿಕೊಂಡು ಬಂದ ದೋಣ, ಮರದ ಕೆಳಗೆ ಪ್ರಸನ್ನವದನದ ತೇಜಸ್ವಿ ಬುದ್ಧನನ್ನು ಕಂಡನು. ವಿಶ್ವಾಸವನ್ನು ತುಂಬುವ, ಸಮಚಿತ್ತ, ಪ್ರಶಾಂತ ಮನಸ್ಸಿನ ಬುದ್ಧನು ಪಳಗಿದ ಸಲಗದಂತೆ ಗಂಭೀರವಾಗಿ ಕುಳಿತಿದ್ದನು.

ಹೀಗಿರುವ ಭಗವಾನ್ ಬುದ್ಧನನ್ನು ಕಂಡು, ದೋಣನು ಅವರ ಬಳಿ ಹೋಗಿ ಹೀಗೆ ಕೇಳಿದನು :

"ಪೂಜ್ಯರೇ, ನೀವು ದೇವರಲ್ಲವೇ?"

"ಇಲ್ಲ ಬ್ರಾಹ್ಮಣ, ನಾನು ದೇವನಲ್ಲ".

"ಪೂಜ್ಯರೆ, ಹಾಗಾದರೆ ನೀವು ಗಂಧರ್ವರೇ?"

"ನಾನು ಗಂಧರ್ವನೂ ಅಲ್ಲ".

"ಹಾಗಾದರೆ, ನೀವು ಯಕ್ಷರೇ?"

"ಬ್ರಾಹ್ಮಣ, ನಾನು ಯಕ್ಷನೂ ಅಲ್ಲ".

"ಪೂಜ್ಯರೆ, ಹಾಗಾದರೆ ನೀವು ಮನುಷ್ಯರೇ ?"

"ಇಲ್ಲ ಬ್ರಾಹ್ಮಣ, ನಾನು ಮನುಷ್ಯನೂ ಅಲ್ಲ".

ಗೊಂದಲಕ್ಕೀಡಾದ ಬ್ರಾಹ್ಮಣ ಕೇಳಿದ, "ಪೂಜ್ಯರೆ, ನೀವು ದೇವ, ಗಂಧರ್ವ, ಯಕ್ಷರೇ ಅಥವಾ ಮನುಷ್ಯರೇ ಎಂದು ಕೇಳಿದಾಗ ಇಲ್ಲವೆಂದು ಹೇಳಿದಿರಿ, ಹಾಗಾದರೆ ನೀವು ಏನು?"

"ಬ್ರಾಹ್ಮಣನೆ, ಆಸವ (ಮಾನಸಿಕ ಕಲ್ಮಶ)ಗಳು ಇದ್ದರೆ ನಾನು ದೇವರಾಗುತ್ತಿದ್ದೆ. ಆದರೆ ನಾನು ಆಸವಗಳನ್ನು ಸಂಪೂರ್ಣವಾಗಿ ತೊಡೆದು ಹಾಕಿದ್ದೇನೆ. ತಾಳೆ ಮರದ ಕಾಂಡವನ್ನು ಕತ್ತರಿಸಿ ಮೊಟಕು ಮಾಡಿ ಅದನ್ನು ಬುಡಸಮೇತ ಕಿತ್ತುಹಾಕಿ ಮತ್ತೆ ಅದು ಹುಟ್ಟಿಬರದಂತೆ ಹೇಗೆ ಮಾಡಲಾಗುವುದೊ ಹಾಗೆ ಆಸವಗಳನ್ನು ನಾನು ಸಂಪೂರ್ಣವಾಗಿ ತೊಡೆದು ಹಾಕಿದ್ದೇನೆ.

"ಬ್ರಾಹ್ಮಣನೇ, ಹಾಗೆಯೇ ಆಸವಗಳು ನನ್ನಲ್ಲಿದ್ದಿದ್ದರೆ ನಾನು ಗಂಧರ್ವನಾಗಿ, ಯಕ್ಷನಾಗಿ, ಮಾನವನಾಗಿರುತ್ತಿದ್ದೆ. ಆದರೆ ನಾನು ಆಸವಗಳನ್ನು ಸಂಪೂರ್ಣವಾಗಿ ಕಿತ್ತುಹಾಕಿದ್ದೇನೆ. ತಾಳೆ ಮರದ ಕಾಂಡವನ್ನು ಕತ್ತರಿಸಿ ಮೊಟಕು ಮಾಡಿ, ಅದನ್ನು ಬುಡ ಸಮೇತ ಕಿತ್ತುಹಾಕಿ ಮತ್ತೆ ಅದು ಹುಟ್ಟಿಬರದಂತೆ ಹೇಗೆ ಮಾಡಲಾಗುವುದೋ ಹಾಗೆ ಆಸವಗಳನ್ನು ನಾನು ಸಂಪೂರ್ಣವಾಗಿ ತೊಡೆದು ಹಾಕಿದ್ದೇನೆ".

"ಬ್ರಾಹ್ಮಣನೇ, ಹೇಗೆ ನೀಲಿ, ಕೆಂಪು ಅಥವಾ ಬಿಳಿ ಕಮಲದ ಹೂವು ನೀರಿನಲ್ಲಿ ಹುಟ್ಟಿ, ನೀರಿನಲ್ಲಿ ಬೆಳೆದು, ಆಕಾಶ ಮುಖವಾಗಿ ನಿಂತಿದ್ದರೂ ಅದು ಹೇಗೆ ನೀರಿನಿಂದ ಸೋಂಕುವುದಿಲ್ಲವೋ, ಹಾಗೆಯೇ ನಾನು ಈ ಪ್ರಪಂಚದಲ್ಲಿ ಹುಟ್ಟಿದ್ದರೂ, ಬೆಳೆದಿದ್ದರೂ, ಪ್ರಾಪಂಚಿಕ ಸಂಗತಿಗಳಿಂದ ಮಲಿನವಾಗಿಲ್ಲ, ಈ ಪ್ರಪಂಚ ಮೀರಿ ಬೆಳೆದಿದ್ದೇನೆ. ಆದ್ದರಿಂದ ಬ್ರಾಹ್ಮಣನೇ ನನ್ನನ್ನು ಬುದ್ಧನೆಂದು ಗುರುತಿಸು".

**"ಆಸವಗಳಿಂದಾಗಿಯೇ (ಮಾನಸಿಕ ಕಲ್ಮಶ) ದೇವ, ಗಂಧರ್ವ, ಯಕ್ಷ, ಮಾನವರಾಗಿರುವುದು. ಈ ಆಸವಗಳನ್ನು ನಾಶಗೊಳಿಸಿದ್ದೇನೆ ಅವನ್ನು ಬುಡಸಮೇತ ಕಿತ್ತುಹಾಕಿದ್ದೇನೆ".**

**"ಸುಂದರ ನಯನ ಮನೋಹರ ಕಮಲವು ನೀರೊಳಗಿದ್ದರೂ ಕಲುಷಿತವಾಗದೋ ಅದೇ ತೆರನಾಗಿ ಈ ಪ್ರಪಂಚದಿಂದ ನಾನು ಕಲುಷಿತಗೊಂಡಿಲ್ಲ. ಆದ್ದರಿಂದ ಓ ಬ್ರಾಹ್ಮಣನೆ, ನಾನು ಬುದ್ಧ".** (ಅಂಗುತ್ತರ ನಿಕಾಯ 4.4.6)

## ಪ್ರಶ್ನೆಗಳು

1. **ಆಧ್ಯಾತ್ಮಿಕ ಸಾಧನೆಗಳ ಗುರುತು ಅಥವಾ ಲಕ್ಷಣಗಳು ಅರಿಯುವ ಅಂದರೆ ಮುಖ ಲಕ್ಷಣ ಶಾಸ್ತ್ರ ಪಂಡಿತನಾದ ಬ್ರಾಹ್ಮಣ ದೋಣನಿಗೆ ಬುದ್ಧನು ಬುದ್ಧ ಲಕ್ಷಣಗಳನ್ನು ಹೇಗೆ ವಿವರಿಸಿದ?**
2. **ಬ್ರಾಹ್ಮಣ ಗುರು ದೋಣ ಮತ್ತು ಬುದ್ಧರ ನಡುವೆ ಆದ ಸಂವಾದದ ಮೇಲೊಂದು ಪ್ರಬಂಧವನ್ನು ಬರೆಯಿರಿ.**
3. **ಕಮಲದ ಹೂವನ್ನು ಪ್ರತಿಮೆಯಾಗಿಟ್ಟುಕೊಂಡು ಬುದ್ಧ ತನ್ನ ಆಧ್ಯಾತ್ಮಿಕ ಸಾಧನೆಗಳನ್ನು ವಿವರಿಸುತ್ತಾನೆ. ಈ ಹೂವಿನ ಉಪಮೆಯ ಹಿಂದಿನ ಗೂಡಾರ್ಥವನ್ನು ವಿವರಿಸಿ.**
4. **ಈ ಸಂದೇಶದಿಂದ ನಿಮಗೇನು ತಿಳಿಯಿತು : 'ನಾನು ಈ ಪ್ರಪಂಚದಲ್ಲಿ ಹುಟ್ಟಿದರೂ, ಈ ಪ್ರಪಂಚ ಮೀರಿ ಬೆಳೆದಿದ್ದೇನೆ. ಅದು ನನ್ನನ್ನು ಮಲಿನಮಾಡದು'.**
5. **ಬೌದ್ಧ ಧರ್ಮದ ಅನುಯಾಯಿಯಾಗಿ ಈ ಸಿದ್ಧಾಂತವನ್ನು ನಿಮ್ಮ ನಿತ್ಯಜೀವನದಲ್ಲಿ ಹೇಗೆ ಅಳವಡಿಸಿಕೊಳ್ಳುತ್ತೀರಿ? ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ವಿವರಿಸಿ.**





# ಬುದ್ಧ ಉಪಕನನ್ನು ಸಂಧಿಸಿದ್ದು

ಆಷಾಡ ಮಾಸದ ತುಂಬು ಹುಣ್ಣಿಮೆಯ ದಿನ (ಜುಲೈ ತಿಂಗಳಲ್ಲಿ) ಅಂದರೆ ಸಮ್ಮಾ ಸಂಬುದ್ಧನಾಗಿ ನಲವತ್ತೊಂಬತ್ತು ದಿನಗಳ ಧ್ಯಾನ ಸಮಾಧಿ ಸ್ಥಿತಿಯನ್ನು ಕಳೆದಮೇಲೆ ಒಂದು ವಾರದ ನಂತರ ಬುದ್ಧನು ಇಸಿಪಟಣದಲ್ಲಿರುವ ಜಿಂಕೆಧಾಮಕ್ಕೆ (ಮಿಗದಾಯ) ತೆರಳುತ್ತಾನೆ. ಹಿಂದಿನ ಬುದ್ಧರುಗಳು ವಾರಣಾಸಿ ಬಳಿಯ ಇಸಿಪಟ್ಟಣಕ್ಕೆ ವಾಯು ಮಾರ್ಗವಾಗಿ ಹೋದರೆ, ನಮ್ಮ ಬುದ್ಧ ಕಾಲ್ನಡಿಗೆಯಲ್ಲಿಯೇ ಅಲ್ಲಿಗೆ ಹೋಗುತ್ತಾನೆ. ಬುದ್ಧ ಈ ಬದಲಾವಣೆಯನ್ನು ಯಾಕೆ ಮಾಡಿಕೊಂಡನೆಂದರೆ ಪುಣ್ಯಕರ್ಮಗಳ ದೆಸೆಯಿಂದಾಗಿ ಅನಾಗಾಮಿಯಾಗುವ ಎಲ್ಲ ಲಕ್ಷಣಗಳನ್ನು ಹೊಂದಿರುವ ಸಂನ್ಯಾಸಿ ಉಪಕನು ರಸ್ತೆ ಮುಖಾಂತರ ವಾರಣಾಸಿಗೆ ತೆರಳುತ್ತಿದ್ದ. ಬುದ್ಧನು ತನ್ನ ದಿವ್ಯಶಕ್ತಿಯಿಂದ ಮಹಾಬೋಧಿ ವೃಕ್ಷ ಮತ್ತು ಇಸಿಪಟಣದ ನಡುವಿನ ನೂರಇಪ್ಪತ್ತು ಮೈಲಿಗಳು ಅಂದರೆ ಹದಿನೆಂಟು ಯೋಜನೆಗಳ ದಾರಿಯನ್ನು ಬೇಗ ಕ್ರಮಿಸಿ ಸಂಜೆಯ ಹೊತ್ತಿಗೆ ಮಿಗದಾಯಕ್ಕೆ ಬಂದನು.

ಬುದ್ಧನು ಕಾಲ್ನಡಿಗೆಯಲ್ಲಿ ಹೋಗುತ್ತಿರುವುದನ್ನು ಸಂನ್ಯಾಸಿಯಾದ ಉಪಕನು ಕಂಡನು. ಬುದ್ದನಿಗೆ ಹೀಗೆ ಪ್ರಶ್ನಿಸಿದನು, "ಗೆಳೆಯ, ನಿನ್ನ ಮೈಬಣ್ಣ ಕಾಂತಿಯುತವಾಗಿದೆ. ನಿನ್ನ ರೂಪ ಮತ್ತು ಇಂದ್ರಿಯಗಳು ಪ್ರಕಾಶದಿಂದ ಕಂಗೊಳಿಸುತ್ತಿವೆ. ನೀನು ಯಾರಿಂದ ಸಂನ್ಯಾಸವನ್ನು ಪಡೆದೆ? ನಿನ್ನ ಗುರುಗಳು ಯಾರು? ಯಾವ ತತ್ವವನ್ನು ನೀನು ಪ್ರತಿಪಾದಿಸುತ್ತಿರುವೆ? ಬುದ್ಧನು ತಾನು ನೀಡಿದ ಉತ್ತರದಲ್ಲಿ ತನ್ನ ಸಮ್ಮಾಸಂಬೋಧಿಯ ಲಕ್ಷಣಗಳನ್ನು ಈ ಕೆಳಗಿನ ಗಾಥೆಗಳಲ್ಲಿ ಹೇಳಿದನು.

1. **ಸಬ್ಬಾಭಿಭು ಸಬ್ಬಾವಿದೂಹಂಸಾಮಿ,**
**ಸಬ್ಬೇಸು ಧಮ್ಮೇಸು ಅನುಪಲಿತ್ತೋ**
**ಸಬ್ಬಾಂಜಹೂ ತನ್ಹಕ್ಖಯೇ ವಿಮುತ್ತೋ,**
**ಸಯಂ ಅಭಿನ್ನಾಯ ಕಮುದ್ದಿಸೆಯ್ಯಂ**

ಮೂರು ಲೋಕಗಳಲ್ಲಿಯ ಪ್ರತಿಯೊಂದು ಜೀವಿಯ/ವಸ್ತುವಿನ ಬಗ್ಗೆ ಸಂಪೂರ್ಣ ಅರಿವು ಇರುವುದರಿಂದ ಆ ಎಲ್ಲ ಜೀವಿಗಳ ಮೇಲೂ ನನಗೆ ಒಡೆತನವಿದೆ. ಮೂರು ಲೋಕಗಳ ಮಾನಸಿಕ ಕಳಂಕಗಳಿಂದ ಮುಕ್ತನಾಗಿ, ಎಲ್ಲ ರಾಗ ದ್ವೇಷಗಳನ್ನು ಮೆಟ್ಟಿದವನಾಗಿ ಮತ್ತು ಎಲ್ಲ ಪ್ರಾಪಂಚಿಕ ಆಸೆಗಳನ್ನು ಮೆಟ್ಟಿದವನಾಗಿ ನಾನು ವಿಮುಕ್ತಿ ಪಡೆದವನಾಗಿದ್ದೇನೆ. ಅಲೌಕಿಕ ಶಕ್ತಿ ಮತ್ತು ಜ್ಞಾನದ ಮೂಲಕ ಎಲ್ಲ ವಿಷಯಗಳ ಆಳಕ್ಕೆ ನಾನೇ ಸ್ವತಃ ಹೋಗಿ ಅರಿತವನಾಗಿರುವಾಗ ನಾನು ಯಾರನ್ನೂ ಗುರುವೆಂದು ಗುರುತಿಸಲಿ ?

2. **ನಮೆ ಆಚರಿಯೊ ಅತ್ಥಿ**
**ಸದಿಸೊ ಮೆ ನ ವಿಜ್ಜತಿ**
**ಸದೇವಕಸ್ಮಿಮ್ ಲೋಕಸ್ಮಿಮ್**
**ನತ್ಥಿ ಮೆ ಪಟಿಪುಗ್ಗಲೋ**

ನನಗೆ ಗುರುವಿಲ್ಲ, ನನಗೆ ಸರಿಸಮಾನರು ಯಾರೂ ಇಲ್ಲ. ಈ ಇಂದ್ರಿಯ ಸಂಬಂಧ ಪ್ರಪಂಚದಲ್ಲಿ ದೇವರುಗಳೂ ಸೇರಿದಂತೆ ನನ್ನನ್ನು ಎದುರು ಹಾಕಿಕೊಳ್ಳುವವರು ಒಬ್ಬರೂ ಇಲ್ಲ.

3. **ಅಹಂ ಹಿ ಅರಹಾಲೋಕೆ,**
**ಅಹಂ ಸತ್ಥಾ ಅನುತ್ತರೋ,**
**ಏಕೋಮ್ಹಿ ಸಮ್ಮಾಸಂಬುದ್ಧೋ**
**ಸಿತಿಭೂತೋಸ್ಮಿ ನಿಬ್ಬುತೋ**

ಈ ಪ್ರಪಂಚದಲ್ಲಿ ನಾನೊಬ್ಬನೇ ಅರ್ಹತನು. ನನಗೆ ಸರಿಸಮಾನರಾದ ಇನ್ನೊಬ್ಬ ಗುರುವಿಲ್ಲ. ಕಳಂಕಗಳೆಂಬ ಬೆಂಕಿಯನ್ನು ಆರಿಸಿ ಅದನ್ನು ತಣ್ಣಗೆ ಮಾಡಿದ ಸಮ್ಮಾ ಸಂಬುದ್ಧನು ನಾನೊಬ್ಬನೇ.

4. **ಧಮ್ಮಚಕ್ಕಂ ಪವತ್ತೇತುಂ**
**ಗಚ್ಛಾಮಿ ಕಾಸೀನಂ ಪುರಂ,**
**ಅಂಧೀಭೂತಸ್ಮಿಂ ಲೋಕಸ್ಮಿಂ**
**ಅಹಂಚಮ್ ಅಮತದುಂಧುಬಿಂ**

ಧರ್ಮಚಕ್ರವನ್ನು ಪ್ರವರ್ತಿಸುವ ಸಲುವಾಗಿ ಕಾಶಿನಗರಕ್ಕೆ ಹೋಗುತ್ತಿದ್ದೇನೆ. ಕತ್ತಲಲ್ಲಿಯೇ ಸುತ್ತಿ ಸುತ್ತಿ ಕರುಡಾಗಿರುವ ಈ ಲೋಕದಲ್ಲಿ ಅಮೃತ ದುಂದುಭಿಯನ್ನು ಬಾರಿಸಲು ಹೋಗುತ್ತಿದ್ದೇನೆ.

5. **ಮಾದಿಸಾವೇ ಜಿನಾಹೊಂತಿ**
**ಯೇ ಪತ್ತಾ ಆಸವಕ್ಖಯಂ**
**ಜಿತಾ ಮೇ ಪಾಪಕಾಧಮ್ಮಾ**
**ತಸ್ಮಾಹಂ ಉಪಕೋ ಜಿನೋ**

ಆಸವಗಳಿಂದ (ಮಾನಸಿಕ ಕಲ್ಮಶಗಳಿಂದ) ಮುಕ್ತರಾದ ನನ್ನಂತಹ ಬುದ್ಧರೇ ನಿಜವಾದ ವಿಜಯಶಾಲಿಗಳು. ಉಪಕ, ನಾನು ಎಲ್ಲ ದುಷ್ಟ ಶಕ್ತಿಗಳನ್ನು ಸದೆಬಡಿದಿರುವುದ ರಿಂದ ನಾನೊಬ್ಬನೇ ವಿಜಯಿ.

ಇಷ್ಟೆಲ್ಲ ಕೇಳಿದ ಸಂನ್ಯಾಸಿ ಉಪಕ ತಲೆದೂಗಿ, "ನನ್ನ ಗೆಳೆಯನೇ, ಅಪಾರ ಜ್ಞಾನ ಹೊಂದಿದ ನೀನು ಜಯಶಾಲಿ ಎಂದು ಹೇಳಿಕೊಳ್ಳುವುದು ಸರಿ ಇದೆ" ಎಂದು ದಾರಿಯಲ್ಲಿ ಮುಂದೆ ಸಾಗಿದನು.





## ಪ್ರಶ್ನೆಗಳು

1. **ಬುದ್ಧನು ಸಂನ್ಯಾಸಿ ಉಪಕನಿಗೆ ಸಮ್ಮಾಸಂಬುದ್ಧನ ಲಕ್ಷಣಗಳನ್ನು ವಿವರಿಸಿದ ಬಗೆ ಹೇಗೆ? ಈ ವಿವರಣೆಯಿಂದ ನಿಮಗೆ ಏನು ಅರ್ಥವಾಯಿತು ? ಸ್ಪಷ್ಟವಾಗಿ ಬರೆಯಿರಿ.**
2. **ಮೂಲ ಪಾಳಿ ಗ್ರಂಥಗಳಲ್ಲಿ ದಾಖಲಾಗಿರುವಂತೆ ಬುದ್ಧ ಮತ್ತು ಉಪಕರ ನಡುವೆ ಆದ ಸಂವಾದವನ್ನು ಬರೆಯಿರಿ.**
3. **ಈ ಕೆಳಗಿನ ಐದು ಗಾಥೆಗಳಲ್ಲಿ ಅಡಕವಾಗಿರುವ ತತ್ತ್ವವನ್ನು ಕುರಿತಂತೆ ಒಂದು ಪ್ರಬಂಧವನ್ನು ಬರೆಯಿರಿ.**
**"ನಾನು ವಿಮುಕ್ತಿ ಪಡೆದವನಾಗಿದ್ದೇನೆ"**
**"ನಾನು ಎಲ್ಲವನ್ನು ಅರಿತವನು"**
**"ನನಗೆ ಗುರುವಿಲ್ಲ"**
**"ಸಮ್ಮಾಸಂಬುದ್ಧ ನಾನೊಬ್ಬನೇ"**
**"ಮಾನಸಿಕ ಕಲ್ಮಶಗಳಿಂದ ಮುಕ್ತರಾದ ನನ್ನಂತಹ ಬುದ್ಧರೇ ನಿಜವಾದ ವಿಜಯಶಾಲಿಗಳು".**
4. **ಬುದ್ಧತ್ವದ ಬಗ್ಗೆ ಬುದ್ಧನೇ ಏನು ಹೇಳಿದ್ದಾನೆನ್ನುವುದನ್ನು ಗ್ರಹಿಸಿದ ಮೇಲೆ ಬುದ್ಧನನ್ನು ದೇವರೆಂದು ಹೇಳಬಹುದೇ? ಅಥವಾ ಅವತಾರ, ಪ್ರವಾದಿ, ದೇವದೂತ ಎನ್ನಬಹುದೇ? ಹಾಗೆ ಹೇಳುವುದಾದರೆ ಏಕೆ ಹಾಗೆನ್ನಬಹುದು? ಒಂದುವೇಳೆ ಅಲ್ಲ ಎನ್ನುವುದಾದರೆ ಅದಕ್ಕೂ ಕಾರಣ ಕೊಡಿ.**

# ಅಧ್ಯಾಯ–4

# ಬೋಧಿಸತ್ತ ಆದರ್ಶ

ಬುದ್ಧನ ಬೋಧನೆಗಳನ್ನು ಅರಿಯಬೇಕಾದರೆ ಬೋಧಿಸತ್ತ ಆದರ್ಶದ ಬಗ್ಗೆ ಸ್ಪಷ್ಟ ಅರಿವನ್ನು ಮೂಡಿಸಿಕೊಳ್ಳುವುದು ಅಗತ್ಯ. ಸಂಬೋಧಿಯನ್ನು ಪ್ರಾಪ್ತಿ ಮಾಡಿಕೊಳ್ಳಲಿರುವ ಏಕಮೇವ ಉದ್ದೇಶದ ಬೋಧಿಸತ್ತನು (ಭವಿಷ್ಯದ ಬುದ್ಧ) ಸರ್ವಜ್ಞ ಪ್ರಾಪ್ತಿಯನ್ನು, ಎಣೆಯಿಲ್ಲದ ಕರುಣೆಯನ್ನು ಮತ್ತು ಅಲೌಕಿಕ ಶಕ್ತಿಯನ್ನು ಹೊಂದುತ್ತಾನೆ. ಸಂಬೋಧಿಯ ಮೂಲಕ ಬುದ್ಧನು ಪ್ರಜ್ಞೆಯನ್ನು, ಉತ್ತಮೋತ್ತಮ ಗುಣಗಳನ್ನು ಮತ್ತು ಅಪಾರ ಶಕ್ತಿಯನ್ನು ಸಂಪಾದಿಸಿ ಸಂಸಾರದಲ್ಲಿರುವ ಜೀವಿಗಳನ್ನು ದುಃಖದಿಂದ ಬಿಡುಗಡೆ ಮಾಡುವನು.

ಬುದ್ಧನು ನಿಜವಾದ ರಕ್ಷಕ, ಮೂರು ಲೋಕಗಳಿಗೆ ಬೆಳಕನ್ನು ಕೊಡುವ ಮಹಾಪುರುಷ. ಎಲ್ಲ ಜೀವಿಗಳ ಹೃದಯಗಳನ್ನು ಮಿನುಗಿಸುವ ಆಧ್ಯಾತ್ಮ ಸೂರ್ಯ, ಆ ಮೂಲಕ ಸಂಸಾರದಿಂದ ಬಿಡುಗಡೆ ಮಾಡಿ ಜ್ಞಾನೋದಯದತ್ತ ಉನ್ಮುಖರಾಗುವಂತೆ ಮಾಡುತ್ತಾನೆ.

ಬೋಧಿಸತ್ತ ಸುಮೇಧನ ಕಥೆಯನ್ನು ಕೇಳಿದರೆ ಹೇಗೆ ತನ್ನ ಜ್ಞಾನೋದಯವನ್ನೇ ಮುಂದೂಡಿಕೊಂಡ ಸುಮೇಧ ಬೋಧಿಸತ್ತನಾಗಿ ಆಧ್ಯಾತ್ಮ ಲೋಕದ ದೊರೆ ಸರ್ವಜ್ಞನಾದ ಬುದ್ಧ ದೀಪಂಕರನನ್ನು ಕಾಣುತ್ತಾನೆ ಎನ್ನುವುದನ್ನು ವಿವರವಾಗಿ ತಿಳಿಯಬಹುದು.

## ಬೋಧಿಸತ್ತ ಸುಮೇಧ ಪಂಡಿತ

ಪಾಳಿ ಗ್ರಂಥ ತಿಪಿಟಕದ ಜಾತಕ ಭಾಗದಲ್ಲಿ ಬೋಧಿಸತ್ತ ಸುಮೇಧ ಪಂಡಿತನ ಕಥೆಯನ್ನು ಕಾಣಬಹುದು. ಬುದ್ಧ ತನ್ನ ಹಿಂದಿನ ಜನ್ಮಗಳಲ್ಲಿ ಬೋಧಿಸತ್ತನಾಗಿ ಕಳೆದ ಐದುನೂರ ಐವತ್ತೆರಡು ಜಾತಕ ಕಥೆಗಳಿವೆ. ಜಾತಕದ ಪ್ರವೇಶ ಭಾಗವನ್ನು 'ನಿದಾನ'ವೆಂದು ಕರೆಯಲಾಗುವುದು. ಅದರಲ್ಲಿ ಸುಮೇಧನ ಬದುಕಿನ ಬಗ್ಗೆ ವಿವರವಿದೆ. ನಿದಾನವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ದುರೆ ನಿದಾನ, ಅವಿದುರೆ ನಿದಾನ ಮತ್ತು ಸಂತಿಕೆ ನಿದಾನ.

ದುರೆ ನಿದಾನದಲ್ಲಿ ಸುಮೇಧ ಪಂಡಿತನ ಬಾಲ್ಯ, ಬುದ್ಧ ದೀಪಂಕರನನ್ನು ಹೇಗೆ ಸಂದರ್ಶಿಸಿದ ಮತ್ತು ತಾನೇ ಬುದ್ಧನಾಗಲು ಹೇಗೆ ಆಶಿಸಿದ ಎನ್ನುವುದರ ಬಗ್ಗೆ ವಿವರಗಳಿವೆ. ಇಲ್ಲಿ ಜ್ಞಾನೋದಯ ಪ್ರಾಪ್ತಿಗೆ ಬೇಕಾದ ದಶಪಾರಮಿಗಳ ವಿವರಗಳೂ ಇವೆ. ದುರೆ ನಿದಾನದಲ್ಲಿ ಬುದ್ಧನ ಪೂರ್ವ ಜನ್ಮಗಳಾದ ಬೋಧಿಸತ್ತ ಬದುಕಿನ ಐದು ನೂರ ಐವತ್ತೆರಡು ಜಾತಕ ಕಥೆಗಳಿವೆ. ಬೋಧಿಸತ್ತ ಜನ್ಮಗಳಲ್ಲಿ ದಶಪಾರಮಿಗಳನ್ನು ಮೂರುಬಾರಿ ಸಾಕ್ಷಾತ್ಕರಿಸಿಕೊಂಡ ಮಾಹಿತಿಯೂ ಇದೆ.





ಅವಿದುರೆ ನಿದಾನದಲ್ಲಿ ಮುಂದೆ ಬುದ್ಧ ಗೌತಮನಾದ ರಾಜಕುಮಾರ ಸಿದ್ಧಾರ್ಥ ಗೌತಮನ ಕಥೆ ಇದೆ. ತುಸಿತ ದೇವಲೋಕದ ದೊರೆ ಸೇತಕೇತು ಹೇಗೆ ಮಾನವ ಲೋಕದಲ್ಲಿ ಸಾಕ್ಯ ದೊರೆ ಸುದ್ಧೋದನನ ಮಗ ರಾಜಕುಮಾರ ಸಿದ್ಧಾರ್ಥನಾಗಿ ಹುಟ್ಟುತ್ತಾನೆಂಬ ಕಥೆಯಿಂದ ಆರಂಭವಾಗಿ ಬುದ್ಧ ಗೌತಮನಾಗುವವರೆಗಿನ ಜೀವನ ಚರಿತ್ರೆ ಇದೆ.

ಸಂತಿಕೆ ನಿದಾನದಲ್ಲಿ ಬುದ್ಧನ ಬದುಕು ಮತ್ತು ಬೋಧನೆಗಳಿವೆ. ತಥಾಗತ ಬುದ್ಧ ತನ್ನ ನಲವತ್ತೈದು ವರ್ಷಗಳ ಧಮ್ಮ ಬದುಕನ್ನು ನಡೆಸಿದ ವಿವರಗಳಿವೆ.

ಸುಮೇಧ ಪಂಡಿತನ ಬದುಕು ಮತ್ತು ಸಾಧನೆ ಸರಿಸುಮಾರು ನಾಲ್ಕು ಅಸಂಖ್ಯೆಯ ಮತ್ತು ಲಕ್ಷ ಕಲ್ಪಗಳ ಹಿಂದೆ ನಡೆದಂತಹುದು. ಸುಮೇಧ ತುಂಬಾ ಹಳೆಯ ಮತ್ತು ಶ್ರೀಮಂತ ಬ್ರಾಹ್ಮಣ ಮನೆತನಕ್ಕೆ ಸೇರಿದವನು. ಪುಟ್ಟ ಪಾಳೆಯದ ಒಡೆತನವಿತ್ತು. ಅಮರಾವತಿ ನಗರದಲ್ಲಿ ವಾಸಿಸಿದ ಸುಮೇಧ ಹದಿನಾರನೆ ವಯಸ್ಸಿನವರೆಗೂ ಅತ್ಯುತ್ತಮ ವಿದ್ಯೆಯನ್ನು ಪಡೆದ. ಗುರುಗಳಿಂದ ಮತ್ತು ಗೆಳೆಯರಿಂದ ಗೌರವವನ್ನು ಪಡೆದ ಬುದ್ಧಿವಂತ. ಇನ್ನೂ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಿರುವಾಗಲೇ ಹದಿನಾರನೆ ವಯಸ್ಸಿಗೆ ತಂದೆ ತಾಯಿಗಳಿಬ್ಬರನ್ನೂ ಕಳೆದುಕೊಂಡ.

ಈ ವಿಷಾದ ಸಂಗತಿಯೇ ಬದುಕಿನ ಅರ್ಥ ಮತ್ತು ಉದ್ದೇಶದ ಬಗ್ಗೆ ಯೋಚಿಸುವಂತೆ ಮಾಡಿತು. ವಿದ್ಯೆಯಿಂದ ಹಿಂತಿರುಗಿ ಮನೆಯ ಹಿರಿತನವನ್ನು ಮತ್ತು ಪಾಳೆಯದ ಒಡೆತನವನ್ನು ವಹಿಸಿಕೊಳ್ಳಬೇಕಾಯಿತು. ಏನೆಲ್ಲ ಆಸ್ತಿಯನ್ನು ಅನುವಂಶಿಕವಾಗಿ ಹೊಂದಿರುವನೆಂಬ ಬಗ್ಗೆ ಸುಮೇಧನ ಖಜಾಂಚಿ ಲೆಕ್ಕವನ್ನು ಸಲ್ಲಿಸಿದ. ಖಜಾಂಚಿ ಹೇಳಿದ, 'ನಿನ್ನ ತಂದೆ ಮತ್ತು ತಾಯಿ ಎರಡೂ ಕಡೆಯ ಏಳು ತಲೆಮಾರುಗಳಿಂದ ಬಂದ ಅಪಾರವಾದ ಆಸ್ತಿ ನಿನ್ನದು. ನಿನ್ನದೇ ಸ್ವಂತದ್ದಾದ ಹದಿನಾಲ್ಕು ತಿಜೋರಿಗಳ ತುಂಬ ಬೆಳ್ಳಿ, ಬಂಗಾರ, ಒಡವೆಗಳು ಇವೆ. ಇವೆಲ್ಲದರ ಜೊತೆ ಮನೆತನದ ಸ್ಥಿರಾಸ್ತಿಗಳೂ ಇವೆ. ಖಜಾಂಚಿಯು ಹದಿನಾಲ್ಕು ತಿಜೋರಿಗಳಲ್ಲಿನ ಆಸ್ತಿ ವಿವರಗಳನ್ನು ನೀಡಿ ಅವನ್ನು ಖುದ್ದಾಗಿ ಪರಿಶೀಲಿಸುವಂತೆ ತಿಜೋರಿಗಳತ್ತ ಕರೆದುಕೊಂಡು ಹೋದ.

ಒಬ್ಬನೇ ಮಗನಾಗಿ ಇಷ್ಟೊಂದು ಅಪಾರ ಸಂಪತ್ತಿನ ಒಡೆಯನಾಗಿ ತಾನು ಸತ್ತಮೇಲೆ ಇವೆಲ್ಲದರ ನಿಜವಾದ ಬೆಲೆ ಏನು? ಯಾವುದು ಹಿಂದೆ ಬರುತ್ತದೆ ಎನ್ನುವುದರ ಬಗ್ಗೆ ಚಿಂತಿಸತೊಡಗಿದ. ತನ್ನ ತಂದೆ ಮತ್ತು ತಾಯಿ ಮತ್ತು ಅವರ ಹಿಂದಿನ ತಲೆಮಾರುಗಳು ಅಪಾರ ಸಂಪತ್ತು ಕೂಡಿಡುತ್ತಾ ಸತ್ತಮೇಲೆ ಅವರ್‍ಯಾರೂ ಏನನ್ನೂ ಕೊಂಡು ಹೋಗಲಿಲ್ಲವೆಂಬುದರ ಸತ್ಯದ ಬಗ್ಗೆ ಚಿಂತನೆ ಮಾಡಿದ.

ಬಿಡಿಸಲಾಗದ ಈ ಬದುಕಿನ ಒಗಟಿನ ಬಗ್ಗೆ ಹಲವಾರು ದಿನಗಳ ಕಾಲ ಉತ್ತರಕ್ಕಾಗಿ ಧ್ಯಾನಮಗ್ನನಾದ. ಈ ಪ್ರಪಂಚದಲ್ಲಿರುವ ಎಲ್ಲ ರೀತಿಯ ಜೀವಿಗಳು ಮತ್ತು ವಸ್ತುಗಳು ಅನಿತ್ಯವೆಂಬ ಸಂಗತಿಯನ್ನು ಕಂಡುಕೊಂಡ. ತಾನು ಸತ್ತಮೇಲೆ ಇವೆಲ್ಲವನ್ನೂ ತನ್ನ

ಜೊತೆ ಕೊಂಡು ಹೋಗುವ ದಾರಿ ಇದೆಯೇ ಎಂಬ ಬಗ್ಗೆ ತನಗೆ ತಾನೇ ಪ್ರಶ್ನಿಸಿಕೊಂಡ. ಈ ಜಗತ್ತಿನ ಎಲ್ಲ ನ್ಯೂನತೆ, ರೋಗಗಳಿಂದ ವಿಮುಕ್ತಿ ಹೊಂದುವತ್ತ ಬೆಳೆಯತೊಡಗಿದ.

ಇಂತಹ ಧ್ಯಾನಸ್ಥಿತಿಯಿಂದ ಹೊರಬಂದು ತನ್ನ ಖಜಾಂಚಿಯನ್ನು ಕರೆದು ಹೀಗೆ ಹೇಳಿದ "ನನ್ನ ತಂದೆ–ತಾಯಿ ಮತ್ತು ಅವರ ಹಿಂದಿನವರು ಸತ್ತಮೇಲೆ ಅವರ್‍ಯಾರೂ ಸಂಪತ್ತನ್ನು ತಮ್ಮ ಹಿಂದೆ ಕೊಂಡೊಯ್ಯಲಿಲ್ಲ. ಅವರು ಆರ್ಜಿಸಿದರು, ಕೂಡಿಟ್ಟರು. ನಾನು ಇರುವುದೆಲ್ಲವನ್ನೂ ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ಕೊಟ್ಟು ಪುಣ್ಯವನ್ನು ಪಡೆಯುತ್ತೇನೆ ಮತ್ತು ಅದನ್ನು ಹಂಚುತ್ತೇನೆ. ನಾವು ಹೋದ ಬಳಿಕ ನಾವು ಆರ್ಜಿಸಿದ ಸಂಪತ್ತು ಮತ್ತು ಆಸ್ತಿ ಇಲ್ಲಿಯೇ ಉಳಿಯುತ್ತವೆ, ಆದರೆ ದಾನ ಮಾಡುವುದರಿಂದಾಗಿ ಬರುವ ಪುಣ್ಯ ಸತ್ತಾಗ ನಮ್ಮೊಡನೆಯೇ ಬರುತ್ತದೆ. ಎಲ್ಲವನ್ನು ಬಿಟ್ಟು ಕೊಡುವುದರಿಂದ, ನಾನು ಎಲ್ಲವನ್ನೂ ಪಡೆಯುತ್ತೇನೆ".

ಆದ್ದರಿಂದ ಡಂಗುರ ಹೊಡೆಸಿ ಸಾರ್ವಜನಿಕ ಘೋಷಣೆ ಮಾಡು. ತಮ್ಮ ಬದುಕಿನ ಸುಖಕ್ಕಾಗಿ ಯಾರಿಗೆ ಏನು ಬೇಕಾಗಿದೆಯೋ ಅದನ್ನು ಕಾರಣ ನೀಡಿ ಪಡೆಯಬಹುದೆಂದು ಹೇಳು. ಯಾರಿಗೆ ಅವಶ್ಯಕತೆ ಇದೆಯೋ ಅವರು ಮಾತ್ರ ಪಡೆಯುವರು. ಈಗಾಗಲೇ ಇರುವುದಕ್ಕೆ, ಸಂಕಲಿಸಿಕೊಳ್ಳುವುದಕ್ಕೆ ಕೊಡುವುದಿಲ್ಲ. ಇದರಂತೆಯೇ ಊರ ತುಂಬೆಲ್ಲಾ ಡಂಗುರ ಹೊಡೆಸಿ ಸಾರಿಸಿದರು. ಬಹಳ ದಿನಗಳ ಕಾಲ ಸಾರಿಕೆ ಸಾಗಿತ್ತು. ಜನ ಸುಮೇಧನ ಭವ್ಯ ಮನೆಯ ಮುಂದೆ ಸೇರಿ ತಮಗೇನು ಬೇಕು ಎಂಬುದನ್ನು ಕಾರಣ ನೀಡಿ ಪಡೆದರು.

ಸುಮೇಧನು ತನ್ನ ನಿಷ್ಠಾವಂತ ಜನರ ತಂಡವೊಂದನ್ನು ರಚಿಸಿ ತನ್ನಲ್ಲಿರುವುದೆಲ್ಲ ವನ್ನೂ ವ್ಯವಸ್ಥಿತವಾಗಿ ಹಂಚುವಂತೆ ಮಾಡಿದ. ತನ್ನಲ್ಲಿದ್ದ ಹದಿನಾಲ್ಕು ತಿಜೋರಿಗಳಲ್ಲಿನ ಅಪಾರ ಸಂಪತ್ತನ್ನು ಹಂಚಲು ಹಲವು ಕಾಲವೇ ಹಿಡಿಯಿತು. ಸುಮೇಧನು ಸುಮೆಧ ಪಂಡಿತ, ಅಂದರೆ ಜ್ಞಾನಿ ಸುಮೇಧನಾದ. ಅಂದರೆ ತನ್ನ ಔದಾರ್ಯ ಮತ್ತು ವಿವೇಚನಾಯುಕ್ತ ಪ್ರಜ್ಞೆಯ ಮೂಲಕ ಪುಣ್ಯ ಕೆಲಸವನ್ನು ಮಾಡಿದ್ದ.

ಅಮರಾವತಿಯ ಉನ್ನತ ವಲಯಗಳಲ್ಲಿ ಏಕೆ ಇರುವುದೆಲ್ಲವನ್ನೂ ಕೊಟ್ಟೆನೆಂಬುದಕ್ಕೆ ಸುಮೇಧ ಉತ್ತರಿಸಿದ. "ಎಲ್ಲ ಕಡೆಯೂ ನಾನಾರೀತಿಯ ದುಃಖ ತುಂಬಿರುವುದನ್ನು ನಾನು ಕಾಣುತ್ತಿದ್ದೇನೆ. ಹುಟ್ಟಿನಿಂದ ಹಿಡಿದು ಸಾಯುವವರೆಗೂ ಒಂದಲ್ಲ ಒಂದು ರೀತಿಯಲ್ಲಿ ದುಃಖವನ್ನು ಎದುರಿಸುತ್ತಲೇ ಇರುತ್ತಾನೆ. ಆ ಎಲ್ಲದಕ್ಕೂ ಕಾರಣ ಬದುಕನ್ನು ಆನಂದವಾಗಿಡಲು ವಸ್ತುಗಳು ಬೇಕೆಂಬ ಮತ್ತು ಕೂಡಿಡಬೇಕೆಂಬುದರಿಂದಾಗಿ. ಆದರೆ ಇವೆಲ್ಲವೂ ಮೂಲತಃ ಅನಿತ್ಯವಾದವುಗಳು. ದುರಾಸೆ ಮುಂತಾದ ಹಾನಿಕಾರಕ ಕೇಡುಗಳಿದ್ದರೆ, ಮನಸ್ಸನ್ನು ಅಂತಹ ಕಲ್ಮಶಗಳಿಂದ ಮುಕ್ತಗೊಳಿಸುವ ಒಳ್ಳೆತನವನ್ನು ನಾನು ಕಾಣುತ್ತಿದ್ದೇನೆ".





"ಸರಿಯಾಗಿ ಯೋಚನೆ ಮಾಡಿದರೆ ಈ ಜಗತ್ತಿನಲ್ಲಿ ವೈರುಧ್ಯಗಳ ಯಮಕಗಳಿವೆ. ಹೇಗೆಂದರೆ ಎಲ್ಲಿ ಬಿಸಿ ಇದೆಯೋ ಅಲ್ಲಿ ತಂಪೂ ಇದೆ; ಕೆಟ್ಟದ್ದು ಇದ್ದರೆ, ಒಳ್ಳೆಯದೂ ಇರುತ್ತದೆ. ಹಾಗೆಯೇ ಎಲ್ಲಿ ದುಃಖವಿದೆಯೋ, ಅಲ್ಲಿ ದುಃಖದ ಹೋಗುವಿಕೆಯೂ ಇರುತ್ತದೆ".

ತಿಜೋರಿಗಳಲ್ಲಿದ್ದ ತನ್ನ ಸಂಪತ್ತನ್ನೆಲ್ಲ ಕೊಟ್ಟಾದ ಮೇಲೆ ತನ್ನ ಪುರದ ಸದಸ್ಯರನ್ನು ಕರೆದು, ಇಡೀ ನಗರಕ್ಕೆ ಸಂತೋಷ, ಸೌಹಾರ್ದತೆಯನ್ನು ತರುವ ಒಬ್ಬ ಉತ್ತಮ ಉತ್ತರಾಧಿಕಾರಿಯನ್ನು ಆಯ್ಕೆ ಮಾಡುವಂತೆ ಸೂಚಿಸಿದ. ಅಂತಹ ವ್ಯಕ್ತಿಯೊಬ್ಬನನ್ನು ಆಯ್ಕೆ ಮಾಡಿದ ಮೇಲೆ ಅವನಿಗೆ ಅಧಿಕಾರವನ್ನು ಹಸ್ತಾಂತರಿಸಿದ. ಹೀಗೆ ತನ್ನ ಉನ್ನತಾಧಿಕಾರವನ್ನು ಮತ್ತು ತನ್ನೆಲ್ಲ ಸಂಪತ್ತನ್ನು ಬಿಟ್ಟುಕೊಟ್ಟ ಮೇಲೆ ಸುಮೇಧನು ಬೈರಾಗಿಯ ಉಡುಪನ್ನು ಧರಿಸಿ ಧಮ್ಮಿಕ ಪರ್ವತವೆಂದು ಕರೆಯಲ್ಪಡುವ ಹಿಮಾಲಯದ ಅಜ್ಞಾತ ಪ್ರದೇಶಕ್ಕೆ ಧ್ಯಾನ ಮತ್ತು ಆಧ್ಯಾತ್ಮದ ಸಾಧನೆ, ಉನ್ನತಿಗಾಗಿ ತೆರಳಿದ.

## ಸುಮೇಧನ ಆಧ್ಯಾತ್ಮಿಕ ಸಾಧನೆ

ಪ್ರಾಪಂಚಿಕ ಬದುಕನ್ನು ತೊರೆದ ಸುಮೇಧ ಹಿಮಾಲಯದಲ್ಲಿನ ಧಮ್ಮಿಕ ಪರ್ವತಕ್ಕೆ ಧ್ಯಾನ ಮತ್ತು ಆಧ್ಯಾತ್ಮಿಕ ಬದುಕನ್ನು ನಡೆಸಲು ತೆರಳಿದ. ಸುಮೇಧನ ಈ ಅಸಾಧಾರಣ ಮತ್ತು ಪುಣ್ಯ ಕರ್ಮದ ದೆಸಿಯಿಂದಾಗಿ ದೇವಲೋಕದ ರಾಜ ಸಕ್ಕನ ಪೀತ ಶಿಲಾ ಸ್ಥಾನವು ಬಿಸಿಯಾಗತೊಡಗಿತು. ತನ್ನ ದಿವ್ಯ ಚಕ್ಷುಗಳಿಂದ ಇದಕ್ಕೆ ಕಾರಣ ನೋಡಲಾಗಿ ಒಬ್ಬ ಮಹಾಪುರುಷನ ಉತ್ತಮ ಆಧ್ಯಾತ್ಮಿಕ ಕರ್ಮದಿಂದಾಗಿ ಎಂಬುದನ್ನು ತಿಳಿದು ಜಗತ್ತಿನ ಒಳಿತಿಗಾಗಿಯೇ ಬಂದಿರುವ ಈತನಿಗೆ ಸಹಾಯ ಮಾಡಬೇಕೆಂದುಕೊಂಡನು. ದಿವ್ಯಲೋಕದ ವಾಸ್ತುಶಿಲ್ಪಿ ವಿಶ್ವಕರ್ಮನಿಗೆ ಹೇಳಿ ಕಳುಹಿಸಿದನು.

ವಿಶ್ವಕರ್ಮನಿಗೆ ಹೇಳಿದ, "ಸುಮೇಧ ಪಂಡಿತ ಎಲ್ಲವನ್ನೂ ದಾನ ಮಾಡಿ ಮಹಾ ತ್ಯಾಗಿಯಾಗಿದ್ದಾನೆ. ಈಗ ಆತ ಬೈರಾಗಿಯಾಗಿ ಹಿಮಾಲಯದ ಧಮ್ಮಿಕ ಪರ್ವತಕ್ಕೆ ಪವಿತ್ರ ಜೀವನವನ್ನು ನಡೆಸಲು ಹೋಗುತ್ತಿದ್ದಾನೆ. ಆದ್ದರಿಂದ ನೀನು ಈಗಲೇ ಅಲ್ಲಿಗೆ ಹೋಗಿ ಎಲ್ಲ ಅನುಕೂಲಗಳಿರುವ ಆಶ್ರಮವೊಂದನ್ನು ಕಟ್ಟಿ ನಡೆದಾಡುತ್ತಲೇ ಧ್ಯಾನ ಮಾಡುವುದಕ್ಕೆ ಒಳ್ಳೆಯ ಜಾಗವನ್ನು ನಿರ್ಮಿಸು". ವಿಶ್ವಕರ್ಮನು ಕೂಡಲೇ ಧಮ್ಮಿಕ ಪರ್ವತಕ್ಕೆ ತೆರಳಿ ಅಲ್ಲೊಂದು ಆಶ್ರಮವನ್ನು ನಿರ್ಮಿಸಿದನು. ಆಶ್ರಮಕ್ಕೆ ಹೋಗಲು ದಾರಿಯೊಂದನ್ನು ಮಾಡಿದನು.

ಸುಮೇಧನು ಧಮ್ಮಿಕ ಪರ್ವತವನ್ನು ತಲುಪುತ್ತಿದ್ದಂತೆ ಪ್ರಶಾಂತ ಜಾಗವೊಂದರಲ್ಲಿ ಆಶ್ರಮವಿರುವುದನ್ನು ಕಂಡನು. ಯಾವುದೇ ಗದ್ದಲವಿಲ್ಲದ ಆ ವಾತಾವರಣದಲ್ಲಿ ಧ್ಯಾನ ಮಾಡಲು ತೀರ್ಮಾನಿಸಿದನು. ಆಧ್ಯಾತ್ಮ ಜೀವನವನ್ನು ಚೈತನ್ಯದಾಯಕವಾಗಿಡಲು ಕೆಲವೊಂದು ಸಾಧನೆಗಳನ್ನು ಕೈಗೊಂಡನು. ನೆಲದ ಮೇಲೆ ಮಲಗದೆಯೇ ಕೇವಲ

ಮೂರು ಸ್ಥಿತಿಗಳಲ್ಲಿ ಅಂದರೆ ನಿಂತು, ಕುಳಿತು ಮತ್ತು ನಡೆಯುತ್ತಾ ಇರುವ ಸ್ಥಿತಿಗಳಲ್ಲಿ ಧ್ಯಾನ ಮಾಡಲು ತೀರ್ಮಾನಿಸಿದನು. ಈ ರೀತಿಯ ಗಂಭೀರ ಸಾಧನೆಯೇ ಉನ್ನತ ಧ್ಯಾನ ಸಮಾಧಿಗೆ ಕೊಂಡೊಯ್ಯಲು ಅವಕಾಶವಾಯಿತು ಮತ್ತು ಅಲೌಕಿಕ ಶಕ್ತಿಗಳು ತನ್ನ ಪಾಲಾದವು. ಎಂಟು ಧ್ಯಾನಗಳನ್ನು (ಝಾನ) ಮತ್ತು ಐದು ಅಭಿಜ್ಞಾಗಳನ್ನು ಚೆನ್ನಾಗಿಯೇ ಬೆಳೆಸಿಕೊಂಡನು.

ಇಷ್ಟೊಂದು ಸಿದ್ಧಿಯನ್ನು ಸ್ವಲ್ಪಕಾಲದಲ್ಲಿಯೇ ತನ್ನದಾಗಿಸಿಕೊಂಡ ಸುಮೇಧನು ಸುತ್ತ ಇರುವ ಸುಂದರ ವಾತಾವರಣ ಮತ್ತು ಆಶ್ರಮದಲ್ಲಿರುವ ಸವಲತ್ತುಗಳನ್ನು ನೋಡಿ ಅಂದುಕೊಂಡನು 'ಭೋಗ ಭಾಗ್ಯಗಳಲ್ಲಿ ಕುತ್ತು ಇದೆ ಎನ್ನುವ ಕಾರಣಕ್ಕಾಗಿಯೇ ನಾನು ಮನೆ ಮಠವನ್ನು ಬಿಟ್ಟು ಬಂದಿದ್ದೇನೆ. ಇಲ್ಲಿನ ಆಶ್ರಮ, ಸುತ್ತಮುತ್ತಲಿನ ವಾತಾವರಣ ಸುಂದರವಾಗಿಯೂ, ಆಹ್ಲಾದಕರವಾಗಿಯೂ ಇದೆ. ಒಂದುವೇಳೆ ಇವೆಲ್ಲ ಚೆನ್ನಾಗಿದೆ ಎಂದುಕೊಂಡರೆ ಹೊಸ ಸಂಗತಿಗೆ ಅಂಟಿಕೊಂಡಂತಾಗಿ ನನ್ನ ಆಧ್ಯಾತ್ಮಿಕ ಉನ್ನತಿಗೆ ಅಡ್ಡಿಯುಂಟಾಗಿ, ಈ ಅಂಟುವಿಕೆಯಿಂದಲೇ ನಾನು ದುಃಖವನ್ನು ಸ್ವಾಗತ ಮಾಡಿದಂತಾಗುತ್ತದೆ". ಹೀಗೆ ಯೋಚಿಸಿ ಧಮ್ಮಿಕ ಪರ್ವತವನ್ನು ಬಿಟ್ಟುಹೋಗಲು ತೀರ್ಮಾನಿಸಿ, ಗುಹೆಯೋ, ಮರವೋ ಅರಸುತ್ತಾ ಅದರ ಕೆಳಗೆ ಮುಕ್ತನಾಗಿ ಬೈರಾಗಿಯ ಬದುಕನ್ನು ಬಾಳಲು ಹೊರಟ.

ಪರ್ವತಕ್ಕೆ ಅಂಟಿಕೊಂಡ ಗೊಂಡಾರಣ್ಯದಲ್ಲಿ ಮರಗಳನ್ನು, ಗುಹೆಗಳನ್ನು ನೋಡಿದನು. ದಿನವೂ ಒಂದೊಂದುಕಡೆ ನಿಲ್ಲುತ್ತಾ ಅರಣ್ಯದಲ್ಲಿ ಸಿಕ್ಕುವ ಮರದಿಂದ ಬಿದ್ದ ಹಣ್ಣು ಬೀಜಗಳನ್ನು ತಿನ್ನುತ್ತಾ ಜೀವಿಸಿದನು. ಯಾವಾಗಲಾದರೂ ಒಮ್ಮೆ ಹಿಮಾಲಯದ ತಪ್ಪಲಲ್ಲಿರುವ ಹಳ್ಳಿಯೋ, ಪಟ್ಟಣಕ್ಕೋ ಭಿಕ್ಷಾಟನೆಗೆ ಹೋಗುತ್ತಿದ್ದ. ತನ್ನ ಅಲೌಕಿಕ ಶಕ್ತಿಯನ್ನು ಬಳಸಿ ಆಕಾಶದ ಮೂಲಕ ಸಂಚರಿಸಿ ಹಳ್ಳಿ, ಪಟ್ಟಣಗಳಿಗೆ ಹೋಗುತ್ತಿದ್ದನು.

## ಸುಮೇಧ ಬುದ್ಧನನ್ನು ಸಂಧಿಸಿದ್ದು

ಒಂದು ದಿನ ಸುಮೇಧನು ಭಿಕ್ಷೆಯನ್ನು ಮುಗಿಸಿ ಆಕಾಶ ಮಾರ್ಗವಾಗಿ ತನ್ನ ಸ್ಥಾನಕ್ಕೆ ವಾಪಸ್ಸು ಬರುತ್ತಿರುವಾಗ ಕೆಳಗೆ ನಗರದ ರಸ್ತೆಯೊಂದರಲ್ಲಿ ಜನ ಗುಂಪುಸೇರಿ ಕೆಲಸ ಮಾಡುತ್ತಿದ್ದರು. ಜನರಿಗೆ ಗೊತ್ತಾಗದಂತೆ ಕೆಳಗೆ ಇಳಿದು, "ಇಲ್ಲಿ ಏನಾಗುತ್ತಿದೆ, ಜನ ರಸ್ತೆಯ ಮೇಲೆ ಏನು ಮಾಡುತ್ತಿದ್ದಾರೆ? ಏನಾದರೂ ಜಾತ್ರೆ ತಯಾರಿ ನಡೆದಿದೆಯೇನು?" ಎಂದು ಕೇಳಿದ. ಆ ಜನರ ಮಧ್ಯೆ ಇದ್ದ ಮುಖ್ಯಸ್ಥನೊಬ್ಬ ಹೇಳಿದ, ""ದೀಪಂಕರ ಬುದ್ಧ ಈ ಜಗತ್ತಿಗೆ ಬಂದಿದ್ದಾನೆ. ಆ ಮಹಾತ್ಮನನ್ನು ಮತ್ತು ಆತನ ಶಿಷ್ಯರನ್ನು ನಗರಕ್ಕೆ ಆದರದಿಂದ ಸ್ವಾಗತಿಸಲು ರಸ್ತೆಯನ್ನು ಸಿದ್ಧಪಡಿಸುತ್ತಿದ್ದೇವೆ".

ಯಾವಾಗ ಸುಮೇಧ 'ಬುದ್ಧ' ಎಂಬ ಹೆಸರನ್ನು ಕೇಳಿದನೋ ಭಕ್ತಿ ಗೌರವಗಳಿಂದ ಅವನ ಮೈಯೆಲ್ಲಾ ರೋಮಾಂಚನವಾಯಿತು. ಸುಮೇಧ ಮತ್ತೆ ಮತ್ತೆ ಕೇಳಿದ. "ಬುದ್ಧ





ಈ ಜಗತ್ತಿಗೆ ಬಂದಿದ್ದಾನೆಂದು ಮತ್ತು ಅವರು ಇಲ್ಲಿಗೆ ಬರುತ್ತಿದ್ದಾರೆಂದು ಹೇಳಿದಿರಾ?" ಮುಂಚೆ ಬಂದ ಉತ್ತರವೇ ಸಿಕ್ಕರೂ ಮತ್ತೆ ಮತ್ತೆ ರೋಮಾಂಚನಗೊಂಡು "ಬುದ್ಧನ ಸೇವೆ ಮಾಡಲು ನಾನು ಸೇರಿಕೊಳ್ಳಬಹುದಾ?" ಎಂದು ಕೇಳಿದನು.

ಅಲ್ಲಿದ್ದ ಜನ ಸುಮೇಧನಲ್ಲಿ ಅಪಾರ ಅಲೌಕಿಕ ಶಕ್ತಿ ಇದೆ ಎಂದುಕೊಂಡು ರಸ್ತೆಯನ್ನು ಬೇಗ ಮುಗಿಸಲು ಈತ ಸಹಾಯ ಮಾಡುವನೆಂದು "ನೋಡಿ, ಇಲ್ಲೊಂದು ದೊಡ್ಡ ಗುಂಡಿ ಇದೆ, ಅದನ್ನು ಮುಚ್ಚಬೇಕು. ನೀವು ಆ ಕೆಲಸವನ್ನು ಮಾಡಬಹುದು" ಎಂದರು.

ಸುಮೇಧ ಯೋಚಿಸಿದ, "ಉದ್ದಕ್ಕೂ ಇರುವ ರಸ್ತೆಯನ್ನು ನನ್ನ ಅಲೌಕಿಕ ಶಕ್ತಿಯಿಂದ ಕ್ಷಣಾರ್ಧದಲ್ಲಿ ಮುಗಿಸಬಹುದು. ಆದರೆ ಸಮ್ಮಾ ಸಂಬುದ್ಧನ ಮುಂದೆ ಅಂತಹ ಶಕ್ತಿಯನ್ನು ಪ್ರದರ್ಶನ ಮಾಡಲು ನಾನು ಎಷ್ಟರ ಮಾತ್ರದವನು? ಆತನ ಶಕ್ತಿ ಅನನ್ಯ, ಅನಂತವಾದುದು. ನನ್ನ ಶಕ್ತಿಯನ್ನು ಪ್ರದರ್ಶಿಸುವುದು ಕೇವಲ ಮೂರ್ಖತನವಾಗುತ್ತದೆ. ಆದ್ದರಿಂದ ಬೇರೆಯವರಂತೆ ನನ್ನ ದೈಹಿಕ ಶ್ರಮವನ್ನೇ ಬಳಸಿ ಬುದ್ಧನ ಸೇವೆಯನ್ನು ಮಾಡುತ್ತೇನೆ.

ಸುಮೇಧನು ಹುಮ್ಮಸ್ಸಿನಿಂದ ಕೆಲಸ ಮಾಡುತ್ತಿದ್ದಂತೆ ಬುದ್ಧ ದೀಪಂಕರನು ಮತ್ತು ಅವನ ಅಸಂಖ್ಯ ಅರ್ಹತ ಶಿಷ್ಯರು ಮತ್ತು ಇತರರು ಕೂಡಲೆ ಬಂದು ಅವನ ಮುಂದೆ ನಿಂತರು. ಸುಮೇಧನು ತನ್ನ ಕೆಲಸವನ್ನು ಮುಗಿಸಿರಲಿಲ್ಲ. ಭವ್ಯವಾದ ಬುದ್ಧನನ್ನು ಅವನ ಹಿಂದೆ ಇದ್ದ ಆರು ವರ್ಣಗಳ ಪ್ರಭಾವಳಿಯನ್ನು ನೋಡಿ ವಿಸ್ಮಿತನಾದ. ಬುದ್ಧನ ಮೇಲಿನ ಅಪಾರ ಗೌರವದಿಂದಾಗಿ ಗುಂಡಿಯ ಮೇಲೆ ಮಲಗಿ ತನ್ನ ದೇಹವನ್ನೇ ಸೇತುವೆಯನ್ನಾಗಿಸಿ ಬುದ್ಧ ಮತ್ತು ಅವನ ಶಿಷ್ಯರು ಹಾದು ಹೋಗುವಂತೆ ಅನುಕೂಲ ಮಾಡಿದ. ತನ್ನ ಜಟೆಯನ್ನೇ ಕಾಲೊರಸು ಆಗುವಂತೆ ಹರಡಿಸಿದ. ಪ್ರಾಂಜಲ ಮನಸ್ಸಿನಿಂದ ಅಂದುಕೊಂಡ, 'ಬುದ್ಧ ಮತ್ತು ಆತನ ಶಿಷ್ಯರು ನನ್ನ ಶರೀರ ಸೇತುವೆಯ ಮೇಲೆ ಹಾದು ನನ್ನ ಆಧ್ಯಾತ್ಮಿಕ ಬದುಕನ್ನು ಪವಿತ್ರಗೊಳಿಸಲಿ'.

ತನ್ನ ಆಲೋಚನೆಯನ್ನು ಹಾಗೆಯೇ ಮುಂದುವರೆಸುತ್ತಾ, "ಬುದ್ಧ ತನ್ನ ಅನಂತ ಕರುಣೆಯಿಂದ ಸಂಸಾರದಲ್ಲಿ ಸಿಲುಕಿಕೊಂಡಿರುವ ಜೀವಿಗಳನ್ನು ಮುಕ್ತಗೊಳಿಸುತ್ತಾನೆ. ನಾನು ನನ್ನ ಮುಕ್ತಿಯನ್ನು ಕಂಡುಕೊಳ್ಳುತ್ತಿದ್ದೇನೆ. ಹೀಗಿರುವಾಗ ನಾನೇಕೆ ಬುದ್ಧ ನಡೆದ ಹಾದಿಯಲ್ಲೇ ನಡೆಯಬಾರದು?" ಬುದ್ಧ ನನ್ನನ್ನು ಪವಿತ್ರಗೊಳಿಸಲಿ ಎಂಬ ಪ್ರಬಲ ಮಾನಸಿಕ ನಿರ್ಧಾರ ಮಾಡಿ, ಆ ಮೂಲಕ ತಾನು ಸಮ್ಮಾಸಂಬುದ್ಧನಾಗಿ ಅಸಂಖ್ಯ ಜೀವಿಗಳನ್ನು ಸಂಸಾರದ ಜಂಜಾಟದಿಂದ ಮುಕ್ತಗೊಳಿಸಬಹುದು.

ಸುಮೇಧನ ಬುದ್ಧತ್ವದ ಪ್ರಬಲ ನಿರ್ಧಾರ ದೀಪಂಕರ ಬುದ್ಧನಿಗೆ ಅರಿವಿಗೆ ಬಂತು. ಆದರೆ ಇಂತಹ ಗುರಿಯನ್ನು ಮುಟ್ಟಲು ಇವನಿಗೆ ಅಗತ್ಯವಾದ ಅರ್ಹತೆಗಳು ಇವೆಯೇ? ಎಂಬ ಯೋಚನೆ ಬುದ್ಧನಲ್ಲಿ ಬಂದಿತು. ತನ್ನ ದಿವ್ಯ ಚಕ್ಷುವಿನಿಂದ ಸುಮೇಧನ ಹಿಂದಿನ ಮತ್ತು ಮುಂದಿನ ಜನ್ಮಗಳನ್ನು ನೋಡಿ ಇವನಲ್ಲಿ ಅಗತ್ಯ ಅರ್ಹತೆ ಇದೆ ಎಂದು

ಅರಿತು, ಈ ಕೂಡಲೇ ಇವನು ಅರ್ಹತನಾಗಬಹುದು. ಸಾವಕ ಬೋಧಿ ಅಂದರೆ ಅರ್ಹತ ಶಿಷ್ಯನಾಗಲು ಬೇಕಾದ ದಶಪಾರಮಿಗಳನ್ನು ಸಂಪೂರ್ಣಗೊಳಿಸಿದ್ದಾನೆ. ಈ ಪಾರಮಿಗಳನ್ನು ಇನ್ನುಮುಂದೆಯೂ ಮೂರುಬಾರಿ ಅನುಸರಿಸುವುದರ ಮೂಲಕ ನಾಲ್ಕು ಅಸಂಖೆಯ್ಯ ಮತ್ತು ಲಕ್ಷ ಕಲ್ಪಗಳಲ್ಲಿ ಈತನು ಮುಂದೆ ಬುದ್ಧ ಗೌತಮನಾಗುತ್ತಾನೆ' ಎಂದು ತೀರ್ಮಾನಿಸಿದ.

## ಬುದ್ಧ ದೀಪಂಕರನ ಭವಿಷ್ಯವಾಣಿ

ಅದೇರೀತಿಯಾಗಿಯೇ ಬುದ್ಧ ದೀಪಂಕರನು ಹೀಗೆ ಘೋಷಿಸಿದ. "ಸುಮೇಧನು ನಾಲ್ಕು ಅಸಂಖೆಯ್ಯ ಮತ್ತು ಕಲ್ಪಗಳ ನಂತರ ಸಮ್ಮಾಸಂಬುದ್ಧ ಬುದ್ಧ ಗೌತಮನಾಗುತ್ತಾನೆ". ಈ ರೀತಿಯಾಗಿ ಭವಿಷ್ಯವಾಣಿಯನ್ನು ನುಡಿದ ದೀಪಂಕರ ಬುದ್ಧನ ಕಾಲಿಗೆ ಬಿದ್ದ ಸುಮೇಧನನ್ನು ಮೇಲೆತ್ತಿ ಸಮ್ಮಾ ಸಂಬುದ್ಧನಾಗಲೆಂದು ಹರಸಿದ.

ರಾಜಕುಮಾರಿ ಮತ್ತು ರಾಜ ಮನೆತನದವರು ಗುಂಪಿನಲ್ಲಿದ್ದುಕೊಂಡು ಬುದ್ಧನನ್ನು ರಾಜಧಾನಿಯೊಳಗೆ ಕರೆದೊಯ್ಯಲು ಸ್ವಾಗತಕ್ಕಾಗಿ ಕಾಯುತ್ತಿದ್ದರು. ಯಾವಾಗ ಬುದ್ಧನು ಸುಮೇಧ ಬೋಧಿಸತ್ತನಾಗುತ್ತಾನೆಂಬ ಘೋಷಣೆಯನ್ನು ಮಾಡಿದನೋ, ರಾಜಕುಮಾರಿ ತಾನು ತಂದಿದ್ದ ಎಂಟು ಕಮಲದ ಹೂವುಗಳಲ್ಲಿ ಐದನ್ನು ಸುಮೇಧನಿಗೆ ಅರ್ಪಿಸಿ ಇನ್ನುಳಿದ ಮೂರನ್ನು ಬುದ್ಧನಿಗಾಗಿ ಅರ್ಪಿಸಲು ಇಟ್ಟುಕೊಂಡಳು.

ಸುಮೇಧನು ಐದು ಹೂವುಗಳಿಂದಲೂ ಮತ್ತು ರಾಜಕುಮಾರಿ ಮೂರು ಹೂವುಗಳಿಂದಲೂ ಬುದ್ಧನಿಗೆ ಸ್ವಾಗತ ಕೋರಿ ಗೌರವ ಸಲ್ಲಿಸಿದರು. ರಾಜಕುಮಾರಿ ಮನಸ್ಸಿನಲ್ಲೇ ನಿರ್ಧಾರವೊಂದನ್ನು ಮಾಡಿದಳು. 'ನಾನು ಸುಮೇಧನ ಸಮೇತವೇ ಪಾರಮಿಗಳನ್ನು ಅನುಸರಿಸುತ್ತೇನೆ. ರಾಜಕುಮಾರ ಸಿದ್ಧಾರ್ಥನಾದಾಗ ನಾನು ಅವರ ಸತಿಯಾಗಲಿ, ಅವರು ಬುದ್ಧ ಗೌತಮರಾದಾಗ ನಾನು ಅವರ ಅರ್ಹತ ಶಿಷ್ಯಳಾಗಲಿ. ಬುದ್ಧ ದೀಪಂಕರನಿಗೆ ರಾಜಕುಮಾರಿಯ ನಿರ್ಧಾರವೂ ಅರಿವಿಗೆ ಬಂದು, ಅವಳ ಗುರಿ ಮುಟ್ಟಲೆಂದು ಹರಸಿದನು.

ಬುದ್ಧ ದೀಪಂಕರನ ಭವಿಷ್ಯವಾಣಿಯನ್ನು ಕೇಳಿಸಿಕೊಂಡ ಅಲ್ಲಿದ್ದ ಮಾನವರೂ, ದೇವತೆಗಳೂ ಸಂತೋಷದಿಂದ ಕುಣಿದಾಡಿದರು. ಅಲ್ಲಿದ್ದ ಬಹಳಷ್ಟು ಜನ ಸುಮೇಧನ ಮೇಲಿನ ಅಪಾರ ಗೌರವದಿಂದಾಗಿ ಹೀಗೆ ನಿರ್ಧರಿಸಿದರು : "ನಾನು ನಿಬ್ಬಾಣವನ್ನು ಈಗ ಪಡೆಯದಿದ್ದಲ್ಲಿ, ಮುಂದೆ ಬುದ್ಧ ಗೌತಮನ ಅಡಿಯಲ್ಲಾದರೂ ನನಗೆ ಮುಕ್ತಿ ಸಿಗಲಿ" ಹೇಗೆ ಒಬ್ಬ ವ್ಯಕ್ತಿ ನದಿಯ ಇನ್ನೊಂದು ತೀರವನ್ನು ನೇರವಾಗಿ ದಾಟಿ ಮುಟ್ಟಲು ವಿಫಲವಾಗುತ್ತಾ ಅವನು ನಂತರದಲ್ಲಿ ನದಿ ಹರಿದಂತೆ ಹರಿದು ಆಚೆ ದಡ ಮುಟ್ಟಿಯೇ ತೀರುವಂತೆ ಬುದ್ಧ ಗೌತಮನ ಕಾಲಕ್ಕಾದರೂ ನಿಬ್ಬಾಣ ಪಡೆಯುವ ಆಚಲ ನಿರ್ಧಾರ ಮಾಡಿದರು. ಯಾವ ಜಾಗದಲ್ಲಿ ಈ ಮಹಾ ಘಟನೆ ನಡೆಯಿತೋ ಅಲ್ಲಿ ಭಕ್ತರು ಚೆಲ್ಲಿದ ಹೂವುಗಳಿಂದ ಪುಷ್ಪಾವೃತವಾಯಿತು.





ಬುದ್ಧ, ಆತನ ಅರ್ಹತ ಶಿಷ್ಯರು ಮತ್ತು ಜನರು ಆ ಜಾಗವನ್ನು ಬಿಟ್ಟು ಹೋದಮೇಲೆ, ಸುಮೇಧನು ವಿವಿಧ ಬಣ್ಣದ ಹೂವುಗಳು ರಾಶಿಯಾಗಿ ಬಿದ್ದಿದ್ದ ಜಾಗಕ್ಕೆ ಹೋದನು. ಅಲ್ಲಿ ಧ್ಯಾನಮುದ್ರೆಯಲ್ಲಿ ಕುಳಿತು ಬುದ್ಧ ವಿಕಸನಕ್ಕೆ ಅಗತ್ಯವಾದ ಎಲ್ಲ ಸಂಗತಿಗಳ ಮೇಲೆ ಚಿಂತನೆ ಮಾಡತೊಡಗಿದ. ತನ್ನನ್ನು ತಾನೇ ಕೇಳಿಕೊಂಡ. "ಸಮ್ಮಾ ಸಂಬುದ್ಧನಾಗಲು ಯಾವ ಉನ್ನತೋನ್ನತ ಗುಣಗಳು, ಆಧ್ಯಾತ್ಮಿಕ ಪಾರಮಿತಗಳು ಬೇಕು?" ಈ ರೀತಿಯ ಗಹನವಾದ ಚಿಂತನೆ ಮಾಡುತ್ತಿರುವಾಗ ಹಲವಾರು ಅಸಾಧಾರಣ ಘಟನೆಗಳು ಬೇರೆ ಬೇರೆ ನೆಲೆಗಳಲ್ಲಿ ನಡೆಯುತ್ತಿರುವುದನ್ನು ತನ್ನ ಅತೀಂದ್ರಿಯ ಶಕ್ತಿಯಿಂದ ತಾನು ಮುಂದೊಂದು ದಿನ ಬುದ್ಧ ದೀಪಂಕರ ಹರಸಿದಂತೆ ಮತ್ತು ಭವಿಷ್ಯ ನುಡಿದಂತೆ ಬೋಧಿಸತ್ತನಾಗಿ ಮುಂದೆ ಸಮ್ಮಾಸಂಬುದ್ಧ ಗೌತಮ ಬುದ್ಧನಾಗುವುದನ್ನು ಕಂಡನು.

## ಪಾರಮಿಗಳ ಮೇಲೆ ಧ್ಯಾನ

ಗುರಿ ಸಾಧನೆಗೆ ಅಗತ್ಯವಾದ ಪಾರಮಿಗಳ ಮೇಲೆ ಏಕಾಗ್ರ ಚಿತ್ತನಾಗುತ್ತಿದ್ದಂತೆ ಹತ್ತು ಪಾರಮಿಗಳು ಸ್ಪಷ್ಟ ನಿದರ್ಶನಗಳೊಂದಿಗೆ ಅವನ ಅರಿವಿಗೆ ಬಂದವು. ತನಗೆ ತಾನೆ ಹೇಳಿಕೊಂಡ: 'ಸುಮೇಧ, ನೀನು ಈಗ ಸಮ್ಮಾಸಂಬುದ್ಧನಾಗಲು ಹೊರಟಿರುವೆ ಯಾದ್ದರಿಂದ ಈ ಪಾರಮಿಗಳ ಲಕ್ಷಣಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಬೇಕು'. ಹೀಗೆ ಹೇಳಿಕೊಂಡ ಮೇಲೆ ಹಿಂದಿನ ಬೋಧಿಸತ್ತರು ತಮ್ಮ ಉದ್ದೇಶಗಳ ಸಾಕ್ಷಾತ್ಕಾರಕ್ಕಾಗಿ ನಡೆದುಕೊಂಡ ರೀತಿಯನ್ನು ನೆನೆದನು.

ಮತ್ತೆ ತನಗೆ ತಾನೇ ಹೇಳಿಕೊಂಡನು. "ಹಿಂದಿನ ಬೋಧಿಸತ್ತರಂತೆ ನೀನು ಕೂಡ ದಾನ ಪಾರಮಿಯೊಂದಿಗೆ ಪ್ರಾರಂಭಿಸಬೇಕು. ಹೇಗೆ ಪೂರ್ತಿಯಾಗಿ ಮಗುಚಿದ ಬಟ್ಟಲಿನಲ್ಲಿನ ಎಲ್ಲ ನೀರು ಒಂದು ತೊಟ್ಟು ಬಿಡದಂತೆ, ಇಟ್ಟುಕೊಳ್ಳದಂತೆ ಇರುತ್ತದೋ ಹಾಗೆಯೇ ನೀನೂ ಸಹ ಐಹಿಕವಾದ ಎಲ್ಲ ವಸ್ತುಗಳನ್ನು ಯಾರು ಕೇಳುತ್ತಾರೊ ಅವರಿಗೆ ಕೊಟ್ಟುಬಿಡಬೇಕು. ಇಷ್ಟೇ ಅಲ್ಲ, ನಿನ್ನ ಅಂಗಾಗಳನ್ನು ಮತ್ತು ಜೀವವನ್ನೇ ಕೊಡಬೇಕು. ದಾನ ಪಾರಮಿಯನ್ನು ಪರಿಪೂರ್ಣವಗಿ ಪಾಲಿಸುವ ಸಲುವಾಗಿ ಹೀಗೆ ಮಾಡಿದಾಗ ಮಾತ್ರವೇ ನಿನ್ನ ಗುರಿಯನ್ನು ಮುಟ್ಟಲು ಸಾಧ್ಯ. ಹಿಂದಿನ ಬೋಧಿಸತ್ತರೆಲ್ಲ ಮಾಡಿದ್ದೇ ಹೀಗೆ.

ಹೀಗೆ ಧ್ಯಾನಿಸುತ್ತಲೇ ಇರುವಾಗ ಇನ್ನೊಂದು ಪಾರಮಿಯ ಅರಿವಾಯಿತು. ಅದೇ ಶೀಲ ಪಾರಮಿ. ತನಗೆ ತಾನೇ ನೆನಪು ಮಾಡಿಕೊಂಡ "ಹೇಗೆ ಚಾಮರಿಮೃಗ (ಯಾಕ್)ವು ತನ್ನ ಪ್ರಾಣವನ್ನು ಕೊಟ್ಟಾದರೂ ಬಾಲವನ್ನು ಉಳಿಸಿಕೊಳ್ಳುತ್ತದೋ ಹಾಗೆಯೇ ನೀನು ಶಿಲಗಳನ್ನು ಉಳಿಸಿಕೊಳ್ಳಬೇಕು.

ಆಮೇಲೆ ಅವನು ಯೋಚಿಸಿದ. "ನೀನು ನೇಕ್ಖಮ್ಮ ಪಾರಮಿ (ತ್ಯಾಗ)ಯನ್ನು ಸಿದ್ಧಿಸಿಕೊಳ್ಳಬೇಕು. ಹೇಗೆ ಒಬ್ಬನು ಬಂಧಿಖಾನೆಯಲ್ಲಿದ್ದು ಅದಕ್ಕೆ ಅಂಟಿಕೊಳ್ಳದಂತೆ ಸ್ವತಂತ್ರನಾಗಲು ಇಚ್ಛಿಸುತ್ತಾನೊ, ನೀನು ಹಾಗೆಯೇ ಸಂಸಾರದಿಂದ ವಿಮುಕ್ತಿಯನ್ನು

ಪಡೆಯಬೇಕು. ಆನಂದವನ್ನೀಯುವ ದಿವ್ಯಸ್ಥಿತಿಗಳೂ ಸೇರಿದಂತೆ ನೀನು ಯಾವುದಕ್ಕೂ ಅಂಟಿಕೊಂಡಿರಬಾರದು.

ಇನ್ನೂ ಮುಂದೆ ಧ್ಯಾನಿಸುತ್ತಾ ಪ್ರಜ್ಞಾ ಪಾರಮಿಯ ಬಗ್ಗೆ ಅರಿವು ಆಯಿತು. ತನಗೆ ತಾನೇ ಹೇಳಿಕೊಂಡ, "ಯಾವುದೇ ತಾರತಮ್ಯವನೆಣಿಸದೆ ಒಬ್ಬ ಭಿಕ್ಖು ಎಲ್ಲರ ಮನೆಯ ಭಿಕ್ಷೆಯನ್ನು ಸಂಗ್ರಹಿಸುವನೋ, ಹಾಗೆಯೇ ನೀನೂ ಸಹ ಯಾರಿಂದ ಕಲಿಯುವೆಯೋ ಅವರ ಅಂತಸ್ತನ್ನು ಪರಿಗಣಿಸದೆ ವಿದ್ಯೆಯನ್ನು, ಜ್ಞಾನವನ್ನು ಎಲ್ಲ ಮೂಲಗಳಿಂದ ಪಡೆಯುವುದು.

ಅದೇ ಚಿಂತನೆಯಲ್ಲಿ ಯೋಚಿಸುತ್ತಾ "ನೀನು ವೀರ್ಯ ಪಾರಮಿ (ಪ್ರಯತ್ನಶೀಲತೆ) ಯನ್ನು ಅನುಸರಿಸುವುದು. ಹೇಗೆ ಸಿಂಹವು ಎಲ್ಲ ಸಂದರ್ಭಗಳಲ್ಲಿಯೂ ಜೋರಾಗಿ ಚೈತನ್ಯದಾಯಕವಾಗಿರುತ್ತದೋ ಹಾಗೆಯೇ ನೀನು ಬಾಗದೆ ಸದಾ ಹುರುಪು ಇರುವವನಾಗಬೇಕು. ಮುಂದಿನ ಎಲ್ಲ ಅಸ್ತಿತ್ವಗಳಲ್ಲೂ ಸರಿಯಾಗಿ ಶ್ರಮಿಸುತ್ತಾ ಪ್ರಯತ್ನಶೀಲವಾದ ಈ ಪಾರಮಿಯನ್ನು ಅನುಷ್ಠಾನಗೊಳಿಸಬೇಕು.

"ಮುಂದೆ ನೀನು ಸಹನೆ ಶಾಂತಿಯ (ಖಂತಿ ಪಾರಮಿ)ನ್ನೂ ಸಾಧಿಸಬೇಕು. ಹೇಗೆ ಭೂಮಿಯಲ್ಲಿ ಜನರು ಎಸೆಯುವ ಶುದ್ಧ ಅಶುದ್ಧ ವಸ್ತುಗಳನ್ನು ಯಾವುದೇ ಬೇಸರವಿಲ್ಲದೆ ಸಹಿಸಿಕೊಳ್ಳುತ್ತದೋ ಹಾಗೆಯೇ ನೀನೂ ಭೂಮಿಯಂತೆ ವಿಚಲಿತನಾಗದಂತೆ ಇರಬೇಕು. ಜನ ನಿನ್ನನ್ನು ತೆಗಳಲಿ, ಹೊಗಳಲಿ, ಗೌರವ ಕೊಡಲಿ ಅಥವಾ ಕೊಡದಿರಲಿ ಅವರೆಡನ್ನೂ ಸಹಿಸಿಕೊಳ್ಳುತ್ತಾ ಶಾಂತಿ ಸಹನೆಗಳನ್ನು ಸಿದ್ಧಿಸಿಕೊಳ್ಳಬೇಕು".

ಮುಂದುವರೆದು ಮತ್ತೂ ಯೋಚಿಸಿದ "ಸತ್ಯ ಪಾರಮಿಯನ್ನು ನೀನು ಪರಿಪಾಲಿಸಲೇಬೇಕು. ಹೇಗೆ ಹೊಳೆಯುವ ಶುಕ್ರ ಗ್ರಹವು ತನ್ನ ಸ್ಥಾನವನ್ನು ಯಾವುದೇ ಋತುಮಾನದಲ್ಲೂ ಬದಲಿಸದೆ ಒಂದೇಕಡೆ ಇರುತ್ತದೋ, ಹಾಗೆ ನೀನು ಸತ್ಯದ ದಾರಿಯನ್ನು ಬಿಟ್ಟು ಹೋಗಬಾರದು. ಒಂದುವೇಳೆ ಸಿಡಿಲೇ ನಿನ್ನ ತಲೆಯ ಮೇಲೆ ಬಡಿದರೂ, ನಿನ್ನ ಸ್ವಹಿತಾಸಕ್ತಿಗಾಗಿ ರಕ್ಷಿಸಿಕೊಳ್ಳಲು ಸುಳ್ಳು ಹೇಳಬಾರದು. ಸತ್ಯದೊಂದಿಗೆಯೇ ಇದ್ದು ಸತ್ಯ ಸಾಧಕನಾಗು".

ಮತ್ತೆ ಚಿಂತನೆ ಮಾಡುತ್ತಾ "ನೀನು ಅಧಿಟ್ಠಾಣ ಪಾರಮಿಯನ್ನು (ದೃಢತೆ) ನಡೆಸಿಕೊಂಡು ಹೋಗಬೇಕು. ಹೇಗೆ ಪರ್ವತವೊಂದು ಎಲ್ಲ ದಿಕ್ಕುಗಳಿಂದಲೂ ಬೀಸುವ ಬಿರುಗಾಳಿಯನ್ನು ಸಹಿಸಿಕೊಂಡು ಅಚಲವಾಗಿರುತ್ತದೋ ಹಾಗೆಯೇ ನೀನು ಈ ಅಧಿಟ್ಠಾಣ ಪಾರಮಿಯನ್ನು ಸಾಧಿಸಿಕೊಂಡು ಹೋಗಬೇಕು. ಒಮ್ಮೆ ನೀನು ಕಂಡುಕೊಂಡ ಕಾರಣ ಅಥವಾ ಕ್ರಿಯೆ ಸರಿ ಇದೆ ಅನ್ನುವುದಾದರೆ ಅದಕ್ಕೆ ಬದ್ಧನಾಗಿರು, ಆ ಬಗ್ಗೆ ದೃಢತೆ ಇರಲಿ ಮತ್ತು ಅಲ್ಲಿಂದ ಬದಲಾಗಬೇಡ. ಈ ರೀತಿಯಾಗಿ ದೃಢ ನಿರ್ಧಾರದ ಪಾರಮಿಯಲ್ಲಿ ಮುಂದುವರಿ".





ಸುಮೇಧನು ಮತ್ತೆ ಹೇಳಿಕೊಂಡ, "ನೀನು ಮೈತ್ರಿ ಪಾರಮಿ (ವಿಶ್ವಪ್ರೇಮ)ಯಲ್ಲಿ ಇರಬೇಕು. ಹೇಗೆ ನೀರು–ಅವನು ಸಂತನಾಗಲಿ, ಪಾಪಿಯಾಗಲಿ ಅವರಿಗೆ ತಂಪನ್ನೇ ಕೊಡುತ್ತದೋ, ಅದೇರೀತಿ ನೀನು ಎಲ್ಲರ ಒಳಿತನ್ನು ಬೆಳೆಸಬೇಕು. ನೀರು ಹೇಗೆ ಭೂಮಿಯನ್ನು ಹಸಿರಾಗಿಸಿ ಸಂಪತ್‌ಭರಿತವಾಗಿ ಮಾಡುತ್ತದೋ ಹಾಗೆಯೇ ನೀನು ಮೈತ್ರಿ ಭಾವವನ್ನು ಹರಿಸಿ ಎಲ್ಲರಿಗೂ ಉಪಕಾರಿಯಾಗಬೇಕು. ಈ ವಿಶ್ವಪ್ರೇಮದ ಪಾರಮಿಯನ್ನು ಸಾಧನೆಯಲ್ಲಿಟ್ಟುಕೊಳ್ಳಬೇಕು.

ಮತ್ತೆ ತನಗೆ ತಾನೇ ಹೇಳಿಕೊಳ್ಳುತ್ತಾ "ಈ ಎಲ್ಲ ಪಾರಮಿಗಳ ಬೆಂಬಲದಿಂದಲೇ ಉಪೇಕ್ಖಾ ಪಾರಮಿಯನ್ನು (ಸಮಚಿತ್ತತೆ) ಸಿದ್ಧಿಸಿಕೊಳ್ಳಬೇಕು. ಹೇಗೆ ಭೂಮಾತೆಯು ತನ್ನ ಮೇಲೆ ಏನೇ ಬೀಳಲಿ, ಅದು ಶುದ್ಧವಾಗಿರಲಿ, ಅಶುದ್ಧವಾಗಿರಲಿ, ಗಲೀಜಾಗಿರಲಿ, ಬೆಲೆಬಾಳುವವಂಥದ್ದಾಗಿರಲಿ ಎಲ್ಲವನ್ನೂ ಉಪೇಕ್ಷೆಯಿಂದ ಅಂದರೆ ಸಮತೆಯಿಂದ ಸ್ವೀಕರಿಸುತ್ತಾಳೋ ಹಾಗೆಯೇ ನೀನು ಯಾವಾಗಲೂ ಸಮಚಿತ್ತನಾಗಿರು. ನೋವಿರಲಿ–ನಲಿವಿರಲಿ, ಈ ಎಲ್ಲ ಸಂದರ್ಭಗಳಲ್ಲೂ ಮಾನಸಿಕ ಸ್ಥಿರತೆಯನ್ನು ಕಾಪಾಡಿಕೊ. ಈ ಪ್ರಕಾರವಾಗಿ ನೀನು ಎಲ್ಲ ಪಾರಮಿಗಳನ್ನು ಸಿದ್ಧಿಸಿಕೊಳ್ಳಬೇಕು.

ಬೋಧಿಸತ್ತನ ಹಾದಿಯಲ್ಲಿ ವಿಜಯಶಾಲಿಯಾಗಿ ಮುಂದುವರಿಯಲು ಮತ್ತು ಬುದ್ಧತ್ವದ ಪ್ರಾಪ್ತಿಗಾಗಿ ಉತ್ತಮ ಗುಣಗಳ ಸಂಸ್ಕಾರಕ್ಕಾಗಿ ದಶ ಪಾರಮಿಗಳ ಅನುಷ್ಠಾನದ ಹೊರತಾಗಿ ಬೇರೆ ದಾರಿ ಇಲ್ಲ. ಈ ದಶಪಾರಮಿಗಳನ್ನು ಮೂರುಪಟ್ಟು ಮಾಡಿದಾಗಲೇ ಬುದ್ಧತ್ವ ಪ್ರಾಪ್ತಿಯಾಗುವುದು. ಆದ್ದರಿಂದ ಬೋಧಿಸತ್ತನ ಹಾದಿಯಲ್ಲಿಯೇ ಸಾಗಲು ಈ ಪಾರಮಿಗಳನ್ನು ನಾಲ್ಕು ಅಸಂಖೆಯ್ಯ ಮತ್ತು ಲಕ್ಷ ಕಲ್ಪಗಳ ಕಾಲ ಅನುಸರಿಸುತ್ತೇನೆ ಎಂದುಕೊಂಡು ಗಟ್ಟಿ ಮನಸ್ಸು ಮಾಡಿ, ಅಚಲ ನಿರ್ಧಾರದೊಂದಿಗೆ ಹಿಮಾಲಯದಲ್ಲಿನ ತನ್ನ ಗುಹೆಗೆ ಆಕಾಶ ಮಾರ್ಗವಾಗಿ ಹೋದನು.

# ಇಪ್ಪತ್ತೆಂಟು ಬುದ್ಧರಿಗೆ ನಮನಗಳು

1. **ವಂದೇ ತಣ್ಹಂಕರಂ ಬುದ್ಧಂ**
**ವಂದೇ ಮೇಧಂಕರಂ ಮುನಿಂ**
**ಸರಣಂಕರಂ ಮುನಿಂ ವಂದೇ**
**ದೀಪಂಕರಂ ಜಿನಂ ನಮೇ**

ನಮನಗಳು ತನ್ಹಂಕರ ಬುದ್ಧನಿಗೆ
ನಮನಗಳು ಮೇಧಂಕರ ಮುನಿಗೆ
ಮುನಿ ಸರಣಂಕರನಿಗೆ ನಮನಗಳು
ಜಿನನಾದ ದೀಪಂಕರನಿಗೆ ನನ್ನ ನಮನಗಳು

2. **ವಂದೇ ಕೊಂಡಞ್ಞ ಸತ್ಥಾರಂ**
**ವಂದೇ ಮಂಗಲ ನಾಯಕಂ**
**ವಂದೇ ಸುಮನ ಸಂಬುದ್ಧಂ**
**ವಂದೇ ರೇವತ ನಾಯಕಂ**

ನಮನಗಳು ಶಾಸ್ತನಾದ ಕೊಂಡಞ್ಞನಿಗೆ
ನಮನಗಳು ನಾಯಕನಾದ ಮಂಗಲನಿಗೆ
ನಮನಗಳು ಸಂಬುದ್ಧ ಸುಮನನಿಗೆ
ನನ್ನ ನಮನಗಳು ನಾಯಕನಾದ ರೇವತನಿಗೆ

3. **ವಂದೇ ಸೋಭಿತ ಸಂಬುದ್ಧಂ**
**ಅನೋಮದಸ್ಸಿ ಮುನಿಂ ನಮೇ**
**ವಂದೇ ಪದುಮ ಸಂಬುದ್ಧಂ**
**ವಂದೇ ನಾರದ ನಾಯಕಂ**

ನಮನಗಳು ಸಂಬುದ್ಧನಾದ ಸೋಭಿತನಿಗೆ
ಮುನಿ ಅನುಮೋದಸ್ಸಿಗೆ ನಮನಗಳು
ನಮನಗಳು ಸಂಬುದ್ಧ ಪದುಮನಿಗೆ
ನನ್ನ ನಮನಗಳು ನಾಯಕನಾದ ನಾರದನಿಗೆ

4. **ಪದುಮುತ್ತರಂ ಮುನಿಂ ವಂದೇ**
**ವಂದೇ ಸುಮೇಧ ನಾಯಕಂ**
**ವಂದೇ ಸುಜಾತ ಸಂಬುದ್ಧಂ**
**ಪಿಯದಸ್ಸಿ ಮುನಿಂ ನಮೇ**

ಮುನಿ ಪದುಮುತ್ತರನಿಗೆ ನಮನಗಳು
ನಮನಗಳು ನಾಯಕನಾದ ಸುಮೇಧನಿಗೆ
ನಮನಗಳು ಸಂಬುದ್ಧ ಸುಜಾತನಿಗೆ
ಮುನಿ ಪಿಯದಸ್ಸಿಗೆ ನನ್ನ ನಮನಗಳು





5. **ಅತ್ಥದಸ್ಸೀ ಮುನಿಂ ವಂದೇ**
**ಧಮ್ಮದಸ್ಸೀ ಜಿನಂ ನಮೇ**
**ವಂದೇ ಸಿದ್ಧತ್ಥ ಸತ್ಥಾರಂ**
**ವಂದೇ ತಿಸ್ಸ ಮಹಾಮುನಿಂ**

ಮುನಿ ಅತ್ಥದಸ್ಸಿಗೆ ನಮನಗಳು
ಜಿನನಾದ ಧಮ್ಮದಸ್ಸಿಗೆ ನಮನಗಳು
ನಮನಗಳು ಶಾಸ್ತನಾದ ಸಿದ್ಧತ್ಥನಿಗೆ
ನನ್ನ ನಮನಗಳು ಮಹಾಮುನಿ ತಿಸ್ಸನಿಗೆ

6. **ವಂದೇ ಪುಸ್ಸ ಮಹಾವೀರಂ**
**ವಂದೇ ವಿಪಸ್ಸೀ ನಾಯಕಂ**
**ಸಿಖಿ ಮಹಾಮುನಿಂ ವಂದೇ**
**ವಂದೇ ವೆಸ್ಸಭೂ ನಾಯಕಂ**

ನಮನಗಳು ಮಹಾವೀರನಾದ ಪುಸ್ಸನಿಗೆ
ನಮನಗಳು ನಾಯಕನಾದ ವಿಪಸ್ಸಿಗೆ
ಮಹಾ ಮುನಿಯಾದ ಸಿಖಿಗೆ ನನ್ನ ನಮನಗಳು
ನಮನಗಳು ನಾಯಕನಾದ ವೆಸ್ಸಭೂವಿಗೆ

7. **ಕಕುಸಂಧಂ ಮುನಿಂ ವಂದೇ**
**ವಂದೇ ಕೋನಾಗಮನ ನಾಯಕಂ**
**ಕಸ್ಸಪ್ಪಂ ಸುಗತಂ ವಂದೇ**
**ವಂದೇ ಗೋತಮ ನಾಯಕಂ**

ಮುನಿ ಕಕುಸಂಧನಿಗೆ ನನ್ನ ನಮನಗಳು
ನಮನಗಳು ನಾಯಕನಾದ ಕೋನಾಗಮನಿಗೆ
ಸುಗತನಾದ ಕಸ್ಸಪನಿಗೆ ನನ್ನ ನಮನಗಳು
ನಮನಗಳು ನಾಯಕನಾದ ಗೋತಮನಿಗೆ

8. **ಅಟ್ಠವೀಸತಿ ಮೇ ಬುದ್ಧಾ**
**ನಿಬ್ಬಾಣಮತ ದಾಯಕಾ**
**ನಮಾಮಿ ಸಿರಸಾ ನಿಚ್ಚಂ**
**ತೇ ಮಂ ರಕ್ಖನ್ತು ಸಬ್ಬದಾ**

ಈ ಇಪ್ಪತ್ತೆಂಟು ಬುದ್ಧರುಗಳು
ನಿರ್ವಾಣ ಅಮೃತವನ್ನು ಕೊಡುವಂಥವರು
ದಿನವೂ ನಾನು ಶಿರಸಾ ಸಮಿಸುವೆನು
ಅವರು ನನ್ನನ್ನು ಯಾವಾಗಲೂ ರಕ್ಷಿಸಲಿ !

# ಎಲ್ಲ ಬುದ್ಧರುಗಳ ಗುಣಗಳು

| ಕ್ರ. ಸಂ. | ಬುದ್ಧರ ಹೆಸರುಗಳು | ಹುಟ್ಟಿದ ಸ್ಥಳ | ಪೋಷಕರು | | ಪತ್ನಿ | ಮಗ | ಪ್ರಧಾನ ಶಿಷ್ಯರು | | ಪ್ರಧಾನ ಸೇವಕ | ಬೋಧಿವೃಕ್ಷ | ಗೃಹಸ್ಥ ಜೀವನದ ವರ್ಷಗಳು | ಒಟ್ಟು ಆಯುಸ್ಸು (ವರ್ಷಗಳಲ್ಲಿ) |
|---|---|---|---|---|---|---|---|---|---|---|---|---|
| | | | ತಂದೆ | ತಾಯಿ | | | ಪುರುಷ | ಸ್ತ್ರೀ | | | | |
| 1. | ದೀಪಂಕರ | ರಮ್ಮವತಿ | ರಾಜ ಸುದೇವ | ರಾಣಿ ಸುಮೇಧ | ಪದುಮದೇವಿ | ಉಸಬಕ್ಖಂಧ | ಸುಮಂಗಲ ಮತ್ತು ತಿಸ್ಸಥೇರ | ನಂದ ಮತ್ತು ಸುನಂದ ಥೇರಿ | ಸಾಗತ ಥೇರ | ಪಿಪ್ಫಲ ಮರ | 10,000 | 1,00,000 |
| 2. | ಕೊಂಡನ್ನ | ರಮ್ಮವತಿ | ರಾಜ ಸುನಂದ | ರಾಣಿ ಸುಜಾತ | ರುಚಿ ದೇವಿ | ವಿಜಿತಸೇನ | ಭದ್ಧ ಥೇರ ಸುಭದ್ಧ | ತಿಸ್ಸ ಮತ್ತು ಉಪತಿಸ್ಸ ಥೇರಿ | ಅನುರುದ್ಧ ಥೇರ | ಸಾಲಕಲ್ಯಾಣಿ ಮರ | 10,000 | 1,00,000 |
| 3. | ಮಂಗಲ | ಉತ್ತರ | ರಾಜ ಉತ್ತರ | ರಾಣಿ ಉತ್ತರ | ಯಸವತಿ | ಸೀವಲ | ಸುದೇವ ಮತ್ತು ಧರ್ಮಸೇನ ಥೇರ | ಸೀವಲ ಮತ್ತು ಅಶೋಕಾ ಥೇರಿ | ಪಾಲಿತ ಥೇರ | ನಾಗ ಮರ | 9,000 | 90,000 |
| 4. | ಸುಮನ | ಮೇಖಲ | ರಾಜ ಸುಧತ್ತ | ರಾಣಿ ಸಿರಿಮ | ವಾತಂಸಿಕ | ಅನುಪಮ | ಸರನ ಮತ್ತು ಭವಿತತ್ತಾ ಥೇರ | ಸೋನಾ ಮತ್ತು ಉಪಸೋಣ ಥೇರ | ಉದೇನ ಥೇರ | ನಾಗ ಮರ | 9,000 | 90,000 |
| 5. | ರೇವತ | ಸುಧನ್ನ | ರಾಜ ವಿಪುಲ್ಲ | ರಾಣಿ ವಿಪುಲಾ | ಸುದಸ್ಸನ | ವರುಣ | ವರುಣ ಮತ್ತು ಬ್ರಹ್ಮದೇವ ಥೇರ | ಬುದ್ದ ಮತ್ತು ಸುಬುದ್ಧಾ ಥೇರಿ | ಸಂಭವ ಥೇರ | ನಾಗ ಮರ | 6,000 | 60,000 |
| 6. | ಸೋಭಿತ | ಸುಧಮ್ಮ | ರಾಜ ಸುಧಮ್ಮ | ರಾಣಿ ಸುಧಮ್ಮಾ | ಮನಿಲ | ಸೀಹ | ಅಸಮ ಸುನೇತ್ತ ಥೇರ | ನಕುಲ ಮತ್ತು ಸುಜಾತ ಥೇರಿ | ಅನೋಮ ಥೇರ | ನಾಗ ಮರ | 9,000 | 90,000 |
| 7. | ಅನೋಮದಸ್ಸಿ | ಚಂದವತಿ | ರಾಜ ಯಸವ | ರಾಣಿ ಯಶೋಧರ | ಸಿರಿಮಾದೇವಿ | ಉಪವನ | ನಿಸಬ್ಬ ಮತ್ತು ಅನೋಮ ಥೇರ | ಸುಂದರಿ ಮತ್ತು ಸಮನಾ ಥೇರಿ | ವರುನ ಥೇರ | ಅಜ್ಜುನ ಮರ | 10,000 | 1,00,000 |
| 8. | ಪದುಮ | ಚಂಪಕ | ರಾಜ ಅಸಮ | ರಾಣಿ ಅಸಮಾ | ಉತ್ತರ | ರಮ್ಮ | ಸಲ ಮತ್ತು ಉಪಸಲ ಥೇರ | ರಾಧಾ ಮತ್ತು ಸುರಾಧಾ ಥೇರಿ | ವರುನ ಥೇರ | ಮಹಾಸೋಣ ಮರ | 10,000 | 1,00,000 |
| 9. | ನಾರದ | ಧನ್ನವತ್ತಿ | ಚಕ್ರವತಿ ಸುಧೇವ | ರಾಣಿ ಅನೋಮ | ವಿಜಿತಸೇನ | ನಂದುತ್ತರ | ಭದ್ದಸಲ ಮತ್ತು ವಿಜಿತಮಿತ್ತ ಥೇರ | ಉತ್ತರ ಮತ್ತು ಫಗ್ಗುನಿ ಥೇರಿ | ವಸಿಟ್ಟ ಥೇರ | ಮಹಾಸೋಣ ಮರ | 9,000 | 90,000 |
| 10. | ಪದುಮುತ್ತರ | ಹಂಸಮತಿ | ರಾಜ ಆನಂದ | ರಾಣಿ ಸುಜಾತ | ವಸುದತ್ತ | ಉತ್ತರ | ದೇವಲ ಮತ್ತು ಸುಜಾತ ಥೇರ | ಅಮಿತ ಮತ್ತು ಅಸಮ ಥೇರಿ | ಸುಮನ ಥೇರ | ಸಲಲ ಮರ | 10,000 | 1,00,000 |
| 11. | ಸುಮೇಧ | ಸುದಸ್ಸನ | ರಾಜ ಸುದತ್ತ | ರಾಣಿ ಸುದತ್ತ | ಸುಮ | ಪುನಬ್ಬಸು | ಸರಣ ಮತ್ತು ಸಬ್ಬಕಾ ಥೇರ | ರಮಾ ಮತ್ತು ಸುರಮಾ ಥೇರಿ | ಸಾಗರ ಥೇರ | ಮಹಾನಿಪ ಮರ | 9,000 | 90,000 |
| 12. | ಸುಜಾತ | ಸುಮಂಗಲ | ರಾಜ ಉಗ್ಗತ | ರಾಣಿ ಪಭಾವತಿ | ಸಿರಿನಂದ | ಉಪಸೇನ | ಸುದಸ್ಸನ ಮತ್ತು ಸುದೇವ ಥೇರ | ನಾಗ ಮತ್ತು ನಾಗಸಮಲಾ ಥೇರಿ | ನಾರದ ಥೇರ | ಮಹಾವೇಲು | 9,000 | 90,000 |





| | | | | | | | | | | | | |
|---|---|---|---|---|---|---|---|---|---|---|---|---|
| 13. | ಪಿಯದಸ್ಸಿ | ಸುಧನ್ನವತಿ | ರಾಜ ಸುದತ್ತ | ರಾಣಿ ಚಂದಾ | ವಿಮಲ | ಕಂಚನವೇಲ | ಪಲಿತ ಮತ್ತು ಸಬ್ಬದಸ್ಸಿ ಥೇರ | ಸುಜಾತ ಮತ್ತು ಧಮದಿನ್ನಾ ಥೇರಿ | ಸೋಭಿತ ಥೇರ | ಕಕುಧ ಮರ | 9,000 | 90,000 |
| 14. | ಅಟ್ಟದಸ್ಸಿ | ಸೋಭನ | ರಾಜ ಸಾಗರ | ರಾಣಿ ಸುದಸ್ಸನಾ | ವಿಸಾಖ | ಸೇಲ | ಸಂತ ಮತ್ತು ಉಪಸಂತ ಥೇರ | ಧಮ್ಮ ಮತ್ತು ಸುಧಮ್ಮಾ ಥೇರ | ಅಭಯ ಥೇರ | ಚಂಪಕ ಮರ | 9,000 | 1,00,000 |
| 15. | ದಮ್ಮದಸ್ಸಿ | ಸರಣ | ರಾಜ ಸರಣ | ರಾಣಿ ಸುನಂದ | ವಿಚಿಕೋಲಿ | ಪುನ್ನವದ್ಧನ | ಪದುಮ ಮತ್ತು ಪುಸ್ಸಥೇರ | ಖೇಮ ಮತ್ತು ಸಚ್ಚನಾಮ ಥೇರಿ | ಸುನಿತ್ತ ಥೇರ | ಬಿಂಬಿಜಾಲ | 8,000 | 1,00,000 |
| 16. | ಸಿದ್ಧತ್ಥ | ವೇಭಾರ | ರಾಜ ಉದೇನ | ರಾಣಿ ಸುಫಸ್ಸ | ಸೋಮನಸ್ಸಾ | ಅನುಪಮ | ಸಂಬಲ ಮತ್ತು ಸುಮಿತ ಥೇರ | ಸೀವಲ ಮತ್ತು ಸುರಮಾಥೇರಿ | ರೇವತ ಥೇರ | ಕಣಿಕಾರ ಮರ | 10,000 | 1,00,000 |
| 17. | ತಿಸ್ಸ | ಖೆಮಕ | ರಾಜ ಜನಸಂಧ | ರಾಣಿ ಪದುಮಾ | ಸುಬದ್ಧ | ಆನಂದ | ಬ್ರಹ್ಮದೇವ ಮತ್ತು ಉದಯ ಥೇರ | ಫುಸ್ಸಾ ಮತ್ತು ಸುದತ್ತಾ ಥೇರಿ | ಸಮಂಗ ಥೇರ | ಅಸನ | 7,000 | 1,00,000 |
| 18. | ಫುಸ್ಸ | ಕಾಸಿಕ | ರಾಜ ಜಯಸೇನ | ರಾಣಿ ಸಿರಿಮಾ | ಕಿಸಾಗೊತಮಿ | ಅನುಪಮ | ಸುರಕ್ಖಿತ ಮತ್ತು ಧಮ್ಮಸೇನ ಥೇರ | ಚಾಲಾ ಮತ್ತು ಉಪಚಾಲಾ ಥೇರಿ | ಸಭಿಯ ಥೇರ | ಆಮಂದ | 9,000 | 90,000 |
| 19. | ವಿಪಸ್ಸಿ | ಬಂಧುಮತಿ | ರಾಜ ಬಂಧುಮ | ರಾಣಿ ಬಂಧುಮತಿ | ಸುದಸ್ಸನಾ | ಸಮವತ್ತಕ್ಕಂಧ | ಖಂದ ಮತ್ತು ತಿಸ್ಸಥೇರ | ಚಂದ ಮತ್ತು ಚಂಧಮಿತ್ತಾ ಥೇರಿ | ಅಸೋಕ ಥೇರ | ಪಾತಲಿ | 8,000 | 80,000 |
| 20. | ಸಿಬಿ | ಅರುಣವತಿ | ರಾಜ ಅರುಣ | ರಾಣಿ ಪ್ರಭಾವತಿ | ಸಬ್ಬಕಾಮಾ | ಅತುಲ | ಅಬಿಬ್ಬು ಮತ್ತು ಸಂಭವ | ಸಖಿಲಾ ಮತ್ತು ಪದುಮಾ ಥೇರಿ | ಖೇಮಂಕರ ಥೇರ | ಪುಂಡರೀಕ | 7,000 | 70,000 |
| 21. | ವೆಸ್ಸಭೂ | ಅನೋಮ | ರಾಜ ಸುಪ್ಪತಿತ | ರಾಣಿ ಯಸವತಿ | ಸುಚಿತ್ತಾ | ಸುಪ್ಪಬುದ್ಧ | ಸೋನ ಮತ್ತು ಉತ್ತರ ಥೇರ | ರಾಮಾ ಮತ್ತು ಸಮಾಲಾ ಥೇರಿ | ಉಪಸಂತ ಥೇರ | ಮಹಾಸಾಲ | 6,000 | 60,000 |
| 22. | ಕಕುಸಂಧ | ಖೇಮವತಿ | ಬ್ರಾಹ್ಮಣ ಅಗ್ಗಿದತ್ತ | ವಿಸಾಖ | ರೋಚಿನಿ | ಉತ್ತರ | ವಿದುರ ಮತ್ತು ಸಂಜೀವ ಥೇರ | ಸಾಮಾ ಮತ್ತು ಚಂಪಾ ಥೇರಿ | ಬುದ್ಧಿಜ ಥೇರ | ಸಿರಿಸ | 4,000 | 40,000 |
| 23. | ಕೊಣಾಗಮನ | ಸೋಭವತಿ | ಬ್ರಾಹ್ಮಣ ಯಜ್ಞದತ್ತ | ಉತ್ತರಾ | ರುಚಿಗತ್ತಾ | ಸತ್ತವಾಹ | ಭಿಯೋನ ಮತ್ತು ಉತ್ತರ ಥೇರ | ಸಮುದ್ಧ ಮತ್ತು ಉತ್ತರಾ ಥೇರಿ | ಸೊತ್ತಿಜ ಥೇರ | ಉದಂಬರ | 3,000 | 30,000 |
| 24. | ಕಸ್ಸಪ | ಬಾರಾಣಸಿ | ಬ್ರಾಹ್ಮಣ ಬ್ರಹ್ಮದತ್ತ | ಧಾನವತಿ | ಸುನಂದಾ | ವಿಜಿತಸೇನ | ತಿಸ್ಸ ಮತ್ತು ಭಾರದ್ವಾಜ ಥೇರ | ಅನುಲಾ ಮತ್ತು ಉರುವೇಲಾ ಥೇರಿ | ಸಬ್ಬಮಿತ್ತ ಥೇರ | ನಿಗ್ರೋಧ | 2,000 | 20,000 |
| 25. | ಗೊತಮ | ಕಪಿಲವತ್ತು | ರಾಜ ಸುದ್ಧೋದನ | ರಾಣಿ ಮಾಯಾದೇವಿ | ಯಶೋಧರಾ | ರಾಹುಲ | ಸಾರಿಪುತ್ರ ಮತ್ತು ಮೊಗ್ಗಲ್ಲಾನ ಥೇರ | ಖೇಮ ಮತ್ತು ಉಪ್ಪಲವಣ್ಣ ಥೇರಿ | ಆನಂದ ಥೇರ | ಅಶ್ವತ್ಥ | 29 | 80/100 |

## ಪ್ರಶ್ನೆಗಳು

1. ಯಾವುದು ಬೋಧಿಸತ್ತ ಆದರ್ಶ ? ಯಾರು ಬೋಧಿಸತ್ತ ? ಎಷ್ಟು ರೀತಿಯ ಬೋಧಿಸತ್ತರಿದ್ದಾರೆ.
2. ಬೋಧಿಸತ್ತನು ಬುದ್ಧನಾಗಬೇಕಾದಲ್ಲಿ ಎಷ್ಟು ಪಾರಮಿಗಳನ್ನು ಸಾಧಿಸಿರಬೇಕು ?
3. ಬೋಧಿಸತ್ತ ಸುಮೇಧ ಪಂಡಿತನ ಮೇಲೊಂದು ಪ್ರಬಂಧ ಬರೆಯಿರಿ.
4. ಸುಮೇಧನು ಸಂಸಾರವನ್ನು ಏಕೆ ತೊರೆದ ? ಹೀಗೆ ತೊರೆದ ಮೇಲೆ ಏನು ಮಾಡಿದ?
5. 'ಬುದ್ಧ' ಎಂಬ ಹೆಸರನ್ನು ಕೇಳಿದಾಗ ಸುಮೇಧನ ಪ್ರತಿಕ್ರಿಯೆ ಏನು ?
6. ಸುಮೇಧ ಮತ್ತು ಬುದ್ಧ ದೀಪಂಕರರೊಂದಿಗಿನ ಸಂವಾದವನ್ನು ವಿವರಿಸಿ.
7. ಬೋಧಿಸತ್ತ ಆದರ್ಶವನ್ನು ತಿಪಿಟಕದ ಯಾವ ಭಾಗದಲ್ಲಿ ನೋಡುವಿರಿ ?
8. ಬಹು ಸಂಖ್ಯೆಯ ಬೋಧಿಸತ್ತರ ಸೃಷ್ಟಿ, ಪಾಳಿ ತಿಪಿಟಕಗಳಲ್ಲಿನ ಮೂಲ ಬೋಧನೆಗಳ ಅನುಸಾರವಾಗಿ ಇದೆಯೇ ?
9. ಬುದ್ಧ ದೀಪಂಕರನ ಮಾತನ್ನು ಕೇಳಿ ಅರ್ಹತನಾದ ಮತ್ತು ಆಧ್ಯಾತ್ಮಿಕವಾದ ಹಣ್ಣಾದ ಸುಮೇಧ ಸಮ್ಮಾಸಂಬುದ್ಧತ್ವ ಪಡೆಯಲು ಏಕೆ ಆಶಿಸಿದ ?
10. ಭಗವಾನ್ ಬುದ್ಧನೇ ಹಿಂದೆ ಆಗಿಹೋದ ಬುದ್ಧರ ಬಗ್ಗೆ ಹೇಳಿದ್ದಾನೆ. ಆ ಎಲ್ಲ ಬುದ್ಧರ ಹೆಸರುಗಳನ್ನು ಬರೆಯಿರಿ.
11. ಎಲ್ಲ ಬುದ್ಧರುಗಳ ಬದುಕು ಮತ್ತು ಬೋಧನೆಗಳಲ್ಲಿ ಕಂಡುಬರುವ ಸಮಾನ ಲಕ್ಷಣಗಳೇನು?



## ಅಧ್ಯಾಯ–5

# ಗೌತಮ ಬುದ್ಧನ ಚಾರಿತ್ರಿಕ ಹಿನ್ನೆಲೆ

## (ಹುಟ್ಟಿನಿಂದ ಜ್ಞಾನೋದಯದವರೆಗೆ)

### ಬೋಧಿಸತ್ತ ಸೇತಕೇತು

ಗೌತಮ ಬುದ್ಧ ತನ್ನ ತಕ್ಷಣದ ಹಿಂದಿನ ಜನ್ಮದಲ್ಲಿ ತುಸಿತ ದೇವಲೋಕದ ರಾಜ 'ಸೇತಕೇತು ದೇವರಾಜ'ನಾಗಿ ಜನಿಸಿದನು. ದೇವಲೋಕದ ರಾಜನನ್ನು 'ಸಂತುಸಿತ' ಎಂಬ ಹೆಸರಿನಿಂದಲೂ ಕರೆಯುತ್ತಾರೆ. ದೇವಲೋಕದ ಜೀವಿಗಳು ತಂದೆ–ತಾಯಿಗಳ ಸಂಪರ್ಕದಿಂದ ಹುಟ್ಟಿದವರಲ್ಲ. ತಮ್ಮ ಇಚ್ಛಾನುಸಾರವಾಗಿ ಹಾಗೆಯೇ ಅಂದರೆ ತಾವಾಗಿಯೇ (ಓಪಪಾತಿಕ) ಹುಟ್ಟುವವರು. ಇವರು ದೇವಲೋಕಗಳಲ್ಲಿ ವೇಷ–ಭೂಷಣ, ಪದವಿ, ಅಧಿಕಾರಾಧಿ ಎಲ್ಲ ದಿವ್ಯ ಲಕ್ಷಣಗಳಿಂದ ಸ್ವಯಂ ಆಗಿ ಉದ್ಭವಿಸುವವರು. ಬೋಧಿಸತ್ತ ಸೇತಕೇತುವಿಗೆ ದೇವಲೋಕದ ರಾಜನಿಗೆ ಇರಬೇಕಾದ ಎಲ್ಲ ಹತ್ತು ಗುಣಗಳು ಇದ್ದವು. ಅವು ಯಾವುವೆಂದರೆ :

1. ದೀರ್ಘಾಯು
2. ಸುಂದರ ಹಾಗು ಆರೋಗ್ಯಕರ ಲಕ್ಷಣಗಳುಳ್ಳ ಕಾಯ
3. ಅಧಿಕ ಸಂತೋಷ ಮತ್ತು ಒಳ್ಳೆಯ ಮಾನಸಿಕ ಸ್ಥಿತಿ
4. ಅಪಾರ ಸಂಪತ್ತು ಮತ್ತು ಆಳುಕಾಳು
5. ಅತ್ಯುನ್ನತ ಪ್ರಭುತ್ವ ಮತ್ತು ಅಧಿಕಾರ
6. ಸೂಕ್ಷ್ಮಾತಿ ಸೂಕ್ಷ್ಮ ಇಂದ್ರಿಯ ಗ್ರಹಣ, ಉದಾ : ದೃಷ್ಟಿ
7. ಶ್ರವಣ
8. ವಾಸನೆ
9. ರುಚಿ
10. ಸ್ಪರ್ಶ

ತುಸಿತ ದೇವಲೋಕದ ರಾಜನು ಅನುಭವಿಸಬಹುದಾದ ಎಲ್ಲ ದಿವ್ಯಾನಂದ ಮತ್ತು ಅಧಿಕಾರವನ್ನು ಜೀವಮಾನ ಪೂರ್ತಿ ಸಂತೋಷದಿಂದ ಅನುಭವಿಸಿದ ನಂತರ (ದೇವಲೋಕದ ಜೀವಮಾನವೆಂದರೆ ನಾಲ್ಕು ಸಾವಿರ ದಿವ್ಯ ವರ್ಷಗಳು; ಅದು ಮಾನವ ಜೀವನದ ಎಷ್ಟೋ ಕೋಟಿ ವರ್ಷಗಳಿಗೆ ಸಮ) ತನ್ನ ಜೀವಿತಾವಧಿ ಹತ್ತಿರ ಬರುತ್ತಿದೆ ಎಂದು ಹೇಳುವ ಐದು ಮುನ್ಸೂಚನೆಗಳನ್ನು ಗಮನಿಸಿ ತನ್ನ ಮುಂದಿನ ಮಾನವ ಲೋಕದಲ್ಲಿನ ಅಂತಿಮ ಅಸ್ತಿತ್ವಕ್ಕಾಗಿ ಸಿದ್ಧನಾದ.

ಮೊದಲು ಸಚ್ಚಾರಿತ್ರ್ಯ ಮತ್ತು ಕಾರುಣ್ಯಗಳ ಗಣಿಯಾದ ರಾಣಿ ಮಹಾ ಮಾಯಾದೇವಿಯನ್ನು ತನ್ನ ತಾಯಿಯನ್ನಾಗಿ ಆಯ್ಕೆ ಮಾಡಿಕೊಂಡ. ದಿವ್ಯದೃಷ್ಟಿಯಿಂದ ನೋಡಲು ತನ್ನ ಭವಿಷ್ಯದ ತಾಯಿಗೆ ಐವತ್ತೈದು ವರ್ಷ ನಾಲ್ಕು ತಿಂಗಳು ವಯಸ್ಸಾಗಿದ್ದು, ಬೋಧಿಸತ್ತನಾಗಿ ಆಕೆಯ ಗರ್ಭವನ್ನು ಪ್ರವೇಶಿಸಿದ ಮೇಲೆ ಇನ್ನು ಕೇವಲ ಹತ್ತು ತಿಂಗಳು ಏಳು ದಿನಗಳು ಮಾತ್ರವೇ ಉಳಿಯುವಳೆಂಬುದನ್ನು ಅರಿತ. ಬೋಧಿಸತ್ತನ ತಾಯಿಯಾಗಿ ಆಕೆ ಜೀವಿಸುವುದು ಒಂದು ವಾರ ಮಾತ್ರ ಎಂಬುದನ್ನು ಅರಿತ.

### ಬೋಧಿಸತ್ತನ ಹುಟ್ಟು

ತುಸಿತ ದೇವಲೋಕದ ದೊರೆ ಬೋಧಿಸತ್ತನು ಶಾಕ್ಯ ಕುಲದ ರಾಜ ಶುದ್ಧೋಧನ ಮತ್ತು ರಾಣಿ ಮಹಾ ಮಾಯಾದೇವಿಯರ ಪುತ್ರ ರಾಜಕುಮಾರ ಸಿದ್ಧಾರ್ಥನಾಗಿ ಮಾನವ ಲೋಕದಲ್ಲಿ ಪುನರ್ಜನ್ಮ ತಳೆಯಲು ನಿರ್ಧರಿಸಿದ. ರಾಣಿ ಮಹಾಮಾಯಾ ಕನಸಿನಲ್ಲಿ ಬಿಳಿ ಆನೆಯೊಂದನ್ನು ಕಂಡಳು. ಆ ಕನಸು ಮುಂದೆ ಬೋಧಿಸತ್ತನು ಹುಟ್ಟುವುದರ ಮುನ್ಸೂಚನೆಯಾಗಿತ್ತು.

ಬೋಧಿಸತ್ತನು ಮಾನವ ಲೋಕದಲ್ಲಿ ಹುಟ್ಟಿ ಬಂದುದನ್ನು ತಪ್ಪಾಗಿ ಅರ್ಥೈಸಿ ಬುದ್ಧನು ಅವತಾರ ತಾಳಿದನೆಂದು, ಅವನು ವಿಷ್ಣುವಿನ ಅವತಾರವೆಂದು ಬಿಂಬಿಸಲಾಗಿದೆ. ಆಧ್ಯಾತ್ಮದ ಎಲ್ಲ ಉತ್ತುಂಗಗಳನ್ನು ಯಾರು ಮುಟ್ಟಿರುವರೋ ಅವರೇ ಬುದ್ಧರು. ಭಗವಾನ್ ಬುದ್ಧ ಎಲ್ಲ ದೇವತೆಗಳ ಮತ್ತು ಮಾನವರ ಪರಮ ಗುರು. ಹೀಗಿರಲು ಬುದ್ಧನಿಗೆ ಪುನರ್ಜನ್ಮವೆಂಬುದಾಗಲಿ ಅಥವಾ ಅವತಾರವೆಂಬುದಾಗಲಿ ಇರುವುದಿಲ್ಲ.

### ರಾಣಿ ಮಹಾಮಾಯಾದೇವಿಯ ಕನಸು

ರಾಣಿ ಮಹಾಮಾಯಾದೇವಿಯು ಕನಸಿನಲ್ಲಿ ಅಪೂರ್ವ ಸೌಂದರ್ಯದ ಬಿಳಿ ಸಲಗವು ತನ್ನ ಸೊಂಡಿಲಿನಲ್ಲಿ ಕಮಲದ ಹೂವೊಂದನ್ನು ಹಿಡಿದು ಆಕಾಶದಿಂದ ಇಳಿದು ತನ್ನ ಉದರದೊಳಗೆ ಪ್ರವೇಶಿಸುವುದನ್ನು ಕಂಡಳು. ಈ ಕನಸ್ಸಿನಿಂದ ಅವಳಿಗೆ ಹೇಳತೀರದಷ್ಟು ಆನಂದವಾಯಿತು. ಈ ಸ್ಪಷ್ಟ ಕನಸು ಮನಸ್ಸಿನ ಮೇಲೆ ಅಚ್ಚೊತ್ತಿತ್ತು. ಆನಂದದಿಂದ ಇದನ್ನು ಮಾರನೆ ದಿನ ಮುಂಜಾನೆ ರಾಜನಿಗೆ ಹೇಳಿದಳು. ರಾಜನಿಗೂ ಈ ಕನಸನ್ನು ಕೇಳಿ ಆನಂದವಾಯಿತು. ಆಸ್ಥಾನದ ಜ್ಯೋತಿಷಿಗಳನ್ನು ಕರೆಸಿ ಕನಸಿನ ರಹಸ್ಯವನ್ನು ಬಿಡಿಸಿ ಹೇಳುವಂತೆ ಆದೇಶಿಸಿದನು. ದಿವ್ಯ ಜೀವಿಯೊಂದು ರಾಣಿಯ ಗರ್ಭವನ್ನು ಪ್ರವೇಶಿಸಿದೆ ಎಂದೂ ಜಗತ್ತನ್ನೇ ಆಳುವ ಸಾಮ್ರಾಟ (ಚಕ್ರವರ್ತಿ ಮಹಾರಾಜ)ನಿಗೆ ಈಕೆ ತಾಯಿಯಾಗುತ್ತಾಳೆಂದು ಬಂದ ಪಂಡಿತರು ಭವಿಷ್ಯ ನುಡಿದರು. ಪ್ರಾಚೀನ ಪದ್ಧತಿಯ ಪ್ರಕಾರ ಚಕ್ರವರ್ತಿ ಮಹಾರಾಜನೊಬ್ಬನ ತಾಯಿಯಾಗುವ ಮಹಾ ಮಾಯಾದೇವಿಯ ಗರ್ಭದೊಳಗಿನ ಭ್ರೂಣಕ್ಕೆ ಎಲ್ಲ ರೀತಿಯ ರಕ್ಷಣೆಯನ್ನು





ಕೊಡಲಾಯಿತು. ಅಂದಿನಿಂದ ರಾಣಿ ಮಹಾಮಾಯೆಯು ಪತಿಯನ್ನು ಸಂಧಿಸಲಿಲ್ಲ ಮತ್ತು ಅವಳನ್ನು ಬಹಳ ಜೋಪಾನದಿಂದ ನೋಡಿಕೊಳ್ಳಲಾಯಿತು. ಮುಂದೆ ಹುಟ್ಟಲಿರುವ ಮಹಾರಾಜ ಸತ್ಯವಂತನಾಗಿ ಬಾಳಲೆಂದು ಮಹಾಮಾಯಾದೇವಿ ತನ್ನ ಗರ್ಭಾವಸ್ಥೆಯ ದಿನಗಳನ್ನು ಆಧ್ಯಾತ್ಮ ಸಾಧನೆಯಲ್ಲಿ ಕಳೆದಳು.

### ಸಿದ್ಧಾರ್ಥನ ಹುಟ್ಟು

ತುಂಬು ಗರ್ಭಿಣಿಯಾದ ರಾಣಿ ಮಹಾಮಾಯಾದೇವಿ ತವರು ಮನೆಯಾದ ಕೋಲಿಯ ರಾಜಮನೆತನಕ್ಕೆ ಸೇರಿದ ತನ್ನ ತಂದೆ–ತಾಯಿಗಳ ಬಳಿಗೆ ಹೋಗುತ್ತಿರಲು ಮಾರ್ಗ ಮಧ್ಯದಲ್ಲಿ ಅಂದರೆ ಸಾಕ್ಯರು ಮತ್ತು ಕೋಲಿಯರ ಎರಡು ರಾಜಧಾನಿಗಳ ನಡುವೆ ನೆಲೆಸಿರುವ ಪ್ರಶಾಂತ ಹಾಗು ಮನೋಹರವಾದ ಲುಂಬಿನಿ ರಾಜೋದ್ಯಾನದಲ್ಲಿ ವಿಶ್ರಾಂತಿ ಪಡೆಯಲು ಬಯಸಿದಳು. ಅರಳಿ ನಿಂತ ಎರಡು ಶಾಲ ವೃಕ್ಷಗಳು ತಮ್ಮ ಸೌಂದರ್ಯದಿಂದಲೇ ರಾಣಿಯನ್ನು ಆಕೆಯ ಪರಿವಾರದವರನ್ನು ಆಕರ್ಷಿಸಿದವು. ಕೂಡಲೇ ರಾಣಿಯು ಆ ರಮ್ಯ ತಾಣಕ್ಕೆ ಬಂದಳು. ಇನ್ನು ಮಗು ಹುಟ್ಟುವ ಸಮಯ ಸಮೀಪಿಸಿತೆಂಬ ಅರಿವಾಯಿತು. ಮಾಯಾದೇವಿ ಭವ್ಯ ಶಾಲ ವೃಕ್ಷದ ರೆಂಬೆಯೊಂದನ್ನು ಹಿಡಿದು ನಿಂತಿದ್ದಂತೆಯೇ ರಾಜಕುವರನಿಗೆ ಜನ್ಮ ನೀಡಿದಳು. ಒಂದು ವಿಶಿಷ್ಟ ಆಧ್ಯಾತ್ಮ ಯಶೋಗಾಥೆಯೇ ಮೈದಾಳಿತು. ಆಗತಾನೆ ಹುಟ್ಟಿದ ಮಗುವನ್ನು ನಾಲ್ಕು ಜನ ದೇವದೂತರು ಎತ್ತಿಹಿಡಿಯಲು ಮಗುವು ಪವಾಡ ಸದೃಶದಂತೆ ಸೃಷ್ಟಿಯಾದ ಅರಳಿನಿಂತ ಕಮಲಗಳ ಮೇಲೆ ಏಳು ಹೆಜ್ಜೆಗಳನ್ನು ಹಾಕಿತು. ಆನಂತರದಲ್ಲಿ ಭವಿಷ್ಯದ ಬುದ್ಧನಾದ ರಾಜಕುಮಾರ ಸಿದ್ಧಾರ್ಥನು ಹೀಗೆ ಘೋಷಿಸಿದನು, "ಎಲ್ಲ ಲೋಕಗಳಲ್ಲಿಯೂ ನಾನೇ ಶ್ರೇಷ್ಠನು..." ಈ ವಾಣಿಯನ್ನು ವಿಸ್ಮಯ ಹಾಗು ಶ್ರದ್ಧಾಭಕ್ತಿಗಳಿಂದ ಆಲಿಸಿದ ದೇವತೆಗಳು ಮತ್ತು ಮನುಷ್ಯರು ಗೌರವದಿಂದ ನಮಿಸಿದರು.

### ಋಷಿಯ ಭವಿಷ್ಯವಾಣಿ

ರಾಜ ಶುದ್ಧೋದನನ ಇಬ್ಬರು ರಾಣಿಯರಾದ ಮಹಾಮಾಯಾ ಮತ್ತು ಗೋತಮಿ ಅಕ್ಕತಂಗಿಯರು. ಇವರಿಬ್ಬರೂ ಆಗತಾನೆ ಹುಟ್ಟಿದ ಮಗುವನ್ನು ನಾಡಿನ ಪ್ರಸಿದ್ಧ ಮತ್ತು ಪೂಜನೀಯ ಅಸಿತ ಋಷಿಯ ಮುಂದೆ ತಂದಿಟ್ಟರು. ಅಸಿತರು ಮಗುವನ್ನು ಎತ್ತಿ ಅವನ ಪಾದಗಳನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡರು. ನಂತರ ಮಗುವನ್ನು ಕೆಳಗೆ ಇಳಿಸಿ ತದೇಕಚಿತ್ತರಾಗಿ ಆನಂದದಿಂದ ನೋಡಿದರು. ನಂತರದಲ್ಲಿ ತಕ್ಷಣವೇ ಅವರ ಕಣ್ಣಾಲಿಗಳು ತುಂಬಿಕೊಂಡವು. ಅಸಿತರು ಒಂದು ಹಂತದಲ್ಲಿ ತುಂಬ ಆನಂದದಿಂದ ಇದ್ದವರು ಕೂಡಲೆ ಅತ್ತುದನ್ನು ಕಂಡ ತಂದೆ–ತಾಯಿಗಳಿಗೆ ಯೋಚನೆಯಾಯಿತು. ಯಾಕೆ ಹೀಗೆ ಮಾಡಿದಿರೆಂದು ಅಸಿತ ಋಷಿಗೆ ಕೇಳಿದರು. ಅಸಿತರು ಹೀಗೆ ಹೇಳಿದರು: "ಈ ಮಗು ಮುಂದೆ ದೇವತೆಗಳಿಗೂ ಮತ್ತು ಮಾನವರಿಗೂ ಗುರುವಾಗುವ ಹಾಗು ಜ್ಞಾನೋದಯ ಹೊಂದಿದ ಬುದ್ಧನಾಗುವ ಲಕ್ಷಣಗಳನ್ನು ಕಂಡು ಮುದಗೊಂಡೆ. ಈ

ಮಗುವು ಮೂರು ಲೋಕಗಳಲ್ಲಿನ ಜೀವಿಗಳ ಹೃದಯಗಳನ್ನು ಬೆಳಗಿಸುವ ಜ್ಞಾನ ಸೂರ್ಯನಾಗುತ್ತಾನೆ. ಯಾವ ಅಸಂಖ್ಯ ಜೀವಿಗಳು ಸಂಸಾರ ಸುಳಿಯಲ್ಲಿ ಸಿಕ್ಕಿಕೊಂಡಿದ್ದಾರೋ ಅಂತಹವರ ಸಂರಕ್ಷಕನಾಗುತ್ತಾನೆ".

"ನಾನು ಅತ್ತದ್ದು ಯಾಕೆಂದರೆ ಮೇಲೆ ಹೇಳಿದ ಎಲ್ಲ ಸಂಗತಿಗಳು ಭವಿಷ್ಯದಲ್ಲಿ ಘಟಿಸಿದ ಸಂದರ್ಭದಲ್ಲಿ ಅವನ್ನು ನೋಡಲು ನಾನು ಬದುಕಿರುವುದಿಲ್ಲ. ಆಗ ನಾನು ಅರೂಪ ಬ್ರಹ್ಮ ಲೋಕದಲ್ಲಿರುತ್ತೇನೆ".

"ಇಷ್ಟೆಲ್ಲ ಮಾತುಗಳನ್ನು ಕೇಳಿದ ಮೇಲೆ ತಂದೆ-ತಾಯಿಗಳು ಭವಿಷ್ಯದ ಬುದ್ಧನಿಗೆ ಗೌರವದಿಂದ ನಮಿಸಿದರು.

## ಬಾಲಕನಾಗಿದ್ದಾಗಲೇ ರಕ್ಷಣೆ ಮಾಡಿದ್ದು

ರಾಜಕುಮಾರ ಸಿದ್ಧಾರ್ಥ ಎಂಟು ವರ್ಷದ ಹುಡುಗನಾಗಿದ್ದಾಗಲೇ 'ಯಾರು ನಿಜವಾದ ಒಡೆಯ?' ಎನ್ನುವ ಪ್ರಶ್ನೆಗೆ ಉತ್ತರಿಸಿ ಅಚ್ಚರಿ ಮೂಡಿಸಿದನು. ಸಿದ್ಧಾರ್ಥನ ದಾಯಾದಿ ದೇವದತ್ತ ಹಂಸ ಸಮೂಹದಲ್ಲಿದ್ದ ರಾಜಹಂಸವನ್ನು ತನ್ನ ಬಾಣದಿಂದ ಬೀಳಿಸಿದ. ಆ ಗಾಯಗೊಂಡ ಹಂಸವು ಉದ್ಯಾನದ ಮರವೊಂದರ ಕೆಳಗೆ ಆನಂದದಿಂದ ಅಡ್ಡಾಡುತ್ತಿದ್ದ ಸಿದ್ಧಾರ್ಥನ ಬಳಿ ಬಂದು ಬಿದ್ದಿತು. ರಾಜಕುಮಾರನು ಹಂಸದ ರೆಕ್ಕೆಗೆ ತಗುಲಿದ ಬಾಣವನ್ನು ನಿಧಾನವಾಗಿ ತೆಗೆದು, ಆ ಬಾಣವನ್ನು ತನ್ನ ಕೈಗೆ ಚುಚ್ಚಿಕೊಂಡು ಹಂಸಕ್ಕಾದ ನೋವು ಹೇಗಿರಬಹುದೆಂದು ತಾನೂ ಆ ನೋವನ್ನು ಅನುಭವಿಸಿದನು. ರಕ್ತಸಿಕ್ತ ರೆಕ್ಕೆಯನ್ನು ಶುದ್ಧಿಗೊಳಿಸಿ ಔಷಧಿಯನ್ನು ಹಚ್ಚಿ, ಅದರ ಪ್ರಾಣವನ್ನು ಉಳಿಸಿದನು.

ಬೇಟೆಯನ್ನು ಹುಡುಕಿಕೊಂಡು ಬಂದ ದೇವದತ್ತ, 'ಆ ಹಂಸವನ್ನು ಬಾಣದಿಂದ ಉರುಳಿಸಿದವನು ನಾನು, ಆದ್ದರಿಂದ ಅದು ನನ್ನದು' ಎಂದನು. ರಾಜಕುಮಾರ ಸಿದ್ಧಾರ್ಥ ಹಂಸವನ್ನು ಬಿಟ್ಟುಕೊಡಲು ಸಿದ್ಧನಿರದೆ, 'ಯಾರ ರಕ್ಷಿಸುತ್ತಾರೋ ಮತ್ತು ಉಳಿಸುತ್ತಾರೋ ಅವರು ಒಡೆಯರಾಗುತ್ತಾರೆ; ಯಾರು ಸಾಯಿಸುತ್ತಾರೋ ಅವರು ಒಡೆತನ ಸ್ಥಾಪಿಸಲು ಸಾಧ್ಯವಿಲ್ಲ' ಎಂದು ಹೇಳಿದನು.

ಇಬ್ಬರು ರಾಜಕುಮಾರರು ರಾಜನ ಬಳಿ ಹೋದರು. ಆ ಸಮಯದಲ್ಲಿ ರಾಜ ಆಸ್ಥಾನದಲ್ಲಿದ್ದ, ಅಲ್ಲಿ ಉಪಸ್ಥಿತರಿದ್ದ ನ್ಯಾಯಾಧೀಶರು ರಾಜಕುಮಾರ ಸಿದ್ಧಾರ್ಥನ ವಾದವನ್ನು ಒಪ್ಪಿದರು. ತನ್ನ ಕರುಣಾಮಯ ಸ್ಪಂದನದಿಂದ 'ಮೂರು ಲೋಕಗಳ ರಕ್ಷಕ' (ತಿಲೋಕನಾಥ) ಎನ್ನುವ ಭವಿಷ್ಯ ಪದವಿಗೆ ನಾಂದಿಹಾಡಿದ್ದನು.

## ರಾಜಕುಮಾರ ಸಿದ್ಧಾರ್ಥನ ಮದುವೆ

ಹದಿನಾರು ವರ್ಷ ಮುಗಿಯುವ ಹೊತ್ತಿಗೆ ಸಿದ್ಧಾರ್ಥ ಯುದ್ಧ ಕಲೆಯೂ ಸೇರಿದಂತೆ ಮುಂತಾದ ವಿದ್ಯೆಗಳನ್ನು ಪ್ರಸಿದ್ಧ ಗುರುಗಳ ಮಾರ್ಗದರ್ಶನದಲ್ಲಿ ಕಲಿತು ಎಲ್ಲದರಲ್ಲಿಯೂ ಪರಿಣಿತಿಯನ್ನು ಪಡೆದ. ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿಯನ್ನು ತಳೆಯದ ಸಿದ್ಧಾರ್ಥ ಸೂಕ್ಷ್ಮ ಸಂವೇದಿಯ ರಾಜಕುಮಾರನೆಂಬ ಹೆಗ್ಗಳಿಕೆಗೆ ಪಾತ್ರನಾದ.





ರಾಜನು ಮಗನ ಮದುವೆಯನ್ನು ಮಾಡಲು ಕಾತರನಾದ. ಕ್ಷತ್ರಿಯ ಕುಲದ ರಾಜಮನೆತನದ ಸುಂದರ ಕನ್ಯೆಯರ ಕೂಟವೊಂದನ್ನು ಏರ್ಪಡಿಸಿ ಅಲ್ಲಿಂದ ಒಬ್ಬಳನ್ನು ಮಗನಿಗೆ ವಧುವಾಗಿ ಪಡೆಯಲು ಯೋಜನೆ ಹಾಕಿದ. ಆದರೆ ರಾಜಕುಮಾರ ಸ್ವಯಂವರವನ್ನು ಇಚ್ಛೆಪಟ್ಟ. ಅಂದರೆ ತರುಣ ತನ್ನ ಅಪೂರ್ವ ತೋಳ್ಬಲ, ಶಸ್ತ್ರಬಲಗಳನ್ನು ಪ್ರದರ್ಶಿಸಿ ಆ ಮೂಲಕ ವಧುವನ್ನು ಆಕರ್ಷಿಸುವುದು. ಇಂತಹ ಬಲಪ್ರದರ್ಶನದಲ್ಲಿ ಶಸ್ತ್ರಕಲಾ ಪ್ರವೀಣರಾದ ಯುವಕರು ಭಾಗವಹಿಸಲು, ಹಲವಾರು ಸಾಧನೆಗಳನ್ನು ಹೆಗಲಿಗೇರಿಸಿಕೊಂಡ ಸುಂದರವದನೆ ಯಶೋಧರೆ ಸಿದ್ಧಾರ್ಥನಿಗೆ ಒಲಿದಳು.

ಹೀಗೆ ಸ್ವಯಂವರದಲ್ಲಿ ಪಡೆದ ವಧುವಿಗೆ ರಾಜಕುಮಾರ ಸಿದ್ಧಾರ್ಥನು ಅಮೂಲ್ಯ ರತ್ನಖಚಿತ ಹಾರವನ್ನು ಹಾಕುವುದರ ಮೂಲಕ ಆಕೆಯನ್ನು ವರಿಸಿದನು. ಅವರದು ಮೊದಲ ನೋಟದಲ್ಲೇ ಉಂಟಾದ ಪ್ರೇಮವಾಗಿತ್ತು. ಸಿದ್ಧಾರ್ಥನು ಮುಂದೆ ಜ್ಞಾನೋದಯ ಹೊಂದಿ ಬುದ್ಧನಾದ ಮೇಲೆ ತಾವು ಹೇಗೆ ಇಬ್ಬರೂ ಹಿಂದಿನ ಜನ್ಮಗಳಲ್ಲಿ ಒಂದಾಗಿ ಬದುಕಿದ್ದರೆಂಬುದನ್ನು ಕಂಡುಕೊಳ್ಳುತ್ತಾನೆ.

## ನಾಲ್ಕು ದೃಶ್ಯಗಳು

ಹದಿಮೂರು ವರ್ಷಗಳ ಕಾಲ ರಾಜಕುಮಾರ ಸಿದ್ಧಾರ್ಥ ಮತ್ತು ರಾಜಕುಮಾರಿ ಯಶೋಧರೆಯರು ತುಂಬ ಸುಂದರ ವೈವಾಹಿಕ ಜೀವನವನ್ನು ನಡೆಸಿದರು. ತನ್ನ ಮಗ ಸಿದ್ಧಾರ್ಥನಿಗೆ ದುಃಖದ ಯಾವುದೇ ದೃಶ್ಯ ಎದುರಾಗದಂತೆ ರಾಜ ಶುದ್ಧೋಧನನು ನೋಡಿಕೊಂಡನು. ಆದರೆ ಧಮ್ಮ ನಿಯಮವೇ (ಧಮ್ಮತಾ) ಬೇರೆಯಾಗಿತ್ತು. ಇಪ್ಪತ್ತೊಂಬತ್ತನೇ ವಯಸ್ಸಿಗೆ ತಂದೆಯಾದ ಸಿದ್ಧಾರ್ಥ ನಾಲ್ಕು ಸಾಂಕೇತಿಕ ದೃಶ್ಯಗಳನ್ನು (ನಾಲ್ಕು ಅಪಶಕುನ/ಅಶುಭ ಸೂಚನೆ) ಕಂಡನು. ಈ ದೃಶ್ಯಗಳು ಅವನ ಮನಸ್ಸನ್ನು ಕಲುಕಿ ಅವಕ್ಕೆ ಪರಿಹಾರ ಕಂಡುಹಿಡಿಯಲು ನಿರ್ಧರಿಸಿದನು.

ಧರ್ಮ ಗ್ರಂಥಗಳು ಹೇಳುವಂತೆ ಸಿದ್ಧಾರ್ಥನು ವಿಹಾರಕ್ಕಾಗಿ ಒಂದು ದಿನ ಮನೆಯಿಂದ ಹೊರ ಹೋಗಲು ವಯಸ್ಸಿನಿಂದ ಬಾಗಿದ ಸೊರಗಿದ ಮುದುಕನೊಬ್ಬನನ್ನು ಕಂಡನು. ಇನ್ನೊಂದು ದಿನ ಖಾಯಿಲೆಯಿಂದ ಬಳಲುತ್ತಾ ತನ್ನ ಮಲಮೂತ್ರಗಳಲ್ಲೇ ಒದ್ದಾಡುತ್ತಿದ್ದ ರೋಗಿಯನ್ನು ಕಂಡನು. ಮಾರನೆ ದಿನ ಹೆಣವನ್ನು ಹೊತ್ತುಕೊಂಡು ಹೋಗುತ್ತಿರುವ ಮತ್ತು ಅವರ ಹಿಂದೆ ಅಳುತ್ತಾ ವ್ಯಸನಪಡುತ್ತಾ ಇರುವವರ ದೃಶ್ಯವನ್ನು ಕಂಡನು. ಸಾರಥಿಯಾದ ಚೆನ್ನ ಈ ಎಲ್ಲ ದೃಶ್ಯಗಳು ಬದುಕಿನ ಸಾಮಾನ್ಯ ಸಂಗತಿಗಳೆಂದು ಹೇಳಿದಾಗ ಸಿದ್ಧಾರ್ಥನ ಮನಸ್ಸು ಚಿಂತೆಗೀಡಾಯಿತು.

ಕೊನೆಯಲ್ಲಿ ಬದುಕಿನ ಯಾವ ಚಿಂತೆಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಶಾಂತ ಹಾಗು ಗಂಭೀರವಾಗಿ ನಡೆದು ಹೋಗುತ್ತಿದ್ದ ಮನುಷ್ಯನನ್ನು ಕಂಡನು. ಪ್ರಸನ್ನ ಚಿತ್ತದ ಈ ಸಮಣನ ದೃಶ್ಯ ಹಾದು ಅದು ಭವಿಷ್ಯದ ಚಿತ್ರಣವನ್ನು ಮನಃಪಟಲದ ಮೇಲೆ ಮೂಡಿಸಿತು. ಈ ಬದುಕಿನಲ್ಲಿನ ಸಂಕಟಗಳಿಗೆ ಪರಿಹಾರ ಕಂಡುಕೊಳ್ಳಲು ಅರ್ಥಾತ್

ಸತ್ಯಶೋಧನೆಗಾಗಿ ಸಂಸಾರವನ್ನು ತೊರೆಯಲು ತೀರ್ಮಾನಿಸಿದ. ತೊರೆದು ಹೋಗುವ ಮುನ್ನ ಮಡದಿ ಇರುವ ಕೋಣೆಗೆ ಹೋಗಲು ಆಕೆ ಮತ್ತು ಎಳೆಯ ಮಗು ಗಾಢ ನಿದ್ರೆಯಲ್ಲಿರುವುದನ್ನು ಕಂಡು ಹೀಗೆ ನಿರ್ಧರಿಸಿದ. "ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದ ಮೇಲೆಯೇ ನಾನು ಹಿಂದಿರುಗುತ್ತೇನೆ, ಆಗ ನೀವೆಲ್ಲ ಈ ವೃದ್ಧಾಪ್ಯ, ಖಾಯಿಲೆ ಮತ್ತು ಸಾವಿನಿಂದ ಮುಕ್ತರಾಗಬಹುದು".

## ಮಹಾ ಪರಿತ್ಯಾಗ

ರಾಜಕುಮಾರ ಸಿದ್ಧಾರ್ಥನು ರಾಜಾಶ್ವ ಕಂಥಕದ ಮೇಲೆ ಕುಳಿತು, ಜೊತೆಗೆ ಸೇವಕ ಚೆನ್ನನನ್ನು ಕರೆದುಕೊಂಡು ಆಷಾಢ ಮಾಸದ ತುಂಬು ಹುಣ್ಣಿಮೆಯ (ಜುಲೈ) ನಡುರಾತ್ರಿಯಲ್ಲಿ ಬೆಳಕಿನ ಸಹಾಯದಿಂದ ಮಹಾ ಪರಿತ್ಯಾಗದ ಪಯಣವನ್ನು ಆರಂಭಿಸುತ್ತಾನೆ. ಅಂತಿಮ ಸತ್ಯದ ದರ್ಶನಕ್ಕಾಗಿ (ನಿಬ್ಬಾಣ) ದಕ್ಷಿಣಾಭಿಮುಖವಾಗಿ ಹೊರಡುತ್ತಾನೆ. ಪಯಣ ಮುಂದುವರಿಯುತ್ತಿದ್ದಂತೆ ಪೂರ್ವ ದಿಗಂತದಲ್ಲಿ ಸೂರ್ಯನ ಹೊಂಬೆಳಕು ಹರಿಯುವ ಹೊತ್ತಿಗೆ ಸಾಕ್ಯ ರಾಜ್ಯದ ಗಡಿಯನ್ನು ದಾಟಿಯಾಗಿತ್ತು. ಅಷ್ಟು ಹೊತ್ತಿಗಾಗಲೇ ನೂರು ಮೈಲಿ ಪಯಣ ಸಾಗಿತ್ತು. ಇಷ್ಟು ಪ್ರಯಾಣ ಸಾಗಲು ದೇವತೆಗಳು ಸಹಕರಿಸಿದರೆಂದು ಗ್ರಂಥಗಳು ಹೇಳುತ್ತವೆ. ಪರ್ವತ ಬದಿಯ ನದಿಯೊಂದು ರಾಜ್ಯದ ಗಡಿಯನ್ನು ಸೂಸುತ್ತಿತ್ತು. ರಾಜಕುಮಾರ, ರಾಜಾಶ್ವ ಕಂಥಕನಿಗೆ ಅಂತಿಮ ಆದೇಶವನ್ನು ನೀಡಿದ. ಅದು ನದಿಯ ಇನ್ನೊಂದು ತೀರಕ್ಕೆ ಕ್ಷಣಾರ್ಧದಲ್ಲಿ ನೆಗೆಯಿತು.

ಈಗ ರಾಜಕುಮಾರ ಮರವೊಂದರ ಕೆಳಗೆ ಕುಳಿತು, ತನ್ನ ತಲೆಗೂದಲು ಗಡ್ಡವನ್ನು ಕತ್ತರಿಸಿದ, ಮೈಮೇಲೆ ಹಾಕಿಕೊಂಡ ಆಭರಣ ರಾಜಪೋಷಾಕನ್ನು ಕಳಚಿ, ಗಂಟುಕಟ್ಟಿ ಅದನ್ನು ಚೆನ್ನನಿಗೆ ಉಡುಗೊರೆಯಾಗಿ ಕೊಟ್ಟ. ಆ ಉಡುಗೊರೆ ಚೆನ್ನನ ಜೀವಮಾನಕ್ಕೆ ಸಾಕಾಗುವಷ್ಟು ಸಂಪತ್ತಾಗಿತ್ತು. ಮಹತ್ ಪವಿತ್ರ ಸಾಧನೆಗಾಗಿ ದೇವದೂತರುಗಳೇ ಬಂದು ಗೋತಮನಿಗೆ ಸಂನ್ಯಾಸಿಗಳು ಧರಿಸುವ ಬಟ್ಟೆ, ಭಿಕ್ಷೆಗಾಗಿ ಬವನಾಸಿಯನ್ನು ಕೊಟ್ಟರೆಂದು ಗ್ರಂಥಗಳು ಹೇಳುತ್ತವೆ.

ಊರಿಂದ ಊರಿಗೆ ಅಲೆಯುತ್ತ ಸಿದ್ಧಾರ್ಥನು ಇಬ್ಬರು ಮಹಾ ಮುನಿಗಳ ಆಶ್ರಮದಲ್ಲಿ ತಂಗುತ್ತಾನೆ. ಋಷಿ ಆಲಾರ ಕಾಲಾಮ ಮತ್ತು ಉದ್ದಕರಾಮ ಪುತ್ರರು ಏನೆಲ್ಲ ತಿಳಿದಿದ್ದರೊ ಅದನ್ನೆಲ್ಲ ಸಾಧಿಸಿದ್ದ ಸಿದ್ಧಾರ್ಥನು ಅಲ್ಲಿಂದ ಮುಂದಕ್ಕೆ ರಾಜಕುಮಾರ ಸಿದ್ಧಾರ್ಥನು ಮಗಧ ದೇಶದ ರಾಜಧಾನಿ ರಾಜಗೃಹಕ್ಕೆ ಹೋಗಲು ಅಲ್ಲಿ ಎಲ್ಲರ ಕೇಂದ್ರಬಿಂದು ವಾಗುತ್ತಾನೆ. ಅಲ್ಲಿನ ರಾಜನು ತನ್ನ ಮಗಳನ್ನು ಮತ್ತು ಅರ್ಧ ರಾಜ್ಯವನ್ನು ಕೊಡುವುದಾಗಿ ಬಿನ್ನವಿಸುತ್ತಾನೆ. ವಿನಯದಿಂದ ಒಲ್ಲೆನೆಂದು ಹೇಳಿ, ಪುನಃ ಈ ರಾಜ್ಯಕ್ಕೆ ನಿಬ್ಬಾಣದ ರಹಸ್ಯವನ್ನು ಬಯಲು ಮಾಡಲು ಬರುವುದಾಗಿ ಹೇಳಿದನು.

ಒಂದುದಿನ ದೇವಸ್ಥಾನದ ಮೂಲಕ ಹಾದು ಹೋಗುತ್ತಿರಲು ನೂರಾರು ಪ್ರಾಣಿಗಳನ್ನು ಒಟ್ಟಿಗೆ ಕಟ್ಟಿ, ಅವುಗಳ ಶಿರಚ್ಛೇಧನ ಮಾಡಿ ಯಜ್ಞಕ್ಕೆ ಆಹುತಿಯಾಗಿ





ಅರ್ಪಿಸಲು ಸಿದ್ಧಮಾಡಿದ್ದರು. ಹಾಗೆ ಮಾಡಿದರೇನೆ ದೇವಸ್ಥಾನದೊಳಗಿನ ದೇವತೆಗೆ ತೃಪ್ತಿಯೆಂಬ ಭಾವ ಜನರಲ್ಲಿತ್ತು. ಈ ನಿಷ್ಪಾಪಿ ಹಾಗು ನಿರುಪದ್ರವಿ ಜೀವಗಳನ್ನು ನೋಡಿ ಬೋಧಿಸತ್ವನಾದ ಸಿದ್ಧಾರ್ಥ ಮರುಗಿದ. ದೇವಸ್ಥಾನದೊಳಕ್ಕೆ ನೇರವಾಗಿ ಹೋಗಿ ಯಜ್ಞ ವೇದಿಕೆಗೆ ತನ್ನ ಕತ್ತನ್ನು ಅರ್ಪಿಸಿ "ಈ ನಿರುಪದ್ರವಿ ಪ್ರಾಣಿಗಳ ಬಲಿಯ ರಕ್ತ ಸಿಂಚನದಿಂದ ಈ ದೇವರುಗಳು ಸಂಪ್ರೀತರಾಗಿ ಈ ನೆಲ ಶಾಂತಿ, ಅಭಿವೃದ್ಧಿಯನ್ನು ಹೊಂದುವುದಾದರೆ ಮೊದಲು ನನ್ನ ಪ್ರಾಣ ತ್ಯಾಗವನ್ನು ಮಾಡುತ್ತೇನೆ" ಎಂದನು. ಬಲಿ ವೇದಿಕೆಯ ಮುಂದೆ ಸೇರಿದ ಜನ ಬೋಧಿಸತ್ತನ ಮಾತುಗಳನ್ನು ಕೇಳಿ ವಿಚಲಿತರಾಗಿ ರಾಜನ ಮುಂದೆ ಹೋಗಿ ತೀರ್ಮಾನವನ್ನು ಬೇಡಿದರು. ಬೋಧಿಸತ್ತನ ಸ್ಪಂದನೆಗೆ ಕರಗಿಹೋದ ರಾಜ ಪ್ರಾಣಿಬಲಿ ಎಂಬ ಅನಿಷ್ಟ ಪದ್ಧತಿಯನ್ನು ತಕ್ಷಣದಿಂದಲೇ ನಿಲ್ಲಿಸುವಂತೆ ಆದೇಶಿಸಿದ.

## ಜೀವಂತ ಅಸ್ತಿಪಂಜರ

ಬೋಧಿಸತ್ತನು ರಾಜಗೃಹವನ್ನು ಬಿಟ್ಟಮೇಲೆ ಉರುವೇಲವೆಂಬ ದಟ್ಟ ಅರಣ್ಯ (ಇಂದಿನ ಬುದ್ಧ ಗಯೆ) ಮಧ್ಯಭಾಗಕ್ಕೆ ಬಂದು ನೆಲೆಸುತ್ತಾನೆ. ಏಕಾಂಗಿ ಸಂನ್ಯಾಸಿಯಾಗಿ ಊಹಿಸಲಸದಳ ದೇಹದಂಡನೆ ಮಾಡಿಕೊಳ್ಳುತ್ತಾನೆ. ನೂರಾರು ಜನ ಉರಿವ ಬೇಸಿಗೆಗೆ ತುತ್ತಾದರೂ ಕೋಮಲ ಶರೀರದ ರಾಜಕುಮಾರ ಬಯಲಲ್ಲೇ ಉಳಿದು ಬೆಂದನು, ಶರೀರ ಕುಸಿಯಿತು. ಹಾಗೆಯೇ ಕೊರೆವ ಚಳಿಗೆ ತನ್ನನ್ನೇ ಒಡ್ಡಿಕೊಂಡ.

ಬೇರು, ಕಂದಮೂಲಗಳು ಅಷ್ಟೇ ಏಕೆ ಕ್ರೂರ ಪ್ರಾಣಿಗಳ ಸಗಣಿಯನ್ನು ತಿಂದು ಬದುಕತೊಡಗಿದ. ಸ್ನಾನ ಮಾಡಲೇ ಇಲ್ಲ. ಮೈಮೇಲೆ ಮೆತ್ತಿಕೊಂಡ ಕೊಳೆ ಹಾಳೆ ಹಾಳೆಯಾಗಿ ಬೀಳತೊಡಗಿತು. ಸ್ಮಶಾನಗಳಲ್ಲಿ ಕೊಳೆತು ನಾರುವ ಹೆಣಗಳ ಬಳಿ ಕಾಲಕಳೆದು, ಕೂದಲುಗಳಿಂದ ನಿರ್ಮಿತವಾದ ಚಿಂದಿಗಳನ್ನು ಉಡತೊಡಗಿದ. ಶರೀರ ಪೂರ್ಣ ಜರ್ಝರಿತವಾಯಿತು. ನಂತರದ ದಿನಗಳಲ್ಲಿ ಈ ಸ್ವಯಂ ದೇಹ ದಂಡನೆಯನ್ನು ಬೋಧಿಸತ್ತನು ಹೀಗೆ ವಿವರಿಸಿದ. 'ನನ್ನ ಬೆನ್ನು ಮತ್ತು ಹೊಟ್ಟೆ ಹೇಗೆ ಅಂಟಿಕೊಂಡಿದ್ದು ವೆಂದರೆ ನನ್ನ ಬೆನ್ನನ್ನು ಮುಟ್ಟಿಕೊಂಡರೆ ಹೊಟ್ಟೆ ಸಿಕ್ಕುತ್ತಿತ್ತು. ಹೊಟ್ಟೆಯನ್ನು ಮುಟ್ಟಿಕೊಂಡರೆ ಬೆನ್ನು ಸಿಗುತ್ತಿತ್ತು'.

ಮಲಮೂರ್ತ ವಿಸರ್ಜನೆ ಮಾಡಲು ಹೋದರೆ ದೇಹವೇ ಮುಗ್ಗುರಿಸಿ ಬೀಳುವಷ್ಟು ನಿತ್ರಾಣವಾಯಿತು. ಇಷ್ಟಾದರೂ ಬೋಧಿಸತ್ತ ಈ ರೀತಿಯ ಘನಘೋರ ತಪಸ್ಸನ್ನು ಬಿಡದೆ ಮುಂದುವರಿಸಿದ. ಭಾರತೀಯ ಪುರಾತನ ಪರಂಪರೆಯ ಅನುಸಾರ ಇಷ್ಟೆಲ್ಲಾ ಸಾಧನೆ ಮಾಡಬೇಕಾಗಿತ್ತು. ಒಂದುದಿನ ಅರಣ್ಯದ ಮಾರ್ಗ ಮಧ್ಯೆ ಮಲಗಿರಲು ಮೂರ್ಛೆ ಬಂದು ಬಿದ್ದಂತಾಗಿ ಈ ರೀತಿಯ ಅರಿವಾಯಿತು: 'ಈ ರೀತಿಯ ಯಾತನಾಮಯ ದೇಹದಂಡನೆಯಿಂದ ಮಾನವನ ಅರಿವಿಗೆ ಮೀರಿದುದನ್ನು ತಿಳಿಯಲಾರೆ. ಹೀಗೆ ಮಾಡುವುದರಿಂದ ಪರಿಪೂರ್ಣ ಜ್ಞಾನೋದಯವಾಗಲಾರದು. ಬೇರೇನಾದರು

ಮಾರ್ಗವಿರಬಹುದು'. ಇದ್ದಕ್ಕಿದ್ದ ಹಾಗೆ ಹೃದಯಾಂತರಾಳದಿಂದ ಮಿಂಚೊಂದು ಪ್ರಕಾಶಿಸಿ ಚಿತ್ತವನ್ನು ಬೆಳಗಿಸಿತು. ಸ್ವಯಂ ದೇಹದಂಡನೆ ಮಾಡಿಕೊಳ್ಳುವುದು ನಿರರ್ಥಕವೆಂದು ಕಂಡುಕೊಂಡ. ಎಲ್ಲ ಅತಿರೇಕಗಳನ್ನು ಬಿಟ್ಟು ಸುವರ್ಣ ಮಾಧ್ಯಮವನ್ನು ಅನುಸರಿಸುವುದು ಒಳಿತೆಂದು ನಿಶ್ಚಯಿಸಿದ.

### ಸುಜಾತಳ ಕೊಡುಗೆ

ಬೋಧಿಸತ್ತನು ಎಲ್ಲ ಅತಿರೇಕ ಸಾಧನೆಗಳನ್ನು ತೊರೆದ ಮೇಲೆ ಅನುಸರಿಸಬಹುದಾದ ಮಾರ್ಗವನ್ನು ಕಂಡುಕೊಂಡ. ಇಂದ್ರಿಯ ಬೋಗಗಳಲ್ಲೇ ತೊಡಗಿರುವ ಮತ್ತು ದೇಹದಂಡನೆ ಮೂಲಕವೇ ತಪಸ್ಸನ್ನಾಚರಿಸುವ ಈ ಎರಡೂ ಅರ್ಥಹೀನವಾದು ವೆಂಬುದನ್ನು ಅರಿತುಕೊಂಡಿದ್ದ. ಮಧ್ಯಮ ಮಾರ್ಗವೇ ವಿವೇಕಯುತವಾದುದೆಂಬುದನ್ನು ತಿಳಿದು ಅದರಂತೆಯೇ ಆಹಾರವನ್ನು ಸೇವಿಸತೊಡಗಿದ. ಆರೋಗ್ಯ ಎಂದಿನಂತೆ ಹಿಂತಿರುಗಿ ಮೈ ಹೊಂಬಣ್ಣದಿಂದ ಮಿಂಚತೊಡಗಿತು.

ವೈಶಾಖ ಮಾಸದ ಹುಣ್ಣಿಮೆಯ (ಮೇ ತಿಂಗಳಲ್ಲಿ ಬರುವ ಪೌರ್ಣಮಿಯ ದಿನ) ದಿನ ಮುಂಜಾನೆಯಿಂದಲೇ ಬೋಧಿಸತ್ತನು ಗಂಭೀರ ಧ್ಯಾನದಲ್ಲಿ ತೊಡಗಿದ. ಸೇನಾನಿ ಗ್ರಾಮಕ್ಕೆ ಭಿಕ್ಷೆಗಾಗಿ ಹೋಗುತ್ತಿದ್ದುದರಿಂದ ಆ ಗ್ರಾಮದ ಮಧ್ಯೆ ಆಲದಮರ ಇರುವುದು ಗೊತ್ತಿತ್ತು. ಮಧ್ಯಾಹ್ನ ಆಗುವ ಮುಂಚೆಯೇ ಬೋಧಿಸತ್ತನು ಸಮಾಧಿಯಿಂದ ಎದ್ದು ಆ ಆಲದ ಮರದ ಕೆಳಗೆ ತದೇಕಚಿತ್ತದಿಂದ ಕುಳಿತನು.

ಮುಂದೆ ಆಗುವ ಯುದ್ಧದಲ್ಲಿ ತಾನೇ ಜಯಗಳಿಸುವೆನೆಂಬ ಅಸಮಾನ ಯೋಧನ ಆತ್ಮವಿಶ್ವಾಸವೇ ದಿವ್ಯಶಾಂತಿ ನೀಡಿತು. ಆಧ್ಯಾತ್ಮಿಕ ಉನ್ನತಿಯ ಪರಮಗುರಿಯಾದ ಜ್ಞಾನೋದಯ (ಸಂಬೋಧಿ) ಸಾಕ್ಷಾತ್ಕಾರದ ಗಳಿಗೆ ಹತ್ತಿರ ಬರುತ್ತಿದೆ ಎಂಬುದನ್ನು ಮನಗಂಡನು.

ಈ ರೀತಿಯ ಭಾವದಲ್ಲಿರಲು ಗ್ರಾಮದ ಮುಖ್ಯಸ್ಥನ ಮಗಳು ಸುಜಾತ ತನ್ನ ಓರಗೆಯವರೊಡನೆ ಅಲ್ಲಿಗೆ ಬಂದಳು. ಸುವರ್ಣ ಬಟ್ಟಲಿನ ತುಂಬ ಗಟ್ಟಿ ಹಾಲಿನಿಂದ ಮಾಡಿದ, ಪಾಯಸವನ್ನು ಬೋಧಿಸತ್ತನಿಗಾಗಿ ಅರ್ಪಿಸಲು ತಂದಿದ್ದಳು. ವೃಕ್ಷ ದೇವತೆಯೇ ಬೊಧಿಸತ್ತನ ರೂಪತಾಳಿ ಬಂದಿರುವನೆಂದು ಆಕೆ ಭಾವಿಸಿ ಪಾಯಸವನ್ನು ಅರ್ಪಿಸಿದಳು. ಈ ಹಿಂದೆ ಇದೇ ಜಾಗಕ್ಕೆ ಬಂದು ತಾನು ಒಳ್ಳೆಯ ಕುಟುಂಬಕ್ಕೆ ಮದುವೆಯಾಗಿ ಹೋಗಿ ಒಬ್ಬ ಮಗನನ್ನು ಹಡೆದರೆ ಈ ವೃಕ್ಷ ದೇವತೆಗೆ ಸುವರ್ಣ ಬಟ್ಟಲಿನ ತುಂಬ ವಿಶೇಷವಾದ ಘನ ಪಾಯಸವನ್ನು ಅರ್ಪಿಸುವುದಾಗಿ ಹರಕೆ ಹೊತ್ತಿದ್ದಳು.

ಒಂದು ಸಾವಿರ ಹಸುಗಳಿಂದ ಪಡೆದ ಹಾಲನ್ನು ಐದುನೂರು ಹಸುಗಳಿಗೆ ಒಂದು ವಾರ ಉಣಿಸಿ, ಮತ್ತೆ ಐದುನೂರು ಹಸುಗಳಿಂದ ಪಡೆದ ಹಾಲನ್ನು ಇನ್ನೂರೈವತ್ತು ಹಸುಗಳಿಗೆ ಒಂದುವಾರ ಕಾಲ ಉಣಿಸಿ, ಹೀಗೆಯೇ ಪಡೆದ ಹಾಲನ್ನು ಅರ್ಧ





ಸಂಖ್ಯೆಯಷ್ಟು ಹಸುಗಳಿಗೆ ಉಣಿಸುತ್ತಾ ಕೊನೆಗೆ ಎಂಟು ಹಸುಗಳವರೆಗೂ ಬಂದು ಅಷ್ಟು ಹಸುಗಳಿಂದ ಕರೆದ ಹಾಲನ್ನು ಬಳಸಿ ಸುವಾಸಿತ ಅಕ್ಕಿಯನ್ನು ಬೇಯಿಸಿ, ಅದಕ್ಕೆ ಬೆರೆಸಿ, ಜೇನುತುಪ್ಪವನ್ನು ಹಾಕಿ ತಯಾರು ಮಾಡಿದ ಪಾಯಸವನ್ನೇ ವೈಶಾಖ ಪೌರ್ಣಮಿಯಂದು ವೃಕ್ಷ ದೇವತೆಗೆ ಸಲ್ಲಿಸುವುದಾಗಿ ವ್ರತ ಕೈಗೊಂಡಿದ್ದಳು.

ತನಗೆ ಮಗ ಹುಟ್ಟಿದ ಮೇಲೆ ಹೊತ್ತ ಹರಕೆಯನ್ನು ತೀರಿಸಲು ಸುಜಾತ ಬಂದಿದ್ದಳು. ಗ್ರಾಮದ ಆಲದ ಮರದ ಕೆಳಗೆ ತೇಜಸ್ವಿ ಬೋಧಿಸತ್ತನು ಕುಳಿತಿರುವುದನ್ನು ಕಂಡು ಆ ಸತ್ಪುರುಷನಿಗೆ ತಲೆಬಾಗಿ ನಮಿಸಿ, 'ನೀವು ದೇವರೋ–ಮನುಷ್ಯರೋ ಗೊತ್ತಿಲ್ಲ. ಒಟ್ಟಿನಲ್ಲಿ ಪವಿತ್ರಾತ್ಮರಾಗಿ ಕಾಣುತ್ತೀರಿ. ಈ ಕಾಣಿಕೆಯನ್ನು ದಯಮಾಡಿ ಸ್ವೀಕರಿಸಿ, ನಮ್ಮನ್ನು ಆಶೀರ್ವದಿಸಿ' ಎಂದಳು.

### ಅಂತಿಮ ಹೋರಾಟ

ಸಿದ್ಧಾರ್ಥ ಗೌತಮನು ಧ್ಯಾನದ ಮೂಲಕ ಯಾವುದೋ ಪ್ರಬಲ ಶಕ್ತಿಯಿಂದಾಗಿ ಅಂತರಂಗದೊಳಗೆ ಮಡುಗಟ್ಟಿದ ಅಚಲ ನಿರ್ಧಾರವನ್ನು ಕಂಡುಕೊಂಡು, ಅನಂತರ ಆ ಮನಸ್ಸಿನಿಂದಲೇ ಹೊರಬಂದು ಹೀಗೆ ಇರುವುದಾಗಿ ನಿರ್ಧರಿಸಿದನು :–

ಜಯಿಸಲಸದಳ ಸತ್ಯವಾಹಕರ
ಸಂತತಿಗೆ ಸೇರಿದವನು ನಾನು,
ಅನುಸರಿಸುವೆನು ನಾ ತಥಾಗತರನು
ಆಗಿಹೋದ ಬುದ್ಧರನು, ಅಸಮಾನ ಆ ವಿಜಯಿಗಳನು
ಅಂತಿಮ ಜನ್ಮಗಳಲ್ಲಿ ಅವರು
ರಾಜಕುವರರಾಗಿ ಜನ್ಮವ ತಳೆದು
ಸಿಂಹಾಸನಗಳ ತೊರೆದು,
ಬೈರಾಗಿಗಳಾಗಿ ಹೋದವರು ಅವರು.
ತಮಗೆ ತಾವೇ ಗುರುವಾಗಿ,
ಪರಮ ಜ್ಞಾನವನು ಪಡೆದು,
ಮಾನವ ಲೋಕ, ದೇವಲೋಕಗಳಲಿ,
ಪ್ರಬಲರೊಳ್ ಮಹಾ ಪ್ರಬಲರಾಗಿ,
ಬೆಳೆದವರವರು.
'ಸಂಬೋಧಿ' ಎಂಬ ಜ್ಞಾನ ಶಿಖರವನ್ನೇರಿ
'ಭಗವಾ' ಆಗಿ ಮೆರೆದು
ಲೋಕದೊಡೆಯರೂ ಸೇರಿದಂತೆ
ಜೀವಿಗಳೆಲ್ಲರ ಸಂರಕ್ಷಕರಾದವರು ಅವರು.
ನಾನಿಂದು ಇವರ ಪಥದಲ್ಲೇ ನಡೆಯುವೆ.

ಅಂತಿಮೋನ್ನತಿಯನೇರುವ
ಕಾಲವೀಗ ನನಗೆ ಬಂದಿದೆ.

ಸುಜಾತಳಿಂದ ಬಟ್ಟಲು ತುಂಬ ಪಾಯಸವನ್ನು ಪಡೆದು, ಮುಂದಿನ ಸಮರದ ಸರ್ವಸನ್ನದ್ಧತೆಗಾಗಿ ಮಾಡಿಕೊಂಡ ದೃಢ ನಿರ್ಧಾರವನ್ನು ನೆನೆಯುತ್ತಾ ಹತ್ತಿರವೇ ಇರುವ ನೆರಂಜರಾ ನದಿಯತ್ತ ಸಾಗುತ್ತಾನೆ. ಅಲ್ಲಿ ಸ್ನಾನ ಮುಗಿಸಿ, ನದಿತೀರದ ಮೇಲೆ ಕುಳಿತು ಸುಜಾತಳು ನೀಡಿದ ಘನ ಪಾಯಸವನ್ನು ನಲವತ್ತೊಂಬತ್ತು ತುತ್ತುಗಳನ್ನಾಗಿ ಮಾಡುತ್ತಾನೆ. ಏಳು ವಾರಗಳ ದಿವ್ಯ ಸಮಾಧಿ ಅವಧಿಯಲ್ಲಿ ಸದೃಢವಾಗಿರಲು ಈ ತುತ್ತುಗಳನ್ನು ಸೇವಿಸುತ್ತಾನೆ. ಮುಂದೆ ಉಜ್ವಲ ಭವಿಷ್ಯ ಕಾದಿತ್ತು !

ಊಟ ಮುಗಿಸಿ ಕೈತೊಳೆದು ಬಟ್ಟಲನ್ನು ತೊಳೆಯುತ್ತಾನೆ. ತನ್ನ ಗುರಿಸಾಧನೆಯನ್ನು ಮತ್ತಷ್ಟು ಗಟ್ಟಿಗೊಳಿಸಲು ಹೀಗೆ ಪ್ರತಿಜ್ಞೆಗೈಯುತ್ತಾನೆ : 'ಇಂದು ನಾನು ಪರಮೋಚ್ಚ ಜ್ಞಾನೋದಯವನ್ನು ಪಡೆಯುತ್ತೇನೆಂದಾದರೆ ಈ ಸುವರ್ಣ ಬಟ್ಟಲು ನದಿಯ ಹರಿಯುವಿಕೆಯ ವಿರುದ್ಧ ಈಜಲಿ ಎಂದು ಆ ಬಟ್ಟಲನ್ನು ನದಿಗೆ ಎಸೆದ. ಆಶ್ಚರ್ಯವೆಂಬಂತೆ ಬಟ್ಟಲು ಪ್ರವಾಹದ ವಿರುದ್ಧ ಬಹುದೂರ ಹೋಗಿ ಮಾಯವಾಯಿತು!

ಮೇಲಿನ ಸಂಗತಿಯಿಂದ ಮತ್ತಷ್ಟು ದೃಢಚಿತ್ತನಾಗಿ ಮಧ್ಯಾಹ್ನವನ್ನು ಅರಣ್ಯದಲ್ಲಿ ಏಕಾಂಗಿಯಾಗಿ ಧ್ಯಾನಮಗ್ನನಾಗಿ ಕಳೆದ. ಮುಸ್ಸಂಜೆಯಲ್ಲಿ ಬೋಧಿವೃಕ್ಷದತ್ತ ನಡೆದು ಹೋಗುತ್ತಿರುವಾಗ, ಸೋತ್ಥಿಯನೆಂಬ ಹುಲ್ಲು ಕೊಯ್ಯುವವನಿಂದ ಸಣ್ಣ ಕುಸ ಹುಲ್ಲು ಸಿವುಡುಗಳನ್ನು ಪಡೆದ. ಬೋಧಿವೃಕ್ಷದ ಕೆಳಗೆ ಕುಸ ಹುಲ್ಲನ್ನು ಹಾಸಿ ಪೂರ್ವಾಭಿಮುಖ ವಾಗಿ ಧ್ಯಾನಕ್ಕೆ ಕುಳಿತನು.

ಉತ್ತಮ ಯೋಧನೊಬ್ಬ ಯುದ್ಧಕ್ಕೆ ಸಜ್ಜಾಗುವಂತೆ ದೃಢ ನಿಶ್ಚಯದ ಸೆಳಕು ಬಲವಾಗುತ್ತಿದ್ದಂತೆ ಹೀಗೆ ಪ್ರತಿಜ್ಞೆ ಮಾಡಿದ: "ಮಾಂಸಖಂಡ, ಮೂಳೆ, ಸ್ನಾಯು, ಚರ್ಮಗಳು ಹರಿದು ಹೋದರೂ, ರಕ್ತ ಇಂಗಿ ಹೋದರೂ ನನ್ನ ನಿರ್ಧಾರದಿಂದ ಹಿಂದೆ ಸರಿಯುವುದಿಲ್ಲ. ಪರಮೋಚ್ಚ ಜ್ಞಾನೋದಯ ಸಂಪನ್ನವಾಗುವವರೆಗೂ ನಾನು ಈ ಜಾಗವನ್ನು ಬಿಟ್ಟೇಳುವುದಿಲ್ಲ".

ಈಗ ದುಷ್ಟಶಕ್ತಿಗಳ ಒಡೆಯ ಮಾರನೊಂದಿಗೆ ಕಠೋರ ಸಮರ ಆರಂಭವಾಯಿತು. ಅವನ ಸೈನ್ಯವು ಎದುರು ಬದಿಯನ್ನು ಬಿಟ್ಟು ಮೂರು ಕಡೆಗಳಿಂದ ನುಗ್ಗಿತು. ಮಾರನ ಸೈನ್ಯ ಆಕಾಶವನ್ನು ಕವಿದಿದ್ದರಿಂದ ದಿನವು ರಾತ್ರಿಯಾಯಿತು. ಈ ದೃಶ್ಯವನ್ನು ಸರ್ ಎಡ್ವಿನ್ ಆರ್ನಾಲ್ಡರು ತಮ್ಮ 'ಲೈಟ್ ಆಫ್ ಏಷ್ಯಾ'ದಲ್ಲಿ ತುಂಬ ಚೆನ್ನಾಗಿ ಹೀಗೆ ವರ್ಣಿಸಿದ್ದಾರೆ :–

ಈ 'ರಾತ್ರಿ'ಗಾಗಿಯೇ ಯುಗಗಳು ಕಾಯುತಿದ್ದವು...
ಬೋಧಿಸತ್ತನು ಮರದಡಿ ಕುಳಿತಿರಲು
ರಾತ್ರಿಯಾಯಿತು.





ಕತ್ತಲದೊಡೆಯ ಮಾರ
ಜನರನು ಬಿಡುಗಡೆ ಮಾಡುವ
ಬುದ್ಧ ಇವನೆಂದು ಗೊತ್ತಿದ್ದರೂ,
ಜನವ ಸಂರಕ್ಷಿಸುವ
ಸತ್ಯಶೋಧನೆಯ ಗಳಿಗೆಯೀಗ
ಬಂದಿದೆಯೆಂದರಿತರೂ,
ತನ್ನೆಲ್ಲ ದುಷ್ಟಶಕ್ತಿಗಳನು ನುಗ್ಗಿಸಿದನು ಈ ಮಾರ.
ಬಂದರಾ ಪಿಶಾಚಿಗಳು
ಆಳ ಕುಳಿಗಳಿಂದ
ಜ್ಞಾನ ಬೆಳಕುಗಳೊಡನೆ ಸೆಣಸಲು,
ಭಯದ ಕತ್ತಲನು ಸೃಷ್ಟಿಸಲು
ಮಿಂಚು ಗುಡುಗುಗಳ ತೂರಿದರು.
ಬೋಧಿಸತ್ತನ ಮನವ ಕಲುಕಲು
ಕೋಪದ ಕೆನ್ನೀಲಿ ಬರ್ಜಿಗಳನೆಸೆದರು,
ಸೀಳು ಆಕಾಶಗಳಿಂದ.
ಮಾತುಗಳ ಮೋಡಿ ಆಡಿದರು.
ಶೃಂಗಾರ ಗೀತೆಗಳ ಹಾಡಿದರು,
ಕಾಮಕನ್ನಿಕೆಯರಾಗಿ.
ಅನುಮಾನಗಳ ಬಿತ್ತಿದರು,
ಸತ್ಯವೇ ನಾಚುವ ತೆರದಿ.

ಪ್ರಶಾಂತ ಮನಸ್ಸಿನ, ಅಪಾರ ಆತ್ಮವಿಶ್ವಾಸದ ಬೋಧಿಸತ್ತನು ಮಾರನ ಕುತಂತ್ರಗಳಿಗೆ ಜಗ್ಗದೆ, ತಾನು ಸಾಧಿಸಿದ ಪಾರಮಿತಗಳ ಬಲದಿಂದ ಮುನ್ನುಗ್ಗಿದನು. ವೈಶಾಖ ಮಾಸದ ಪೂರ್ಣಚಂದ್ರನು ಪಶ್ಚಿಮ ದಿಗಂತದಲ್ಲಿ ಲೀನವಾಗುವ ಹೊತ್ತಲ್ಲೇ ಪೂರ್ವ ದಿಗಂತದಲ್ಲಿ ಕೆಂಪುಗೋಲದ ಸೂರ್ಯನು ಮೂಡಿಬರುವ ಪವಿತ್ರ ಸಂಧಿಕಾಲದಲ್ಲಿ ಗೌತಮನು ಮಾರನನ್ನು ಸೋಲಿಸಿ ಜಿನನಾದ.

ಆ ಇಡೀ ರಾತ್ರಿ ಗೌತಮನು ತನ್ನ ಅಲೌಕಿಕ ಶಕ್ತಿಗಳನ್ನು ಹೇಗೆ ಪ್ರಯೋಗಿಸಿದ ನೆಂಬುದನ್ನು ಧರ್ಮ ಗ್ರಂಥಗಳು ಹೇಳುತ್ತವೆ. ಗೌತಮನು ದಿವ್ಯ ದೃಷ್ಟಿಯಿಂದ ತನ್ನ ಹಿಂದಿನ ಎಲ್ಲ ಅಸಂಖ್ಯ ಜನ್ಮಗಳನ್ನು ನೋಡುತ್ತಾ ಹೋದ. ಆ ಎಲ್ಲ ಜನ್ಮಗಳನ್ನು ನೋಡುತ್ತಾ ಹೋದಂತೆ, ಅಲ್ಲಿ ಜೀವಿಗಳು ಹೇಗೆ ಹುಟ್ಟಿದವು? ಅವು ಹೇಗೆ ಒಂದು ಜನ್ಮದಿಂದ ಮತ್ತೊಂದು ಜನ್ಮಕ್ಕೆ ಹೋದವು? ಅವು ಹೇಗೆ ಸತ್ತು ಪುನಃ ಪುನಃ ತಮ್ಮ ಕುಶಲ ಅಕುಶಲ ಕರ್ಮಗಳಿಂದಾಗಿ ಮತ್ತೆ ಜನ್ಮ ತಳೆದವು? ಮತ್ತು ಅವು ಹೇಗೆ ಕರ್ಮ

ಮತ್ತು ಪುನರ್ಜನ್ಮವೆಂಬ ಪುನಃ ಪುನಃ ಘಟಿಸುವ ಬಂಧನಗಳಿಂದ ಮುಕ್ತಗೊಂಡವು ಎಂಬುದನ್ನು ನೋಡಿದನು. ಅಂತಿಮವಾಗಿ ಚತುರಾರ್ಯ ಸತ್ಯಗಳನ್ನು ಕಂಡುಹಿಡಿದು ಆಧ್ಯಾತ್ಮದ ಉನ್ನತಿಯ ಪರಮ ಸತ್ಯದೂತನಾದ, ತಥಾಗತ ಬುದ್ಧನಾದ! ತನ್ನನ್ನು ತಾನು ಬಂಧಮುಕ್ತಿ ಮಾಡಿಕೊಂಡುದಲ್ಲದೆ, ಬೇರೆಯವರನ್ನು ಮುಕ್ತಿಗೊಳಿಸುವಷ್ಟು ಶಕ್ತಿವಂತನಾದ. ಅಂತಿಮವಾಗಿ ಸಮ್ಮಾ ಸಂಬೋಧಿಯನ್ನು ಮುಟ್ಟಿದ ಮೇಲೆ ಗೌತಮನು 'ಸಬ್ಬಞ್ಞ ಬುದ್ಧ'ನಾದ. ಅಂದರೆ ಎಲ್ಲವನು ಅರಿತ ಪ್ರಜ್ಞಾ ಕರುಣೆಗಳ ಒಡೆಯನಾದ.

ಈ ಅನನ್ಯ ವಿಜಯವನ್ನು ಸಾಧಿಸಿದ ಮೇಲೆ ಬುದ್ಧನು ಮುಂದಿನ ಏಳು ವಾರಗಳ ಕಾಲ 'ವಿಮುಕ್ತಿ ಪರಮಾನಂದ'ವೆಂಬ ಸಮಾಧಿ ಸ್ಥಿತಿಯಲ್ಲಿ ಐಕ್ಯವಾದನು. ನಲವತ್ತೊಂಬತ್ತು ದಿನಗಳ ಸಮಾಧಿ ಸ್ಥಿತಿಯಿಂದ ಎದ್ದು ಬಂದಮೇಲೆ 'ನಿಬ್ಬಾಣ' ಅನುಭವದ ಮೊದಲ ಘೋಷಣೆಯನ್ನು ಹೀಗೆ ಮಾಡಿದನು :

"ಅಮರತ್ವ ಬಯಸುವವರಿಗಾಗಿ ಈ ಬಾಗಿಲುಗಳು ತೆರೆದಿವೆ. ಯಾರು ಈ ಮಾತುಗಳನ್ನು ನಂಬುತ್ತಾರೋ ಅವರು ಇಲ್ಲಿ ಒಳಬರಬಹುದು".

## ಧರ್ಮಚಕ್ರ ಪ್ರವರ್ತನೆ

ವಿಮುಕ್ತಿಯ ಪರಮಾನಂದ ಸ್ಥಿತಿಯನ್ನು ಅನುಭವಿಸಿದ ಮೇಲೆ ನಲವತ್ತೊಂಬತ್ತನೆಯ ದಿನ ಭಗವಾನ್ ಬುದ್ಧನು ಅನುಕಂಪವನ್ನು ಹೇಗೆ ಹಂಚಬೇಕೆಂದು ನಿರ್ಧರಿಸಿ ವಾರಾಣಸಿಯತ್ತ ನಡೆದನು. ಭವಿಷ್ಯದಲ್ಲಿ ಸರ್ವತ್ರ ಅನ್ವಯವಾಗುವ ಈ ಜ್ಞಾನದ ದೆಸೆಯಿಂದ ಉದ್ಭವಿಸುವ ಎಲ್ಲ ಘಟನೆಗಳನ್ನು ದಿವ್ಯದೃಷ್ಟಿಯಿಂದ ನೋಡಿ ಹೀಗೆ ಉದ್ಗರಿಸಿದ :

ಹೋಗುವೆ ನಾನೀಗ ಕಾಶಿ ನಗರಕ್ಕೆ
ಉರುಳಿಸುವೆನು ಧರ್ಮಚಕ್ರವನಲ್ಲಿ
ಮಬ್ಬೊಳಿಹ ಇಂದ್ರಿಯ ಲೋಕದಲಿ
ಅಮರತ್ವದ ಡಂಗುರವ ಸಾರುವೆನು

ದೇಹದಂಡನೆಯ ಸಾಧನಾ ದಿನಗಳಲ್ಲಿ ಜೊತೆಯಲ್ಲಿದ್ದ ಐದುಜನ ಶಿಷ್ಯ ಸಾಧಕರು ಬೋಧಿಸತ್ತ ಗೋತಮನು ಪಾರಂಪರಿಕ ಯಾತನಾಮಯ ಸಾಧನೆಯ ಮೂಲಕ ಹೇಗೆ ಅಂತಿಮವಾಗಿ ವಿಜಯ ಸಾಧಿಸಿ ಬರುತ್ತಾನೆಂದು ಕಾಯುತ್ತಿದ್ದರು. ಯಾವಾಗ ಬೋಧಿಸತ್ತನು ಅತಿರೇಕದ ದೇಹ ದಂಡನೀಯ ಸಾಧನೆಗಳನ್ನು ತೊರೆದನೋ, ಆಗಲೇ ಈ ಶಿಷ್ಯರು ಮಾತನಾಡಿಕೊಂಡರು : "ಈಗ ಗೋತಮನು ಪ್ರಾಪಂಚಿಕನಾಗಿ ವಾರಣಾಸಿಗೆ ಹೋಗಿದ್ದಾನೆ".

ಬುದ್ಧನು ವಾರಣಾಸಿ ಬಳಿಯ ಇಸಿಪಟಣ (ಈಗಿನ ಸಾರನಾಥ)ದ ಜಿಂಕೆ ಧಾಮಕ್ಕೆ ಬರುತ್ತಾನೆ. ಅಲ್ಲಿ ಈ ಐದು ಸಾಧಕ ಶಿಷ್ಯರು ವಾಸಿಸುತ್ತಿದ್ದರು. ದೂರದಿಂದಲೇ ಈ ಸಾಧಕರು ಬುದ್ಧನನ್ನು ನೋಡಿ ಹೀಗೆ ಗೇಲಿ ಮಾಡಿದರು: "ಅಗೋ, ವೈಭವದ





ಪ್ರೇಮಿ ಬರುತ್ತಿದ್ದಾನೆ, ತಪಸ್ಸನ್ನು ಬಿಟ್ಟವನಾದ್ದರಿಂದ ನಾವು ಇವನಿಗೆ ಗೌರವವನ್ನು ತೋರಿಸುವುದು ಬೇಡ". ಆದರೆ ಬುದ್ಧನು ಹತ್ತಿರ ಬರುತ್ತಿದ್ದಂತೆ ಅವರ ನಿರ್ಧಾರಗಳೆಲ್ಲ ಕರಗಿಹೋದವು. ಕುಳಿತುಕೊಳ್ಳಲು ಜಾಗವನ್ನು ಕೊಟ್ಟು ಎಂದಿನಂತೆ 'ಸ್ನೇಹಿತ'ನೆಂದು ಕರೆದರು. ಆಗ ಬುದ್ಧ ಹೇಳಿದ. "ಭಿಕ್ಖುಗಳೇ ತಥಾಗತನನ್ನು ಆ ರೀತಿಯ ಶಬ್ದಗಳಿಂದ ಸಂಬೋಧಿಸಬೇಡಿ. ಇಗೋ ಕೇಳಿ, ನಾನು ಸತ್ಯವನ್ನು ಕಂಡುಹಿಡಿದಿದ್ದೇನೆ". ಪ್ರಾರಂಭದಲ್ಲಿ ಸ್ವಲ್ಪ ತೊಡಕಾದರೂ ಅಂತಿಮವಾಗಿ ಅವರ ವಿಶ್ವಾಸವನ್ನು ಗಳಿಸಿ ಅವರಿಗೆ ತನ್ನ ಮೊದಲ ಉಪದೇಶ 'ಧಮ್ಮಚಕ್ಕ ಪವತ್ತನ ಸುತ್ತ'ವನ್ನು ನೀಡಿದನು.

ಜಿಂಕೆ ಧಾಮದ ಪ್ರಶಾಂತ ಪರಿಸರದಲ್ಲಿ ಮೂರು ಲೋಕಗಳಲ್ಲಿನ ಜೀವಿಗಳ ಒಳಿತಿಗಾಗಿ ಧಮ್ಮವನ್ನು ಬೋಧಿಸಿದನು. ತಾನು ಕಂಡುಕೊಂಡ ಸತ್ಯದ ಸೂಕ್ಷ್ಮಗಳನ್ನು ಅಂದರೆ ಮಧ್ಯಮ ಮಾರ್ಗ, ಚತುರಾರ್ಯ ಸತ್ಯಗಳು, ಆರ್ಯ ಅಷ್ಟಾಂಗ ಮಾರ್ಗ, ಪಟಿಚ್ಚಾ ಸಮುಪ್ಪಾದಗಳನ್ನು ಹೇಳಿದನು.

ಬುದ್ಧ ಹೀಗೆ ಘೋಷಿಸಿದನು: "ಭಿಕ್ಖುಗಳೇ, ಎರಡು ಅತಿರೇಕಗಳಿವೆ. ಪವಿತ್ರ ಬದುಕನ್ನು ನಡೆಸುವ ಜನ ಇವನ್ನು ತೊರೆಯಬೇಕು. ಈ ಅತಿರೇಕಗಳೆಂದರೆ ಒಂದು ರೂಢಿಗತ ರಾಗದಿಂದ ತುಂಬಿದ, ಇಂದ್ರಿಯ ಲೋಲುಪತೆಯಲ್ಲಿ ಮಗ್ನವಾಗಿರುವುದು. ಇದು ಕೀಳುಮಟ್ಟದ್ದು, ಪ್ರಾಪಂಚಿಕವಾದುದು ಮತ್ತು ಇದರಿಂದ ಯಾವ ಲಾಭವೂ ಆಗದು. ಇನ್ನೊಂದು, ದೇಹದಂಡನೆಯ ಸಾಧನೆ. ಇದು ಯಾತನಾಮಯವು, ಯೋಗ್ಯವಲ್ಲದ್ದು ಮತ್ತು ಇದರಿಂದ ಯಾವ ಲಾಭವೂ ಆಗದು.

ಭಿಕ್ಕುಗಳೇ, ಈಗ ತಥಾಗತನು ಹೇಳುವುದು ಮಧ್ಯಮ ಮಾರ್ಗ. ಇಂದ್ರಿಯ ಲೋಲುಪತೆಯಲ್ಲೇ ಇರುವ ಮತ್ತು ಸ್ವಯಂ ದೇಹದಂಡನೆಯ ಈ ಎರಡು ಅತಿರೇಕಗಳನ್ನು ತೊರೆದು ಬದುಕುವ ಮಾರ್ಗವಿದೆ. ಆ ಮಾರ್ಗವು ಒಳನೋಟವನ್ನು ತೆರೆಸಿ, ಅರಿವನ್ನು ಮೂಡಿಸಿ ಪರಮಶಾಂತಿಯತ್ತ, ಉನ್ನತ ಪ್ರಜ್ಞೆಯತ್ತ, ಜ್ಞಾನೋದಯದತ್ತ ಕೊಂಡೊಯ್ದು ನಿಬ್ಬಾಣದಲ್ಲಿ ನಿಲ್ಲಿಸುತ್ತದೆ.

ಐದುಜನ ಭಿಕ್ಖುಗಳು ಜ್ಞಾನೋದಯ ಹೊಂದಿದ ಶಿಷ್ಯರಾದರು, ಆರ್ಯರಾದರು. ಆ ಕ್ಷಣದಿಂದ ಲೋಕ ಕಲ್ಯಾಣದ ಶಕೆ ಆರಂಭವಾಯಿತು. ಭಗವಾನ್ ಬುದ್ಧನು ಅಕ್ಷರಶಃ ಭರತ ಖಂಡದ ಉದ್ದಗಲ ನಲವತ್ತೈದು ವರ್ಷಗಳ ಕಾಲ ಶ್ರೀಲಂಕಾ, ಮಯನ್ಮಾರ್, ಆಗ್ನೇಯ ಏಶಿಯಾ ದೇಶಗಳಲ್ಲಿ ಬುದ್ಧ ಹೋಗಿದ್ದನೆಂದು ಆ ದೇಶಗಳ ಉಲ್ಲೇಖನಗಳು ಹೇಳುತ್ತವೆ. ಎಲ್ಲೆಲ್ಲಿ ಬುದ್ಧ ಹೋದನೋ ಅಲ್ಲೆಲ್ಲಾ ಸತ್ಯ, ಪ್ರಜ್ಞೆ, ಅನುಕಂಪಗಳ ಸಂದೇಶವನ್ನು ಬಿತ್ತಿ ಮಾನವ ಹಾಗು ದೇವಲೋಕಗಳ ಮೂರೂ ವಲಯಗಳಲ್ಲಿ ಜ್ಞಾನೋದಯದ ಬೆಳಕನ್ನು ಚೆಲ್ಲಿದ.

ಈ ಐತಿಹಾಸಿಕ ಉಪದೇಶವನ್ನು ಸರ್ವಜ್ಞನಾದ ಬುದ್ಧ ಆಷಾಢ ಮಾಸದ ಪೌರ್ಣಮಿಯಂದು (ಜುಲೈ) ಅಂದರೆ ಸರಿಯಾಗಿ ಜ್ಞಾನೋದಯ ಹೊಂದಿದ (ವೈಶಾಖ

ಹುಣ್ಣಿಮೆ ಮೇ ತಿಂಗಳು) ಎರಡು ತಿಂಗಳ ನಂತರ ನೀಡಿದ. ಉಪದೇಶ ನೀಡಿದ ವೇಳೆ ಪಶ್ಚಿಮ ದಿಗಂತದಲ್ಲಿ ಸೂರ್ಯ ಮುಳುಗುತ್ತಿದ್ದು ಪೂರ್ವ ದಿಗಂತದಲ್ಲಿ ಚಂದ್ರನುದಯಿಸುವ ತಂಪು ಸಂಜೆಯಾಗಿತ್ತು.

ಈ ಪವಿತ್ರ ಗಳಿಗೆಯಂದು ಹಲವಾರು ಸಂಗತಿಗಳು ಏಕಕಾಲಕ್ಕೆ ಸಂಭವಿಸಿದವು: (1) ಬುದ್ಧ ಧರ್ಮದ ಇತಿಹಾಸ (ಬುದ್ಧ ಧರ್ಮ ಬೋಧನಾಪಾಠವಾಗಿ) ಆರಂಭವಾಯಿತು. (2) ಧಮ್ಮಕಾಯ (ಸರ್ವಜ್ಞ ಬುದ್ಧನ ಅಲೌಕಿಕ ಶರೀರ) ಎಂಬ ಹೆಸರಿನಿಂದ ಕರೆಯಲ್ಪಡುವ ಮೂರು ಲೋಕಗಳಲ್ಲಿನ ಅಸಂಖ್ಯ ಜೀವಿಗಳ ಬಾಳನ್ನು ಬೆಳಗುವ ಧಮ್ಮರತನ ಅನಾವರಣಗೊಂಡಿತು. (3) ಬುದ್ಧ ಸಾಸನ (ಬುದ್ಧನ ಶ್ರೇಷ್ಠ ತತ್ತ್ವಸಿದ್ಧಾಂತ)ವು ಅಸ್ತಿತ್ವಕ್ಕೆ ಬಂದು ಯಾರು ದಶಪಾರಮಿಗಳಲ್ಲಿ ತಮ್ಮನ್ನು ನೆಲೆಗೊಳಿಸಿ ಕೊಂಡಿದ್ದಾರೋ ಅವರನ್ನು ನಿಬ್ಬಾಣ ಮಾರ್ಗದೆಡೆ ಹೋಗುವಂತೆ ಮಾಡಿತು. (4) ದೇವರು ಮತ್ತು ಮನುಷ್ಯರ ಗುರುವಾಗಿ ಬುದ್ಧ ಬೋಧೇತನಾಗಿ ಅವರನ್ನು ಬೋಧಿ ಪರಾಯಣರಾಗಿ ಆಧ್ಯಾತ್ಮದ ಹಾದಿಯಲ್ಲಿ ಮುಂದುವರಿಯುವಂತೆ ಮಾಡಿದ. (5) ಯಾವಾಗ ಬುದ್ಧನು 'ದ್ವೇಮೆ ಭಿಕ್ಖವೇ ಅಂತಾ' (ಭಿಕ್ಖುಗಳೇ ಎರಡು ಅತಿರೇಕಗಳಿವೆ) ಎಂದು ಹೇಳಿದನೋ ಆ ಧ್ವನಿ ಪ್ರಪಂಚದಲ್ಲೆಲ್ಲಾ ಅಂದರೆ ಹತ್ತು ಸಾವಿರ ಲೋಕದಾತುಗಳಲ್ಲಿ ಹರಡಿ ಆಗ ಯಾರ್ಯಾರು ಆಧ್ಯಾತ್ಮಿಕ ಪರಿವರ್ತನೆಗೆ ಸಿದ್ಧರಿದ್ದರೋ ಅವರೆಲ್ಲರ ಹೃದಯಗಳು ಬೆಳಕಾದವು. ಆ ಬೆಳಕಾದ ಹೃದಯಗಳಲ್ಲಿ ಕೋಟ್ಯಾನು ಕೋಟಿ ಬ್ರಹ್ಮ ದೇವತೆಗಳೂ ಇದ್ದರು. (6) ಗರ್ಭಧಾರಣೆ, ಹುಟ್ಟು ಮತ್ತು ಜ್ಞಾನೋದಯದ ಸಂದರ್ಭಗಳಲ್ಲಿ ಅಸಾಧಾರಣವಾದ ಹಾಗು ಭಯಚಕಿತಗೊಳಿಸುವ ಮೂವತ್ತೆರಡು ಶಕುನಗಳು ಪ್ರಪಂಚದಲ್ಲಿ ಕಾಣಿಸಿಕೊಂಡು ಸತ್ಯಶೋಧಕರ ಮನಸ್ಸಿನ ಮೇಲೆ ಪರಿಣಾಮ ಬೀರಿತು.

## ಪ್ರಶ್ನೆಗಳು

1. **ಬೋಧಿಸತ್ತನು ತನ್ನ ತಕ್ಷಣದ ಹಿಂದಿನ ಜನ್ಮದಲ್ಲಿ ಏನಾಗಿ, ಎಲ್ಲಿ ಹುಟ್ಟಿದನು? ಮತ್ತು ಯಾವ ಪಾತ್ರ ನಿರ್ವಹಿಸಿದನು ? ಯಾವ ರೂಪದಲ್ಲಿ ಹುಟ್ಟಿದನು ? ಬೋಧಿಸತ್ತನಾಗಿ ಎಲ್ಲರಿಗಿಂತ ಹೇಗೆ ಭಿನ್ನವಾಗಿ ಶ್ರೇಷ್ಠಮಟ್ಟದವನಾಗಿದ್ದನು ?**
2. **ಬೋಧಿಸತ್ತ ಸೇತಕೇತುವಿನ ಬಗ್ಗೆ ಸಂಕ್ಷಿಪ್ತವಾಗಿ ಬರೆಯಿರಿ.**
3. **ಬೋಧಿಸತ್ತ ಸೇತಕೇತುವು ಮಾನವ ಲೋಕದಲ್ಲಿನ ತನ್ನ ಕೊನೆಯ ಹುಟ್ಟನ್ನು ಹೇಗೆ ಪಡೆದನೆಂಬ ಬಗ್ಗೆ ವಿವರವಾಗಿ ಬರೆಯಿರಿ.**
4. **ಬುದ್ಧನು ದೇವರೇ ಅಥವಾ ದೇವರ ಅವತಾರವೇ ? ಒಂದು ವೇಳೆ ಹಾಗಲ್ಲದಿದ್ದರೆ ಕೆಲವರೇಕೆ ಅವರನ್ನು ಹಾಗೆ ವರ್ಣಿಸುತ್ತಾರೆ ? ಹಾಗೆ ಮಾಡಲಾದರೂ ಅವರ ಉದ್ದೇಶವೇನು?**
5. **ಈ ಕೆಳಗಿನವುಗಳ ಬಗ್ಗೆ ಒಂದು ಪ್ಯಾರಾದಲ್ಲಿ ಬರೆಯಿರಿ :**





**ಅ) ರಾಣಿ ಮಹಾಮಾಯೆಯ ಕನಸು**

**ಆ) ರಾಜಕುಮಾರ ಸಿದ್ಧಾರ್ಥನ ಹುಟ್ಟು**

**ಇ) ಹುಟ್ಟಿದ ತಕ್ಷಣ ಏನೆಂದು ಘೋಷಿಸಿದನು ಮತ್ತು ಏಕೆ ?**

**ಈ) ಋಷಿ ಅಸಿತರ ಭವಿಷ್ಯ**

**ಉ) ಋಷಿ ಅಸಿತರು ಏಕಕಾಲಕ್ಕೆ ನಕ್ಕರು ಮತ್ತು ಅತ್ತರು ಏಕೆ ?**

6. **ದೇವದತ್ತ ಮತ್ತು ರಾಜಕುಮಾರ ಸಿದ್ಧಾರ್ಥರ ನಡುವೆ ಆದ ಸಂವಾದದ ಮಹತ್ವವನ್ನು ಸಂಕ್ಷಿಪ್ತವಾಗಿ ನಿಮ್ಮ ದೃಷ್ಟಿಯಲ್ಲಿ ವಿವರಿಸಿ.**
7. **ಸಿದ್ಧಾರ್ಥನು ಯಾವರೀತಿಯಾಗಿ ಮದುವೆಯಾಗಲು ಆಯ್ಕೆ ಮಾಡಿಕೊಂಡನು ?**
8. **ನಾಲ್ಕು ದೃಶ್ಯಗಳ ಹಿಂದಿರುವ ಆಧ್ಯಾತ್ಮಿಕ ಮಹತ್ವದ ಬಗ್ಗೆ ಒಂದು ಪ್ರಬಂಧ ಬರೆಯಿರಿ.**
9. **ಬೋಧಿಸತ್ತನು ಯಾತನಾಮಯ ದೇಹದಂಡನೆ ಮಾಡುತ್ತಿದ್ದ ಮತ್ತು ಯಾವ ಪುರುಷಾರ್ಥಕ್ಕಾಗಿ ಹಾಗೆ ಮಾಡುತ್ತಿದ್ದ ಎಂಬುದನ್ನು ವಿವರಿಸಿ. ಈ ರೀತಿಯ ಸಾಧನೆಯಿಂದ ಏನನ್ನು ಕಲಿತ?**
10. **ರಾಜಕುಮಾರ ಸಿದ್ಧಾರ್ಥನ ಮಹಾ ಪರಿತ್ಯಾಗದ ಬಗ್ಗೆ ಬರೆಯಿರಿ.**
11. **ಸುಜಾತಳು ನೀಡಿದ ಪಾಯಸದಿಂದ ಪ್ರಾರಂಭವಾದ ಜ್ಞಾನೋದಯದ ದಿನದಿಂದ ಹಿಡಿದು ಮಾರನೊಂದಿಗೆ ಯುದ್ಧದಿಂದ ಮುಕ್ತಾಯವಾಗುವವರೆಗಿನ ಎಲ್ಲ ವಿವರಗಳನ್ನು ಕೊಡಿ.**
12. **ಯುದ್ಧ ಮಾಡುವುದಕ್ಕಿಂತ ಮೊದಲು ಏನೆಂದು ನಿರ್ಧರಿಸಿದ? ಬೋಧಿಸತ್ತನು ಸಂಜೆ ಆರರಿಂದ ಮುಂಜಾನೆ ಆರರವರೆಗೆ ಅಂದರೆ ಸಂಬೋಧಿ (ಪರಮೋಚ್ಚ ಜ್ಞಾನೋದಯ) ಪಡೆಯುವವರೆಗೆ ಏನೆಲ್ಲ ಮಾಡಿದನೆಂಬುದನ್ನು ವಿವರಿಸಿ.**
13. **ಬುದ್ಧನು ಮೊದಲ ಉಪದೇಶ ನೀಡಿದುದನ್ನು ವಿವರಿಸಿ.**

## ಅಧ್ಯಾಯ–6

# ಧಮ್ಮಚಕ್ಕ ಪವತ್ತನ ಸುತ್ತ

“ನಾನು ಹೀಗೆ ಕೇಳಿದ್ದೇನೆ. ಒಮ್ಮೆ ಭಗವಾನ್ ಬುದ್ಧರು ವಾರಾಣಸಿ ಬಳಿಯ ಇಸಿಪತನದ ಮಿಗದಾಯಿವನ (ಜಿಂಕೆ ವನ) ದಲ್ಲಿ ತಂಗಿದ್ದರು. ಅಲ್ಲಿ ಐದು ಮಂದಿ ಭಿಕ್ಖುಗಳನ್ನು ಕುರಿತು ಹೀಗೆ ಸಂಬೋಧಿಸಿದರು :

### ಎರಡು ಅತಿರೇಕಗಳು

“ಭಿಕ್ಖುಗಳೇ, ಪ್ರಾಪಂಚಿಕ ಜೀವನವನ್ನು ತೊರೆದವನು ಈ ಎರಡು ಅತಿರೇಕಗಳನ್ನು ಅನುಸರಿಸಕೂಡದು, ಯಾವುವು ಆ ಎರಡು?

ಹೀನ, ಅಸಭ್ಯ, ಲೌಕಿಕ, ತರವಲ್ಲದ, ದುಷ್ಪರಿಣಾಮವನ್ನುಂಟುಮಾಡುವ ಇಂದ್ರಿಯ ಸುಖಗಳಲ್ಲಿ ನಿರತನಾಗಿರುವುದು.

ನೋವನ್ನುಂಟುಮಾಡುವ, ತರವಲ್ಲದ, ದುಷ್ಪರಿಣಾಮ ತರುವ ಸ್ವ–ದೇಹದಂಡನೆಯಲ್ಲಿ ತೊಡಗಿರುವುದು”.

### ಮಧ್ಯಮ ಮಾರ್ಗ

“ಭಿಕ್ಖುಗಳೇ, ಮಧ್ಯಮ ಮಾರ್ಗವು ಈ ಎರಡು ಅತಿರೇಕಗಳಿಂದ ಹೊರತಾಗಿದೆ. ಈ ಮಾರ್ಗದಿಂದ ದರ್ಶನ ಉಂಟಾಗುತ್ತದೆ, ಪರಮಾರ್ಥ ಜ್ಞಾನ ಉದಯವಾಗುತ್ತದೆ, ಪರಮಶಾಂತಿ, ಲೋಕೋತ್ತರ ಪ್ರತ್ಯಕ್ಷ ಜ್ಞಾನ, ಜ್ಞಾನೋದಯ ಮತ್ತು ನಿಬ್ಬಾಣಗಳೆಡೆ ಕೊಂಡೊಯ್ಯುವ ಈ ಮಾರ್ಗವನ್ನು ತಥಾಗತ ಬುದ್ಧ ಕಂಡುಹಿಡಿದನು.

“ಭಿಕ್ಖುಗಳೇ, ತಥಾಗತರಿಂದ ಕಂಡುಹಿಡಿಯಲ್ಪಟ್ಟ ದರ್ಶನವನ್ನು ಉಂಟುಮಾಡುವ, ಪರಮಾರ್ಥ ಜ್ಞಾನವನ್ನುಂಟುಮಾಡುವ, ಪರಮಶಾಂತಿ, ಲೋಕೋತ್ತರ ಪ್ರತ್ಯಕ್ಷ ಜ್ಞಾನ, ಜ್ಞಾನೋದಯ ಹಾಗು ನಿಬ್ಬಾಣಗಳೆಡೆ ಕೊಂಡೊಯ್ಯುವ ಮಧ್ಯಮ ಮಾರ್ಗ ಯಾವುದು?

### ಆರ್ಯ ಅಷ್ಟಾಂಗಿಕ ಮಾರ್ಗ

“ಇದೇ ಆರ್ಯ ಅಷ್ಟಾಂಗಿಕ ಮಾರ್ಗ : ಸರಿಯಾದ ದೃಷ್ಟಿ, ಸರಿಯಾದ ಸಂಕಲ್ಪ, ಸರಿಯಾದ ಮಾತು, ಸರಿಯಾದ ಕರ್ಮ, ಸರಿಯಾದ ಜೀವನೋಪಾಯ, ಸರಿಯಾದ ಪ್ರಯತ್ನ, ಸರಿಯಾದ ಜಾಗ್ರತೆ ಮತ್ತು ಸರಿಯಾದ ಮನೋ ಏಕಾಗ್ರತೆ.

“ಭಿಕ್ಖುಗಳೇ, ಇದೇ ತಥಾಗತನಿಂದ ಕಂಡುಹಿಡಿಯಲ್ಪಟ್ಟ ಮಧ್ಯಮ ಮಾರ್ಗ. ಈ ಮಾರ್ಗವು ದರ್ಶನವನ್ನುಂಟುಮಾಡುತ್ತದೆ; ಪರಮಾರ್ಥ ದೃಷ್ಟಿಯನ್ನುದಯಿಸುತ್ತದೆ.





ಪರಮಶಾಂತಿ, ಲೋಕೋತ್ತರ ಪ್ರತ್ಯಕ್ಷ ಅನುಭವ, ಜ್ಞಾನೋದಯ ಮತ್ತು ನಿಬ್ಬಾಣಗಳೆಡೆಗೆ ಕೊಂಡೊಯ್ಯುತ್ತದೆ.

### ಚತುರಾರ್ಯಸತ್ಯಗಳು

“ಭಿಕ್ಖುಗಳೇ, ಇದೇ ದುಃಖ ಎಂಬ ಆರ್ಯ ಸತ್ಯ : ಹುಟ್ಟು ದುಃಖ, ಮುಪ್ಪು ದುಃಖ, ರೋಗವು ದುಃಖ, ಮರಣವು ದುಃಖ, ಅಪ್ರಿಯರೊಂದಿಗೆ ಇರುವುದು ದುಃಖ, ಪ್ರಿಯರಿಂದ ಅಗಲುವುದು ದುಃಖ, ಬಯಸಿದ್ದು ಲಭಿಸದಿದ್ದರೆ ದುಃಖ, ಸಂಕ್ಷಿಪ್ತದಲ್ಲಿ ಐದು ಅಂಟುವಿಕೆಯ ಸ್ವಭಾವದ ರಾಶಿಗಳೂ ದುಃಖವೇ.

“ಭಿಕ್ಖುಗಳೇ, ಇದೇ ದುಃಖದ ಮೂಲ ಎಂಬ ಆರ್ಯ ಸತ್ಯ. ಆಸೆ ಅಥವಾ ತೃಷ್ಣೆ, ಸಂತೋಷ ಮತ್ತು ರಾಗಗಳಿಂದ ಕೂಡಿದ ಪುನರ್ಜನ್ಮಕ್ಕೆ ಕಾರಣವಾಗಿ ಒಮ್ಮೆ ಇಲ್ಲಿ, ಒಮ್ಮೆ ಅಲ್ಲಿ ಆನಂದ ಕಾಣುವಂತದ್ದು. ಅಂದರೆ ಇಂದ್ರಿಯ ಸುಖಕ್ಕಾಗಿ ಆಸೆ (ಕಾಮ ತೃಷ್ಣೆ), ಮತ್ತೆ ಮತ್ತೆ ಇರಲೆಂಬ ಆಸೆ (ಭವ ತೃಷ್ಣೆ) ಮತ್ತು ಇರದಿರಲೆಂಬ ಆಸೆ (ವಿಭವ ತೃಷ್ಣೆ).

“ಭಿಕ್ಖುಗಳೇ, ಇದೇ ದುಃಖ ನಿರೋಧ ಎಂಬ ಆರ್ಯಸತ್ಯ. ಅದೇ ಆಸೆ (ತೃಷ್ಣೆ)ಯು ಶೇಷವಿಲ್ಲದಂತೆ ಮಾಸಿ ಹೋಗುವುದು, ಆ ಆಸೆಯೇ ನಿರ್ಮೂಲವಾಗುವುದು, ತೊರೆಯುವುದು, ಸಂಪೂರ್ಣವಾಗಿ ತ್ಯಜಿಸುವುದು, ಅದರಿಂದ ಮುಕ್ತಿ ಹೊಂದುವುದು ಮತ್ತು ವಿರಕ್ತರಾಗುವುದು.

“ಭಿಕ್ಖುಗಳೇ, ಇದೇ ದುಃಖ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗ ಎಂಬ ಆರ್ಯಸತ್ಯ. ಅದೇ ಆರ್ಯ ಅಷ್ಟಾಂಗಿಕ ಮಾರ್ಗ : ಸರಿಯಾದ ದೃಷ್ಟಿ, ಸರಿಯಾದ ಸಂಕಲ್ಪ, ಸರಿಯಾದ ಮಾತು, ಸರಿಯಾದ ಕರ್ಮ, ಸರಿಯಾದ ಜೀವನೋಪಾಯ, ಸರಿಯಾದ ಪ್ರಯತ್ನ, ಸರಿಯಾದ ಜಾಗ್ರತೆ, ಸರಿಯಾದ ಮನೋ ಏಕಾಗ್ರತೆ.

“ಭಿಕ್ಖುಗಳೇ, ಇದೇ ದುಃಖ ಆರ್ಯಸತ್ಯ ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

“ಭಿಕ್ಖುಗಳೇ, ಈ ದುಃಖ ಆರ್ಯಸತ್ಯವನ್ನು ಸಂಪೂರ್ಣವಾಗಿ ಗ್ರಹಿಸತಕ್ಕದ್ದು ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

“ಭಿಕ್ಖುಗಳೇ, ಈ ದುಃಖ ಆರ್ಯಸತ್ಯವನ್ನು ಸಂಪೂರ್ಣವಾಗಿ ಗ್ರಹಿಸಲ್ಪಟ್ಟಿದೆ ಎಂಬ ಅರಿವಿನಿಂದಾಗಿ, ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ

ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಇದೇ ದುಃಖದ ಮೂಲ ಆರ್ಯಸತ್ಯ ಎಂಬ ಅರಿವಿನಿಂದಾಗಿ, ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಈ ದುಃಖದ ಮೂಲವನ್ನು ತೊಡೆದುಹಾಕತಕ್ಕದ್ದು ಎಂಬ ಆರ್ಯಸತ್ಯದ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಈ ದುಃಖದ ಮೂಲವನ್ನು ತೊಡೆದುಹಾಕಲ್ಪಟ್ಟಿದೆ ಎಂಬ ಆರ್ಯಸತ್ಯದ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಇದೇ ದುಃಖದ ನಿರೋಧ ಆರ್ಯಸತ್ಯ ಸಾಕ್ಷಾತ್ಕಾರವಾಗಿದೆ ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಈ ದುಃಖ ನಿರೋಧ ಆರ್ಯಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳತಕ್ಕದ್ದು ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಇದೇ ದುಃಖದ ನಿರೋಧ ಆರ್ಯಸತ್ಯ ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಇದೇ ದುಃಖದ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗ ಆರ್ಯಸತ್ಯ ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಜ್ಞಾನ ಉಂಟಾಯಿತು, ಪರಿಪೂರ್ಣ ಪ್ರಜ್ಞೆ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.





"ಭಿಕ್ಖುಗಳೇ, ಇದೇ ದುಃಖದ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗ ಆರ್ಯಸತ್ಯ, ಇದನ್ನು ಬೆಳೆಸಿಕೊಳ್ಳತಕ್ಕದ್ದು ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಪ್ರಜ್ಞೆ ಉಂಟಾಯಿತು, ಪರಿಪೂರ್ಣ ಜ್ಞಾನ ಉಂಟಾಯಿತು, ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಇದೇ ದುಃಖ ನಿರೋಧಕ್ಕೆ ಕೊಂಡೊಯ್ಯುವ ಮಾರ್ಗ ಆರ್ಯಸತ್ಯ, ಇದನ್ನು ಬೆಳೆಸಿಕೊಳ್ಳಲ್ಪಟ್ಟಿದೆ ಎಂಬ ಅರಿವಿನಿಂದಾಗಿ ನನ್ನಲ್ಲಿ ಇದುವರೆವಿಗೂ ಯಾರಿಗೂ ಗೊತ್ತಿರದ ಧರ್ಮದಲ್ಲಿ ದರ್ಶನ ಉಂಟಾಯಿತು, ಪ್ರಜ್ಞೆ ಉಂಟಾಯಿತು, ಪರಿಪೂರ್ಣ ಜ್ಞಾನ ಉಂಟಾಯಿತು ವಿದ್ಯೆ ಉಂಟಾಯಿತು ಮತ್ತು ಬೆಳಕು ಉಂಟಾಯಿತು.

"ಭಿಕ್ಖುಗಳೇ, ಎಲ್ಲಿಯವರೆಗೆ ಈ ಚತುರಾರ್ಯ ಸತ್ಯಗಳ ಬಗ್ಗೆ ಮೂರು ವಿಧಾನದ ಹನ್ನೆರಡು ರೀತಿಗಳಲ್ಲಿ ಸೂಕ್ಷ್ಮ ಪರಿಜ್ಞಾನ ಮತ್ತು ದರ್ಶನದ ಮೂಲಕ ಪರಿಪೂರ್ಣವಾಗಿ ಪರಿಶುದ್ಧವಾಗಲಿಲ್ಲವೋ ಅಲ್ಲಿಯವರೆಗೂ ನಾನು ಅಸಮಾನವಾದ ಸರ್ವಶ್ರೇಷ್ಠ ಜ್ಞಾನದ ಉತ್ತುಂಗ ಸ್ಥಿತಿಯ ಜ್ಞಾನೋದಯವನ್ನು ಕಂಡುಹಿಡಿದಿದ್ದೇನೆ ಎಂದು ದೇವ, ಮಾರ, ದೈವತ್ವ ಬ್ರಹ್ಮ, ಶ್ರಮಣ–ಬ್ರಾಹ್ಮಣ, ರಾಜ–ಮನುಷ್ಯರಿಂದ ಕೂಡಿದ ಈ ಲೋಕಕ್ಕೆ ತಿಳಿಯಪಡಿಸಲಿಲ್ಲ.

"ಆದರೆ ಭಿಕ್ಖುಗಳೇ, ಈ ಚತುರಾರ್ಯ ಸತ್ಯಗಳ ಬಗ್ಗೆ ಮೂರು ವಿಧಾನದ ಹನ್ನೆರಡು ರೀತಿಗಳಲ್ಲಿ ಸೂಕ್ಷ್ಮ ಪರಿಜ್ಞಾನ ಮತ್ತು ದರ್ಶನದ ಮೂಲಕ ಪರಿಪೂರ್ಣವಾಗಿ, ಪರಿಶುದ್ಧನಾದ ಮೇಲೆಯೇ ನಾನು ಅಸಮಾನವಾದ ಸರ್ವ ಶ್ರೇಷ್ಠ ಜ್ಞಾನದ ಉತ್ತುಂಗ ಸ್ಥಿತಿಯ ಈ ಜ್ಞಾನೋದಯವನ್ನು ಕಂಡುಹಿಡಿದಿದ್ದೇನೆ ಎಂದು ದೇವ, ಮಾರ, ದೈವತ್ವ ಬ್ರಹ್ಮ ಶ್ರಮಣ–ಬ್ರಾಹ್ಮಣ, ರಾಜ–ಮನುಷ್ಯರಿಂದ ಕೂಡಿದ ಈ ಲೋಕಕ್ಕೆ ತಿಳಿಯಪಡಿಸಿದೆನು

"ನಿಜವಾಗಿಯೂ ನನ್ನ ಮನಸ್ಸು ವಿಮುಕ್ತಿಗೊಂಡು ಸ್ಥಿರವಾಗಿದೆ ಎಂಬ ಜ್ಞಾನ ಮತ್ತು ದರ್ಶನ ನನ್ನಲ್ಲಿ ಉಂಟಾಯಿತು. ಇದೇ ಕೊನೆಯ ಜನ್ಮ. ಇನ್ನುಮುಂದೆ ಪುನರ್ಜನ್ಮವಿಲ್ಲ".

ಹೀಗೆ ಭಗವಾನ್ ಬುದ್ಧರು ನುಡಿದರು. ಸ್ಫೂರ್ತಿಗೊಂಡ ಐದು ಜನ ಭಿಕ್ಖುಗಳು ಬುದ್ಧನ ಮಾತುಗಳಿಂದ ಪ್ರಸನ್ನರಾದರು.

ಯಾವಾಗ ಈ ಧರ್ಮೋಪದೇಶವನ್ನು ಕೊಡಲಾಯಿತೊ, ಆಗ ಪೂಜ್ಯ ಕೊಂಡಞ್ಞರಿಗೆ ಪರಿಶುದ್ಧ ಮತ್ತು ನಿಷ್ಕಳಂಕವಾದ ಈ ಸತ್ಯದರ್ಶನ ಉಂಟಾಯಿತು: 'ಯಾವುದೆಲ್ಲ ಉದಯಿಸುವ ಧರ್ಮವನ್ನು ಹೊಂದಿದೆಯೋ, ಅದೆಲ್ಲ ನಿರೋಧವಾಗುವ (ನಶಿಸಿಹೋಗುವ) ಧರ್ಮದ್ದಾಗಿದೆ'.

ಭಗವಾನರಿಂದ ಧರ್ಮಚಕ್ರವು ಹೀಗೆ ಪ್ರವರ್ತಿಸಲ್ಪಟ್ಟಾಗ ಭೂ–ದೇವತೆಗಳೆಲ್ಲಾ ಒಕ್ಕೊರಲಿನಿಂದ ಹೀಗೆ ಸಾರಿದರು :

"ವಾರಾಣಸಿಯಲ್ಲಿನ ಇಸಿಪತನದಲ್ಲಿರುವ ಜಿಂಕೆ ವನದಲ್ಲಿ ಭಗವಾನರಿಂದ ಅಸಮಾನವಾದ ಧರ್ಮಚಕ್ರವು ಪ್ರವರ್ತಿಸಲ್ಪಟ್ಟಿದೆ. ಇದನ್ನು ಈ ಲೋಕದ ಯಾರಿಂದಲೂ ಅಂದರೆ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ದೇವತೆಯಾಗಲಿ, ಮಾರನಾಗಲಿ ಅಥವಾ ದೈವತ್ವ ಬ್ರಹ್ಮನಿಂದಾಗಲಿ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ".

ಭೂ ದೇವತೆಗಳ ಈ ಘೋಷಣೆಯನ್ನು ನಾಲ್ಕು ದೇವದೂತರು (ಚಾತುಮ್ಮಹಾರಾಜಕರು) ಶ್ರದ್ಧಾ ಮನಸ್ಸಿನಿಂದ, ಒಕ್ಕೊರಲಿನಿಂದ ಹೀಗೆ ಸಾರಿದರು : "ವಾರಾಣಸಿಯಲ್ಲಿನ ಇಸಿಪತನದಲ್ಲಿರುವ ಜಿಂಕೆ ವನದಲ್ಲಿ ಭಗವಾನರಿಂದ ಅಸಮಾನವಾದ ಧರ್ಮಚಕ್ರವು ಪ್ರವರ್ತಿಸಲ್ಪಟ್ಟಿದೆ. ಇದನ್ನು ಈ ಲೋಕದ ಯಾರಿಂದಲೂ ಅಂದರೆ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ದೇವತೆಯಾಗಲಿ, ಮಾರನಾಗಲಿ ಅಥವಾ ದೈವತ್ವ ಬ್ರಹ್ಮನಿಂದಾಗಲಿ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ".

ಚಾತುಮ್ಮಹಾರಾಜಿಕ ದೇವತೆಗಳ ಈ ಘೋಷಣೆಯನ್ನು ಕೇಳಿದ ತಾವತಿಂಸ ದೇವತೆಗಳು (ಮೂವತ್ತೂರು ದೇವತೆಗಳ ಗುಂಪು) ಶ್ರದ್ಧಾ ಮನಸ್ಸಿನಿಂದ, ಒಕ್ಕೊರಲಿನಿಂದ ಹೀಗೆ ಸಾರಿದರು : "ವಾರಣಾಸಿಯಲ್ಲಿನ ಇಸಿಪತನದಲ್ಲಿರುವ ಜಿಂಕೆ ವನದಲ್ಲಿ ಭಗವಾನರಿಂದ ಅಸಮಾನವಾದ ಧರ್ಮಚಕ್ರವು ಪ್ರವರ್ತಿಸಲ್ಪಟ್ಟಿದೆ. ಇದನ್ನು ಈ ಲೋಕದ ಯಾರಿಂದಲೂ ಅಂದರೆ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ದೇವತೆಯಾಗಲಿ, ಮಾರನಾಗಲಿ ಅಥವಾ ದೈವತ್ವ ಬ್ರಹ್ಮನಿಂದಾಗಲಿ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ".

ತಾವತಿಂಸ ದೇವತೆಗಳ ಈ ಘೋಷಣೆಯನ್ನು ಕೇಳಿದ ಯಾಮ ದೇವತೆಗಳು (ದುರ್ಗತಿ ಲೋಕಗಳ ಮೇಲೆ ಹಿಡಿತವುಳ್ಳ ದೇವತೆಗಳು) ಶ್ರದ್ಧಾ ಮನಸ್ಸಿನಿಂದ, ಒಕ್ಕೊರಲಿನಿಂದ ಹೀಗೆ ಸಾರಿದರು : "ವಾರಣಾಸಿಯಲ್ಲಿನ ಇಸಿಪತನದಲ್ಲಿರುವ ಜಿಂಕೆ ವನದಲ್ಲಿ ಭಗವಾನರಿಂದ ಅಸಮಾನವಾದ ಧರ್ಮಚಕ್ರವು ಪ್ರವರ್ತಿಸಲ್ಪಟ್ಟಿದೆ. ಇದನ್ನು ಈ ಲೋಕದ ಯಾರಿಂದಲೂ ಅಂದರೆ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ದೇವತೆಯಾಗಲಿ, ಮಾರನಾಗಲಿ ಅಥವಾ ದೈವತ್ವ ಬ್ರಹ್ಮನಿಂದಾಗಲಿ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ".

ಯಾಮ ದೇವತೆಗಳ ಈ ಘೋಷಣೆಯನ್ನು ಕೇಳಿದ ತುಸಿತ ದೇವತೆಗಳು (ಸಂತೋಷದಿಂದಿರುವ ದೇವತೆಗಳು) ಮತ್ತು ನಿಮ್ಮಾನರತಿ ದೇವತೆಗಳು (ನಿರ್ಮಾಣದಲ್ಲಿ ಆನಂದ ಪಡುವ) ಶ್ರದ್ಧಾ ಮನಸ್ಸಿನಿಂದ, ಒಕ್ಕೊರಲಿನಿಂದ ಹೀಗೆ ಸಾರಿದರು : "ವಾರಣಾಸಿಯಲ್ಲಿನ ಇಸಿಪತನದಲ್ಲಿರುವ ಜಿಂಕೆ ವನದಲ್ಲಿ ಭಗವಾನರಿಂದ ಅಸಮಾನವಾದ ಧರ್ಮಚಕ್ರವು ಪ್ರವರ್ತಿಸಲ್ಪಟ್ಟಿದೆ. ಇದನ್ನು ಈ ಲೋಕದ ಯಾರಿಂದಲೂ ಅಂದರೆ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ದೇವತೆಯಾಗಲಿ, ಮಾರನಾಗಲಿ ಅಥವಾ ದೈವತ್ವ ಬ್ರಹ್ಮನಿಂದಾಗಲಿ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ".





ಪರನಿಮ್ಮಿತ ವಸತ್ತಿ ದೇವತೆಗಳು (ಬೇರೆಯವರ ನಿರ್ಮಾಣಗಳ ಮೇಲೆ ಹಿಡಿತವುಳ್ಳ) ಮತ್ತು ಬ್ರಹ್ಮಕಾಯಿಕ ದೇವತೆಗಳು (ರೂಪಲೋಕದ ಬ್ರಹ್ಮ) ಶ್ರದ್ಧಾ ಮನಸ್ಸಿನಿಂದ, ಒಕ್ಕೊರಲಿನಿಂದ ಹೀಗೆ ಸಾರಿದರು : "ವಾರಣಾಸಿಯಲ್ಲಿನ ಇಸಿ ಪತನದಲ್ಲಿರುವ ಜಿಂಕೆ ವನದಲ್ಲಿ ಭಗವಾನರಿಂದ ಅಸಮಾನವಾದ ಧರ್ಮಚಕ್ರವು ಪ್ರವರ್ತಿಸಲ್ಪಟ್ಟಿದೆ. ಇದನ್ನು ಈ ಲೋಕದ ಯಾರಿಂದಲೂ ಅಂದರೆ ಶ್ರಮಣನಾಗಲಿ, ಬ್ರಾಹ್ಮಣನಾಗಲಿ, ದೇವತೆಯಾಗಲಿ, ಮಾರನಾಗಲಿ ಅಥವಾ ದೈವತ್ವ ಬ್ರಹ್ಮನಿಂದಾಗಲಿ ಹಿಂದಕ್ಕೆ ತಿರುಗಿಸಲು ಸಾಧ್ಯವಿಲ್ಲ".

ಹೀಗೆ ಆ ಕ್ಷಣವೇ ವಿಳಂಬವಿಲ್ಲದೆ ಈ ಸಂದೇಶವು ಬ್ರಹ್ಮ ದೇವತೆಗಳ ಲೋಕದವರೆಗೂ ತಲುಪಿತು. ಹಾಗೆಯೇ ಪರಮಾರ್ಥವಾಗಿ ಲೋಕದ ಹತ್ತು ಸಾವಿರ ಲೋಕಧಾತುಗಳು ಕಂಪಿಸಿದವು, ನಡುಗಿದವು ಮತ್ತು ಅದುರಿದವು.

ಪ್ರಮಾಣಕ್ಕೆ ಸಿಲುಕದಂತಹ ಮತ್ತು ಅತ್ಯುತ್ತಮ ಮಹಾಕಾಂತಿಯು ಪ್ರಕಟವಾಗಿ ಲೋಕದಲ್ಲಿನ ದೇವತೆಗಳ ಕಾಂತಿಯನ್ನು ಮೀರಿ ಹರಡಿತು.

ಆಗ ಬುದ್ಧ ಭಗವಾನರು ಹರ್ಷಚಿತ್ತದಿಂದ ಹೀಗೆ ಉದ್ಗರಿಸಿದರು : "ಕೊಂಡಞ್ಞ, ನೀನು ನಿಜವಾಗಿಯೂ ಜ್ಞಾನಿ, ನೀನು ನಿಜವಾಗಿಯೂ ತಿಳಿದವನಾಗಿರುವೆ".

ಹೀಗೆ ಅಂದಿನಿಂದಲೇ ಕೊಂಡಞ್ಞರು 'ಜ್ಞಾನಿ ಕೊಂಡಞ್ಞ' ಎಂದೇ ಕರೆಯಲ್ಪಟ್ಟರು.

– ೦ – ೦ –

## ಧಮ್ಮಚಕ್ಕ ಪವತ್ತನ ಸುತ್ತದ ಮೇಲೆ ಒಂದು ಕಿರು ವ್ಯಾಖ್ಯಾನ

ಬುದ್ಧನು ಜ್ಞಾನೋದಯ ಹೊಂದಿದ ಮೇಲೆ ನೀಡಿದ ಮೊಟ್ಟಮೊದಲ ಉಪನ್ಯಾಸವೇ ಧಮ್ಮಚಕ್ಕ ಪವತ್ತನ ಸುತ್ತ.

'ಚಕ್ರ'ವು ಬೌದ್ಧ ಧರ್ಮದ ಒಂದು ಪವಿತ್ರ ಮತ್ತು ಪರಿಪೂರ್ಣತೆಯ ಸಂಕೇತ ಅಥವಾ ಗುರುತು. ಇದು ಬುದ್ಧವಾಣಿ (ಶಾಸನ)ಯನ್ನು ಪ್ರತಿನಿಧಿಸುತ್ತದೆ. 'ಚಕ್ರವನ್ನು ತಿರುಗಿಸುವುದು' ಒಂದು ರೂಪಕಾಲಂಕಾರವಾಗಿ ಬಳಸಲಾಗಿದೆ. ಬುದ್ಧನ ವಾಣಿ ಅಥವಾ ಶಾಸನವು ಈ ಮೊದಲ ಸುತ್ತದ ಮೂಲಕ ಅಸ್ತಿತ್ವಕ್ಕೆ ಬಂದಿತು. ಬುದ್ಧನ ಈ ಜ್ಞಾನೋಪದೇಶವು ಪ್ರಾಪಂಚಿಕ ಅಸ್ತಿತ್ವ ಮತ್ತು ಲೋಕೋತ್ತರ ಮುಕ್ತಿ ಸ್ಥಿತಿಯ ನಡುವಿನ ಸೇತುವೆಯಾಗಿರುವಂತೆ ರೂಪಿಸಲಾಗಿದೆ.

ಧಮ್ಮಚಕ್ಕ ಪವತ್ತನ ಸುತ್ತ ಬೌದ್ಧ ಧರ್ಮದ ಹೂರಣವೇ ಆಗಿದ್ದು ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿದೆ :

1. ಅತಿರೇಕಗಳಿಂದ ಹೊರತಾದ ಮಧ್ಯಮ ಮಾರ್ಗ.
2. ಆರ್ಯ ಅಷ್ಟಾಂಗ ಮಾರ್ಗವನ್ನು ಗಟ್ಟಿಗೊಳಿಸುವ ಮಧ್ಯಮ ಮಾರ್ಗ.
3. ಲೌಕಿಕದಿಂದ ಲೋಕೋತ್ತರ ಅರ್ಥಾತ್ ಬಂಧನದಿಂದ ಮುಕ್ತಿಯೆಡೆಗೆ ಕರೆದೊಯ್ಯುವ ಆಧ್ಯಾತ್ಮಿಕ ಪರಿವರ್ತನೆ ಮಾಡುವ ಚತುರಾರ್ಯ ಸತ್ಯದ ದ್ವಾದಸಾಕಾರಗಳು.

ಬುದ್ಧ ಏನೆಲ್ಲಾ ತನ್ನ ನಲವತ್ತೈದು ವರ್ಷಗಳ ಧಮ್ಮ ಬದುಕಿನಲ್ಲಿ ಬೋಧಿಸಿದರೋ ಅವೆಲ್ಲ ಈ ಮೇಲೆ ಹೇಳಿದ ಮೂರು ತತ್ತ್ವಗಳ ಸಾರವಾಗಿರುತ್ತದೆ. ಬುದ್ಧನು ತನ್ನ ಮೊದಲ ಉಪನ್ಯಾಸವನ್ನು ಐದು ಭಿಕ್ಖುಗಳ ಗುಂಪಿಗೆ ವಾರಾಣಸಿ ಬಳಿ ಇತಿಪತನದಲ್ಲಿರುವ ಮಿಗದಾಯಿ ವನ್ಯಧಾಮದಲ್ಲಿ ನೀಡಿದನು. ಈ ಐದುಜನ ಶಿಷ್ಯರೇ ಮುಂದೆ ಜ್ಞಾನೋದಯ ಹೊಂದಿದ ಬುದ್ಧನ ಮೊದಲ ಐದು ಅರ್ಹತರು.

ಬುದ್ಧನು ಸಮ್ಮಾಸಂಬೋಧಿಯನ್ನು ಪಡೆದಮೇಲೆ ಏಳು ವಾರಗಳ ಕಾಲ ಸಮಾದಿ ಸ್ಥಿತಿಯಲ್ಲಿದ್ದನು. ಸಮಾಧಿ ಸ್ಥಿತಿಯಲ್ಲಿರುವಾಗಲೇ ಲೋಕೋತ್ತರ ಅನುಭವದಿಂದ ತಾನು ಮುಂದೆ ಏನೆಲ್ಲಾ ಮಾಡುವೆನೆಂಬುದನ್ನು ಕಂಡುಕೊಂಡನು. ದಿವ್ಯದೃಷ್ಟಿಯ ಮೂಲಕ ತನ್ನ ಧಮ್ಮವನ್ನು ಅರ್ಥಮಾಡಿಕೊಳ್ಳುವ ಶಕ್ತಿ ಯಾರಿಗೆ ಇದೆ ಎಂಬುದನ್ನು ನೋಡಿದನು. ತನ್ನ ಧಮ್ಮವನ್ನು ಅರ್ಥಮಾಡಿಕೊಳ್ಳುವ ಶಕ್ತಿ ಇದ್ದ ಮತ್ತು ತಾನು ಸಂಸಾರವನ್ನು ಮತ್ತು ರಾಜ್ಯವನ್ನು ತೊರೆದು ಬಂದನಂತರದಲ್ಲಿ ಜೊತೆಗೆ ಇದ್ದ ಆಲಾರ ಮತ್ತು ಉದ್ದಕ ಅವರು ಇತ್ತೀಚೆಗಷ್ಟೇ ತೀರಿ ಹೋಗಿರುವುದನ್ನು ದೂರದೃಷ್ಟಿಯಿಂದ ಅರಿತನು. ತನ್ನ ದಿವ್ಯ ದೃಷ್ಟಿಯನ್ನು ಇನ್ನೂ ಮುಂದಕ್ಕೆ ಹರಿಸಲಾಗಿ ಇಸಿಪತನದಲ್ಲಿ ದೇಹದಂಡನೆ ಮೂಲದ ಸಾಧನಾ ಪಥದಲ್ಲಿದ್ದ ಸಂದರ್ಭದಲ್ಲಿ ತನ್ನ ಸೇವೆಯನ್ನು ಮಾಡಿದ ಐದುಜನ ಸಂನ್ಯಾಸಿಗಳು ಇರುವುದನ್ನು ಕಂಡನು. ಯಾವಾಗ ಮಧ್ಯಮ ಮಾರ್ಗವನ್ನು ಆರಿಸಿಕೊಂಡನೋ ಆಗ ಈ ಸಂನ್ಯಾಸಿಗಳು ತನ್ನನ್ನು ಬಿಟ್ಟು ಹೋಗಿದ್ದರು.

ಭಗವಾನ್ ಬುದ್ಧರು ಈ ಐದುಜನ ಸಂನ್ಯಾಸಿಗಳಿಗೆ ಧಮ್ಮವನ್ನು ಹೇಳಲು ವಾರಾಣಸಿಗೆ ತೆರಳಿ, ಅಲ್ಲಿಂದ ಮಿಗದಾಯಿ (ಜಿಂಕೆವನ)ಗೆ ಬಂದರು. ಬುದ್ಧ ಮಿಗದಾಯಿ ಕಡೆಗೆ ಬರುತ್ತಿರುವುದನ್ನು ಕಂಡ ಐದುಜನ ಸಂನ್ಯಾಸಿಗಳು ಬುದ್ಧನನ್ನು ಸ್ವಾಗತಿಸಬಾರದೆಂದು ತೀರ್ಮಾನಿಸಿಕೊಂಡರು. ಆದರೆ ಬುದ್ಧ ಹತ್ತಿರ ಹತ್ತಿರ ಬರುತ್ತಿದ್ದಂತೆ ಸ್ವಾಗತಿಸುವ ಬಗ್ಗೆ ಅವರು ತೆಗೆದುಕೊಂಡ ನಿರ್ಧಾರ ಕಳೆಗುಂದುತ್ತಾ ಬಂದಿತು. ಅಂತೂ ಬುದ್ಧ ತೀರ ಹತ್ತಿರ ಬಂದಾಗ ಸ್ನೇಹಿತರನ್ನು ಬರಮಾಡಿಕೊಳ್ಳುವ ರೀತಿಯಲ್ಲಿ ಸಂಬೋಧಿಸಿದರು.

ಬುದ್ಧ ತಕ್ಷಣವೇ ಅವರನ್ನು ತಿದ್ದಿದನು : "ತಥಾಗತನಾದ ನನ್ನನ್ನು ಸ್ನೇಹಿತರನ್ನು ಕರೆಯುವಂತೆ ಕರೆಯಬೇಡಿ. ಭಿಕ್ಖುಗಳೇ, ಈ ತಥಾಗತನು ಅರ್ಹತನೂ ಮತ್ತು ಸಮ್ಮಾ ಸಂಬುದ್ಧನೂ ಆಗಿದ್ದಾನೆ. ಅಮರತ್ವವನ್ನು ಹೊಂದಿದ್ದೇನೆ. ಭಿಕ್ಖುಗಳೇ, ಕಿವಿಗೊಡಿ,





ನಿಮಗೆ ಧಮ್ಮವನ್ನು ಬೋಧಿಸುತ್ತೇನೆ. ಧಮ್ಮದಂತೆ ನೀವು ನಡೆದುಕೊಂಡಲ್ಲಿ ಕೂಡಲೇ ನಿಬ್ಬಾಣವನ್ನು ಹೊಂದುವಿರಿ".

ಸಂನ್ಯಾಸಿಗಳು ಬುದ್ಧನಲ್ಲಿ ತಪ್ಪು ಕಂಡುಹಿಡಿದು ಹೀಗೆ ಹೇಳಿದರು : "ಘನಘೋರ ತಪಸ್ಸುಗಳನ್ನು ಮಾಡಿದಾಗ್ಯೂ ನೀವು ನಿಬ್ಬಾಣವನ್ನು ಸಾಕ್ಷಾತ್ಕರಿಸಿಕೊಳ್ಳಲಿಲ್ಲ. ಈಗ ನೀವು ಅನುಕೂಲಕರ ಬದುಕನ್ನು ನಡೆಸುತ್ತಲೇ ತಪಸ್ಸಿನ ಹಾದಿಯನ್ನು ತೊರೆದಿರುವಾಗ, ನಿಬ್ಬಾಣ ಹೊಂದಿದ್ದೀರೆಂದು ಹೇಗೆ ಹೇಳುವಿರಿ?"

ಅದಕ್ಕೆ ಬುದ್ಧ ಹೇಳಿದನು : "ಭಿಕ್ಖುಗಳೇ, ತಥಾಗತನು ದಾರಿ ತಪ್ಪಿಲ್ಲ ಮತ್ತು ಅನುಕೂಲಕರ ಬದುಕನ್ನೂ ನಡೆಸುತ್ತಿಲ್ಲ. ನಿಬ್ಬಾಣವನ್ನು ಹೊಂದಿದ್ದೇನೆ. ಧಮ್ಮಕ್ಕೆ ಬೆಲೆ ಕೊಡಿ. ಧಮ್ಮ ಸಾಧನೆಯಲ್ಲಿ ತೊಡಗಿದರೆ ನೀವೂ ಸಹ ನಿಬ್ಬಾಣವನ್ನು ಹೊಂದುವಿರಿ". ಸಂನ್ಯಾಸಿಗಳು ತಮ್ಮ ವಾದಕ್ಕೆ ಬದ್ಧರಾಗಿ ಮೇಲಿನಂತೆಯೇ ಪುನಃ ಸಂಶಯ ವ್ಯಕ್ತಪಡಿಸಿದರು. ಬುದ್ಧರೂ ಸಹ ಮೇಲಿನಂತೆಯೇ ಪುನಃ ಪುನಃ ಹೇಳಿದರು. ಆನಂತರದಲ್ಲಿ ಬುದ್ಧ ಹೀಗೆ ಕೇಳಿದನು, "ಭಿಕ್ಖುಗಳೇ, ನಾನು ಈ ಹಿಂದೆ ಎಂದೂ ಹೀಗೆ ಮಾತನಾಡಿಲ್ಲ ಎನ್ನುವುದನ್ನು ಒಪ್ಪುವಿರಾ ?" ಸಂನ್ಯಾಸಿಗಳು ಹೌದೆಂದು ಒಪ್ಪಿಕೊಂಡು ಬುದ್ಧನ ವಾಣಿಯನ್ನು ಸ್ವೀಕರಿಸಿದರು.

ಸಂನ್ಯಾಸಿಗಳ ಚಿತ್ತ ಈಗ ಸತ್ಯದತ್ತ ಹೊರಳಿತು. ಸತ್ಯವನ್ನು ಸ್ವೀಕರಿಸುವುದಕ್ಕಾಗಿ ಮುಕ್ತ ಮನಸ್ಸಿನವರಾದರು. ಉನ್ನತ, ಆಧ್ಯಾತ್ಮಿಕ ಅನುಭೂತಿಗೆ ಮುಕ್ತ ಮನಸ್ಸು ತುಂಬಾ ಅವಶ್ಯ. ಆನಂತರದಲ್ಲಿ ಭಗವಾನ್ ಬುದ್ಧ ಧಮ್ಮಚಕ್ಕ ಪವತ್ತನ ಸುತ್ತವನ್ನು ಅವರಿಗೆ ಹೇಳಿದನು. ಈ ಸುತ್ತ ಬುದ್ಧನೇ ಕಂಡುಹಿಡಿದದ್ದು. ಸರ್ವಜ್ಞನಾದ ಬುದ್ಧನ ಬೋಧನೆಯ ಸಾರವೇ ಈ ಸೂಕ್ಷ್ಮ ಸುತ್ತದಲ್ಲಿ ಅಡಗಿದೆ. ಈ ಸುತ್ತದಲ್ಲಿ ಅಡಗಿರುವ ಅಂಶಗಳು ಹೀಗಿವೆ :

1. ಎರಡು ಅತಿರೇಕದ ಹಾದಿಗಳು (ಅಂತಾ)
2. ಮಧ್ಯಮ ಮಾರ್ಗ ಅಥವಾ ಆರ್ಯ ಅಟ್ಠಂಗ ಮಗ್ಗ (ಮಜ್ಝಿಮಾಪಟಿಪದಾ)
3. ಚತುರಾರ್ಯ ಸತ್ಯಗಳು (ಚತ್ತಾರಿ ಅರಿಯ ಸಚ್ಚಾನಿ)
4. ಚತುರಾರ್ಯ ಸತ್ಯಗಳ ಹನ್ನೆರಡು ರೂಪಗಳು (ದ್ವಾದಸಾಕಾರಗಳು)

ಮಧ್ಯಮ ಅಥವಾ ಅಷ್ಟಾಂಗ ಮಾರ್ಗವನ್ನು ಮೂರು ರೀತಿಯ ಬೆಳವಣಿಗೆಯ ರೂಪಗಳಾಗಿ ನೋಡಬಹುದು.

1. **ಶೀಲ**–ಗುಣವಂತರಾಗಿರಲು ಶೀಲಗಳ ಪರಿಪಾಲನೆ ಮಾಡುವುದು.
2. **ಸಮಾಧಿ**–ಮನಸ್ಸಿನ ಶುದ್ಧಿಗಾಗಿ ಧ್ಯಾನ ಮಾಡುತ್ತಾ ಏಕಾಗ್ರತೆಯನ್ನು ಸಾಧಿಸುವುದು.
3. **ಪ್ರಜ್ಞೆ**–ವಿಪಶ್ಯನ ಧ್ಯಾನ ಸಾಧನೆಯ ಮೂಲಕ ಪ್ರಜ್ಞೆಯನ್ನು ಆರ್ಜಿಸಿ ಮನಸ್ಸನ್ನು ಪರಿವರ್ತಿಸಿ ಆ ಮೂಲಕ ನಿಬ್ಬಾಣ ಸಾಕ್ಷಾತ್ಕಾರ ಮಾಡಿಕೊಳ್ಳುವುದು.

ಚತುರಾರ್ಯ ಸತ್ಯಗಳು ಯಾವುವೆಂದರೆ : ದುಃಖ, ಅದು ಯಾವ ಕಾರಣದಿಂದ ಬಂದಿದೆ, ಅದರ ನಿರೋಧ ಮತ್ತು ಅದನ್ನು ನಿರೋಧಿಸುವ ಮಾರ್ಗ. ಈ ನಾಲ್ಕು ಆರ್ಯ ಸತ್ಯಗಳನ್ನು ವಾಸ್ತವದಲ್ಲಿ ಮೂರು ರೀತಿಯಲ್ಲಿ ತಿಳಿದರೆ ಲೋಕೋತ್ತರ ಹಾದಿಯಲ್ಲಿ ಮುಂದುವರೆದು ನಿಬ್ಬಾಣವನ್ನು ಪಡೆಯಬಹುದು. ಒಬ್ಬನು ಆರ್ಯನಾಗುತ್ತಾನೆ, ಯಾವಾಗ ಎಂದರೆ ಅವನು ನಿಬ್ಬಾಣ ವಲಯಕ್ಕೆ ಚಿಮ್ಮಿ ಅಲ್ಲಿಯೇ ನೆಲೆಗೊಂಡಾಗ.

ಭಗವಾನ್ ಬುದ್ಧ ಧಮ್ಮಚಕ್ಕ ಪವತ್ತನ ಸುತ್ತವನ್ನು ನೀಡುತ್ತಿದ್ದ ಸಂದರ್ಭದಲ್ಲಿ, ಅದನ್ನು ಏಕಾಗ್ರಚಿತ್ತದಿಂದ ಕೇಳಿದ ಸಂನ್ಯಾಸಿ ಕೊಂಡಞ್ಞನು ಚತುರಾರ್ಯ ಸತ್ಯಗಳ ಆಳಕ್ಕೆ ಮನಸ್ಸನ್ನು ತೆಗೆದುಕೊಂಡು ಹೋಗಿ ಸೋತಾಪತ್ತಿ ಫಲವನ್ನು ಪಡೆದು ಜ್ಞಾನೋದಯಗೊಂಡ ಬುದ್ಧನ ಶಿಷ್ಯನಾದನು. ಆ ಕ್ಷಣದಲ್ಲೇ ಆಧ್ಯಾತ್ಮಿಕವಾಗಿ ಹದಗೊಂಡ ಹದಿನೆಂಟು ಕೋಟಿ ತೇಜಸ್ವೀ ಬ್ರಹ್ಮದೇವತೆಗಳೂ ಕೂಡ ಸೋತಾಪತ್ತಿ ಫಲವನ್ನು ಪಡೆದರು.

ಬುದ್ಧನು ಯಾವಾಗ ತನ್ನ ದಿವ್ಯಚಕ್ಷುವಿನಿಂದ ಪೂಜ್ಯ ಕೊಂಡಞ್ಞನ ಮನಸ್ಸು ಲೋಕೋತ್ತರ ಸ್ಥಿತಿಗೆ ಹೋಗಿ ಪಾರಮಾರ್ಥಿಕವಾಗಿ ಪರಿವರ್ತನೆಗೊಂಡುದನ್ನು ಅರಿತನೋ, ಕೂಡಲೇ ಸಂತೋಷದಿಂದ ಹೀಗೆ ಘೋಷಿಸಿದನು : 'ಅಞ್ಞಾಸಿ ವತ ಭೋ ಕೊಂಡಞ್ಞೊ – ಓ ಕೊಂಡಞ್ಞನು ಸೋತಾಪತ್ತಿಫಲವನ್ನು ಪಡೆಯುವುದರ ಮೂಲಕ ನಿಬ್ಬಾಣವನ್ನು ಸಾಕ್ಷಾತ್ಕರಿಸಿಕೊಂಡನು' ಅಂದರೆ ಕೊಂಡಞ್ಞನು ಪೂರ್ಣ ಪ್ರಮಾಣದ ಜ್ಞಾನೋದಯದ ಸ್ರೋತಾಪನ್ನ (ಅರ್ಹತ)ನಾದನು.

ದಿವ್ಯ ಸಮಾಧಿಯಲ್ಲಿ ಸ್ಥಿರನಾದ ಪೂಜ್ಯ ಕೊಂಡಞ್ಞರು ಭಗವಾನ್ ಬುದ್ಧದೇವನಿಗೆ ತನ್ನನ್ನು ಭಿಕ್ಖುವಾಗಿ ದೀಕ್ಷೆ ನಿಡುವಂತೆ ಕೋರಿದರು. ಭಗವಾನರು ಬಲಗೈಯನ್ನು ಆಶೀರ್ವಾದ ಸ್ಥಿತಿಯಲ್ಲಿ ಮುಂದಕ್ಕೆ ಚಾಚಿ "ಏಹಿ ಭಿಕ್ಖು! ಸ್ವಾಕ್ಖಾತೊ ಧಮ್ಮೋ. ಚರ ಬ್ರಹ್ಮಚರಿಯಂ ಸಮ್ಮಾ ದುಃಖಸ್ಸ ಅಂತಕಿರಿಯಾಯ–ಬಾ ಭಿಕ್ಖುವೇ! ಧರ್ಮವನ್ನು ಚೆನ್ನಾಗಿ ಅರಿತಿರುವೆ. ಪವಿತ್ರವಾದ ಬದುಕನ್ನು ಸಾಗಿಸಿ ಕಾರಣಾಧೀನವಾದ ಈ ದುಃಖವನ್ನು ಅಂದರೆ ಸಂಸಾರವನ್ನು ತೊರೆದು ಹಾಕು".

ಸರ್ವಜ್ಞನಾದ ಬುದ್ಧನು ಈ ರೀತಿಯಾಗಿ ಘೋಷಣೆ ಮಾಡಿದ ತಕ್ಷಣವೇ ಪೂಜ್ಯ ಕೊಂಡಞ್ಞರ ಮೂಲ ಬೈರಾಗಿ ರೂಪವು ಮಾಯವಾಗಿ ಭಿಕ್ಖು ರೂಪ ತಳೆದರು. ಮತ್ತು ಸಂನ್ಯಾಸಿ ಜೀವನಕ್ಕೆ ಬೇಕಾದ ಎಲ್ಲ ಪರಿಕರಗಳೂ ಕಾಣಿಸಿಕೊಂಡವು. ಎಂಬತ್ತು ವರ್ಷ ಆಗಿದ್ದರೂ, ಅರವತ್ತು ವರ್ಷಗಳ ಸಂನ್ಯಾಸಿ ಬದುಕಿನ ಥೇರನಂತೆ (ಹಿರಿಯ ಭಿಕ್ಖುವಿನಂತೆ) ಕಂಡರು.

ಇದಾದ ನಂತರದಲ್ಲಿ ಬುದ್ಧ ಮೂರು ತಿಂಗಳ ವರ್ಷಾವಾಸವನ್ನು ಇಸಿಪತನದ ಮಿಗದಾಯಿ ವನದಲ್ಲೇ ಕಳೆಯುವ ವ್ರತ ಕೈಗೊಂಡರು. ಮಾರನೆದಿನ ಬೈರಾಗಿಯಾದ ವಪ್ಪ ಮಿಗದಾಯಿ ವನದಲ್ಲೇ ಉಳಿದುಕೊಂಡು ಇನ್ನುಳಿದ ನಾಲ್ವರು ಭಿಕ್ಷೆಗಾಗಿ





ಹೊರಹೋದರು. ಆನಂತರ ಅವರುಗಳು ಭಿಕ್ಷೆಯಿಂದ ವಾಪಸ್ಸಾಗಿ ಆರು ಜನವೂ ಭಿಕ್ಷಾನ್ನ ಸ್ವೀಕರಿಸಿದರು. ಈ ದಿನ ಅಂದರೆ ಎರಡನೇ ದಿನ ಬುದ್ಧದೇವನು ಬೈರಾಗಿ ವಪ್ಪನಿಗೆ ಗಂಭೀರ ಧಮ್ಮೋಪದೇಶ ಮಾಡಲಾಗಿ, ವಪ್ಪನೂ ಸ್ರೋತಾಪನ್ನನಾದನು.

ಕೊಂಡಞ್ಞನು ಹೇಗೆ ಭಿಕ್ಖು ಉಪಸಂಪದವನ್ನು ಭಗವಾನ್ ಬುದ್ಧನಿಂದ ಸ್ವೀಕರಿಸಿದನೋ ಹಾಗೆಯೇ ತನಗೂ ಭಿಕ್ಖು ದೀಕ್ಷೆಯನ್ನು ನೀಡುವಂತೆ ವಪ್ಪ ಬುದ್ಧದೇವನನ್ನು ಕೇಳಿಕೊಂಡನು. ಅದರಂತೆ ವಪ್ಪನು 'ಏಹಿ ಭಿಕ್ಖು' ಉಪಸಂಪದವನ್ನು ಬುದ್ಧನಿಂದ ಪಡೆದನು. ಮಾರನೆಯದಿನ ಭದ್ದಿಯ ಬುದ್ಧನಿಂದ ಧಮ್ಮೋಪದೇಶವನ್ನು ಪಡೆದು ಸ್ರೋತಾಪನ್ನನಾಗಿ 'ಏಹಿ ಭಿಕ್ಖು' ಉಪಸಂಪದವನ್ನು ಪಡೆದನು. ನಾಲ್ಕನೆಯ ದಿನ ಮಹಾನಾಮನು ಧಮ್ಮೋಪದೇಶದಿಂದ ಸ್ರೋತಾಪನ್ನನಾಗಿ 'ಏಹಿ ಭಿಕ್ಖು' ಉಪಸಂಪದವನ್ನು ಪಡೆದನು. ಐದನೆಯ ದಿನ ಅಸ್ಸಾಜಿಯು ಮಿಗದಾಮಿ ವನದಲ್ಲೇ ಉಳಿದುಕೊಂಡು, ಉಳಿದ ನಾಲ್ಕು ಜನ ಭಿಕ್ಷೆಗೆ ಹೊರ ಹೋಗಿರಲಾಗಿ ಬುದ್ಧನಿಂದ ಗಂಭೀರ ಧಮ್ಮೋಪದೇಶವನ್ನು ಪಡೆದು ಸ್ರೋತಾಪನ್ನನಾದನು ಮತ್ತು 'ಏಹಿ ಭಿಕ್ಖು' ಉಪಸಂಪದವನ್ನು ಪಡೆದನು.

ಹೀಗೆ ಆಷಾಡ ಮಾಸದ (ಜುಲೈ) ತುಂಬು ಹುಣ್ಣಿಮೆ ಆದ ಐದು ದಿನಗಳ ನಂತರದ ಕಾಲ ಬೌದ್ಧ ಧರ್ಮದ ಇತಿಹಾಸ ಪುಟದಲ್ಲಿ ಮಹತ್ವದ ಹೊಸ ಅಧ್ಯಾಯವನ್ನು ತೆರೆಯಿತು. ಈ ಐದುಜನ ಭಿಕ್ಖುಗಳು ಲೋಕೋತ್ತರ ಪಥದಲ್ಲಿ ನೆಲೆಯುಳ್ಳವರಾಗಿದ್ದು, ಸ್ರೋತಾಪನ್ನತೆಗೆ ಏರಿದ ನಂತರ ಸರ್ವಜ್ಞರಾದ ಭಗವಾನರು ಎರಡನೆಯ ಮಹತ್ತರವಾದ ಉಪನ್ಯಾಸ 'ಅನತ್ತಲಕ್ಖಣ ಸುತ್ತ'ವನ್ನು ನೀಡಿದರು. ಈ ಉಪನ್ಯಾಸ ಮುಗಿದ ಮೇಲೆ ಈ ಐದೂ ಆರ್ಯ ಭಿಕ್ಖುಗಳು ಅರ್ಹತರಾದರು. ಅಂದರೆ ಆಸವಗಳಿಂದ ಮುಕ್ತರಾದರು. ಇವರುಗಳು ಸಮ್ಮಾಸಂಬುದ್ಧನ ಅರ್ಹತ ಬೋಧಿ ಶಿಷ್ಯರಾದರು.

ಈ ಐದನೇದಿನ ಅಂದರೆ ಧಮ್ಮಚಕ್ಕ ಪವತ್ತನ ಸುತ್ತವನ್ನು ನೀಡಿದ ನಂತರದ ದಿನಕ್ಕೆ ಒಂದು ವಿಶೇಷತೆ ಇದೆ. ಅದೆಂದರೆ ಆರ್ಯ ಸಂಘವು (ಬುದ್ಧನ ಜ್ಞಾನೋದಯ ಹೊಂದಿದ ಶಿಷ್ಯರ ಸಂಘ) ಅಸ್ತಿತ್ವಕ್ಕೆ ಬಂದ ದಿನ. ಹೀಗೆ ಬೌದ್ಧ ಧರ್ಮದ ತ್ರಿರತ್ನಗಳು ಪೂರ್ಣ ಪ್ರಮಾಣಕ್ಕೆ ಅಸ್ತಿತ್ವಕ್ಕೆ ಬಂದು ಕರುಣಾಮಯಿ ಬುದ್ಧನು ಬೋಧಿಸಿದ ಜ್ಞಾನೋದಯದ ಧಮ್ಮ ವಿಚಾರಗಳನ್ನು ಎಲ್ಲೆಡೆ ಪಸರಿಸಲು ಮತ್ತು ಸಾಫಲ್ಯ ಗಳಿಸಲು ಅವಕಾಶವಾಯಿತು.

ವೈಶಾಖ ಮಾಸದ ತುಂಬು ಹುಣ್ಣಿಮೆಯದಿನ (ಮೇ ತಿಂಗಳು) ಪರಮ ಜ್ಞಾನೋದಯ ಪಡೆದ ಭಗವಾನ್ ಬುದ್ಧ ಮಾನವರ ಹಾಗು ದೇವತೆಗಳ ಗುರುವಾಗಿ ಅಸ್ತಿತ್ವಕ್ಕೆ ಬಂದು ಬುದ್ಧರತ್ನ ಸೃಷ್ಟಿಯಾಯಿತು. ಆಷಾಢ ಮಾಸದ ತುಂಬು ಹುಣ್ಣಿಮೆಯ ದಿನ (ಜುಲೈ ತಿಂಗಳು) ಬುದ್ಧನು ಧಮ್ಮಚಕ್ಕ ಪವತ್ತನ ಸುತ್ತವನ್ನು ನೀಡುವುದರ ಮೂಲಕ ಜ್ಞಾನೋದಯದ ಬೋಧನೆಗಾಗಿ ಧಮ್ಮರತ್ನವು ಸೃಷ್ಟಿಯಾಯಿತು. ಎರಡನೇ

ಧಮ್ಮ ಉಪನ್ಯಾಸವಾದ ‘ಅನತ್ತಲಕ್ಖಣ ಸುತ್ತ’ವನ್ನು ಬುದ್ಧ ನೀಡಿದ್ದರಿಂದ ಐದುಜನ ಅರ್ಹತ ಶಿಷ್ಯರು ಸೃಷ್ಟಿಯಾಗಿ ಬುದ್ಧನ ತತ್ತ್ವಗಳನ್ನು ಪಸರಿಸಲು ಆರ್ಯ ಸಂಘವು ಬೆಳಕಿಗೆ ಬಂದು ಸಂಘರತ್ನವು ಉದಯವಾಯಿತು.

ಮೊದಲ ವರ್ಷಾವಾಸದ (ಮಳೆಗಾಲದಲ್ಲಿ ಒಂದೆಡೆ ಇರುವುದು) ಅವಧಿಯಲ್ಲೇ ಐದು ಜನರಿದ್ದ ಸಂಘವು ಬೆಳೆಯತೊಡಗಿತು. ಮೂರು ತಿಂಗಳ ವರ್ಷಾವಾಸ ಮುಗಿಯುವ ಹೊತ್ತಿಗೆ ಅಂದರೆ ಅಕ್ಟೋಬರ್‌ನ ಹುಣ್ಣಿಮೆ ವೇಳೆಗೆ ಅರವತ್ತು ಅರ್ಹತರು ಆದರು.

## ಪ್ರಶ್ನೆಗಳು

**1. ಮೊದಲ ಉಪನ್ಯಾಸವಾದ ಧಮ್ಮಚಕ್ಕ ಪವತ್ತನ ಸುತ್ತದಲ್ಲಿನ ಪ್ರಮುಖ ಅಂಶಗಳ ಮೇಲೊಂದು ಪ್ರಬಂಧ ಬರೆಯಿರಿ.**

**2. ಬುದ್ಧ ‘ಚಕ್ರ’ ಎನ್ನುವ ಪದವನ್ನು ಏಕೆ ಬಳಿಸಿದರು ? ಬೌದ್ಧ ಧರ್ಮದಲ್ಲಿ ಈ ಸಂಕೇತದ ಮಹತ್ವವೇನು ?**

**3. ಪೂಜ್ಯ ಕೊಂಡಣ್ಣರು ‘ಆರ್ಯ’ ಹೇಗಾದರು ? ವಿವರಿಸಿ. ಇವರಿಗೆ ಜ್ಞಾನೋದಯ ಆದ ತಕ್ಷಣ ಏನಾಯಿತು ?**

**4. ‘ಆರ್ಯ’ ಎಂಬ ಪದದ ಅರ್ಥ ಏನು ?**

**5. ಬುದ್ಧ, ಧಮ್ಮ, ಸಂಘ ಎನ್ನುವ ತ್ರಿರತ್ನಗಳು ಯಾವಾಗ ಹುಟ್ಟಿದವು ? ವಿವರಿಸಿ.**

**6. ಚತುರಾರ್ಯ ಸತ್ಯಗಳಲ್ಲಿನ ದ್ವಾದಸಾಕಾರದಲ್ಲಿ ಅಡಗಿರುವ ಜ್ಞಾನೋದಯದ ಪರಿಯನ್ನು ವಿವರವಾಗಿ ಬರೆಯಿರಿ.**



### ಅಧ್ಯಾಯ–7

# ಮೊದಲ ವರ್ಷಾವಾಸ

ಎರಡು ಮಹಾ ಸುತ್ತಗಳು (ಧಮ್ಮೋಪದೇಶಗಳು) – ಧಮ್ಮಚಕ್ಕ ಪವತ್ತನ ಸುತ್ತ ಮತ್ತು ಅನತ್ತಲಕ್ಖಣ ಸುತ್ತ – ಇವು ಪಂಚವಗ್ಗೀಯ ಭಿಕ್ಖುಗಳನ್ನು (ಐದು ಜನ ಭಿಕ್ಖುಗಳನ್ನು) ಅರ್ಹತರನ್ನಾಗಿ ಮಾಡಿದವು. ಇವರೇ ಸಂಪೂರ್ಣ ಜ್ಞಾನೋದಯ ಹೊಂದಿದ ಬುದ್ಧನ ಮೊದಲ ಐದು ಶಿಷ್ಯರು. ಈ ಎಲ್ಲ ಅರ್ಹತರು ಸಂನ್ಯಾಸಿಗಳು ಅನುಸರಿಸಬೇಕಾದ ವರ್ಷಾವಾಸವನ್ನು (ಮಳೆಗಾಲದಲ್ಲಿ ಒಂದೇ ಸ್ಥಳದಲ್ಲಿದ್ದು ಸಾಧನೆಯಲ್ಲಿರುವುದು) ಇಸಿಪತನದ ಬಳಿ ಇರುವ ಮಿಗದಾಯಿ (ಜಿಂಕೆವನ)ಯಲ್ಲಿ ಕಳೆದರು. ಮೂರು ತಿಂಗಳ ಈ ವರ್ಷಾವಾಸದಲ್ಲಿ ಭಗವಾನರು ಸಂಘವನ್ನು ಸ್ಥಾಪಿಸಿ ಐವತ್ತೈದು ಅರ್ಹತ ಭಿಕ್ಖುಗಳನ್ನು ಸೇರಿಸಿದರು. ಅವರಲ್ಲಿ ಯಸ ಮೊದಲನೆಯವನು.

### ಅರ್ಹತ ಯಸನ ಕಥೆ

ಯಸ ವಾರಾಣಸಿಯ ಉತ್ತಮ ಕುಲದ ಶ್ರೀಮಂತ ವ್ಯಾಪಾರಿಯ ಮಗ. ಇವನ ತಾಯಿ ಸುಜಾತ, ಸೇನಾನಿ ಗ್ರಾಮದ ಮುಖ್ಯಸ್ಥನ ಮಗಳು. ಈ ಸುಜಾತಳೇ ಬೋಧಿಸತ್ತ ಸಿದ್ಧಾರ್ಥನಿಗೆ ಸಾವಿರ ಹಸುಗಳಿಂದ ತೆಗೆದ ಹಾಲಿನಿಂದ ಮಾಡಿದ ಘನ ಪಾಯಸವನ್ನು ಅರ್ಪಿಸಿದ್ದು. ಬೋಧಿಸತ್ತ ಸಿದ್ಧಾರ್ಥ ಅಕ್ಕಿ–ಹಾಲು–ಜೇನಿನಿಂದ ಮಾಡಲಾದ ಪಾಯಸವನ್ನು ನಲವತ್ತೊಂಬತ್ತು ತುತ್ತುಗಳಾಗಿ ಮಾಡಿ ಅವೆಲ್ಲವನ್ನು ಸ್ವೀಕರಿಸಿದ್ದು. ಇವೇ ಬೋಧಿ ವೃಕ್ಷದ ಪರಿಸರದಲ್ಲಿ ಏಳು ವಾರಗಳ ಕಾಲ ಸಮಾಧಿ ಸ್ಥಿತಿಯಲ್ಲಿದ್ದು ಬೋಧಿಸತ್ತನನ್ನು ಸಮ್ಮಾಸಂಬುದ್ಧನಾಗುವಂತೆ ಮಾಡಲು ಸಹಾಯ ಮಾಡಿದ್ದು. ಬೋಧಿಸತ್ತನ ಶರೀರಕ್ಕೆ ಬೇಕಾದ ಸತ್ವಯುತವಾದ ಆಹಾರವನ್ನು ನೀಡಿ ಏಳು ವಾರಗಳ ಕಾಲ ಬೋಧಿಸತ್ತನು ಸಮಾಧಿಯಲ್ಲಿ ನೆಲೆಗೊಳ್ಳುವಂತೆ ಮಾಡಿದ ಸುಜಾತಳ ಸೇವೆ ಅನನ್ಯವಾದುದು. ಮೊದಲ ಪಿಂಡಪಾತವನ್ನು ಅಂದರೆ ಭಿಕ್ಷಾನ್ನವನ್ನು ನೀಡಿ ಬೌದ್ಧ ಧರ್ಮದ ಇತಿಹಾಸದಲ್ಲಿಯೇ ಒಂದು ವಿಶೇಷ ಸ್ಥಾನವನ್ನು ಪಡೆದಳು.

ಸುಜಾತ ಮತ್ತು ಆಕೆಯ ಗಂಡ ಆಗರ್ಭ ಶ್ರೀಮಂತನ ಮಗನಾಗಿ ಜನಿಸಿದ ಯಸ ವೈಭವದ ತೆಕ್ಕೆಯಲ್ಲಿಯೇ ಶ್ರೀಮಂತ ಸಮಾಜಕ್ಕೆ ತಕ್ಕುದಾಗಿ ಬೆಳೆದವನು. ಮೂರು ಭವನಗಳನ್ನು ಹೊಂದಿದ್ದನು. ಚಳಿಗಾಲಕ್ಕೊಂದು, ಬೇಸಿಗೆಗೆ ಒಂದು ಮತ್ತು ಮಳೆಗಾಲಕ್ಕೊಂದು. ಉತ್ತಮ ಜೀವನ ಶೈಲಿಗೆ ಬೇಕಾದ ಎಲ್ಲ ವಸ್ತುಗಳನ್ನು ಹೊಂದಿದ್ದನು. ಅವನನ್ನು ಮನರಂಜಿಸಲು ಹುಡುಗಿಯರ, ಸಂಗೀತಗಾರರ, ನೃತ್ಯಗಾರರ ದಂಡೇ

ಇತ್ತು. ಈ ಮೂರು ಭವನಗಳನ್ನು ಈ ಸ್ತ್ರೀಯರೇ ನಿರ್ವಹಿಸುತ್ತಿದ್ದರು. ಯಾವುದೇ ಪ್ರಾಪಂಚಿಕ ನೋವಿನ ಸೋಂಕು ತಗಲದಂತೆ ಯಸನನ್ನು ಇಂದ್ರಿಯ ವೈಭವದಲ್ಲೇ ಇಟ್ಟಿದ್ದರು.

ಒಂದುದಿನ ವರ್ಷಾಭವನದಲ್ಲಿ ವಾಸವಾಗಿದ್ದಾಗ ಒಂದು ವಿಶಿಷ್ಟ ಅನುಭವವಾಗಿ ಸಂನ್ಯಾಸಿಯಾಗಿ ಹೋಗುವಂತೆ ಮಾಡಿತು. ಒಂದು ರಾತ್ರಿ ಈ ಸುಂದರ ನೃತ್ಯಗಾರ್ತಿಯರು, ಸಂಗೀತಗಾರ್ತಿಯರು ಮನರಂಜನೆ ನೀಡುತ್ತಿದ್ದಂತೆ ನಿದ್ದೆಗೆ ಪರವಶನಾದನು. ಶ್ರೀಮಂತ ಕುಮಾರ ಮಲಗಿದ್ದಾನೆಂದು ಮನರಂಜನೆ ನೀಡುವ ಈ ಸುಂದರ ಸ್ತ್ರೀಯರು ಇನ್ನು ಹಾಡು-ಕುಣಿತಗಳನ್ನು ಮಾಡುವುದು ವ್ಯರ್ಥವೆಂದು ಅವರೂ ನಿದ್ದೆಗೆ ಶರಣಾದರು. ಕೆಲವರು ವಾದ್ಯಗಳನ್ನು ತಬ್ಬಿಕೊಂಡು ಮಲಗಿದರೆ, ಇನ್ನು ಕೆಲವರು ಚಿತ್ರ ವಿಚಿತ್ರ ಭಂಗಿಗಳಲ್ಲಿ ನೆಲದ ಮೇಲೆ ಬಿದ್ದುಕೊಂಡಿದ್ದರು. ಕೆಲವರ ಹೆರಳು ಹೇಗೆಂದರೆ ಹಾಗೆ ಚೆಲ್ಲಿತ್ತು, ಕೆಲವರ ಬಾಯಿಗಳಲ್ಲಿ ಜೊಲ್ಲು ಸುರಿಯುತ್ತಿತ್ತು. ಮಧ್ಯ ರಾತ್ರಿಯಲ್ಲಿ ಯಸ ಎಚ್ಚರಗೊಂಡು ಎದ್ದು ನೋಡುತ್ತಾನೆ, ಎಲ್ಲ ವಿಕಾರ ದೃಶ್ಯಗಳು. ಅವುಗಳನ್ನು ನೋಡಿ ಹೀಗೆ ಚಿಂತನೆ ಮಾಡಿದ : ಯಾವ ಈ ಮನುಷ್ಯ ಶರೀರವು ಸುಂದರವಾಗಿ, ಆಕರ್ಷಕವಾಗಿ ಕಾಣುತ್ತದೊ, ಅದು ಎಷ್ಟು ಕೆಟ್ಟದಾಗಿ, ಅಸಹ್ಯವಾಗಿದೆ. ಇಂತಹ ಭಾವನೆಗಳ ಏರುಪೇರಿನ ಉದ್ವೇಗದಲ್ಲಿ ಒಂದು ಕ್ಷಣಕಾಲ ಯೋಚಿಸಿ ಹೀಗೆ ಉದ್ಗರಿಸಿದ "ಓ, ಈ ದೃಶ್ಯದಿಂದ ನಾನು ವ್ಯಥೆಗೊಂಡಿದ್ದೇನೆ (ಉಪದುಟ್ಟಂ ವತ ಭೋ), ಓ... ಈ ದೃಶ್ಯದಿಂದ ನಾನು ಹಿಂಸೆಗೊಳಗಾಗಿದ್ದೇನೆ (ಉಪಸ್ಸಟ್ಠಂ ವತ ಭೋ)" ಎಂದು ಒಂದು ರೀತಿಯಲ್ಲಿ ಹಿಂಸಾತ್ಮಕ ಅನುಭವವಾಗಿ, ಅವನ ಅಸ್ತಿತ್ವವನ್ನೇ ಅಲುಗಾಡಿಸಿತು. ಬಂಗಾರದ ಚಪ್ಪಲಿಗಳನ್ನು ಧರಿಸಿ, ಇದುವರೆಗೂ ಸುಂದರವಾಗಿದ್ದ ಮನೆ ಈಗ ಸ್ಮಶಾನವಾಗಿರುವಂತೆ ಭಾಸವಾಗಿ ಮನೆಯನ್ನು ಬಿಟ್ಟು ಹೊರಟ. ರಕ್ಷಣಾ ದೇವತೆಗಳು ಅವನನ್ನು ಭವನದಿಂದ ಹೊರಬರಲು ಮತ್ತು ನಗರ ಬಾಗಿಲಿನಿಂದಾಚೆ ಹೋಗಲು ಸಹಾಯ ಮಾಡಿದರು. ಆನಂತರ ಯಸ ಮಿಗದಾಯಿಯತ್ತ ಪ್ರಯಾಣ ಬೆಳೆಸಿದ.

ಆಗ ಭಗವಾನರು ಮಿಗದಾಯಿಯಲ್ಲಿ ಎಂದಿನಂತೆ ಅತ್ತಿಂದಿತ್ತ, ಇತ್ತಿಂದತ್ತ ಧ್ಯಾನ ನಡಿಗೆಯನ್ನು ಮಾಡುತ್ತಿದ್ದರು. ಚಿಂತಾಕ್ರಾಂತನಾಗಿಯೇ ಬಂದ ಯಸ ಸಂವೇಗ ಉದಾನವನ್ನು (ಓ, ಈ ದೃಶ್ಯದಿಂದ ನಾನು ವ್ಯಥೆಗೊಂಡಿದ್ದೇನೆ...) ಮಾಡಿದ. ಇದನ್ನು ಕೇಳಿದ ಭಗವಾನರು ತಮ್ಮ ಧ್ಯಾನ ನಡಿಗೆಯನ್ನು ನಿಲ್ಲಿಸಿ ಸೂಕ್ತ ಜಾಗದಲ್ಲಿ ಆಸೀನರಾದರು. ಬೆಚ್ಚನೆಯ ಮಾತುಗಳಿಂದ ಬುದ್ಧ ಹೀಗೆ ಹೇಳಿದರು : "ಯಸ, ಇತ್ತ ಬಾ. ಈ ಜಾಗ ಎಲ್ಲ ಚಿಂತೆ, ಹಿಂಸೆಗಳಿಂದ ದೂರವಾಗಿದೆ". ಯಸ ತನ್ನ ಬಂಗಾರದ ಪಾದರಕ್ಷೆಗಳನ್ನು ಒಂದೆಡೆ ಬಿಟ್ಟು, ಬುದ್ಧನ ಬಳಿ ಹೋಗಿ ಗೌರವ ಭಾವದಿಂದ ನಮಿಸಿ ಕುಳಿತನು.

ಆನಂತರ ಬುದ್ಧನು ಧಮ್ಮದ ಮೇಲಿನ ಉಪದೇಶವನ್ನು ಕ್ರಮವಾಗಿ ಹಂತಹಂತವಾಗಿ ಹೇಳುತ್ತಾ, ಅದು ಹೇಗೆ ಲೋಕೋತ್ತರ ಸಾಧನೆಯಾದ ಸೋತಾಪತ್ತಿಯತ್ತ





ಕೊಂಡೊಯ್ಯುತ್ತದೆಂಬುದನ್ನು ವಿವರಿಸಿದ. ಬುದ್ಧನೇ ಈ ಹಂತ ಹಂತದ ವಿಶೇಷ ವಿಧಾನವನ್ನು ರೂಪಿಸಿದ್ದು. ಈ ವಿಧಾನದಲ್ಲಿ ದಾನಕಥ (ದಾನದ ಮೇಲೆ ಉಪನ್ಯಾಸ), ಶೀಲ ಕಥಾ (ಶೀಲಗಳ ಮೇಲೆ ಕುರಿತಾದ ಉಪನ್ಯಾಸ), ಸಗ್ಗ ಕಥಾ (ದೇವಲೋಕಗಳ ಬಗ್ಗೆ ಇರುವ ಉಪನ್ಯಾಸ), ಆದೀನವ ಕಥಾ (ಇಂದ್ರಿಯಗಳಿಂದುಂಟಾದ ಅಪಾಯಗಳ ಮೇಲಿನ ಉಪನ್ಯಾಸ), ನೇಕ್ಖಮ್ಮೇ ಆನಿಸಂಸಾ ಕಥಾ (ತ್ಯಾಗದಿಂದ ಆಗುವ ಅನುಕೂಲಗಳ ಮೇಲಿನ ಉಪನ್ಯಾಸ)... ಹೀಗೆ ಮುಂತಾದವು ಇವೆ. ನವಾಂಗ ಧಮ್ಮದಿಂದಾಗಿ (ಧಮ್ಮವನ್ನು ಹಂತ ಹಂತವಾಗಿ ಬೆಳೆಸಿಕೊಳ್ಳುವ ರೀತಿ) ಯಸನ ಮನಸ್ಸು ಪಾರಮಾರ್ಥಿಕವಾಗಿ ಪರಿವರ್ತನೆಗೊಂಡಿತು.

ಬುದ್ಧ ಯಸನ ಮನಸ್ಸಿನಲ್ಲಾದ ಪ್ರಬುದ್ಧ ಬದಲಾವಣೆಗಳನ್ನು ಮತ್ತು ಕ್ಲೇಶಗಳು ದೂರವಾದುದನ್ನು ಕಂಡನು. ಯಸನ ಮನಸ್ಸು ತಿಳಿಯಾಗಿತ್ತು, ಧಮ್ಮವನ್ನು ಕೇಳುವ ಆಸಕ್ತಿ ಅರಳಿತ್ತು. ಆಗ ಬುದ್ಧನು ಯಸನಿಗೆ ಸಮುಕ್ಕಂಸಿಕ ಧಮ್ಮವನ್ನು ಬೋಧಿಸಿದನು. ಈ ವಿಶೇಷ ಧಮ್ಮ ಬೋಧನೆಯಲ್ಲಿ ಚತುರಾರ್ಯ ಸತ್ಯಗಳು ಲೋಕೋತ್ತರ ಮತ್ತು ನಿಬ್ಬಾಣದ ನೇರ ದೃಶ್ಯಕ್ಕೆ ಕೊಂಡೊಯ್ಯುವ ತಂತ್ರವಿದೆ. ಈ ಜ್ಞಾನದಿಂದ ಯಸನ ಧಮ್ಮಚಕ್ಕುವು ತೆರೆಯಿತು, ಆ ಕೂಡಲೇ ಯಸ ಸ್ರೋತಾಪನ್ನನಾದನು.

ಮುಂಜಾನೆ ಯಸನ ತಾಯಿ ಎದ್ದು ನೋಡುತ್ತಾಳೆ, ತನ್ನ ಮಗ ಇರಲಿಲ್ಲ. ಕೂಡಲೇ ಗಂಡನ ಬಳಿ ಹೋಗಿ, 'ನೋಡಿ ನಿಮ್ಮ ಮಗ ಕಾಣುತ್ತಿಲ್ಲ' ಎಂದು ಹೇಳುತ್ತಾಳೆ. ತಂದೆಯು ಕೂಡಲೇ ಅಶ್ವಾರೋಹಿಗಳನ್ನು ಎಲ್ಲಕಡೆ ಕಳುಹಿಸಿ ಯಸನನ್ನು ಹುಡುಕಿ ತರಲು ಆದೇಶಿಸಿದ ಮತ್ತು ಅವನೇ ಮಿಗದಾಯಿ ವನದ ಕಡೆ ತೆರಳಿದ. ಯಸನ ಹೆಂಡತಿ ಮತ್ತು ತಾಯಿ ಕೂಡ ಗಾಬರಿಯಿಂದ ಕಾತರದಿಂದ ಹುಡುಕಲು ಹೋದರು; ಆದರೆ ಪ್ರಯೋಜನವಾಗಲಿಲ್ಲ.

ಯಸನ ತಂದೆ ಯಸ ಹಾಕಿಕೊಂಡು ಹೋದ ಚಿನ್ನದ ಪಾದರಕ್ಷೆಗಳ ಗುರುತಿನ ಜಾಡನ್ನು ಹಿಡಿದು ಹೋದಂತೆ ಅದು ಇಸಿಪತನದತ್ತ ಹೋಯಿತು. ಹಾಗೆಯೇ ಮುಂದುವರಿಯುತ್ತಾ ಹೋದಂತೆ ಬುದ್ಧನ ಬಳಿ ಯಸ ಇರುವ ಜಾಗಕ್ಕೆ ತಲುಪಿಸಿತು. ಬುದ್ಧ ಯಸನ ತಂದೆ ಹತ್ತಿರ ಬರುತ್ತಿದ್ದಂತೆ, ಬುದ್ಧ ತನ್ನ ಲೋಕೋತ್ತರ ಶಕ್ತಿಯನ್ನು ಪ್ರಯೋಗಿಸಿ ಯಸ ಕಾಣದಿರುವಂತೆ ಮಾಡಿದ. ತಂದೆ ಬುದ್ಧನ ಹತ್ತಿರ ಬಂದು ತನ್ನ ಮಗನನ್ನು ಕಂಡಿರೇ ಎಂದು ಗೌರವದಿಂದ ವಿಚಾರಿಸಿದ. ಬುದ್ಧ ಹೇಳಿದ : 'ಮೊದಲು ಕುಳಿತುಕೋ, ನಿನ್ನ ಮಗನನ್ನು ಇಷ್ಟರಲ್ಲೇ ನೋಡುವೆಯಂತೆ'. ಯಸನ ತಂದೆ ಬುದ್ಧನಿಂದ ಒಳ್ಳೆಯ ಸುದ್ದಿ ಕೇಳಿ ಸಂತೋಷಗೊಂಡು ಕುಳಿತ.

ಬುದ್ಧ ಯಸನ ಶ್ರೀಮಂತ ತಂದೆಗೆ ಧಮ್ಮೋಪದೇಶವನ್ನು ಹಂತ ಹಂತವಾಗಿ ನೀಡುತ್ತಾ ಉತ್ತಮ ಸ್ಥಿತಿಗಳಿಗೆ ಕೊಂಡೊಯ್ದನು. ಯಸನ ತಂದೆಯ ಮನಸ್ಸು ಧಮ್ಮೋಪದೇಶದಿಂದ ಹದವಾಗುತ್ತಾ ಚತುರಾರ್ಯ ಸತ್ಯಗಳ ಸೂಕ್ಷ್ಮವನ್ನು ಅರ್ಥ

ಮಾಡಿಕೊಳ್ಳುವ ಸ್ಥಿತಿಗೆ ಬಂದುದನ್ನು ಕಂಡುಕೊಂಡು ಬುದ್ಧನು ತನ್ನ ಧಮ್ಮೋಪದೇಶವನ್ನು ತೀವ್ರಗೊಳಿಸಲು ಶ್ರೀಮಂತನು ಪಾರಮಾರ್ಥಿಕವಾಗಿ ಪರಿವರ್ತಿತನಾದನು. ಪರಿವರ್ತನೆಯಿಂದಾಗಿ ಸೋತಾಪನ್ನನಾದ ಮೇಲೆ ಅಮಿತಾನಂದದಿಂದ ಭಕ್ತಿಯಿಂದ ಹೀಗೆ ಉದ್ಗರಿಸಿದನು, 'ಓ ಬುದ್ಧದೇವ, ಅತ್ಯಾಶ್ಚರ್ಯ, ತುಂಬಾ ಘನವಾಗಿದೆ, ಭಗವಾನರೆ! ತಲೆ ಕೆಳಗಾದುದನ್ನು ಒಬ್ಬ ಮನುಷ್ಯನು ಅದನ್ನು ಸರಿಯಾಗಿಟ್ಟರೆ ಅಥವಾ ಯಾವುದನ್ನು ಮುಚ್ಚಿಡಲಾಗಿತ್ತೊ ಅದನ್ನು ಬಯಲು ಮಾಡಿದರೆ ಅಥವಾ ಎತ್ತಕಡೆ ಹೋಗಬೇಕೆಂದು ಗೊತ್ತಿರದೆ ನಿಂತಿರುವವನಿಗೆ ದಾರಿಯನ್ನು ತೋರಿದರೆ ಅಥವಾ ಕಣ್ಣಿದ್ದೂ ಕತ್ತಲಲ್ಲಿ ನಡೆಯುತ್ತಿರುವವನಿಗೆ ದೀಪವನ್ನು ಹಿಡಿದರೆ ಹೇಗೋ ಹಾಗೆ ಭಗವಾನರಾದ ತಾವು ನನ್ನನ್ನು ಧಮ್ಮ ಬೋಧನೆಯಿಂದ ನನ್ನ ಧಮ್ಮ ಚಕ್ಷುವನ್ನು ತೆರೆಸಿದಿರಿ'.

ಹೀಗೆ ಉದ್ಗರಿಸಿದ ಮೇಲೆ ಯಸನ ತಂದೆಯು ಕೊನೆಯುಸಿರುವವರೆಗೂ ತನ್ನನ್ನು ಬುದ್ಧ, ಧಮ್ಮ, ಸಂಘಗಳಿಗೆ ಶರಣು ಹೋದ ಉಪಾಸಕನಾಗಿ ಸ್ವೀಕರಿಸುವಂತೆ ಭಿನ್ನವಿಸಿದ. ಹೀಗೆ ಯಸನ ತಂದೆಯೇ ತ್ರಿರತ್ನಗಳಿಗೆ ಶರಣುಹೋದ ಮೊದಲ ಉಪಾಸಕ. ಆ ತಿಸರಣಗಳೆಂದರೆ: ಬುದ್ಧಂ ಸರಣಂ ಗಚ್ಛಾಮಿ, ಧಮ್ಮ ಸರಣಂ ಗಚ್ಛಾಮಿ, ಸಂಘಂ ಸರಣಂ ಗಚ್ಛಾಮಿ.

ಬುದ್ಧನು ಸಮಾಧಿ ಸ್ಥಿತಿಯ ಏಳನೆ ವಾರದ ಅಂತ್ಯದಲ್ಲಿ ರಾಜಾಯತನ ವೃಕ್ಷದ ಅಡಿಯಲ್ಲಿದ್ದಾಗ ತಪುಸ್ಸಾ ಮತ್ತು ಭಲ್ಲಿಕಾ ಎನ್ನುವವರು ಬುದ್ಧನಿಗೆ ಮೊದಲ ಪ್ರಸಾದವನ್ನು ಸಲ್ಲಿಸಿದ ಸಂದರ್ಭದಲ್ಲಿ ತ್ರಿಶರಣುವಿರಲಿಲ್ಲ. ಅಂದರೆ ಆಗ ಇನ್ನೂ ಸಂಘ ಹುಟ್ಟುಕೊಂಡಿರಲಿಲ್ಲ. ಅವರು ದ್ವಿಶರಣು ಮಾಡಿದ್ದರು.

ತನ್ನ ತಂದೆಗೆ ಕೊಟ್ಟ ಧಮ್ಮೋಪದೇಶವನ್ನು ಕೇಳಿಯೇ ಯಸ ಇನ್ನಷ್ಟು ಪಾರಮಾರ್ಥಿಕವಾಗಿ ಪರಿವರ್ತಿತನಾಗಿ ಅರ್ಹತನಾದನು. ಬುದ್ಧ ತನ್ನ ಅಲೌಕಿಕ ಶಕ್ತಿಯನ್ನು ಹಿಂದಕ್ಕೆ ತೆಗೆದುಕೊಳ್ಳಲು ಯಸನು ತನ್ನ ತಂದೆಗೆ ಕಾಣಿಸಿದ. ತನ್ನ ಮಗ ಬುದ್ಧನ ಧಮ್ಮೋಪದೇಶದಲ್ಲಿ ಅರ್ಹತನಾಗಿ ಪರಿವರ್ತನೆಯಾಗಿರುವುದನ್ನು ಕಂಡು ತಂದೆಗೆ ಬಹಳ ಸಂತೋಷವಾಯಿತು. ಸ್ರೋತಾಪನ್ನನಾದುದರಿಂದ, ನಾನು, ನನ್ನದೆಂಬ ಅಹಂಕಾರದ ಪರಿಧಿಯಾಚೆಗೆ ತೆರಳಿದ್ದ ಯಸನ ತಂದೆ ಬುದ್ಧನನ್ನು, ಅವರ ಶಿಷ್ಯರನ್ನು ಭಿಕ್ಷಾನ್ನಕ್ಕಾಗಿ ಆಮಂತ್ರಿಸಿದ. ಬುದ್ಧನು ಆಮಂತ್ರಣವನ್ನು ಸ್ವೀಕರಿಸಿದನು.

ತನ್ನ ತಂದೆ ಹೊರಟು ಹೋದ ಮೇಲೆ ಯಸ ತನ್ನನ್ನು ಸಂನ್ಯಾಸಕ್ಕೆ ತೆಗೆದುಕೊಂಡು ಭಿಕ್ಖುವಾಗಿ ದೀಕ್ಷೆ ನೀಡುವಂತೆ ಕೋರಿದನು. ಅದರಂತೆ 'ಏಹಿ ಭಿಕ್ಖು' ಎಂಬ ಉನ್ನತ ಉಪಸಂಪದವನ್ನು ಕೊಟ್ಟರು. ಪೂಜ್ಯ ಯಸ ಭಿಕ್ಖುವಾದುದರಿಂದ ಸಂಘದಲ್ಲಿನ ಅರ್ಹತರ ಸಂಖ್ಯೆ ಆರಕ್ಕೆ ಏರಿತು. ಬುದ್ಧನು ತನ್ನ ಆರು ಜನ ಶಿಷ್ಯರೊಡನೆ ಶ್ರೀಮಂತನ ಮನೆಗೆ ಹೋದನು. ಶ್ರೀಮಂತ ವ್ಯಾಪಾರಿ ಮತ್ತು ಅವನ ಕುಟುಂಬದವರು ಗೌರವದಿಂದ ಭಿಕ್ಷಾನ್ನವನ್ನು ನೀಡಿದರು. ಪ್ರಸಾದವನ್ನು ಸ್ವೀಕರಿಸುವ ಮುನ್ನ ಬುದ್ಧ ಧಮ್ಮೋಪದೇಶ





ವೊಂದನ್ನು ನೀಡಲಾಗಿ ಯಸನ ತಾಯಿ ಮತ್ತು ಯಸನ ಪೂರ್ವಾಶ್ರಮದ ಪತ್ನಿ ಪಾರಮಾರ್ಥಿಕವಾಗಿ ಪರಿವರ್ತನೆಗೊಂಡು ತ್ರಿಸರಣವನ್ನು ಬೇಡಿದರು. ಅದರಂತೆಯೇ ಈ ಇಬ್ಬರು ಮಹಿಳಾ ಶಿಷ್ಯೆಯರು ತ್ರಿಸರಣವನ್ನು ಪಡೆದು ಅರಿಯಾ ಶಿಷ್ಯೆಯರಾದರು.

ಪೂಜ್ಯ ಯಸನಿಗೆ ಐವತ್ನಾಲ್ಕು ಜನ ಗೆಳೆಯರಿದ್ದರು. ಅವರೆಲ್ಲ ಉನ್ನತ ಕುಟುಂಬಗಳಿಂದ ಬಂದವರಾಗಿದ್ದು ಮತ್ತು ಉತ್ತಮ ಶಿಕ್ಷಣದ ಹಿನ್ನೆಲೆಯುಳ್ಳವರಾಗಿದ್ದರು. ಇವರಲ್ಲಿ ನಾಲ್ಕು ಜನ ವಿಮಲ, ಸುಬಾಹು, ಪುನ್ನಾಜಿ ಮತ್ತು ಗಾವಂಪತ್ತಿ ಈ ನಾಲ್ವರು ಪೂಜ್ಯ ಯಸನಿಗೆ ತೀರ ಹತ್ತಿರದವರಾಗಿದ್ದರು. ತಮ್ಮ ಗೆಳೆಯ ಯಸ ಬುದ್ಧನ ಶಿಷ್ಯನಾಗಿದ್ದನೆಂದು ಮತ್ತು ಪಾರಮಾರ್ಥಿಕ ಪರಿಶುದ್ಧತೆಯ ಅತ್ಯುನ್ನತ ಸ್ಥಿತಿಯನ್ನು ಪಡೆದಿದ್ದಾನೆಂದು ಕೇಳಿ ತಿಳಿದಿದ್ದರು. ಯಸ ಅರಹಂತನಾಗಿದ್ದನು. ಈ ನಾಲ್ಕು ಜನ ಪೂಜ್ಯ ಯಸನ ಬಳಿ ಹೋದರು. ಯಸನಲ್ಲಿ ಆದ ಅದ್ಭುತ ಪರಿವರ್ತನೆಯನ್ನು ಕಂಡು ಮಾರುಹೋದರು. ತಾವೂ ಬುದ್ಧ ಸಂಘದ ಸದಸ್ಯರಾಗಿ ಸಂನ್ಯಾಸಿಗಳಾಗಲು ಇಚ್ಛಿಸುವುದಾಗಿ ತಿಳಿಸುತ್ತಾ, ಬುದ್ಧನನ್ನು ಹಿಂಬಾಲಿಸುವುದಾಗಿ ನಿವೇದಿಸಿಕೊಂಡರು. ಪೂಜ್ಯ ಯಸ ಇವರನ್ನು ಭಗವಾನರಿಗೆ ಪರಿಚಯಿಸಲು, ಬುದ್ಧ ಈ ನಾಲ್ವರಿಗೂ ಧಮ್ಮೋಪದೇಶವನ್ನು ನೀಡಿದನು. ನಾಲ್ವರೂ ಬುದ್ಧನಿಗೆ ಮಾರು ಹೋದರು.

ಯಾವಾಗ ಈ ನಾಲ್ವರ ಮನಸ್ಸು ಧಮ್ಮೋಪದೇಶವನ್ನು ಕೇಳಲು ಸಿದ್ಧವಿದೆ ಎಂದು ಬುದ್ಧನಿಗೆ ಅರಿವಾಯಿತೊ, ಅವರಿಗೆ ಹಂತ ಹಂತವಾಗಿ ಲೋಕೋತ್ತರ ಸ್ಥಿತಿಗೆ ಕೊಂಡೊಯ್ಯುವ ಧಮ್ಮವನ್ನು ಹೇಳಿದರು. ಅವರೆಲ್ಲರೂ ಧಮ್ಮೋಪದೇಶವನ್ನು ಕೇಳಿ ಅರ್ಹತರಾದರು ಮತ್ತು ಭಿಕ್ಖುಗಳಾಗಿ ಉಪಸಂಪದವನ್ನೂ ಪಡೆದರು. ಇನ್ನುಳಿದ ಯಸನ ಐವತ್ತು ಸ್ನೇಹಿತರು ತಮ್ಮ ಹಿಂದಿನ ನಾಲ್ಕು ಗೆಳೆಯರು ಸಂನ್ಯಾಸಿಗಳಾಗಿ ಪಾರಮಾರ್ಥಿಕ ಉನ್ನತಿಯನ್ನು ಪಡೆದರೆಂಬ ಸಂಗತಿಯನ್ನು ತಿಳಿದರು. ಇವರೆಲ್ಲರೂ ಹಿಂದಿನ ನಾಲ್ಕು ಗೆಳೆಯರಂತೆ ಪೂಜ್ಯ ಯಸನ ಬಳಿ ಹೋಗಿ ತಾವೂ ತಮ್ಮ ಹಾದಿಯಲ್ಲಿ ನಡೆಯುವುದಾಗಿ ಮತ್ತು ಹಿಂಬಾಲಿಸುವುದಾಗಿ ನಿವೇದಿಸಿಕೊಂಡರು. ಆನಂತರದಲ್ಲಿ ಪೂಜ್ಯ ಯಸ ಇವರೆಲ್ಲರನ್ನೂ ಭಗವಾನರಿಗೆ ಪರಿಚಯಿಸಲಾಗಿ, ಭಗವಾನರು ಇವರಿಗೆಲ್ಲ ಧಮ್ಮೋಪದೇಶವನ್ನು ನೀಡಿದರು. ಇವರೆಲ್ಲರೂ ಪರಿಶುದ್ಧಿಯ ಲೋಕೋತ್ತರ ಸ್ಥಿತಿಯನ್ನು ಪಡೆದರು. ಇವರೆಲ್ಲರೂ ಅರ್ಹತ ಭಿಕ್ಖುಗಳಾಗಿ ಬುದ್ಧನ ಜ್ಞಾನೋದಯ ಹೊಂದಿದ ಶಿಷ್ಯರಾದರು.

## ಅರವತ್ತು ಧಮ್ಮ ಪ್ರವರ್ತಕರು

ಸ್ವಲ್ಪ ಕಾಲದಲ್ಲೇ ಭಿಕ್ಖು ಸಂಘದ ಅರ್ಹತರ ಸಂಖ್ಯೆ ಅರವತ್ತಕ್ಕೆ ಏರಿತು. ಇವರೆಲ್ಲರೂ ವರ್ಷಾವಾಸ ಮುಗಿಯುವವರೆಗೂ ಬುದ್ಧನ ಬಳಿಯೇ ಇದ್ದರು. ಬುದ್ಧನು ಇವರೆಲ್ಲರಿಗೆ ಧಮ್ಮವನ್ನು ವಿವಿಧ ರೀತಿಯಲ್ಲಿ ಉಪದೇಶಿಸಿದನು. ವರ್ಷಾವಾಸ ಮುಗಿದ ಕೂಡಲೇ ಭಗವಾನ್ ಬುದ್ಧ ಇವರನ್ನು ಕುರಿತು ಹೀಗೆ ಹೇಳಿದನು :

"ಭಿಕ್ಖುಗಳೇ, ನಾನು ದಿವ್ಯ ಅಥವಾ ಮಾನವ ಬಂಧನಗಳಿಂದ ಬಿಡುಗಡೆ ಹೊಂದಿದ್ದೇನೆ.

"ಭಿಕ್ಖುಗಳೇ, ನೀವೂ ಕೂಡ ದಿವ್ಯ ಅಥವಾ ಮಾನವ ಬಂಧನಗಳಿಂದ ಬಿಡುಗಡೆ ಹೊಂದಿದ್ದೀರಿ.

"ಭಿಕ್ಖುಗಳೇ, ಮುನ್ನಡೆಯಿರಿ. ಬಹುಜನರ ಹಿತಕ್ಕಾಗಿ, ಬಹುಜನರ ಸುಖಕ್ಕಾಗಿ, ಪ್ರಪಂಚದ ಮೇಲಿನ ಅನುಕಂಪಕ್ಕಾಗಿ, ದೇವತೆಗಳ ಮಾನವರ ಒಳಿತಿಗಾಗಿ ಸುಖಕ್ಕಾಗಿ ಮುಂದೆ ನಡೆದು ಹೋಗಿ. ಇಬ್ಬರು ಭಿಕ್ಖುಗಳು ಕೂಡಿ ಸೇರಿ ಒಂದೇ ದಾರಿಯಲ್ಲಿ ಹೋಗಬೇಡಿ. ಭಿಕ್ಖುಗಳೇ, ಆರಂಭದಲ್ಲೂ, ಮಧ್ಯದಲ್ಲೂ, ಅಂತ್ಯದಲ್ಲೂ ಘನವಾಗಿರುವ ಮತ್ತು ಮಾತಿನಲ್ಲೂ, ಕೃತಿಯಲ್ಲೂ ಒಳ್ಳೆಯದಾಗಿರುವ ಈ ಧಮ್ಮವನ್ನು ಬೋಧಿಸಿ ಈ ಪವಿತ್ರ ಜೀವನವು ಪರಿಶುದ್ಧವೂ ಪವಿತ್ರವೂ ಆಗಿದೆ ಎಂಬುದನ್ನು ಜಗತ್ತಿಗೆ ಘೋಷಿಸಿ".

"ಭಿಕ್ಖುಗಳೇ, ಕೆಲವು ಜೀವಿಗಳಿದ್ದಾರೆ. ಅವರ ಕಣ್ಣಲ್ಲಿ ಸ್ವಲ್ಪ ಧೂಳಿದೆ. ಅಂತಹವರು ಧಮ್ಮವನ್ನು ಕೇಳದೇ ಇರುವುದರಿಂದ ಬಿದ್ದುಹೋಗುತ್ತಾರೆ. ಇನ್ನೂ ಕೆಲವರು ಧಮ್ಮವನ್ನು ಅರ್ಥ ಮಾಡಿಕೊಳ್ಳುವವರಿದ್ದಾರೆ.

"ಸಾಧಕರ ಧ್ವಜವನ್ನು ಹಾರಿಸಿ. ಪವಿತ್ರ ಧಮ್ಮವನ್ನು ಬೋಧಿಸಿ, ನಿಮ್ಮ ಗುರಿಯನ್ನು ಸಾಧಿಸಿಕೊಂಡ ನೀವು ಇನ್ನೊಬ್ಬರ ಒಳಿತಿಗಾಗಿ ಕೆಲಸ ಮಾಡಿ.

ಈ ಅರವತ್ತು ಜ್ಞಾನೋದಯ ಹೊಂದಿದ ಶಿಷ್ಯರನ್ನೇ ಪರಮ ಗುರುವಾದ (ಸತ್ಥಾ) ಬುದ್ಧನು ಮೊದಲ ಧಮ್ಮ ಪ್ರವರ್ತಕರನ್ನಾಗಿ ಕಳುಹಿಸಿದ. ಇವರು ಊರಿನಿಂದ ಊರಿಗೆ ಹೋಗಿ ಧಮ್ಮವನ್ನು ಪ್ರಚಾರ ಮಾಡಿದರು. ಅವರಿಗೆ ಆಗ ಸ್ವಂತ ವಾಸಸ್ಥಳವಿಲ್ಲ, ಮೈ ಮುಚ್ಚಲು ಹಾಕಿಕೊಂಡ ಚೀವರ, ಭಿಕ್ಷಾನ್ನ ಸಂಗ್ರಹಕ್ಕಾಗಿ ಬವನಾಸಿಯನ್ನು ಬಿಟ್ಟರೆ ಅವರ ಬಳಿ ಯಾವುದೇ ಐಹಿಕ ವಸ್ತುಗಳಿಲ್ಲ. ಊರುಗಳು ಸುತ್ತುತ್ತಿದ್ದಂತೆ, ಅವರ ಸಮಯವೆಲ್ಲ ಜನರನ್ನು ಶೀಲ ಸಂಪನ್ನರನ್ನಾಗಿ ಮಾಡುವಲ್ಲಿ, ಪಾರಮಾರ್ಥಿಕವಾಗಿ ಬೆಳೆಸುವುದರಲ್ಲಿ ಕಳೆಯುತ್ತಿರುವುದಲ್ಲದೇ ತಾವೇ ನುಡಿದಂತೆ ನಡೆದವರಾಗಿ ಜನರ ಮುಂದೆ ಉದಾಹರಣೆಯಾಗಿ ನಿಂತರು. ಈ ಅರವತ್ತು ಜನ ಬುದ್ಧನ ಅರಹತ ಶಿಷ್ಯರು ಬುದ್ಧ ಸಂಘದ ಆಧಾರ ಸ್ತಂಭವಾಗಿ ನಿಂತರು. ಇತಿಹಾಸದಲ್ಲೇ ಇದು ಅತ್ಯಂತ ಹಳೆಯ ಮನೆರಹಿತರ, ತ್ಯಾಗಿಗಳ, ಪವಿತ್ರ ಬ್ರಹ್ಮಚರ್ಯಪಾಲನೆಯಲ್ಲೇ ಇದ್ದು, ದೇವತೆಗಳ ಮತ್ತು ಮಾನವರ ಪಾರಮಾರ್ಥಿಕ ಮತ್ತು ಸಾಮಾಜಿಕ ಒಳಿತಿಗಾಗಿ ತಮ್ಮನ್ನೇ ಅರ್ಪಿಸಿಕೊಂಡವರ ಸಂಘ.

ಭಿಕ್ಖು ಸಂಘದ ಸದಸ್ಯರು ಸಮಾಜದ ಎಲ್ಲ ಭಾಗಗಳಿಂದ ಬಂದವರಾಗಿದ್ದರು. ಶ್ರೀಮಂತರು, ಬುದ್ಧಿವಂತರು, ಪಂಡಿತರು, ಸಮುದಾಯಗಳ ಮುಖಂಡರು ಇಂಥವರಿಂದ ಹಿಡಿದು ಸಾಮಾನ್ಯರು, ದೀನರು, ದಲಿತರನ್ನೂ ಒಳಗೊಂಡ ಸಂಘ ಇದಾಗಿತ್ತು.





ಸಂಘವು ಜಾತಿ, ಮತ, ವರ್ಗಗಳ ಬೇಧವನೆಣಿಸಿದೆ ಎಲ್ಲರಿಗೂ ಮುಕ್ತವಾಗಿತ್ತು. ಸಮಾಜದ ಶ್ರೀಮಂತ ಹಾಗು ಶಿಕ್ಷಣದಲ್ಲಿ ಮುಂದುವರಿದ ಸ್ತ್ರೀ–ಪುರುಷರಿಂದ ಹಿಡಿದು ನಯ ನಾಜೂಕಿನ ನಗರದವರನ್ನು, ಗಟ್ಟಿಮುಟ್ಟಾದ ಗ್ರಾಮೀಣ ಪ್ರದೇಶದವರನ್ನೂ ಸೇರಿದಂತೆ ಎಲ್ಲರೂ ಸಂಘದ ಭಿಕ್ಖು, ಭಿಕ್ಖುಣಿಯರಾಗಿ ಸೇರಿದ್ದರು.

ಬುದ್ಧನ ಬೋಧನೆಯಿಂದಾಗಿ ಹಲವಾರು ಉಪಾಸಕ–ಉಪಾಸಕಿಯರು ಧಮ್ಮದ ಬದುಕನ್ನು ನಡೆಸಿ ಲೋಕೋತ್ತರ ಸ್ಥಿತಿಗಳನ್ನು ಹೊಂದಿ, ಅವರೆಲ್ಲ ಆರ್ಯರಾದರು, ಸಂತರಾದರು. ಯಸನ ತಂದೆ–ತಾಯಿಗಳು ಮತ್ತು ಯಸನ ಪೂರ್ವಾಶ್ರಮದ ಪತ್ನಿ ಉಪಾಸಕರಾದವರಲ್ಲಿ ಅಗ್ರಗಣ್ಯರು. ಇವರು ಸಂತ ಸ್ಥಿತಿಯ ಮೊದಲ ಹಂತವಾದ ಸೋತಾಪನ್ನರು. ಹಿಂದಕ್ಕೆ ಬಾರದಿರುವ ನಿಬ್ಬಾಣ ಮುಖವಾದ ಲೋಕೋತ್ತರ ಸ್ಥಿತಿಯನ್ನು ಸೇರಿದವರು.

ಈ ಮೊದಲ ಅರವತ್ತು ಅರ್ಹತರು, ಆದರ್ಶಪ್ರಾಯರಾದ ಧಮ್ಮದೂತರು. ಇವರು ಬುದ್ಧನ ಪವಿತ್ರ ಧಮ್ಮವನ್ನು ಪ್ರಚಾರ ಮಾಡುತ್ತಾ ಎಲ್ಲರ ಒಳಿತನ್ನು ಬಯಸಿದವರು; ಇವರ್‍ಯಾರು ಯಂತ್ರಗಳಂತೆ ಬೃಹತ್ ಸಂಖ್ಯೆಯ ಜನರನ್ನು ಕಪಟದಿಂದ, ಹಣ ಮತ್ತು ರಾಜಕೀಯ ಶಕ್ತಿಯಿಂದ ಅವರ ಧರ್ಮವನ್ನು ಪರಿವರ್ತನೆ ಮಾಡುವವರಲ್ಲ. ಈ ಧಮ್ಮದೂತರು ಸಮಾಜದ ಮೇಲಿನ ಅನುಕಂಪದಿಂದಾಗಿ, ಅದರ ಒಳಿತಿಗಾಗಿ ಆರ್ಯ ಧಮ್ಮವನ್ನು ಯಾರು ಕೇಳುತ್ತಾರೊ, ಅವರಿಗೆ ಮಾತ್ರ ಬೋಧಿಸುತ್ತಾರೆ. ಬುದ್ಧನು ಉರುವೇಲದ ಕಡೆಗೆ ಹೊರಟನು.

## ಪ್ರಶ್ನೆಗಳು

1. **ಐದು ಜನ ಸಂನ್ಯಾಸಿಗಳು ಅರ್ಹತರಾದ ಮೇಲೆ ಏನಾಯಿತು ?**
2. **ಮೊದಲ ವರ್ಷಾವಾಸದ ಮಹತ್ವವೇನು ? ಬುದ್ದನು ಮೊದಲ ವರ್ಷಾವಾಸವನ್ನು ಹೇಗೆ ಕಳೆದನು ?**
3. **ಮೊದಲ ವರ್ಷಾವಾಸದಲ್ಲಿ ನಡೆದ ಹಲವು ಘಟನೆಗಳನ್ನು ವಿವರಿಸಿ. ವರ್ಷಾವಾಸದ ಕೊನೆಯಲ್ಲಿ ಬುದ್ಧ ಏನು ಮಾಡಿದನು?**
4. **ಧರ್ಮ ಪ್ರವರ್ತಕರಿಗೆ ಬುದ್ಧ ಕೊಟ್ಟ ಐತಿಹಾಸಿಕ ಸಂದೇಶವೇನು ? ಆ ಗ್ರಂಥ ಭಾಗವನ್ನು ಉದ್ಧರಿಸಿ.**

## ಅಧ್ಯಾಯ–8

# ಎಲ್ಲ ಬುದ್ಧರುಗಳ ಬೋಧನೆಯ ತಿರುಳು

ಭಗವಾನ್ ಬುದ್ಧರು ಜೇತವನದ ವಿಹಾರದಲ್ಲಿದ್ದ ಸಂದರ್ಭದಲ್ಲಿ ಆಪ್ತ ಸಹಾಯಕರೂ ದಾಯಾದಿಯೂ ಆದ ಪೂಜ್ಯ ಆನಂದರು ಹಿಂದೆ ಆಗಿಹೋದ, ಈಗಿನ ಮತ್ತು ಮುಂದಿನ ಎಲ್ಲ ಬುದ್ಧರುಗಳು ಬೋಧಿಸಿದ ಧಮ್ಮದ ತಿರುಳನ್ನು ಸಂಕ್ಷಿಪ್ತವಾಗಿ ತಿಳಿಸುವಂತೆ ಕೋರಿದರು. ಆಗ ಬುದ್ಧರು ಉತ್ತರ ರೂಪದಲ್ಲಿ ಈ ಗಾಥೆಯನ್ನು ಹೇಳಿದರು :

**ಸಬ್ಬ ಪಾಪಸ್ಸ ಅಕರಣಂ,**
**ಕುಸಲಸ್ಸ ಉಪಸಂಪದಾ,**
**ಸಚಿತ್ತ ಪರಿಯೋದಪನಂ,**
**ಏತಂ ಬುದ್ಧಾನಸಾಸನಂ** – ಧಮ್ಮಪದ 183

ಪಾಪಕಾರ್ಯಗಳನ್ನು ಮಾಡದಿರುವುದು
ಕುಶಲವನ್ನು ಸಂಪಾದಿಸುವುದು
ಮನಸ್ಸನ್ನು ಪರಿಶುದ್ಧಿಗೊಳಿಸುವುದು
ಇವೇ ಬುದ್ಧರುಗಳ ಬೋಧನೆ.

ಈ ಗಾಥೆಯು ಒಬ್ಬ ಸಾಧಕನು ಅಷ್ಟಾಂಗ ಮಾರ್ಗವನ್ನು ದಿನನಿತ್ಯ ಜೀವನದಲ್ಲಿ ಹೇಗೆ ಪರಿಪಾಲಿಸಬೇಕೆಂಬುದನ್ನು ಹೇಳುತ್ತದೆ.

ಗಾಥೆಯ ಮೊದಲ ಸಾಲು 'ಸಬ್ಬ ಪಾಪಸ್ಸ ಅಕರಣಂ' – ಕೆಟ್ಟದ್ದನ್ನು ಅಥವಾ ಪಾಪ ಕರ್ಮವನ್ನು ಮಾಡದಿರುವುದು ಶೀಲಪಾಲನೆಗೆ ಸಂಬಂಧಪಟ್ಟಿದೆ. ಅಂದರೆ ಸರಿಯಾದ ಮಾತನ್ನು ಆಡುವ, ಸರಿಯಾದ ಕರ್ಮವನ್ನು ಮಾಡುವ ಮತ್ತು ಸರಿಯಾದ ಜೀವನೋಪಾಯ ವಿಚಾರಕ್ಕೆ ಸಂಬಂಧಿಸಿದೆ. ಯಾರು ಮಾತು, ಕೃತಿ ಮತ್ತು ಸಂಪಾದನೆಯಲ್ಲಿ ಕೆಡುಕನ್ನು ಮಾಡುವುದಿಲ್ಲವೋ ಅವರು ಶೀಲವನ್ನು ಪರಿಪಾಲಿಸುತ್ತಾರೆ.

ಎರಡನೆಯ ಸಾಲು – 'ಕುಸಲಸ್ಸ ಉಪಸಂಪದಾ', ಕುಶಲವನ್ನು ಸಂಪಾದಿಸುವುದು ಅಥವಾ ಬೆಳೆಸಿಕೊಳ್ಳುವುದು ಧ್ಯಾನಕ್ಕೆ (ಸಮಾಧಿ) ಸಂಬಂಧಪಟ್ಟಿದೆ. ಈ ಸಮಾಧಿಯಲ್ಲಿ ಸರಿಯಾದ ಪ್ರಯತ್ನ, ಸರಿಯಾದ ಮಾನಸಿಕ ಜಾಗ್ರತೆ ಮತ್ತು ಸರಿಯಾದ ಏಕಾಗ್ರತೆ ಒಳಗೊಂಡಿವೆ. ಯಾರು ಸಮತಾ ಧ್ಯಾನದ ಮೂಲಕ ಮನಸ್ಸನ್ನು ವಿಕಸನಗೊಳಿಸಿ





ಕೊಳ್ಳುತ್ತಾರೊ ಅವರು ಆಂತರಿಕವಾಗಿಯೇ ಆನಂದವನ್ನು ಬೆಳೆಸಿಕೊಳ್ಳುತ್ತಾರೆ. ಆ ಮೂಲಕ ಚೇತೋ ವಿಮುಕ್ತಿಯನ್ನು (ಮನಸ್ಸಿನಿಂದ ಬಿಡುಗಡೆ) ಪಡೆಯುತ್ತಾರೆ.

ಮೂರನೆಯ ಸಾಲು – 'ಸಚಿತ್ತ ಪರಿಯೋದಪನಂ', ಮನಸ್ಸನ್ನು ಪರಿಶುದ್ಧಿಗೊಳಿಸಿ ಕೊಳ್ಳುವುದು ಪ್ರಜ್ಞೆಗೆ ಸಂಬಂಧಪಟ್ಟಿದೆ. ಈ ಪ್ರಜ್ಞೆಯಲ್ಲಿ ಸರಿಯಾದ ದೃಷ್ಟಿ ಮತ್ತು ಸರಿಯಾದ ಸಂಕಲ್ಪ ಅಥವಾ ಆಲೋಚನೆ ಸೇರಿಕೊಂಡಿವೆ. ಯಾರು ವಿಪಸ್ಸನ ಧ್ಯಾನದ ಮೂಲಕ ಮನಸ್ಸನ್ನು ವಿಕಸನಗೊಳಿಸಿಕೊಳ್ಳುತ್ತಾರೊ ಅವರು ಎಷ್ಟೇ ಸೂಕ್ಷ್ಮವಿರುವ ಮಾನಸಿಕ ಕೊಳಕುಗಳನ್ನು ಬುಡಮೇಲು ಮಾಡಿ ಆ ಮೂಲಕ ಮನಸ್ಸು ಪರಿವರ್ತನೆಯಾಗಿ ಸಂಸಾರ ಬಂಧನದಿಂದ (ಮತ್ತೆ ಮತ್ತೆ ಹುಟ್ಟುವ) ಬಿಡುಗಡೆ ಹೊಂದುತ್ತಾರೆ.

ಶೀಲ, ಸಮಾಧಿ ಮತ್ತು ಪ್ರಜ್ಞೆ – ಈ ಮೂರನ್ನು ಸಾಧನೆಯಲ್ಲಿ ತರುವುದೆಂದರೆ ಮೂರು ರೀತಿಯ ಭಿನ್ನ ಮಾನಸಿಕ ಕ್ರಿಯೆಗಳು ಮತ್ತು ಬದುಕಿನ ರೀತಿಗಳಾಗಿವೆ. ಇವು ಯಾವುವೆಂದರೆ : ಸಿಕ್ಖಾ (ತರಬೇತಿ, ಅಭ್ಯಾಸ), ಭಾವನಾ (ಬೆಳವಣಿಗೆ) ಮತ್ತು ವಿಸುದ್ಧಿ (ಮನಸ್ಸಿನ ಶುದ್ಧೀಕರಣ). ಸಿಕ್ಖಾ ಎಂದರೆ ಶೀಲದ ಮೂಲಕ ತನ್ನನ್ನು ತಾನೇ ಸಿದ್ಧಮಾಡಿಕೊಳ್ಳುವುದು ಅಥವಾ ತಯಾರು ಮಾಡಿಕೊಳ್ಳುವುದು – ಅದು ಪಂಚಶೀಲಗಳು, ಅಷ್ಟ ಶೀಲಗಳು ಮತ್ತು ದಶ ಶೀಲಗಳು; ಹಾಗೆಯೇ ಇನ್ನೂರ ಇಪ್ಪತ್ತೇಳು ಸಂನ್ಯಾಸಿ ನಿಯಮಗಳು.

ಒಬ್ಬನು ತನ್ನನ್ನು ವಾಚಾ, ಕಮ್ಮ, ಆಜೀವ (ಮಾತು, ಕರ್ಮ ಮತ್ತು ಜೀವನೋಪಾಯ) ಶೀಲಗಳ ಮೂಲಕ ಗುಣವರ್ಧನೆಯನ್ನು ಮತ್ತು ನೈತಿಕ ಬಲವನ್ನೂ ಹೊಂದುತ್ತಾನೆ. ಗುಣವರ್ಧನೆಯನ್ನು ಮಾಡಿಕೊಂಡಷ್ಟೂ ಶ್ರೀಮಂತಗೊಳಿಸಿದಷ್ಟೂ ಅವನ ನಡವಳಿಕೆ ಶುದ್ಧವಾಗಿ ಮನಸ್ಸು ಪರಿಶುದ್ಧವಾಗುತ್ತದೆ.

ಮಾನಸಿಕ ಶುದ್ಧಿ ಸುಖೀ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ಸತ್ತನಂತರ ಉತ್ತಮ ಲೋಕದಲ್ಲೇ ಮಾನವನಾಗಿಯೋ, ದೇವನಾಗಿಯೋ ಹುಟ್ಟುತ್ತಾನೆ. ಮನುಷ್ಯ ಲೋಕದಲ್ಲಿ ಹುಟ್ಟಿದರೆ ಗುಣದಲ್ಲಿ, ಬುದ್ಧಿಯಲ್ಲಿ, ಸಂಪತ್ತಿನಲ್ಲಿ ಉತ್ತಮನಾಗಿರುತ್ತಾನೆ.

ಯಾರು ಧ್ಯಾನದಲ್ಲೇ ಸಾಧನೆಗೈದು ಮುಂದುವರಿಯುತ್ತಾರೋ ಅವರು ಮಾನಸಿಕ ಏಕಾಗ್ರತೆಯನ್ನು ಬೆಳೆಸಿಕೊಳ್ಳುತ್ತಾರೆ. ಆ ಮೂಲಕ ಮಾನಸಿಕ ಸ್ಥಿತಿಗಳಿಗೂ ಮೀರಿದ ಸಮಾಧಿ ಅಥವಾ ಝಾನ ತಲುಪುತ್ತಾರೆ. ಬೌದ್ಧ ಧರ್ಮದಲ್ಲಿ ಎರಡು ಪ್ರತ್ಯೇಕ ರೀತಿಯ ಧ್ಯಾನಗಳಿವೆ : ಸಮತಾ ಮತ್ತು ವಿಪಸ್ಸನಾ, ಸಮತಾ ಧ್ಯಾನವು ಸಮಾಧಿಯ ವಿವಿಧ ಸ್ತರಗಳಿಗೆ ಕೊಂಡೊಯ್ದು ಮನಸ್ಸನ್ನು ಉನ್ನತ ಸ್ಥಿತಿಗಳಿಗೆ, ಬ್ರಹ್ಮಲೋಕದ ದೇವತೆಗಳ ಮನಸ್ಸಿನ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಚಿತ್ತವು ಹೀಗೆ ಬ್ರಹ್ಮ ದೇವತೆಗಳ ಮಟ್ಟಕ್ಕೆ ಬೆಳೆಯುತ್ತಿದ್ದಂತೆ ಮನಸ್ಸು ಎಲ್ಲರೀತಿಯ ಮಾನಸಿಕ ಅಡೆತಡೆಗಳಿಂದ – ಅಂದರೆ ಧ್ಯಾನ, ಶೀಲ ಮತ್ತು ಪಾರಮಾರ್ಥಿಕ ಬೆಳವಣಿಗೆಗಳಿಗೆ ಅಡ್ಡಿಬರುವ ಸಂಗತಿಗಳಿಂದ ಮುಕ್ತವಾಗುತ್ತದೆ. ಹೀಗೆ ಒಬ್ಬನು ಉತ್ತಮ ಸ್ಥಿತಿಗಳತ್ತ ಸಾಗುತ್ತಾನೆ.

ಈ ಮಾನಸಿಕ ಅಡೆತಡೆಗಳು ಯಾವುವೆಂದರೆ ಇಂದ್ರಿಯ ಸಂಬಂಧ ಆಸೆಗಳು, ದ್ವೇಷ, ಸೋಮಾರಿತನ, ಅಶಾಂತಿ ಮತ್ತು ಅನುಮಾನ. ಒಮ್ಮೆ ಮನಸ್ಸು ಅಡೆತಡೆಗಳಿಂದ ಹೊರತಾದಲ್ಲಿ ಚಿತ್ತವಿಶುದ್ಧಿಯಾಗುತ್ತದೆ. ಮನಸ್ಸು ಶುದ್ಧಿಯಾಗುವುದೊಂದರಿಂದಲೇ ಸಾಂಸಾರಿಕ ತಾಪತ್ರಯಗಳಿಂದ ಮುಕ್ತಿ ದೊರಕದು. ಉತ್ತಮೋತ್ತಮ ಮಾನಸಿಕ ಸ್ಥಿತಿಗಳನ್ನು ಬೆಳೆಸಿಕೊಳ್ಳುವುದರ ಮೂಲಕ ಒಬ್ಬನು ಹಲವಾರು ಲೋಕೋತ್ತರ ಶಕ್ತಿಗಳನ್ನು ನೇರ ಜ್ಞಾನ ಸ್ಥಿತಿಗಳನ್ನು (ಅಭಿಜ್ಞ) ಹೊಂದುತ್ತಾನೆ.

ಒಬ್ಬ ಧ್ಯಾನಿಯು ಈ ಝಾನಗಳನ್ನು ಸಾಯುವವರೆಗೂ ಕಾದಿಟ್ಟುಕೊಂಡಲ್ಲಿ, ಅವನು ಬ್ರಹ್ಮದೇವತೆಗಳಿರುವ ರೂಪ ಲೋಕದಲ್ಲಿ ಪುನರ್ಜನ್ಮ ಪಡೆಯುತ್ತಾನೆ. ಅಲ್ಲಿ ಅವನು ಬಹು ದೀರ್ಘಕಾಲ ಅಂದರೆ ಮಾತುಗಳಲ್ಲಿ ಎಣಿಸಲಾಗದಷ್ಟು ಕಾಲ ಅರ್ಥಾತ್ ಕಲ್ಪಗಳವರೆಗೆ ಬದುಕುತ್ತಾನೆ. ಆದರೆ ಮನಸ್ಸಿನ್ನೂ ಸಾಂಸಾರಿಕ ಸ್ಥಿತಿಯಿಂದ ಮುಕ್ತಿ ಹೊಂದಿರದ ಕಾರಣ ಒಳ್ಳೆಯ ಕರ್ಮದ ಫಲದಿಂದಾಗಿ ಬಹಳ ಕಾಲವಿದ್ದು, ಆ ಕರ್ಮಫಲ ಮುಗಿದಾಗ ಸಾಯುತ್ತಾನೆ. ಮತ್ತೆ ಮರುಜನ್ಮವನ್ನು ಪಡೆಯುತ್ತಾನೆ. ಸುಮ್ಮನೆ ದಿವ್ಯಲೋಕಗಳ ಜೀವನವನ್ನು ಅನುಭವಿಸುವುದರಿಂದ ಕರ್ಮ ಮತ್ತು ಪುನರ್ಜನ್ಮಗಳ ಬಂಧನದಿಂದ ಮುಕ್ತಿ ದೊರೆಯದು ಮತ್ತು ಸಂಸಾರದಿಂದಲೂ ಮುಕ್ತಿ ದೊರೆಯದು.

ಯಾರು ಸಮತಾ ಧ್ಯಾನಕ್ಕಿಂತ ಭಿನ್ನವಾದ ವಿಪಸ್ಸನಾ ಧ್ಯಾನದಲ್ಲಿ ಸಾಧನೆಗೈಯುತ್ತಾರೊ ಅವರು ವಾಸ್ತವತೆಗಳ ವಿಭಿನ್ನ ಹಂತಗಳನ್ನು ಬೆಳೆಸಿಕೊಳ್ಳುತ್ತಾರೆ. ಧ್ಯಾನಾವಸ್ಥೆಯ ಈ ವಿವಿಧ ಮಜಲುಗಳು ಮಾನಸಿಕ ಕೊಳಕುಗಳನ್ನು ಬುಡಮೇಲು ಮಾಡಿ ಮನಸ್ಸನ್ನು ಪರಿಶುದ್ಧಿಗೊಳಿಸುವುದಲ್ಲದೆ ಪರಿವರ್ತನೆಯನ್ನೂ ಮಾಡುತ್ತವೆ. ಪರಿವರ್ತಿತಗೊಂಡ ಮನಸ್ಸು ಲೋಕೀಯ ಚಿತ್ತದಿಂದ ಲೋಕೋತ್ತರ ಚಿತ್ತಸ್ಥಿತಿಗೆ ಹೋಗುತ್ತದೆ.

ನಾಲ್ಕು ರೀತಿಯ ಲೋಕೋತ್ತರ ಚಿತ್ತ ಸ್ಥಿತಿಗಳಿವೆ; ಎಲ್ಲೆಯನ್ನು ಮೀರಿರುವ ಅಂದರೆ ನಿಬ್ಬಾಣವನ್ನು ಮುಟ್ಟಿರುವ ಚಿತ್ತ ಸ್ಥಿತಿ. ಹೀಗೆಂದರೆ ಕಾಮ ಲೋಕ (ಇಂದ್ರಿಯ ಸಂಬಂಧ ಆಸೆಗಳಿಂದ ಕೂಡಿದ ವಲಯ), ರೂಪಲೋಕ (ಸೂಕ್ಷ್ಮ ವಸ್ತುಗಳಿಂದ ಕೂಡಿದ ದಿವ್ಯ ವಲಯ) ಮತ್ತು ಅರೂಪಲೋಕ (ರೂಪರಹಿತ ಸಂಗತಿಗಳಿಂದ ಕೂಡಿದ ವಲಯ) ಎಂಬ ಮೂರು ರೀತಿಯ ಅಸ್ತಿತ್ವಗಳಿಂದ ಕೂಡಿದ ಲೋಕೀಯ ಚಿತ್ತಸ್ಥಿತಿಯನ್ನು ಮೀರಿ ಇರುವ ಲೋಕೋತ್ತರ ಚಿತ್ತ.

ತಾನೇ ತನ್ನ ಅಕುಶಲ ಕರ್ಮಗಳಿಂದ ಸೃಷ್ಟಿಸಿಕೊಂಡ ಸಂಯೋಜನೆಗಳನ್ನು ನಾಶಮಾಡಿಕೊಂಡ ಮೇಲೆ ಮನಸ್ಸು ಮೇಲೆ ಹೇಳಿದ ಮೂರು ಅಸ್ತಿತ್ವ ವಲಯಗಳನ್ನು ಮೀರುತ್ತಾ ಬಿಡುಗಡೆಯತ್ತ ಪಯಣಿಸುತ್ತದೆ. ಈ ಸಂಯೋಜನೆಗಳೇ ಮುಂದಿನ ಜನ್ಮಕ್ಕೆ ಕೊಂಡಿಯಾಗುತ್ತವೆ. ಒಮ್ಮೆ ಈ ಸಂಯೋಜನೆಗಳು ಮುರಿದುವೆಂದರೆ ಮನಸ್ಸು ಪ್ರಾಪಂಚಿಕ ಅಸ್ತಿತ್ವದಿಂದ ವಿಮುಕ್ತಿಗೊಳ್ಳುತ್ತದೆ. ನಾಲ್ಕು ಲೋಕೋತ್ತರ ಫಲ ಚಿತ್ತದಿಂದ ಉದ್ಭವವಾಗುವ ನಾಲ್ಕು ಹಂತಗಳ ಬಿಡುಗಡೆ ಇದೆ. ಈ ನಾಲ್ಕು ಲೋಕೋತ್ತರ ಸ್ಥಿತಿಗಳ ಸಂಯೋಜನೆ





ಗಳನ್ನು ನಾಶ ಮಾಡುತ್ತಾ ಹೋಗುತ್ತದೆ. ಆ ಮೂಲಕ ಮನಸ್ಸು ಬಿಡುಗಡೆಗೊಂಡು 'ಪರಿಶುದ್ಧಿಗೊಳ್ಳುತ್ತದೆ'.

ಕೊನೆಯ ಸಾಲು 'ಏತಂ ಬುದ್ಧಾನಸಾಸನಂ' ಇದರಲ್ಲಿ ಮೂರು ಬಗೆಯ ತರಬೇತಿಯ ಬೋಧನೆ ಇದೆ. ಅವು : ಸಿಕ್ಖಾ (ತರಬೇತಿ), ಭಾವನಾ (ಬೆಳವಣಿಗೆ) ಮತ್ತು ವಿಸುದ್ಧಿ (ಪರಿಶುದ್ಧಿ) – ಇವು ಎಲ್ಲ ಬುದ್ಧರುಗಳ ಬೋಧನಾ ತಿರುಳು. ನಮ್ಮ ಕಾಲದ ಗೌತಮ ಬುದ್ಧ ನಲವತ್ತೈದು ವರ್ಷಗಳ ಕಾಲ ಅವಿರತವಗಿ ಧಮ್ಮವನ್ನು ಪ್ರಚಾರ ಮಾಡಿದನೋ ಅದೆಲ್ಲವನ್ನು ಈ ಕೆಳಗಿನ ಗಾಥೆಯಲ್ಲಿ ಹೇಳಿದೆ :

**ಸಬ್ಬ ಪಾಪಸ್ಸ ಅಕರಣಂ,**
**ಕುಸಲಸ್ಸ ಉಪಸಂಪದಾ,**
**ಸಚಿತ್ತ ಪರಿಯೋದಪನಂ,**
**ಏತಂ ಬುದ್ಧಾನ ಸಾಸನಂ** – ಧಮ್ಮಪದ 183

ಪಾಪಕಾರ್ಯಗಳನ್ನು ಮಾಡದಿರುವುದು
ಕುಶಲವನ್ನು ಸಂಪಾದಿಸುವುದು
ಮನಸ್ಸನ್ನು ಪರಿಶುದ್ಧಿಗೊಳಿಸುವುದು
ಇವೇ ಬುದ್ಧರುಗಳ ಬೋಧನೆ

## ಬೌದ್ಧ ಧರ್ಮದಲ್ಲಿ ಕೇಡು, ಒಳಿತು ಮತ್ತು ಸ್ವಯಂ ಪರಿಶುದ್ಧಿಗಳ ಅರ್ಥ.

ಮೇಲೆ ಹೇಳಿದ ಎಲ್ಲ ಬುದ್ಧರುಗಳ ಪ್ರಬುದ್ಧ ಬೋಧನೆಗಳನ್ನು ಧರ್ಮಶಾಸ್ತ್ರ, ಮನಶ್ಶಾಸ್ತ್ರ ಮತ್ತು ತತ್ತ್ವಶಾಸ್ತ್ರ ಎಂಬುದಾಗಿ ವಿಂಗಡಿಸಬಹುದು. 'ಶೀಲ'ವು ಬೌದ್ಧ ಧರ್ಮ ಶಾಸ್ತ್ರವನ್ನು, 'ಸಮಾಧಿ'ಯು ಬೌದ್ಧ ಮನಶ್ಶಾಸ್ತ್ರವಾಗಿಯೂ ಮತ್ತು 'ಪ್ರಜ್ಞೆ'ಯು ಬೌದ್ಧ ತತ್ತ್ವಶಾಸ್ತ್ರವಾಗಿಯೂ ಇವೆ.

ಬೌದ್ಧ ಧರ್ಮದ ಪ್ರಕಾರ ಯಾವುದು ಕೇಡು, ಯಾವುದು ಒಳಿತು ಮತ್ತು ಶುದ್ಧಿ (ಪಾರಮಾರ್ಥಿಕವಾಗಿ) ಎಂದರೇನು ಎನ್ನುವ ಬಗ್ಗೆ ಮೇಲಿನ ಗಾಥೆಯ ಹಿನ್ನೆಲೆಯಲ್ಲಿ ಉತ್ತರಿಸಲು ಹೊರಟಾಗ ಕೆಲವು ಮುಖ್ಯ ಪ್ರಶ್ನೆಗಳು ಏಳುತ್ತವೆ. ಅವೆಂದರೆ : ಕೇಡು ಎಂದರೆ ನಿಖರವಾಗಿ ಏನು ಅದು? ಅದು ಏತಕ್ಕಾಗಿ ಕೆಟ್ಟದ್ದಾಗಿದೆ? ಯಾವುದು ಅಥವಾ ಯಾರು ಅದನ್ನು ಕೆಟ್ಟದ್ದಾಗಿ ಮಾಡುತ್ತಾರೆ? ಹಾಗೆಯೇ ಒಳಿತು ಅಥವಾ ಚೆನ್ನಾಗಿರುವುದು ಅಂದರೆ ಏನು? ಏತಕ್ಕಾಗಿ ಒಳ್ಳೆಯದು? ಅಥವಾ ಯಾರು ಅದನ್ನು ಒಳಿತಾಗಿರುವಂತೆ ಮಾಡುತ್ತಾರೆ? ಹೀಗೆ ಮುಂತಾದ ಪ್ರಶ್ನೆಗಳು ಏಳುತ್ತವೆ.

ಆಸ್ತಿಕ ಧರ್ಮಗಳಲ್ಲಿ ಧರ್ಮಶಾಸ್ತ್ರವು ಸೃಷ್ಟಿಕರ್ತನಾದ ದೇವರ ಮೇಲೆ ನಿಂತಿದೆ; ದೇವರು ಎಲ್ಲ ಜೀವಿಗಳನ್ನು, ಪ್ರಪಂಚವನ್ನು ಮತ್ತು ಧರ್ಮಶಾಸ್ತ್ರವನ್ನು ಸೃಷ್ಟಿಸುತ್ತಾನೆ. ಹೀಗೆ ಧರ್ಮಶಾಸ್ತ್ರವು ಗ್ರಂಥಗಳಲ್ಲಿ ವಿಧಿತವಾದಂತೆ ಇರುತ್ತದೆ. ಹಿಂದುಗಳಿಗೆ ವೇದಗಳು,

ಕ್ರಿಶ್ಚಿಯನ್ನರಿಗೆ ಬೈಬಲ್, ಮುಸಲ್ಮಾನರಿಗೆ ಕುರ್-ಆನ್, ಹಾಗೆಯೇ ಸಿಕ್ಖರು, ಜೈನರು ಇವರುಗಳಿಗೆ ಅವರವರ ಧರ್ಮ ಗ್ರಂಥಗಳು ಆಧಾರವಾಗಿರುತ್ತವೆ. ಈ ಪವಿತ್ರ ಧಾರ್ಮಿಕ ಗ್ರಂಥಗಳು ದೇವರಿಂದ ಆದೇಶಿಸಲ್ಪಟ್ಟ ಮಾತುಗಳನ್ನು ಒಳಗೊಂಡು, ಅಲ್ಲಿನ ನೀತಿ ನಿಯಮಗಳನ್ನು ಪ್ರಶ್ನಿಸದಂತೆ ಪರಿಪಾಲಿಸಬೇಕು.

ಇದಕ್ಕೆ ವಿರುದ್ಧವಾಗಿ ಬೌದ್ಧ ನೀತಿ ಅಥವಾ ಧರ್ಮಶಾಸ್ತ್ರವು ಬುದ್ಧನಿಂದ ಸೃಷ್ಟಿಯಾದುದಲ್ಲ ಅಥವಾ ಬೌದ್ಧ ಗ್ರಂಥಗಳ ಪ್ರಕಾರ ಬಂದುದಲ್ಲ. ಜಡ ಅಥವಾ ಭೌತಿಕ ವಾದಗಳಲ್ಲಿರುವಂತೆ ಇರುವ ಮನುಷ್ಯ ನಿರ್ಮಿತ ಪರಿಕಲ್ಪನೆ ಅಥವಾ ನಿಯಮಗಳಿಂದ ಬೌದ್ಧ ಧರ್ಮ ಸೃಷ್ಟಿಯಾದುದಲ್ಲ. ಬೌದ್ಧ ಧರ್ಮಶಾಸ್ತ್ರವು ಸಂಪೂರ್ಣವಾಗಿ ಬದುಕಿನ ಅಂತಿಮ ವಾಸ್ತವಿಕತೆಗಳ ಮೇಲೆ ಅಂದರೆ ಚತುರಾರ್ಯ ಸತ್ಯಗಳ ಮೇಲೆ ನಿಂತಿದೆ. ಇನ್ನೂ ವಿಶದವಾಗಿ ಹೇಳಬೇಕೆಂದರೆ ಅದು ಚಿತ್ತದ ಕುಶಲ ಅಥವಾ ಅಕುಶಲ ಸ್ಥಿತಿಗಳಿಂದ ಆಗುವ ಮಾನಸಿಕ ವಾಸ್ತವತೆಗಳ ಮೇಲೆ ನಿಂತಿದೆ. ಈ ಕುಶಲ ಮತ್ತು ಅಕುಶಲ ಸ್ಥಿತಿಗಳು ಕುಶಲಾಕುಶಲ ಪ್ರೇರಣೆ ಅಥವಾ ಮೂಲಗಳ ಮೇಲೆ ನಿಂತಿವೆ ಎಂಬ ಅಂಶವನ್ನು ಗಮನಿಸಬೇಕು.

ಬೌದ್ಧ ಧರ್ಮದಲ್ಲಿ ಅಂಧಾನುಕರಣೆ ಮಾಡಲು ಯಾವುದೇ ದೈವಾಜ್ಞೆಗಳಿಲ್ಲ. ಸ್ವಯಂ ಪ್ರೀತಿಯಿಂದ ಸ್ವೀಕರಿಸಿ ಆಚರಿಸುವ ಶೀಲಗಳಿವೆ, ನೀತಿ ಸಂಬಂಧದ ನಿಯಮಗಳಿವೆ. ಇವೆಲ್ಲವೂ ಬದುಕಿನ ಅಂತಿಮ ವಾಸ್ತವತೆಗಳನ್ನು ಸ್ಪಷ್ಟವಾಗಿ ಅರಿವು ಮಾಡಿಕೊಂಡ ನೆಲೆಯ ಮೇಲಿವೆ.

ಮೂಲವಾಗಿ ನೀತಿ ಧರ್ಮವು ದೈಹಿಕ ಮತ್ತು ವಾಚಕ ಕ್ರಿಯೆಗಳ (ಕರ್ಮ) ಮೇಲೆ ನಿಂತಿದೆ. ಯಾವುದೇ ಕಮ್ಮ ಅಥವಾ ಕರ್ಮವು ಲೋಭ ದ್ವೇಷ ಮತ್ತು ಮೋಹದ ಮೂಲದ್ದಾಗಿದ್ದರೆ ಅದು ಅಕುಶಲ ಅಥವಾ ಪಾಪಕಾರಿಯಾಗುತ್ತದೆ. ಯಾವುದು ಅಕುಶಲವೋ ಅದು ಪಾಪಕಾರಿ, ಅಪ್ರಬುದ್ಧವೂ ಮತ್ತು ಅಪವಿತ್ರವೂ ಆಗಿರುತ್ತದೆ. ಯಾವಾಗ ಅಕುಶಲ ಸಂಗತಿಗಳು ಒಬ್ಬನನ್ನು ಕರ್ಮ ಮಾಡಲು ಅಥವಾ ಮಾತನಾಡಲು ಉದ್ದೀಪಿಸುತ್ತದೋ ಆ ರೀತಿಯ ಕರ್ಮವು ಅನೈತಿಕವಾಗಿರುತ್ತದೆ. ಬೌದ್ಧ ಧರ್ಮದಲ್ಲಿ ಕರ್ಮವೆಂದರೆ ಮನಸ್ಸು ಅಥವ ಚೇತನಾ. ಯಾರಾದರೂ ಪ್ರಜ್ಞಾಪೂರ್ವಕವಾಗಿ ಅಥವಾ ಲೋಭ, ದ್ವೇಷ ಅಥವಾ ಮೋಹದಿಂದ ಉದ್ದೇಶಪೂರ್ವಕವಾಗಿ ಕರ್ಮವನ್ನೆಸಗಿದರೆ ಅಥವಾ ಮಾತನಾಡಿದರೆ ಅದು ಅವನ ಮೇಲೂ ಮತ್ತು ಇತರರ ಮೇಲೂ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ. ಆದ್ದರಿಂದ ಅವು ಅಕುಶಲ ಮತ್ತು ಪಾಪಕರ. ಹಾಗಾಗಿ ಅದು ಕೇಡು. ಹೀಗೆ ಕೇಡು ಅಥವಾ ಪಾಪ ಎನ್ನುವುದು ಮನಸ್ಸಿನ ವಾಸ್ತವತೆಯ ಮೇಲೆ ನಿಂತಿದೆ. ಆ ರೀತಿಯ ಮನಸ್ಸೇ ಕ್ರಿಯೆಗೆ, ಮಾತಿಗೆ ಅಥವಾ ಆಲೋಚನೆಗೆ ಆಧಾರವಾಗಿರುತ್ತದೆ. ಭಗವಾನ್ ಬುದ್ಧ ಹೇಳಿದ್ದಾರೆಂಬ ಕಾರಣಕ್ಕಾಗಿ 'ಕೇಡು' ಎನ್ನುವುದು ಇದು ಎಂದು ಹೇಳುವುದಿಲ್ಲ. ಮೂಲದಲ್ಲಿ ಅದು





ವಿನಾಶಕಾರಿಯಾಗಿ ಮತ್ತು ನಕಾರಾತ್ಮಕವಾಗಿ ಇರುವುದರಿಂದ ನೋವನ್ನು ಉಂಟುಮಾಡುತ್ತದೆ ಎಂಬ ಕಾರಣಕ್ಕಾಗಿ ಕೇಡು ಎಂದು ಹೇಳುತ್ತೇವೆ.

ಒಳಿತು ಎನ್ನುವುದನ್ನು ಇದೇ ರೀತಿಯಾಗಿ ವಿಶ್ಲೇಷಿಸಲಾಗಿದೆ. ಅಂದರೆ ಪ್ರಜ್ಞಾಪೂರ್ವಕವಾದ ಅಥವಾ ಉದ್ದೇಶಪೂರ್ವಕವಾದ ಒಂದು ಕ್ರಿಯೆಯು ಒಳಿತಾಗಿರಲು ಕಾರಣವೆಂದರೆ ಅದು ಕುಶಲ ಮತ್ತು ಪವಿತ್ರ ಭಾವದಿಂದ ಕೂಡಿರುತ್ತದೆ. ಹಾಗೆಯೇ ಆ ರೀತಿಯ ಪುಣ್ಯಕರ ಮತ್ತು ಜಾಣ್ಮೆಯ ಕ್ರಿಯೆಗಳು ಅಥವಾ ಕರ್ಮಗಳು ಸುಖಕರವಾಗಿ, ಸಕಾರಾತ್ಮಕವಾಗಿದ್ದು ಮತ್ತು ಕ್ರಿಯಾಶೀಲ ಪರಿಣಾಮಗಳನ್ನು ಅಂದರೆ ಅಲೋಭ, ದ್ವೇಷ-ಹೀನತೆ ಮತ್ತು ಅಮೋಹವನ್ನು ಉಂಟುಮಾಡುತ್ತವೆ.

ಹೀಗೆ ಬೌದ್ಧ ಧರ್ಮಶಾಸ್ತ್ರವು ವಾಸ್ತವ ಸಿದ್ಧಾಂತದ ಮೇಲೆ ನಿಂತಿದೆ. ಧಾರ್ಮಿಕ ತತ್ತ್ವಸಿದ್ಧಾಂತ ಅಥವಾ ಮಾನವ ನಿರ್ಮಿತ ಕಾನೂನುಗಳು ಹೇಗೆ ಕಾಲ್ಪನಿಕ ನೆಲೆಗಳ ಮೇಲೆ ಬೌದ್ಧ ಧರ್ಮವು ರಚಿತವಾಗಿಲ್ಲ. ಒಬ್ಬ ಬೌದ್ಧನಿಗೆ ಒಳಿತು-ಕೆಡಕುಗಳ ಸ್ವಭಾವಗಳು, ಅವುಗಳ ವಾಸ್ತವಿಕ ನೆಲೆಯಿಂದಲೇ ಸ್ಪಷ್ಟವಾಗಿ ವ್ಯಕ್ತವಾಗುತ್ತವೆ. ಅವುಗಳು ಕೊಡುವ ಫಲಗಳು ಕಣ್ಣಿಗೆ ಕಾಣುವಂಥದಾದ್ದರಿಂದ ಚರ್ಚಾತೀತವಾಗಿವೆ.

ಮನಶ್ಶಾಸ್ತ್ರದ ದೃಷ್ಟಿಯಿಂದ ಹೇಳುವುದಾದರೆ, ಆದುನಿಕ ಭೌತಿಕ ನೆಲೆಯಲ್ಲೇ ಇರುವ ಮನಶ್ಶಾಸ್ತ್ರದಂತೆ ಆಗಲಿ, ದೇವರ ಇಚ್ಛೆಯ ಆಧಾರದ ಮೇಲೆ ಇರುವ ಸಿದ್ಧಾಂತ ಅಥವಾ ಉಪದೇಶಗಳಂತೆ ಆಗಲಿ ಬೌದ್ಧ ಧರ್ಮವು ಮಾನಸಿಕ ವಿಚಾರ ಸರಣಿಯನ್ನು ರೂಪಿಸಲು ಹೋಗುವುದಿಲ್ಲ. ಬೌದ್ಧ ಧರ್ಮವು ಮನಸ್ಸಿನ ವಿಜ್ಞಾನ. ಇಲ್ಲಿ ಎಲ್ಲವನ್ನು ವಾಸ್ತವಿಕ ನೆಲೆಯ ಮೇಲೆ ಮೌಲ್ಯವನ್ನು ಕಟ್ಟಬಹುದು.

ಬೌದ್ಧ ನೀತಿ ಅಥವಾ ಧರ್ಮ ಶಾಸ್ತ್ರವು ಹೇಗೆ 'ಕರ್ಮ' (ಕ್ರಿಯೆ) ಮೇಲೆ ನಿಂತಿದೆಯೋ ಅದೇರೀತಿಯಲ್ಲಿ ಬೌದ್ಧ ಮನಶ್ಶಾಸ್ತ್ರವು ಕರ್ಮದ ಮೇಲೆ ನಿಂತಿದೆ. ಎಲ್ಲ ಕರ್ಮಗಳೂ ಮನಸ್ಸಿನಿಂದಲೇ ಹುಟ್ಟುವುವು. ಆದ್ದರಿಂದ ಪಾಪ ಕರ್ಮವಾಗಲಿ, ಒಳ್ಳೆಯ ಕರ್ಮವಾಗಲಿ ಅವು ಕೆಟ್ಟ ಅಥವಾ ಒಳ್ಳೆಯ ಚಿತ್ತದ ಪ್ರತಿಫಲನಗಳು. ಕರ್ಮ ಅಥವಾ ಕ್ರಿಯೆಯು ಕೆಟ್ಟದ್ದಾಗಿ ಇಲ್ಲವೆ ಒಳ್ಳೆಯದಾಗಿ ಯಾಕೆ ಇರುತ್ತದೆಂದರೆ ಮಾನಸಿಕ ಸ್ಥಿತಿಯು ಕೆಟ್ಟದ್ದಾಗಿ ಅಥವಾ ಚೆನ್ನಾಗಿ ಇರುವುದರಿಂದ. ಇನ್ನೂ ಸ್ಪಷ್ಟವಾಗಿ ಹೇಳುವುದೆಂದರೆ ಕೆಟ್ಟ ಅಥವಾ ಒಳ್ಳೆಯ ಕರ್ಮವು ಕೆಟ್ಟ ಅಥವಾ ಒಳ್ಳೆಯ ಚಿತ್ತವನ್ನು ಪ್ರತಿನಿಧಿಸುತ್ತವೆ.

ಬೌದ್ಧ ಮನಶ್ಶಾಸ್ತ್ರವು ಮನಸ್ಸು ಅಥವಾ ಚಿತ್ತದ ವಾಸ್ತವಿಕತೆಗಳ ಬಗ್ಗೆ ಸಂಬಂಧಪಟ್ಟಿದೆಯಾಗಲಿ, ಮನಸ್ಸಿನ ಕಲ್ಪನೆಗಳ ಅಥವಾ ನಂಬಿಕೆಗಳಿಗೆ, ಅಭಿಪ್ರಾಯಗಳಿಗೆ ಸಂಬಂಧಪಟ್ಟಿಲ್ಲ. ಕರ್ಮವು ಮನಸ್ಸಿನಿಂದ ಉದ್ಭವಿಸುವುದರಿಂದ ಕರ್ಮ ಮತ್ತು ಚಿತ್ತವು ಪರಸ್ಪರ ಅವಲಂಬಿಗಳು. ಈ ಸ್ಪಷ್ಟತೆಯನ್ನು ಮೊದಲು ಅರ್ಥ ಮಾಡಿಕೊಳ್ಳಬೇಕು.

ಹಾಗೆಯೇ ಕರ್ಮ ಮತ್ತು ಪುನರ್ಜನ್ಮ ಕೂಡ ಒಂದಕ್ಕೊಂದು ಅವಲಂಬಿತವಾಗಿವೆ. ಅಂದರೆ ಪುನರ್ಜನ್ಮವು ಕರ್ಮದ ನೇರ ಪರಿಣಾಮ. ಯಾರೊಬ್ಬರು ಎಲ್ಲ ರೀತಿಯ ಕರ್ಮಗಳಲ್ಲಿ ಅಥವಾ ಕ್ರಿಯೆಗಳಲ್ಲಿ ತೊಡಗುತ್ತಾರೋ ಅವರು ಕರ್ಮ ಸಂಬಂಧದ ಚೈತನ್ಯವನ್ನು ಒಗ್ಗೂಡಿಸಿಕೊಳ್ಳುತ್ತಾರೆ. ಈ ಕರ್ಮ ಸಂಬಂಧ ಚೈತನ್ಯದ ವಾಹಕವೇ ಚಿತ್ತ. ಹೇಗೆ ನದಿಯು ತನ್ನೊಡನೆ ಎಲ್ಲ ಕಸ, ಸತ್ತ ಹೆಣ, ಬೆಲೆಬಾಳುವ ಬೆಳ್ಳಿ ಬಂಗಾರ, ಮರಮುಟ್ಟುಗಳನ್ನು ಸೆಳೆದೊಯ್ಯುತ್ತದೋ, ಹಾಗೆಯೇ ಮನಸ್ಸು ಕೂಡ ತನ್ನೊಡನೆ ಎಲ್ಲ ಕುಶಲ ಅಕುಶಲ ಚೈತನ್ಯಗಳನ್ನು ಕೊಂಡೊಯ್ಯುತ್ತದೆ.

ಬದುಕು ಎನ್ನುವುದು ಒಂದು ಪಯಣವಿದ್ದಂತೆ. ಇದರಲ್ಲಿ ಕರ್ಮ ಚೈತನ್ಯವನ್ನು ಸಂಗ್ರಹಿಸುತ್ತಲೋ, ಕಳೆದುಕೊಳ್ಳುತ್ತಲೋ ಇರುತ್ತದೆ. ಬದುಕಿನ ಕೊನೆಯ ಹೊತ್ತಿಗೆ ಕಳೆದುಕೊಳ್ಳದೇ ಉಳಿದುಕೊಂಡ ಕರ್ಮ ಚೈತನ್ಯ ಹೊಸ ಅಸ್ತಿತ್ವ ಸ್ಥಿತಿಯೊಂದಕ್ಕೆ ಜನ್ಮ ಕೊಡುತ್ತದೆ. ಒಬ್ಬ ಮನುಷ್ಯ ಸತ್ತಾಗ ಅವನ ಶರೀರ ಹೋಯಿತು, ಆದರೆ ಅವನ ಮನಸ್ಸು ಈ ಹಿಂದೆ ಮನಶ್ಶಾಸ್ತ್ರದ ನಿಯಮದಂತೆ ಹೇಗೆ ಬದುಕಿದ್ದಾಗ ಮನಸ್ಸು ಹರಿಯುತ್ತಿತ್ತೋ ಹಾಗೆ ಹರಿಯುತ್ತಲೇ ಇರುತ್ತದೆ. ಅಂದರೆ ಮನುಷ್ಯ ಬದುಕಿದ್ದಾಗ ಮನಸ್ಸು ಹೇಗೆ ಕೆಲಸ ಮಾಡುತ್ತಿತ್ತೋ, ಹಾಗೆಯೇ ಸತ್ತ ನಂತರವೂ ಮನಸ್ಸು ಕೆಲಸ ಮಾಡುತ್ತಲೇ ಇರುತ್ತದೆ.

ಚಿತ್ತದ ಸ್ಥಿತಿಯನ್ನು ನದಿ ಅಥವಾ ಸಮುದ್ರದ ಮೇಲಿನ ಅಲೆಗೆ ಹೋಲಿಸಬಹುದು. ಹರಿಯುವ ನೀರು ಅಲೆಗಳನ್ನು ಸೃಷ್ಟಿಸುತ್ತದೆ. ಗಾಳಿಯ ದೆಸೆಯಿಂದಾಗಿ ಅಲೆ ಹುಟ್ಟುತ್ತದೆ, ಮೇಲಕ್ಕೇರುತ್ತದೆ ಮತ್ತು ಬೀಳುತ್ತದೆ, ಮತ್ತೆ ಹೊಸ ಅಲೆಯೂ ಮೇಲಕ್ಕೆ ಎದದ್ದು, ಕೆಳಗೆ ಬಿದ್ದಿತು. ಅದು ಇನ್ನೊಂದು ಅಲೆಯನ್ನು ಸೃಷ್ಟಿಸಿತು. ಹೀಗೆ ಕೊನೆಯಿಲ್ಲದೆ ಅಲೆಗಳು ಸೃಷ್ಟಿಯಾಗುತ್ತಲೇ ಹೋಗುತ್ತವೆ.

ಚಿತ್ತ ಸ್ಥಿತಿಯೊಂದು ಉದ್ಭವವಾಗಿರುವುದು ಅದರ ಹಿಂದಿನ ಚಿತ್ತ ಸ್ಥಿತಿಯ ಮೇಲೆ ಅವಲಂಬಿತವಾಗಿದೆ. ಅದು ಎತ್ತರಕ್ಕೆ ಹೋಗಿ ಕೆಳಗೆ ಬೀಳುತ್ತದೆ. ಬಿದ್ದ ತೀವ್ರತೆಯ ಪ್ರಭಾವದಿಂದಲೆ ಹೊಸ ಚಿತ್ತವೊಂದು ಹುಟ್ಟುತ್ತದೆ.

ಇಷ್ಟಾದರೂ ಈಗ ಹುಟ್ಟಿದ ಚಿತ್ತ ಹಿಂದಿನ ಚಿತ್ತದಂತೆಯೇ ಇರುವುದಿಲ್ಲ. ಆದರೂ ಪೂರ್ಣವಾಗಿ ಭಿನ್ನವಾದುದೇನೂ ಅಲ್ಲ. ಹಿಂದಿನದರ ಸ್ವಲ್ಪ ಅಂದರೆ ಕಳೆದುಹೋಗದೆ ಇನ್ನೂ ಉಳಿದುಕೊಂಡ ಕರ್ಮ ಚೈತನ್ಯದ ಭಾಗ ಹೊಸಚಿತ್ತದಲ್ಲಿ ಸೇರಿಕೊಳ್ಳುತ್ತದೆ. ಇದೇರೀತಿಯಲ್ಲಿ ಸಾಯುತ್ತಿರುವವನ ಕರ್ಮ ಚೈತನ್ಯದ ಭಾಗವು ಹೊಸ ಅಸ್ತಿತ್ವ ಸ್ಥಿತಿಯೊಂದರ ಮೊದಲ ಚಿತ್ತವಾಗಿ ಹುಟ್ಟುತ್ತದೆ. ಹೀಗೆ ಇಂದಿನದು ಹಿಂದಿನದೊಡನೆ ಸಂಪರ್ಕವಿಟ್ಟುಕೊಂಡಿರುವುದರಿಂದ ಇದನ್ನೇ ಪುನರ್ಜನ್ಮ ಚಿತ್ತ ಎಂದು ಕರೆಯುವುದು. ಇದೇ ಜೀವನದ ಹರಿವನ್ನು ಮುಂದುವರಿಸುವುದು. ಹೀಗೆ ಕರ್ಮ ಮತ್ತು ಪುನರ್ಜನ್ಮಗಳು ಕಾರಣ ಮತ್ತು ಕಾರ್ಯಗಳಾಗಿ ಪರಸ್ಪರ ಅವಲಂಬಿತಗಳಾಗಿವೆ.





ಒಬ್ಬನು ವಿಪಸ್ಸನ ಧ್ಯಾನ ಸಾಧನೆಯಲ್ಲಿ ಮುಂದುವರಿದು ವಾಸ್ತವತೆಗಳ ಅರಿವನ್ನು ಬೆಳೆಸಿಕೊಳ್ಳುತ್ತಾ ಹೋದಂತೆ ಯಾವ ಕ್ಲೇಷಗಳಿಂದ ಕರ್ಮಗಳು ಉಂಟಾದವೋ ಅಂಥವು ಹೋಗಿ ಮನಸ್ಸು ಪರಿಶುದ್ಧಿಗೊಳ್ಳುತ್ತಿದೆ. ಮಾನಸಿಕ ಪರಿಶುದ್ಧಿ ಎಂದರೆ ಪುನರ್ಜನ್ಮವನ್ನುಂಟುಮಾಡುವ ಸಂಯೋಜನೆಗಳಿಂದ ಸಂಬಂಧ ಕಡಿದುಕೊಳ್ಳುವುದು ಎಂದರ್ಥ. ಹೀಗೆಂದರೆ ಮಾನಸಿಕ ಪರಿಶುದ್ಧಿ (ವಿಶುದ್ಧಿ) ಮತ್ತು ಪ್ರಜ್ಞೆಯಿಂದ ಒಬ್ಬ ಸಾಧಕನು ಕರ್ಮ ಸಂಗ್ರಹಗಳನ್ನು ತೆಗೆದುಹಾಕುತ್ತಾ ಹೋಗಿ ಆ ಮೂಲಕ ಪುನರ್ಜನ್ಮವನ್ನುಂಟುಮಾಡುವ ಸಂಯೋಜನೆಗಳು ದೂರವಾಗಿ ಸಂಸಾರವೆಂಬ ಭವ ಚಕ್ರವನ್ನು ಕೊನೆಗಾಣಿಸುತ್ತಾನೆ.

ಶೀಲ ಸಮಾಧಿ ಮತ್ತು ಪ್ರಜ್ಞೆಗಳ ಮೂಲಕ ತರಬೇತಿ, ವೃದ್ಧಿ ಮತ್ತು ಪರಿಶುದ್ಧಿ ಎಂಬ ಮೂರು ಸಂಸ್ಕಾರಗಳು ಫಲಪ್ರದವಾಗುವುದು, ಅಷ್ಟಾಂಗ ಮಾರ್ಗವನ್ನು ಶ್ರದ್ಧಾ ಭಕ್ತಿಯಿಂದ ಅನುಸರಿಸಿದಾಗ ಮಾತ್ರ. ಅಷ್ಟಾಂಗ ಮಾರ್ಗವೆಂದರೆ ಸರಿಯಾದ ದೃಷ್ಟಿ, ಸರಿಯಾದ ಸಂಕಲ್ಪ, ಸರಿಯಾದ ಮಾತು, ಸರಿಯಾದ ಕರ್ಮ, ಸರಿಯಾದ ಜೀವನೋಪಾಯ, ಸರಿಯಾದ ಪ್ರಯತ್ನ, ಸರಿಯಾದ ಜಾಗ್ರತೆ ಮತ್ತು ಸರಿಯಾದ ಮನೋ ಏಕಾಗ್ರತೆ.

ಈ ಎಂಟು ಅಂಶಗಳನ್ನು ದಿನನಿತ್ಯ ಬದುಕಿನಲ್ಲಿ ಅಳವಡಿಸಿಕೊಂಡು ಬರುವುದೇ ಶೀಲ, ಸಮಾಧಿ ಮತ್ತು ಪ್ರಜ್ಞೆಗಳ ಅನುಸರಣೆ. ಶೀಲವು ಸರಿಯಾದ ಮಾತು, ಕರ್ಮ, ಮತ್ತು ಜೀವನೋಪಾಯದಿಂದ ಕೂಡಿದ್ದರೆ ಸಮಾಧಿಯು ಸರಿಯಾದ ಪ್ರಯತ್ನ, ಜಾಗ್ರತೆ ಮತ್ತು ಏಕಾಗ್ರತೆಯನ್ನೊಳಗೊಂಡಿರುತ್ತದೆ ಮತ್ತು ಪ್ರಜ್ಞೆಯು ಸರಿಯಾದ ದೃಷ್ಟಿ ಮತ್ತು ಸಂಕಲ್ಪಗಳಿಂದ ಕೂಡಿರುತ್ತದೆ.

ಹೀಗೆ ಮೇಲೆ ಹೇಳಿದ ಗಾಥೆಯಲ್ಲಿ (ಧಮ್ಮಪದ–183) ಬುದ್ಧನು ಇಡೀ ಆರ್ಯ ಧರ್ಮವೇನೆಂಬುದನ್ನು ಸಂಗ್ರಾಹ್ಯವಾಗಿ ಘೋಷಿಸಿದ್ದಾನೆ.

## ಒಬ್ಬ ಜೀವಿ

## ಬದುಕಿನ ಉದ್ದೇಶ

ಬುದ್ಧ ತನ್ನ ಹಲವಾರು ಧಮ್ಮೋಪದೇಶಗಳಲ್ಲಿ ಬದುಕಿನ ನಿಜವಾದ ಉದ್ದೇಶವೇನೆಂಬುದನ್ನು ಹೇಳಿದ್ದಾನೆ. ಹೇಗೆ ಮಹಾಸಾಗರಕ್ಕೆ ಒಂದೇ ರುಚಿ ಇರುತ್ತದೋ ಅದೇರೀತಿಯಲ್ಲಿ ಪುನಃ ಪುನಃ ಸಂಸಾರ ಚಕ್ರಕ್ಕೆ ಬರದಂತೆ ಬಂಧ ವಿಮುಕ್ತಿಯಾಗುವುದೇ ಜೀವನದ ಉದ್ದೇಶವೆಂದು ಬುದ್ಧ ಹೇಳಿದ್ದಾನೆ.

ಇದೊಂದು ಸುಸಂಬದ್ಧ ಪ್ರಶ್ನೆ : ಸಂಸಾರದಿಂದ ಯಾರು ವಿಮುಕ್ತಗೊಳ್ಳುವುದು? ಬೇಕಾದಷ್ಟು ಹೆಸರುಗಳುಳ್ಳ ಇಂದ್ರಿಯ ಜ್ಞಾನಯುಕ್ತ ಜೀವಿಗಳಿವೆ : ಮನುಷ್ಯ, ದೇವ,

ಬ್ರಹ್ಮ ದಿವ್ಯಜೀವಿ, ನಾಲ್ಕು ಅಪಾಯ ಲೋಕಗಳಲ್ಲಿರುವ ನಿವಾಸಿಗಳು–ಪ್ರಾಣಿಗಳು, ಚೇತನಗಳು, ರಾಕ್ಷಸ ಜೀವಿಗಳು ಮತ್ತು ನರಕದಲ್ಲಿ ಒದ್ದಾಡುತ್ತಿರುವವರು. ಈ ಹೆಸರುಗಳೆಲ್ಲ ಕೇವಲ ಪರಿಕಲ್ಪನೆಗಳು ಅಥವಾ ಮನೋನಿರ್ಮಿತ ಸಂಜ್ಞೆಗಳು. ವಾಸ್ತವದಲ್ಲಿ ಮನುಷ್ಯ ಏನು? ಅದು ಅವನ ತಲೆಯೇ, ಕಾಲುಗಳೇ, ಕಣ್ಣುಗಳೇ, ದೇಹದ ವಿವಿಧ ಭಾಗಗಳೇ ಅಥವಾ ಅವನು ಮನಸ್ಸು ಮತ್ತು ಶರೀರದಿಂದ ಹೊರತಾದವನೇ?

ಬೌದ್ಧ ಧರ್ಮದಲ್ಲಿ ಇಂದ್ರಿಯಯುಕ್ತ ಜೀವಿಯನ್ನು ಅಂತಿಮವಾಗಿ ಭೌತಿಕ ಮತ್ತು ಮಾನಸಿಕ ಸಂಗತಿಗಳ ಗುಂಪೆಂದು ಹೇಳಬಹುದು. ಐದು ರಾಶಿಗಳು ಅಥವಾ ಗುಂಪುಗಳು ಇವೆ. ಅವು : ಭೌತಿಕ ರೂಪ (ಆಕಾರ), ವೇದನ (ಅನುಭವ), ಸಂಜ್ಞಾ (ಗ್ರಹಿಕೆ), ಸಂಖಾರ (ಮನೋ ನಿರ್ಮಾಣ) ಮತ್ತು ವಿಞ್ಞಣ (ಚಿತ್ತ). ಈ ಐದು ರಾಶಿಗಳನ್ನು ಬಿಟ್ಟು ಈ ಮಾನವ ಜೀವಿಯಲ್ಲಿ ಬೇರೇನೂ ತನಗೆತಾನೇ ಇರುವಂಥದ್ದೇನೂ ಇಲ್ಲ. ನಾನು, ನನ್ನದು, ಆತ್ಮ ಇತ್ಯಾದಿ ಯಾವುದೂ ಶರೀರ ಮತ್ತು ಮನಸ್ಸಿನಿಂದ ಹೊರತಾದ್ದು ಇಲ್ಲ ಮತ್ತು ಬದಲಾವಣೆಗೆ ಹೊರತಾಗಿರುವಂಥದ್ದೂ ಯಾವುದೂ ಇಲ್ಲ. ಈ ಐದು ಗುಂಪುಗಳು ಅಥವಾ ರಾಶಿಗಳು ಅನಿತ್ಯವಾದುವು, ಬದಲಾವಣೆಗೆ ಒಳಗಾಗುವಂಥವು ಮತ್ತು ನಶಿಸಿ ಹೋಗುವಂಥವು, ಆ ಕಾರಣದಿಂದಾಗಿ ಸ್ಥಿರವಲ್ಲದವು. ಯಾವುದು ಅಸ್ಥಿರವಾದುದೋ ಅದು ಅತೃಪ್ತಿಕರವೂ, ಅಪರಿಶುದ್ಧವೂ, ಊಹಿಸಲಸದಳವೂ ಮತ್ತು ದುಃಖ ತರುವಂಥದ್ದೂ ಆಗಿದೆ. ಅಸ್ತಿತ್ವದಲ್ಲಿರುವ ಪ್ರತಿಯೊಂದೂ ಹರಿಯುತ್ತಿರುತ್ತದೆ, ಪ್ರತಿಗಳಿಗೆಯೂ ಬದಲಾಗುತ್ತಿರುತ್ತದೆ, ದುಃಖಕ್ಕೆ ಒಳಗಾಗುತ್ತಿರುತ್ತದೆ ಮತ್ತು ಪ್ರತಿಯೊಂದು ಅನಾತ್ಮವಾದುದು.

ಈ ಮೂರು ಗುಣಗಳು ಅನಿತ್ಯ, ದುಃಖ ಮತ್ತು ಅನಾತ್ಮ – ಇವು ಸಂಸಾರದಲ್ಲಿರುವ ಪ್ರತಿ ಜೀವಿ ಅಥವಾ ಯಾವುದೇ ಬಾಹ್ಯ ವಸ್ತುವಿನ ಗುಣಗಳಾಗಿರುತ್ತವೆ. ಈ ಗುಣಗಳೇ ಬದುಕಿನ ನೈಜ ಭಾವವನ್ನು ಅಂದರೆ ದುಃಖಕ್ಕೆ ಒಳಗಾಗುವ ಸಂಗತಿಯನ್ನು ವಿವರಿಸುತ್ತವೆ. ಬದುಕಿನ ಉದ್ದೇಶವೆಂದರೆ ಸಂಸಾರದಿಂದ ಬಿಡುಗಡೆ ಹೊಂದುವುದು ಎಂದು ಹೇಳುತ್ತಾರೋ, ಅದರ ಹಿಂದಿರುವ ಸತ್ಯವೆಂದರೆ ಈ ಲೌಕಿಕ ಅಸ್ತಿತ್ವವು ಮೂಲತಃ ಅತೃಪ್ತಿಕಾರಕವೂ ಮತ್ತು ಅಪರಿಶುದ್ಧವೂ ಆಗಿದೆ. ಇದಕ್ಕೆ ಕಾರಣವೆಂದರೆ ಅನಿತ್ಯವೂ, ದುಃಖಕ್ಕೆ ಒಳಗಾಗುವುದು ಮತ್ತು ಅನಾತ್ಮವಾದುದರಿಂದ.

ಬೌದ್ಧ ಧರ್ಮದಲ್ಲಿ ಪಾರಮಾರ್ಥಿಕ ಮುಕ್ತಿ ಅಂದರೆ ನಿಬ್ಬಾಣ ಹೊಂದುವುದು ಒಂದು ಪರಿಕಲ್ಪನೆಯಲ್ಲ, ಅದೊಂದು ಸಾಕ್ಷಾತ್ಕಾರ, ಸತ್ಯಸಂಗತಿ. ಅದು ವಾಸ್ತವವಾಗಿ ಇದೆ ಮತ್ತು ಅದನ್ನು ಲೋಕೋತ್ತರ ಚಿತ್ತಸ್ಥಿತಿಗಳಿಗೆ ಹೋಗಿ ಅನುಭವಿಸಿ ಪರಿಶೀಲಿಸಬಹುದು. ಹಲವಾರು ರೀತಿಯ ಧ್ಯಾನಗಳಿವೆ. ಅವನ್ನು ಶ್ರದ್ಧಾ ಭಕ್ತಿಯಿಂದ ಅಭ್ಯಾಸ ಮಾಡಿದಲ್ಲಿ ಬದುಕಿನ ಸಹಜ ಸ್ವಭಾವವು ಅಂದರೆ 'ನಾನು', 'ನನ್ನದು', 'ಆತ್ಮ' ಎಂಬಿತ್ಯಾದಿಗಳು ಇಲ್ಲವೆಂಬ ಮತ್ತು ಕೇವಲ ಪಂಚರಾಶಿಗಳ ಮೊತ್ತವೆಂಬುದು





ಅರಿವಾಗುತ್ತದೆ. ಉದಾಹರಣೆಗೆ ಒಬ್ಬ ವಿಪಸ್ಸನ ಧ್ಯಾನಿಯು ಸಾಧನೆಯ ಒಂದು ಹಂತದಲ್ಲಿ ಅಜ್ಞಾನದಿಂದ ಮುಸುಕಿರುವ ಮನಸ್ಸನ್ನು ಜ್ಞಾನದಿಂದ ಬೇಧಿಸಲು ಮೂರು ಸಂಗತಿಗಳು ಅವನಿಗೆ ಏಕಕಾಲಕ್ಕೆ ಅನುಭವಕ್ಕೆ ಬರುತ್ತವೆ :

1. ದೃಷ್ಟಿ ಅಥವಾ ನಿಬ್ಬಾಣದ ನೇರ ಅನುಭವ
2. ಆಸವಗಳ ಕ್ಷಯ
3. ಚಿತ್ತವು ಲೋಕೀಯದಿಂದ ಲೋಕೋತ್ತರಕ್ಕೆ ಪರಿವರ್ತನೆಗೊಳ್ಳುವುದು.

ಕ್ಷಣಾರ್ಧದ ಲೋಕೋತ್ತರ ಜ್ಞಾನದಿಂದ ಈ ಮೂರು ಅನುಭವಗಳು ಆದಾಗ ಚತುರಾರ್ಯ ಸತ್ಯಗಳು ದ್ವಾದಸಾಕಾರ ಭಿನ್ನ ರೂಪಗಳಲ್ಲಿ (ಬುದ್ಧನ ಮೊದಲ ಧರ್ಮೋಪದೇಶ ಧಮ್ಮಚಕ್ಕ ಪವತ್ತನ ಸುತ್ತದಲ್ಲಿ ವಿವರಿಸಿದಂತೆ) ಅರಿವಾಗುತ್ತವೆ. ಹೀಗೆ, ಬಿಡುಗಡೆಯು ಮನುಷ್ಯನಲ್ಲಾಗಲಿ ಅಥವಾ ದಿವ್ಯಜೀವಿಯಲ್ಲಾಗಲಿ, ಆ ವಾಸ್ತವ ಸಂಗತಿ ಪರಿಶೀಲನಾರ್ಹವಾಗುತ್ತದೆ, ಇಲ್ಲೇ ಮತ್ತು ಈಗಲೇ ಅವರಿಗೆ ಕಾಣುತ್ತದೆ. ನಿಬ್ಬಾಣದ ಅನುಭವ ನಾಲ್ಕು ಅಧೋಲೋಕ (ಅಪಾಯ)ಗಳಲ್ಲಿರುವವರಿಗೆ ಆಗಲು ಸಾಧ್ಯವಿಲ್ಲ.

ಮೇಲೆ ವಿವರಿಸಿದಂತೆ ಮನುಷ್ಯನು ವಿಮುಕ್ತಿ ಅಥವಾ ಬಿಡುಗಡೆ ಹೊಂದುವುದಿಲ್ಲ. ಬಿಡುಗಡೆ ಹೊಂದುವುದು ರಾಶಿಗಳ ಸಮುಚ್ಚಯವಾದ 'ಮನುಷ್ಯ' ಎಂದು ಕರೆಸಿಕೊಳ್ಳುವವನು. ಈ ರಾಶಿಗಳು ಅಥವಾ ಸ್ಕಂದಗಳು ಕರ್ಮ ಮತ್ತು ಪುನರ್ಜನ್ಮ ಎಂಬ ಸಾಂಸಾರಿಕ ಬಂಧನದಿಂದ ಬಿಡುಗಡೆಯಾಗುತ್ತವೆ. ಆಗೊಂದು ಪ್ರಶ್ನೆ ಉದ್ಭವವಾಗುತ್ತದೆ : 'ಹಾಗಾದರೆ ಅಂಥ ಮನುಷ್ಯನಿಗೆ ಹೆಸರನ್ನೇಕೆ ಕೊಡಬೇಕು?" ಇದಕ್ಕೆ ಉತ್ತರವೆಂದರೆ ವ್ಯಕ್ತಿಯೊಬ್ಬನನ್ನು ಗುರುತಿಸುವುದಕ್ಕಾಗಿ ಮತ್ತು ಅವನು ವ್ಯವಸ್ಥಿತವಾದ ಸಮಾಜದಲ್ಲಿ ಶಾಂತಿಯಿಂದ ಬದುಕುವುದಕ್ಕಾಗಿ.

## ಎರಡು ಸತ್ಯಗಳು

ಬೌದ್ಧ ಧರ್ಮದಲ್ಲಿ ಎರಡು ರೀತಿಯ ಸತ್ಯಗಳಿವೆ – ಒಂದು ಅಂತಿಮ ಸತ್ಯ, ಇನ್ನೊಂದು ಪಾರಂಪರಿಕ ಸತ್ಯ. ಹೆಸರುಗಳನ್ನು ಕೊಡುವುದು, ಸಂಕೇತಗಳನ್ನು ಬಳಸುವುದು ಮತ್ತು ಪರಿಕಲ್ಪನೆಗಳು. ಇವೆಲ್ಲ ಪಾರಂಪರಿಕ ಸತ್ಯಕ್ಕೆ ಸೇರುತ್ತವೆ. ಅಂತಿಮವಾದ ಸತ್ಯದಲ್ಲಿ ಈ ಚತುರಾರ್ಯ ಸತ್ಯಗಳು ಸೇರಿಕೊಳ್ಳುತ್ತವೆ :

1. ದುಃಖ ಆರ್ಯಸತ್ಯ (ದುಃಖ ಅರಿಯ ಸಚ್ಚ)
2. ದುಃಖ ಕಾರಣ ಆರ್ಯಸತ್ಯ (ದುಃಖ ಸಮುದಯ ಸಚ್ಚ)
3. ದುಃಖ ಅಂತ್ಯ ಆರ್ಯಸತ್ಯ (ದುಃಖ ನಿರೋಧ (= ನಿಬ್ಬಾಣ) ಅರಿಯ ಸಚ್ಚ)
4. ದುಃಖ ಅಂತ್ಯದೆಡೆಯ ಮಾರ್ಗ ಆರ್ಯಸತ್ಯ (ದುಃಖ ನಿರೋಧಗಾಮಿನಿ ಪಟಿಪದಾ ಅರಿಯ ಸಚ್ಚ) ಅಥವಾ ಅರಿಯ ಅಟ್ಠಂಗಿಕ ಮಗ್ಗ)

ಮೇಲಿನ ಗಾಥಾದಲ್ಲಿ ಏನೆಲ್ಲ ಹೇಳಿದೆಯೋ ಅದೆಲ್ಲವೂ ನಾಲ್ಕು ಆರ್ಯ ಸತ್ಯಗಳಲ್ಲಿ ಸೇರಿಕೊಂಡಿದೆ. ಶೀಲ, ಸಮಾಧಿ, ಪ್ರಜ್ಞೆಗಳನ್ನು ಅನುಸರಿಸುವ ಜೀವಿಯು ಮೊದಲ ಎರಡು ಸತ್ಯಗಳನ್ನು ಪ್ರತಿನಿಧಿಸುತ್ತಾನೆ ಮತ್ತು ಸಾಧಕನು ಜ್ಞಾನದ ಲೋಕೋತ್ತರ ಹಂತಗಳನ್ನು ದಾಟಿ ಸತ್ಯ ಸಾಕ್ಷಾತ್ಕಾರ ಮಾಡಿಕೊಳ್ಳುವುದರ ಮೂಲಕ ನಿಬ್ಬಾಣದ ದರ್ಶನ ಪಡೆಯುತ್ತಾನೆ. ಇಂತಹ ಆರ್ಯನು ನಂತರದ ಎರಡು ಸತ್ಯಗಳನ್ನು ಅನುಭವಿಸಿದವನಾಗಿರುತ್ತಾನೆ.

## ಪ್ರಶ್ನೆಗಳು

1. **ಎಲ್ಲ ಬುದ್ಧರುಗಳ ಬೋಧನೆಯಲ್ಲಿನ ಸಾರದ ಬಗ್ಗೆ ಪ್ರಬಂಧವೊಂದನ್ನು ಬರೆಯಿರಿ; ಪಾಲಿ ಗಾಥೆಯನ್ನು ಉದ್ಧರಿಸಿ ಮತ್ತು ಅದನ್ನು ಯಾವಾಗ ಮತ್ತು ಯಾವ ಸಂದರ್ಭದಲ್ಲಿ ಹೇಳಿದರು ಎಂಬುದನ್ನು ವಿವರಿಸಿ.**
2. **ಕೇಡು, ಒಳಿತು ಮತ್ತು ಪರಿಶುದ್ಧಿಯ ಬಗ್ಗೆ ಬೌದ್ಧ ಧರ್ಮದ ಅರಿವಿನ ಹಿನ್ನೆಲೆಯಲ್ಲಿ ಪ್ರಬಂಧವೊಂದನ್ನು ಬರೆಯಿರಿ.**
3. **ಬೌದ್ಧ ಧರ್ಮದಲ್ಲಿ ಜೀವನದ ಉದ್ದೇಶವೇನು? ಪ್ರಸಿದ್ಧ 'ಉಪ್ಪಿನ ಸಾಮ್ಯ'ವನ್ನು ಉಲ್ಲೇಖಿಸಿ ಪ್ರತಿ ಪದ ಅರ್ಥವನ್ನು ಹೇಳಿ ಅದರ ವಿಶೇಷತೆಯನ್ನು ವಿವರಿಸಿ.**
4. **ಆಧ್ಯಾತ್ಮಿಕ ಮುಕ್ತಿ ಅಥವಾ ನಿಬ್ಬಾಣವು ಒಂದು ಪರಿಕಲ್ಪನೆಯೇ, ಸಿದ್ಧಾಂತವೇ ಅಥವಾ ಅದೊಂದು ಸಾಕ್ಷಾತ್ಕಾರ ಸತ್ಯವೇ?**
5. **ಆರ್ಯನಿಗೆ ನಿಬ್ಬಾಣದ ಅನುಭವವಾದಾಗ ಏನೇನು ಆಗುತ್ತದೆ ? ಹಂತ ಹಂತದ ಸ್ಥಿತಿಯನ್ನು ವಿವರಿಸಿ.**
6. **ಬೌದ್ಧ ಧರ್ಮದಲ್ಲಿ ಎರಡು ಸತ್ಯಗಳು ಯಾವುವು ? ವಿವರಿಸಿ.**



## ಅಧ್ಯಾಯ–9

# ಮೂಲ ಧ್ಯಾನಗಳು

ಬುದ್ಧ, ಧಮ್ಮ ಮತ್ತು ಸಂಘವೆಂಬ ತ್ರಿರತ್ನಗಳು ಅಥವಾ ತ್ರಿಸರಣಗಳು ಬೌದ್ಧ ಧರ್ಮದ ಬಗ್ಗೆ ಶ್ರದ್ಧಾ ಭಕ್ತಿಗಳನ್ನು ಮೂಡಿಸುವಂಥವು. ಇವು ರತ್ನಗಳು ಯಾಕೆಂದರೆ ಇವುಗಳಿಗಿಂತ ಮೌಲ್ಯವಾದವು ಯಾವೂ ಇಲ್ಲ. ಪರಮಶಾಂತಿ ಮತ್ತು ಸುಖವನ್ನು ಕರುಣಿಸುವ ಇವಕ್ಕಿಂತ ಉನ್ನತವಾದ ಶರಣಾಗತಿ ಇಲ್ಲ. ಭದ್ರತೆಯನ್ನು ರಕ್ಷಣೆಯನ್ನು ಕೊಡುವಂಥವು.

ಧ್ಯಾನವು ಭಕ್ತಿಯ ಒಂದು ಕ್ರಿಯೆ. ತ್ರಿರತ್ನಗಳ ಗುಣಗಳ ನಿರಂತರ ಸ್ಮರಣೆಯನ್ನು (ಅನುಸ್ಸತಿ) ಮಾಡುವುದು ಒಂದು ಧ್ಯಾನ. ತ್ರಿರತ್ನಗಳ ಗುಣಗಳನ್ನು ರತನತ್ತಯ ವಂದನಾ ಗಾಥಾದಲ್ಲಿ ನೋಡಬಹುದು. ಬೌದ್ಧರಿಗೆ ಈ ಗಾಥೆ ಚೆನ್ನಾಗಿ ಗೊತ್ತಿದ್ದು, ಚಿಕ್ಕಂದಿನಲ್ಲೇ ಅದನ್ನು ಕಲಿತಿರುತ್ತಾರೆ ಮತ್ತು ಎಲ್ಲ ಪೂಜಾ ಸಂದರ್ಭಗಳಲ್ಲಿ ಪಠಿಸುತ್ತಾರೆ.

ಬುದ್ಧನಲ್ಲಿನ ಒಂಭತ್ತು ಗುಣಗಳನ್ನು, ದಮ್ಮದಲ್ಲಿನ ಆರು ಗುಣಗಳನ್ನು ಮತ್ತು ಸಂಘದಲ್ಲಿನ ಹತ್ತು ಗುಣಗಳನ್ನು ಭಕ್ತಿಯಿಂದ ಸ್ಮರಿಸುವುದರಿಂದ ಆ ಗುಣಗಳೇ ನಮ್ಮಲ್ಲಿ ನೆಲೆಯೂರಿ ನಮ್ಮನ್ನು ಆಂತರಿಕವಾಗಿ ಪರಿಶುದ್ಧರನ್ನಾಗಿ ಮಾಡುತ್ತವೆ. ಉದಾಹರಣೆಗೆ ಬುದ್ಧನ ನವಾಂಶ ಗುಣಗಳನ್ನು ಸ್ಮರಿಸುತ್ತಿದ್ದಂತೆ ಆ ಗುಣಕ್ಕೆ ಸಂಬಂಧಪಟ್ಟ ಬುದ್ಧನ ಬದುಕಿನ ಸಾಧನೆ ಅಥವಾ ಘಟನೆ ಸ್ಮೃತಿಪಟಲದ ಮೇಲೆ ಹಾದು ಹೋಗುತ್ತದೆ. ಆನಂತರ ಈ ಗುಣಗಳು ವಾಸ್ತವವಾಗಿ, ಸ್ಪಷ್ಟವಾಗಿ ಕಾಣುತ್ತವೆ. ಈ ಗುಣಗಳನ್ನು ಸಾಧಕನು ತನ್ನ ಸ್ವಂತ ಬದುಕಿಗೆ ಅನ್ವಯಿಸಿಕೊಂಡು ಬೆಳೆಯುತ್ತಾ ಹೋಗಬಹುದು.

## ಅನುಸ್ಸತಿ

## ಮೂರು ಸ್ಮರಣೆಗಳು

I. **ಬುದ್ಧಾನುಸತಿ – ಬುದ್ಧರ ಗುಣಧರ್ಮಗಳ ಸ್ಮರಣೆ**

**ಇತಿ 'ಪಿ ಸೊ ಭಗವಾ' :**
ಭಗವಾನರು ಹೀಗಿದ್ದರು :

1. **ಅರಹಂ**
   ಪರಿಪೂರ್ಣರು

2. **ಸಮ್ಮಾಸಂಬುದ್ಧೋ**
   ಪರಮ ಜ್ಞಾನೋದಯವನ್ನು ಹೊಂದಿದವರು

3. **ವಿಜ್ಜಾಚರಣಾ ಸಂಪನ್ನೋ**
ವಿದ್ಯೆ ಮತ್ತು ಆಚರಣೆಯನ್ನು ಮೈಗೂಡಿಸಿಕೊಂಡವರು

4. **ಸುಗತೋ**
ಸರ್ವಶ್ರೇಷ್ಠರು

5. **ಲೋಕವಿದೂ**
ಸರ್ವಲೋಕಗಳನ್ನು ತಿಳಿದವರು

6. **ಅನುತ್ತರೊ ಪುರಿಸದಮ್ಮ ಸಾರಥಿ**
ಪಳಗಿಸುವುದರಲ್ಲಿ ಸರಿಸಾಟಿಯಿಲ್ಲದ ಸಾರಥಿ

7. **ಸತ್ಥಾ ದೇವ ಮನಸ್ಸಾನಂ**
ದೇವತೆಗಳ ಮತ್ತು ಮನುಷ್ಯರ ಪರಮ ಗುರುವು

8. **ಬುದ್ಧೋ**
ಜ್ಞಾನೋದಯವನ್ನು ಕೊಡುವವರು

9. **ಭಗವಾ 'ತಿ**
ಭಗವಂತನು.

## 1. ಅರಹಂ

ಬುದ್ಧರು ಅರ್ಹತರು. ಅಂದರೆ ಪರಿಪೂರ್ಣರು. ಏಕೆಂದರೆ ತಮ್ಮನ್ನು ತಾವೇ ಮೀರಿ ಬೆಳೆದು ನಿಬ್ಬಾಣವನ್ನು ಸ್ವಯಂ ಆಧ್ಯಾತ್ಮ ಸಾಧನೆಯ ಮೂಲಕ ಸಿದ್ಧಿಸಿಕೊಂಡವರು. ಸ್ವಂತ ಪ್ರಯತ್ನದಿಂದಲೇ ಆಸವಗಳನ್ನು (ಮಾನಸಿಕ ಕ್ಲೇಶಗಳನ್ನು) ಮೀರಿ ಬೆಳೆದು ಹುಟ್ಟು-ಸಾವುಗಳೆಂಬ ವಿಷವರ್ತುಲದಿಂದ ಆಚೆ ಹೋದವರು. ದೈಹಿಕ ಮಾನಸಿಕ ಕಾರಣ ಮೂಲಗಳ ವಿಧಾನವನ್ನೇ ಬದಲಿಸಿ ಮತ್ತೊಮ್ಮೆ ಯಾವುದೇ ಅಸ್ತಿತ್ವ ವಲಯಕ್ಕೆ ಮರಳದಂತೆ ಸಿದ್ಧಿ ಪಡೆದವರು. ಹೀಗೆ ದಿವ್ಯ ಸ್ಥಿತಿಗಳಿಗಿಂತಲೂ ಎತ್ತರಕ್ಕೆ ಹೋದವರು. ಮೇರೆಯಿಲ್ಲದ ಕರುಣೆ ಪ್ರೀತಿಯನ್ನು ಮೈಗೂಡಿಸಿಕೊಂಡ ಅರ್ಹತರಾದ ಭಗವಾನರು ತಾವು ಕಂಡುಕೊಂಡ ಸತ್ಯವನ್ನು ಎಲ್ಲರಿಗೂ ಬಯಲು ಮಾಡಿದರು. ತಾವೇ ಅಗ್ರಗಾಮಿಯಾಗಿ ಅಸಂಖ್ಯ ಅರ್ಹತ ಶಿಷ್ಯರನ್ನು ತಯಾರು ಮಾಡಿದರು. ಆದ್ದರಿಂದ ಭಗವಾನರು ಅರ್ಹತರಿಗೆ ಅರ್ಹತರು ಮತ್ತು ದೇವತೆಗಳೆಲ್ಲರ ದೇವತೆ.

## 2. ಸಮ್ಮಾಸಂಬುದ್ಧೋ

ಭಗವಾನರು ಪರಮ ಜ್ಞಾನೋದಯಿಗಳು. ಅಂದರೆ ಸಮ್ಮಾಸಂಬುದ್ಧರು. ಏಕೆಂದರೆ ಆರ್ಯಸತ್ಯಗಳನ್ನು ಕಂಡುಹಿಡಿದು ಪೂರ್ಣ ಪ್ರಮಾಣದ ಜ್ಞಾನೋದಯವನ್ನು ಹೊಂದಿದ ವ್ಯಕ್ತಿ. ಯಾವುದೇ ಗುರುವಿನ ಸಹಾಯವಿಲ್ಲದೆ, ತಾವೇ ಜ್ಞಾನೋದಯವನ್ನು





ಗಳಿಸಿಕೊಂಡವರು. ಇವರು ಪರಮ ಜ್ಞಾನೋದಯ ಹೊಂದಿದವರು. ಏಕೆಂದರೆ ಇವರು ಎಲ್ಲ ಜ್ಞಾನದ ತವರು ಮತ್ತು ಗಣಿ. ಅಂದರೆ ಇವರಿಗೆ ಎಲ್ಲ ಹಿಂದಿನ, ಈಗಿನ ಮತ್ತು ಮುಂದಿನ ಆಗುಹೋಗುಗಳೆಲ್ಲವೂ ಗೊತ್ತಾಗುತ್ತವೆ ಮತ್ತು ಕಾಣಿಸುತ್ತವೆ (ಜಾನಾತಿ, ಪಸ್ಸತಿ). ಬುದ್ಧನ ಈ ಗುಣವೇ ಪಾರಮಾರ್ಥದಲ್ಲಿ ಒಂದು ಭವ್ಯ ಸಾಕ್ಷಾತ್ಕಾರ. ಆದ್ದರಿಂದಲೇ ಇವರು ಸರ್ವಜ್ಞರು (ಸಬ್ಬಬು), ಸ್ವಯಂಭೂ (ತಾವಾಗಿಯೇ ಉದಯಿಸಿದವರು). ಇವರು ಧರ್ಮಭಾನು.

## 3. ವಿಚ್ಚಾಚರಣ ಸಂಪನ್ನೋ

ವಿದ್ಯೆ ಮತ್ತು ಆಚರಣೆಗಳ ಪರಿಪೂರ್ಣ ಮೇಳವೇ ಆದ ಬುದ್ಧ ಜ್ಞಾನ ಮತ್ತು ಅನುಕಂಪಗಳ ಚಿಲುಮೆ. ಚತುರಾರ್ಯ ಸತ್ಯಗಳ ಶೋಧನೆಯನ್ನು ತಾವೇ ಮಾಡಿ ಅಪರಿಮಿತ ಜ್ಞಾನವನ್ನು ಪಡೆದವರು. ಅಗಣಿತ ಗುಣ ಮತ್ತು ಅಪಾರ ಅನುಕಂಪವನ್ನು ಸುರಿಸಿ ತಾವು ಕಂಡುಕೊಂಡ ಸತ್ಯದಿಂದ ಜನರನ್ನು ಮುಕ್ತಿ ಮಾರ್ಗದೆಡೆಗೆ ಸೆಳೆದರು. ಜ್ಞಾನೋದಯದಿಂದ ನಿಬ್ಬಾಣ ಪಡೆದು ಸುಮ್ಮನಾಗಬಹುದಿತ್ತು. ಅಷ್ಟಕ್ಕೇ ನಿಲ್ಲದೆ ತಮ್ಮ ಪ್ರಜ್ಞೆಯ ಮೂಲಕ ಜನರ ದುಃಖವನ್ನು ಅರಿತು, ಅನುಕಂಪದಿಂದ ಆ ದುಃಖವನ್ನು ನಿರ್ಮೂಲ ಮಾಡುವ ಕಾಯಕ ಗೈದರು. ತಮ್ಮ ಪ್ರಜ್ಞೆಯ ಮೂಲಕ ತಮ್ಮನ್ನು ತಾವೇ ಭವಸಾಗರದಿಂದ ಪಾರು ಮಾಡಿಕೊಂಡು, ಅನುಕಂಪ, ಶ್ರೇಷ್ಠ ಗುಣಗಳ ಮೂಲಕ ಬೇರೆಯವರನ್ನು ಸಹ ಸಂಸಾರ ಸಾಗರದಾಚೆ ಒಯ್ದರು.

## 4. ಸುಗತೋ

ಬುದ್ಧನನ್ನು ಸುಗತನೆಂದು ಕರೆಯುತ್ತಾರೆ. ಏಕೆಂದರೆ ಭವ್ಯವಾಗಿ ಪವಿತ್ರರಾಗಿ ಆಗಮಿಸಿ, ತಮ್ಮ ಬೋಧನೆಯಿಂದ ಜಗತ್ತಿಗೆ ದೃಢತೆಯನ್ನೂ, ಮಾರ್ಗದರ್ಶನವನ್ನೂ ನೀಡಿದರು. ಬುದ್ಧನಾಗಿ ಉದಯಿಸಬೇಕಾದರೆ ಹತ್ತು ಅತ್ಯುತ್ತಮ ಪಾರಮಾರ್ಥಿಕ ಗುಣಗಳು ಇರಬೇಕಾಗುತ್ತವೆ. ಅವುಗಳನ್ನು ಸಾಧಿಸಿಕೊಳ್ಳುವುದೆಂದರೆ ತ್ಯಾಗ, ಬಲಿದಾನ ಮತ್ತು ಎದೆಗಾರಿಕೆ ಬೇಕಾಗುತ್ತದೆ. ಬೋಧಿಸತ್ತನು (ಮುಂದೆ ಬುದ್ಧನಾಗುವವನು) ನೂರಾರು ಜನ್ಮಗಳ ಮೂಲಕ ಸಂಸ್ಕಾರಗೊಂಡು ಎಚ್ಚರ ಹಾಗು ನಿರಂತರವಾಗಿ ಆ ಗುಣಗಳನ್ನು ಮೈಗೂಡಿಸಿಕೊಳ್ಳಬೇಕಾಗುತ್ತದೆ. ಇಷ್ಟೆಲ್ಲ ಸಾಧಿಸಿದ ನಂತರ ಬುದ್ಧನು 'ಸು+ಆಗತ'ನಾಗುತ್ತಾನೆ. ಅಂದರೆ ಅಭೂತಪೂರ್ವ ಭರವಸೆಯೊಂದಿಗೆ ಶುಭಾಗಮನ ಆಗುವವನು; 'ಸು+ಗತ'ನೂ – ಅಂದರೆ ವಿಶಿಷ್ಟವಾಗಿಯೇ ಒಂದು ಪರಂಪರೆಯನ್ನು, ಅಸಂಖ್ಯ ಜೀವಿಗಳ ಬಾಳನ್ನು ಬೆಳಗಿ ಹೋಗುವವನು. 'ಸು+ಗತೋ'– ಅಂದರೆ ಅಸಮಾನವಾದ ಧಮ್ಮವನ್ನು ಪರಿಪೂರ್ಣವಾಗಿ ಪೋಷಿಸಿದವನು; ಆ ಮೂಲಕ ಎಲ್ಲ ಜೀವಿಗಳನ್ನು ದುಃಖ ಬಂಧನದಿಂದ ಮುಕ್ತಿಗೊಳಿಸುವವನು.

## 5. ಲೋಕವಿದೂ

ಬುದ್ಧನು ಎಲ್ಲ ಲೋಕಗಳನ್ನು ತಿಳಿದವನು. ಆತನ ಜ್ಞಾನಕ್ಕೆ ಅಡೆತಡೆಗಳಿಲ್ಲ. ಹಿಂದಿನದನ್ನು, ಈಗಿನದನ್ನು, ಮುಂದಿನದನ್ನು; ಹತ್ತಿರವಿರಲಿ, ದೂರವಿರಲಿ, ಸ್ಥೂಲವಿರಲಿ, ಸೂಕ್ಷ್ಮವಿರಲಿ – ಇದ್ಯಾವುದನ್ನೇ ಅರಿಯಬೇಕೆಂದರೂ ಪೂರ್ಣವಾಗಿ ಆಳಕ್ಕೆ ಹೋಗಿ ತಿಳಿಯಬಲ್ಲವನು. ಹೀಗೆ ಹೇಳಿದ ಮಾತ್ರಕ್ಕೆ ಎಲ್ಲವನ್ನೂ ಏಕಕಾಲಕ್ಕೆ ಅರಿಯುತ್ತಾನೆಂದಲ್ಲ. ಆ ರೀತಿಯಾಗಿ ಅರಿಯಲು ಪ್ರವಾಹದಂತೆ ನುಗ್ಗುವುದೆಂದರೆ ಜ್ಞಾನಕ್ಕೆ ಅಡ್ಡಿಯೊಡ್ಡಿದಂತೆ. ಇದರ ಅರ್ಥವೇನೆಂದರೆ ಎಲ್ಲ ಜೀವಿಗಳ ಎಲ್ಲ ಅಸ್ತಿತ್ವ ಲೋಕಗಳ, ಎಲ್ಲ ಪಾರಮಾರ್ಥಿಕ ಸ್ಥಿತಿಗಳ ಬಗ್ಗೆ ಎಲ್ಲವನ್ನೂ ಅರಿಯುವ, ಸಾಂಸಾರಿಕ ಇತಿಮಿತಿಗಳನ್ನು ಮೀರಿ ಬೆಳೆದು ನಿಬ್ಬಾಣದ ಹಾದಿಗೆ ಬೇಕಾದ ಎಲ್ಲ ಜ್ಞಾನಗಳ ಅರಿವು ಬುದ್ಧನಿಗೆ ಇತ್ತು. ಎಲ್ಲ ಲೋಕಗಳ ಅರಿವಿರುವ ಶಕ್ತಿಯೇ ಬುದ್ಧನನ್ನು ಜೀವಿಯೊಂದರ ಗುಣ, ಶಕ್ತಿ, ವಿಕಾಸಮಟ್ಟವನ್ನು ಅರಿತು ಅವರಿಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಮಾಡಿತ್ತು.

## 6. ಅನುತ್ತರೋ ಪುರಿಸದಮ್ಮಸಾರಥಿ

ಪರಮಾರ್ಥ ದಿಕ್ಕಿನಲ್ಲಿರುವ ಸಾಧಕರನ್ನು ಪಳಗಿಸಿ ತಯಾರಿಸುವ ಅಪ್ರತಿಮ ತರಬೇತುದಾರನಾದ್ದರಿಂದ ಬುದ್ಧನನ್ನು ಅನುತ್ತರೋ ಪುರಿಸದಮ್ಮಸಾರಥಿ ಎಂದು ಕರೆಯುತ್ತಾರೆ. ನಲವತ್ತೈದು ವರ್ಷಗಳ ಧಮ್ಮ ಪ್ರಚಾರದ ಬದುಕಿನಲ್ಲಿ ಕಂಡುಬಂದ ಅನೇಕ ಉದಾಹರಣೆಗಳೇ ಈ ಗುಣಕ್ಕೆ ಸಾಕ್ಷಿಯಾಗಿವೆ. ಭಗವಾನರ ಮೇಲೆ ದುಷ್ಟ ಮನುಷ್ಯರು, ಭಯಂಕರ ದೆವ್ವ ಪಿಶಾಚಿಗಳು ಬಿದ್ದವು. ಭಗವಾನರು ಇವೆಲ್ಲರ ಮೇಲೂ ಅಪೂರ್ವ ಚೈತನ್ಯದಿಂದ ಧಾವಿಸಿ, ಅವರನ್ನು ಸರಿದಾರಿಯ ಮೇಲೆ ತಂದರು. ಕೆಟ್ಟವರನ್ನು (ಅಥವಾ ಕೆಟ್ಟದ್ದನ್ನು) ಮುಗಿಸದೆ ಮಣಿಸುವವರಾದ್ದರಿಂದ ಸಜ್ಜನರ ರಕ್ಷಕರಾದ್ದರಿಂದ ಬುದ್ಧನಿಗೆ ಸರಿಸಮಾನರಿಲ್ಲ. ಆದ್ದರಿಂದ ಭಗವಾನರು ನಿಜವಾಗಿಯೂ ಜೀವಿಗಳನ್ನು ಮಣಿಸಿ ಪರಮಾರ್ಥದತ್ತ ನಡೆಸುವವರಾದ್ದರಿಂದ ಅಸಮಾನ ಸಾರಥಿಗಳು.

## 7. ಸತ್ಥಾ ದೇವಮನಸ್ಸಾನಂ

ಭಗವಾನರು ದೇವತೆಗಳ ಮತ್ತು ಮಾನವರ ಪರಮ ಗುರು. ಯಾವ ದೇವತೆಗಳು, ಮನುಷ್ಯರು ಜ್ಞಾನೋದಯ ಹೊಂದಲು, ಮುಕ್ತಿ ಹೊಂದಲು ಇಚ್ಛಿಸುತ್ತಾರೋ ಅವರೆಲ್ಲರಿಗೂ ಮಾರ್ಗದರ್ಶನ ನೀಡುವ ಪರಮಾರ್ಥದ ಗುರುವಾದ್ದರಿಂದ ಬುದ್ಧನು 'ಸತ್ಥಾ ದೇವ ಮನಸ್ಸಾನಂ' ಎಂದು ಗುರುತಿಸಲ್ಪಡುತ್ತಾರೆ. ಈ ಪದವಿಯೇ ಒಬ್ಬ ಮಹಾ ಗುರುವಿನ ಅನನ್ಯ ಸ್ಥಿತಿಯನ್ನೂ, ಲಕ್ಷಣವನ್ನೂ ಹೇಳುತ್ತದೆ. ದಿವ್ಯ ಲೋಕಕ್ಕೆ ಆಚೆಯೂ ಹೋದವರಾದ್ದರಿಂದ ಪರಮಶ್ರೇಷ್ಠ ದೇವತೆಗಳಿಗಿಂತಲೂ ಮೇಲಿನವರು. ದೇವತೆಗಳೂ ಅತ್ಯಂತ ಭಕ್ತಿಯಿಂದ ತಮ್ಮ ಪಾರಮಾರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮತ್ತು ಮುಕ್ತಿಪಥದತ್ತ ನಡೆಸಲು ಬುದ್ಧನ ಬಳಿ ಬರುತ್ತಿದ್ದರು. ಎಲ್ಲ ಸತ್ಯಸಾಧಕರೂ ಬುದ್ಧನೊಬ್ಬನಲ್ಲೇ ನಿಜವಾಗಿಯೂ ಶರಣು ಹೋಗಬೇಕಾದುದು.





## 8. ಬುದ್ಧೋ

ಎಂಟನೆ ಗುಣ 'ಜ್ಞಾನೋದಯವನ್ನು ಕೊಡುವವನು' (ಬುದ್ಧೋ) ಈ ಗುಣ ಯಾರಿಗೆ ಅನ್ವಯಿಸುತ್ತದೆಂದರೆ ಯಾರು ಪರಮ ಪರಿಶುದ್ಧರೋ, ಆರ್ಯ ಸತ್ಯಗಳನ್ನು ಕಂಡುಹಿಡಿದಿರುವರೋ ತಾವಾಗಿಯೇ ಉದಯಿಸಿರುವರೋ, ವಿದ್ಯೆ-ಆಚರಣೆಗಳ ಸಂಪನ್ನರೋ, ಸುಗತರೋ, ಎಲ್ಲ ಲೋಕಗಳನ್ನು ಅರಿತವರೋ, ಎಂಥವರನ್ನೂ ಪಳಗಿಸಬಲ್ಲ ಅಸಮಾನ ಸಾರಥಿಯೋ, ದೇವತೆಗಳ–ಮಾನವರ ಪರಮ ಗುರುವೋ ಮತ್ತು ಸಮ್ಮಾಸಂಬುದ್ಧರೋ ಅಂತಹವರು ಮಾತ್ರ ಸತ್ಯಸಾಧಕರಿಗೆ ಜ್ಞಾನೋದಯವನ್ನು ನೀಡಬಲ್ಲವರು (ಬುದ್ಧೋ). ಹೇಗೆ ಸೂರ್ಯ ಸ್ವಯಂ ಪ್ರಕಾಶಗೊಂಡು, ಸುತ್ತಮುತ್ತಲಿನಲ್ಲಿರುವುದೆಲ್ಲವನ್ನೂ ಪ್ರಕಾಶಿಸುವನೋ, ಹಾಗೆಯೇ ಬುದ್ಧನೂ ಸಹ ಸ್ವತಃ ಸಮ್ಮಾಸಂಬುದ್ಧನಾಗಿ ಎಲ್ಲರಿಗೂ ಜ್ಞಾನೋದಯವನ್ನು ಕೊಡುವಂಥವನು. ಇವರು ಕೇವಲ ಮುಕ್ತಗೊಂಡ ವ್ಯಕ್ತಿಯಲ್ಲ, ಮುಕ್ತಿಯನ್ನು ನೀಡುವಂತಹವರು. ತಮ್ಮ ಅಭೂತಪೂರ್ವ ಸಾಧನೆಯಿಂದಾಗಿ ಅಸಂಖ್ಯ ಜೀವಿಗಳನ್ನು ಸಾಂಸಾರಿಕ ಬಂಧನದಿಂದ ಮುಕ್ತಗೊಳಿಸಿದ್ದಾರೆ ಮತ್ತು ಧಮ್ಮ ಹಾಗು ಸಂಘಗಳ ಮೂಲಕ ಮುಕ್ತಿಗೊಳಿಸುತ್ತಾ ಹೋಗುತ್ತಾರೆ. ಮುಕ್ತಿದಾಯಕರಾದುದರಿಂದ ಬುದ್ಧರ ಪರಂಪರೆಯನ್ನು ಅಂದರೆ ಜ್ಞಾನೋದಯಿಗಳ ಸಂತತಿಯನ್ನು ಹಾಗೆಯೇ ಉಳಿಸಿಕೊಂಡು ಬಂದಿದ್ದಾರೆ. ಭಗವಾನರು ಬೋಧಿಸತ್ತರನ್ನು ಸೃಷ್ಟಿ ಮಾಡುವುದರ ಮೂಲಕ ಆಧ್ಯಾತ್ಮ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿದ್ದಾರೆ. ಅಂಧಕಾರ, ನೋವು, ನಿಸ್ಸಾರದ ಪ್ರಪಂಚದಲ್ಲಿ ಸಮ್ಮಾಸಂಬುದ್ಧ ಬುದ್ಧರು ಆಶಾಕಿರಣವಾಗಿ, ಭರವಸೆಯ ಮಹಾಪೂರವಾಗಿ ಬದುಕಿದ್ದಾರೆ.

## 9. ಭಗವಾ

ಮೇಲೆ ಹೇಳಿದ ಎಲ್ಲ ಗುಣಗಳಿಂದ ಕೂಡಿದ ಬುದ್ಧರು ನಿಜವಾಗಿಯೂ ಭಗವಾನರು. ಅಂದರೆ ಸಾಂಸಾರಿಕ ಅಸ್ತಿತ್ವವೆಂಬ ಬಂಧನವನ್ನು ಕಳಚಿ, ಎಲ್ಲ ಜೀವಿಗಳನ್ನು ಮುಕ್ತರನ್ನಾಗಿ ಮಾಡಿ ಅವರಿಗೆ ಬೆಳಕು ನೀಡಿದವರು. ಯಾವ ಸಾಧಕರು ಮಾರನ ದುಷ್ಟಶಕ್ತಿಯ ಜಾಲದಲ್ಲಿ ಸಿಲುಕಿದ್ದಾರೋ ಅವರನ್ನು ಬಿಡಿಸುವವರು. ಹೀಗೆ ಬುದ್ಧರು ನಿಜವಾಗಿಯೂ ರಕ್ಷಿಸುವವರಾದ್ದರಿಂದ ಭಗವಾನರು.

## II. ಧಮ್ಮಾನುಸ್ಸತಿ – ಧಮ್ಮದ ಗುಣಲಕ್ಷಣಗಳ ಸ್ಮರಣೆ

1. **ಸ್ವಾಕ್ಖಾತೋ ಭಗವತಾ ಧಮ್ಮೋ,**

   ಇದು ಭಗವಾನ್ ಬುದ್ಧರಿಂದ ಪರಿಪೂರ್ಣವಾಗಿ ಪ್ರತಿಪಾದಿಸಲ್ಪಟ್ಟ ಬೋಧನೆಯಾಗಿದೆ.

2. **ಸಂದಿಟ್ಠಿಕೋ**

   ಇದನ್ನು ಇಲ್ಲಿ ಈಗಲೇ ಪರಿಶೀಲಿಸುವಂಥದ್ದು.

3. **ಅಕಾಲಿಕೋ**
   ಕೂಡಲೇ ಫಲವನ್ನು ಕೊಡುವಂಥದ್ದು.
4. **ಏಹಿಪಸ್ಸಿಕೋ**
   ತಮ್ಮನ್ನು ತಾವೇ ಪರೀಕ್ಷಿಸಿಕೊಳ್ಳಿ ಎಂದು ಆಹ್ವಾನಿಸುವಂಥದ್ದು
5. **ಒಪನಯಿಕೊ**
   ನಿಬ್ಬಾನದತ್ತ ಮುನ್ನಡೆಸುವಂಥಹದ್ದು.
6. **ಪಚ್ಚತ್ತಂ ವೇದಿತಬ್ಬೋ ವಿಞ್ಞೂಹೀತಿ**
   ಪ್ರತಿಯೊಬ್ಬರೂ ತಮಗೆ ತಾವೇ ಗ್ರಹಿಸಿಕೊಂಡು ಆಚರಣೆಗೆ ತರಬಲ್ಲಂತಹದ್ದು.

ಧಮ್ಮದ ಗುಣಗಳ ಮೇಲೆ ಧ್ಯಾನ ಮಾಡುವುದರಲ್ಲಿ ಯಾವುದೇ ಬೌದ್ಧಿಕ ಕಸರತ್ತಿಲ್ಲ. ಧಮ್ಮದ ಮೇಲೆ ಭಕ್ತಿ ಮತ್ತು ಶ್ರದ್ಧೆಗಳಿಂದ ಧ್ಯಾನ ಮಾಡುವುದರಿಂದ ಮನಸ್ಸು ವಿಕಸನವಾಗುತ್ತದೆ. ಈ ಧ್ಯಾನದಿಂದ ಭಕ್ತಿ ಮತ್ತು ಅರ್ಪಣಾ ಮನೋಭಾವ ಉಂಟಾಗುತ್ತದೆ ಮತ್ತು ಈ ಧ್ಯಾನ ಕೇವಲ ಭೌದ್ಧಿಕ ಆಲೋಚನೆಯಲ್ಲವೆಂಬುದನ್ನು ಅರಿಯಬೇಕು.

ಸಮ್ಮಾ ಸಂಬುದ್ಧನಿಂದ ಸ್ಪಷ್ಟವಾಗಿ ನಿರೂಪಿತವಾದ ಈ ಧಮ್ಮದಲ್ಲಿ ಕ್ಲಿಷ್ಟತೆಗಳಾಗಲಿ, ವಿರೋಧಾಭಾಸಗಳಾಗಲಿ, ಅಸಮಂಜಸಗಳಾಗಲಿ ಇಲ್ಲ. ಒಬ್ಬ ಮನುಷ್ಯನ ನುಡಿ ಮತ್ತು ನಡೆಗಳಲ್ಲಿ ವ್ಯತ್ಯಾಸವಿರಕೂಡದು. ಅದರಂತೆಯೇ ಧಮ್ಮದ ವಿಚಾರ ಮತ್ತು ಧಮ್ಮದ ಆಚಾರದಲ್ಲೂ. ಈ ಧಮ್ಮವು ಸುಸ್ಪಷ್ಟವಾಗಿ ನಿರೂಪವಾದುದು. ಏಕೆಂದರೆ ಇದು ಎಲ್ಲ ಅತಿರೇಕಗಳನ್ನು ಮೀರಿದ್ದು ಸಾಧಕರನ್ನು ಅವರು ಸಂಸಾರದಲ್ಲಿರಲಿ, ಲೋಕೋತ್ತರ ಹಂತಗಳಲ್ಲಿರಲಿ ಅವರನ್ನು ಅಷ್ಟಾಂಗ ಮಾರ್ಗದಲ್ಲಿ ಭದ್ರವಾಗಿ ಸ್ಥಾಪಿಸುತ್ತದೆ.

ಭಗವಾನ್ ಬುದ್ಧರ ಮಾತಲ್ಲೇ ಹೇಳುವುದಾದರೆ 'ಸುಸ್ಪಷ್ಟವಾಗಿ ನಿರೂಪಿತವಾದ ಈ ಧಮ್ಮವು ಆರಂಭದಲ್ಲಿ ಒಳ್ಳೆಯದು, ಮಧ್ಯದಲ್ಲಿ ಒಳ್ಳೆಯದು ಮತ್ತು ಅಂತ್ಯದಲ್ಲೂ ಒಳ್ಳೆಯದು'. ಪರಮ ಗುರುವಿನಿಂದ ಸಂಶೋಧಿಸಲ್ಪಟ್ಟ ಈ ಧಮ್ಮವು ಶುಭವಾಗಿದ್ದು ಅಸಂಖ್ಯ ಜೀವಿಗಳಿಗೆ ಸಮಾನವಾದ ಮಂಗಳವನ್ನು ನೀಡಿ ಆರಂಭದಲ್ಲೇ ಚೆನ್ನಾಗಿರುತ್ತದೆ. ಆರ್ಯ ಅಷ್ಟಾಂಗ ಮಾರ್ಗದ ಆಧಾರದ ಮೇಲೆ ನಿಂತ ಜೀವನ ಕ್ರಮದಿಂದಾಗಿ ಎಲ್ಲ ಕುಟಿಲರೂಪಗಳಿಂದ ಹೊರತಾಗಿದೆ ಮತ್ತು ಸಂಪೂರ್ಣ ಕಳಂಕರಹಿತವಾಗಿದೆ. ಈ ಕಾರಣದಿಂದಾಗಿ ಧಮ್ಮವು ಅನುಸರಣೆಯಲ್ಲೂ ಚೆನ್ನಾಗಿದೆ. ಲೋಕೋತ್ತರ ಪಾರಮಾರ್ಥಿಕ ಅನುಭವವನ್ನೂ, ಚಿತ್ತಪರಿವರ್ತನೆಯನ್ನೂ ಮಾಡಿ ನಿಬ್ಬಾಣ ಸಾಕ್ಷಾತ್ಕಾರವಾಗುತ್ತದೆ. ಆ ಮೂಲಕ ಭವದಿಂದ ಬಿಡುಗಡೆ. ಹೀಗೆ ಧಮ್ಮವು ಅಂತ್ಯದಲ್ಲೂ ಚೆನ್ನಾಗಿರುತ್ತದೆ. ಮೊದಲ ಗುಣದ ಮೇಲೆ ಧ್ಯಾನಿಸುತ್ತಾ ಹೋದಲ್ಲಿ ಧಮ್ಮದ ಮೇಲೆ ಗೌರವ ಮೂಡುತ್ತದೆ. ಹಾಗೆಯೇ ಧಮ್ಮದ ಮೇಲೆ ಶ್ರದ್ಧಾ, ಭಕ್ತಿ ಮತ್ತು ಬದ್ಧತೆಗಳು ಬೆಳೆಯುತ್ತವೆ.





ಇನ್ನುಳಿದ ಐದು ಗುಣಗಳು ಧಮ್ಮದ ಲೋಕೋತ್ತರ ಸಂಗತಿಗಳಿಗೆ ಸಂಬಂಧಪಟ್ಟಿವೆ. "ಇಲ್ಲಿ ಈಗಲೇ ಪರಿಶೀಲಿಸುವಂಥದ್ದು" ಎಂದರೆ ಧಮ್ಮದ ಪರಿಣಾಮ, ಪ್ರಸ್ತುತತೆ ಮತ್ತು ಅದರ ಘನತೆಯನ್ನು ಲೋಕೋತ್ತರ ಮಾರ್ಗ ಮತ್ತು ಜ್ಞಾನ ಫಲಗಳಲ್ಲಿ ನೋಡಬಹುದು. ಯಾವಾಗ ಚಿತ್ತವು ಪರಿವರ್ತನೆಗೊಳ್ಳುತ್ತದೊ, ಅದು ಪ್ರಾಥಮಿಕ ಬದಲಾವಣೆ ಅಂದರೆ ವಸ್ತುವಿನ ಗುಣ ಧರ್ಮದಲ್ಲಿ ಬದಲಾವಣೆಯಾಗಿರುತ್ತದೆ. ಆರ್ಯನ ಬದುಕನ್ನು ಪರಿಶೀಲಿಸಿದಲ್ಲಿ ಅದು ಭಿನ್ನವಾಗಿಯೇ ಇರುತ್ತದೆ. ಆರ್ಯ ವ್ಯಕ್ತಿತ್ವನ್ನು ಕಂಡುಹಿಡಿಯುವುದರಲ್ಲಿ ರಹಸ್ಯವೇನಿಲ್ಲ. ಏಕೆಂದರೆ ಅದು ಸ್ಪಷ್ಟವಾಗಿ ಯಾವ ಅನುಮಾನವೂ ಇಲ್ಲದೇ ಕಾಣುವಂತಹದು.

ಧಮ್ಮದ ತಕ್ಷಣದ ಫಲ ಆನಂದಮಯ, ಸಂತೋಷದಾಯಕ, ಪ್ರತಿಜ್ಞಾನ ಮಾರ್ಗದ ಹಿಂದೆ ಸುಖ ಮತ್ತು ವಿಮುಕ್ತಿಯ ಮಹದಾನಂದವಿದೆ. ಸಾಂಸಾರಿಕ ಮಟ್ಟದಲ್ಲೂ ಧಮ್ಮದ ಫಲ ಇದೆ. ಆದರೆ ಕಡಿಮೆ ತೀವ್ರತೆ ಮತ್ತು ಹೆಚ್ಚು ಚಂಚಲವುಳ್ಳದ್ದು. ಉದಾಹರಣೆಗೆ ಒಬ್ಬ ಮನುಷ್ಯ ಮೈತ್ರೀ ಭಾವವನ್ನು ಸಾಧನೆ ಮಾಡಿದರೆ ಕೋಪವನ್ನು ದೂರ ಮಾಡಬಹುದು. ಧಮ್ಮದಲ್ಲೇ ಅಂತರ್ಗತವಾಗಿರುವ, ಕೂಡಲೇ ಫಲ ಕೊಡುವ ಇಂತಹ ಹಲವಾರು ಉದಾಹರಣೆಗಳನ್ನು ಕೊಡಬಹುದು.

"ಬನ್ನಿ, ನೀವೇ ಪರೀಕ್ಷಿಸಿಕೊಳ್ಳಿ" ಇದು ಧಮ್ಮದ ಒಂದು ವಿಶೇಷ ಗುಣ. ಲೋಕೋತ್ತರ ಅನುಭವವು ಯಾವಾಗಲೂ ನೇರವಾದುದು ಮತ್ತು ತಾರ್ಕಿಕ, ಹಾಗು ಗ್ರಂಥಜ್ಞಾನಕ್ಕಿಂತಲೂ ಭಿನ್ನವಾದುದು. ಧಮ್ಮವು ನೇರ ಮತ್ತು ವಾಸ್ತವ ಪರೀಕ್ಷೆಯನ್ನು ಸ್ವೀಕರಿಸುತ್ತದೆ.

ಸಿದ್ಧಾಂತಗಳು, ಬೌದ್ಧಿಕ ಕಸರತ್ತುಗಳು ಎಷ್ಟೇ ಜಾಣವಿದ್ದರೂ, ಅವು ನೇರ ಅನುಭವದ ಮುಂದೆ ನಿಲ್ಲವು. ಆದ್ದರಿಂದ ಧಮ್ಮವು ಎಲ್ಲರಿಗೂ ತಾವೇ ಪರೀಕ್ಷಿಸಿಕೊಳ್ಳಿ ಎಂದು ಆಹ್ವಾನಿಸುತ್ತದೆ. ಅನಾದಿಕಾಲದಿಂದ ಬಂದಿರುವ ಲೋಕ ಧರ್ಮದ ಆಧಾರದ ಮೇಲೆ ಧಮ್ಮದ ಸತ್ವ ಮತ್ತು ಭವಿಷ್ಯ ನಿಂತಿದೆ. ಯಾವುದು ಸತ್ಯವೋ, ಶುದ್ಧವೋ ಅದು ಮಾತ್ರ ಭರವಸೆಯಿಂದ 'ಬಂದು, ನೋಡಿ' ಎನ್ನುವ ಮಾತನ್ನು ಹೇಳುವುದು.

ಧಮ್ಮವು ನೇರವಾಗಿ ಖಂಡಿತವಾಗಿ ನಿಬ್ಬಾಣದೆಡೆಗೇ ಕೊಂಡೊಯ್ಯುವುದು. ನಿಬ್ಬಾಣವು ವೈರುಧ್ಯಗಳಿಂದ, ಮೋಸ ಅಡ್ಡದಾರಿಗಳಿಂದ ಮುಕ್ತವಾದುದು. ಇದು ಸದಾ ಮುನ್ನಡೆಸುವಂತಹುದು. ಯಾಕೆಂದರೆ ಇದು ಕೇವಲ ಕೆಟ್ಟದ್ದನ್ನು ಮೀರಿಲ್ಲ, ಒಳ್ಳೆಯದನ್ನು ಮೀರಿರುವಂತಹುದು. ಒಳ್ಳೆಯದು ಪ್ರಾಪಂಚಿಕ ಸುಖವನ್ನು, ದಿವ್ಯ ಲೋಕದಲ್ಲಿ ಪುನರ್ಜನ್ಮವನ್ನು ತರುವುದಾದರೂ, ಆ ರೀತಿಯ ಸುಖ ಕಾರಣಧೀನವಾಗಿ ಸಾಂಸಾರಿಕ ವಲಯದೊಳಗೇ ಸುತ್ತುತ್ತಿರುತ್ತದೆ. ಯಾವ ಕರ್ಮಗಳಿಮದ ದೆಸೆಯಿಂದಾಗಿ ಸ್ವರ್ಗ ವೈಭಗಳು ಬಂದವೋ, ಆ ಕರ್ಮಗಳು ಮುಗಿದಮೇಲೆ ಸ್ವರ್ಗ ವೈಭವಗಳೂ

ಕೊನೆಗೊಳ್ಳುತ್ತವೆ. ನಿಜವಾದ ಭದ್ರತೆ ಎಲ್ಲಿ ನೆಲೆಸಿದೆ ಎಂದರೆ ಒಳಿತು ಕೆಡಕುಗಳನ್ನು ದಾಟಿ ಲೋಕೋತ್ತರವನ್ನು ಮುಟ್ಟುವುದು. ಧಮ್ಮಕ್ಕೆ ನಿಬ್ಬಾಣ ಒಂದೇ ಗುರಿಯಾದ್ದರಿಂದ, ಅದು ಎತ್ತರಕ್ಕೆ, ಬಿಡುಗಡೆ ಎಂಬ ಆಯಾಮಕ್ಕಿಂತಲೂ ಮಿಗಿಲಾದ ವಲಯಕ್ಕೆ ಕೊಂಡೊಯ್ಯುತ್ತದೆ.

ಮೇಲಿನ ಧರ್ಮದ ಎಲ್ಲ ಗುಣಗಳನ್ನು ಬುದ್ಧಿವಂತನಾದವನು ಮಾತ್ರವೇ ಗ್ರಹಿಸುವುದು ಮತ್ತು ಸಾಕ್ಷಾತ್ಕರಿಸಿಕೊಳ್ಳುವುದು. ಕೇವಲ ಕಲಿಯುವುದು, ಧರ್ಮನಿಷ್ಠೆ ಅಥವಾ ಮಾನಸಿಕ ಶಕ್ತಿಯಿಂದ ಒಬ್ಬನು ಬುದ್ಧಿವಂತನಾಗುವುದಿಲ್ಲ. ಬುದ್ಧಿ ಅಥವಾ ಪ್ರಜ್ಞೆ ಯಾವಾಗ ಬರುತ್ತದೆಂದರೆ ಪ್ರಜ್ಞೆಯ ಒಡೆಯನಾದ ಬುದ್ಧನ ಚತುರಾರ್ಯ ಸತ್ಯಗಳು ಯಾರು ನೇರ ಸಂಪರ್ಕವಿಟ್ಟುಕೊಂಡು ಅನುಭವಿಸುತ್ತಾರೊ ಅವರಿಗೆ ಬುದ್ಧಿ ಅಥವಾ ಪ್ರಜ್ಞೆ ಉಂಟಾಗುತ್ತದೆ. ಯಾರು ಚತುರಾರ್ಯ ಸತ್ಯಗಳನ್ನು ಗ್ರಹಿಸುತ್ತಾರೊ ಅವರು ಲೋಕೋತ್ತರ ಸ್ಥಿತಿಗಳನ್ನು ತಲುಪಿ ನಿಬ್ಬಾಣವನ್ನು ನೇರವಾಗಿ ಅನುಭವಿಸುತ್ತಾರೆ. ಈ ರೀತಿಯ ಧಮ್ಮದ ಗ್ರಹಿಕೆ ಸಹಜವಾಗಿಯೇ ವ್ಯಕ್ತಿಗತವಾದುದು. ಆದ್ದರಿಂದ 'ಪ್ರಾಜ್ಞರಿಂದ ಗ್ರಹಿಸಲ್ಪಟ್ಟು, ತಮಗೆ ತಾವೇ ಅರಿತುಕೊಳ್ಳುವಂಥದ್ದು' ಎಂಬುದಾಗಿ ಹೇಳುವುದು.

## III. ಸಂಘಾನುಸ್ಸತಿ – ಸಂಘದ ಗುಣಗಳ ಬಗ್ಗೆ ಸ್ಮರಣೆ

**ಸುಪಟಿಪನ್ನೋ ಭಗವತೋ ಸಾವಕ ಸಂಘೋ, ಉಜುಪಟಿಪನ್ನೋ ಭಗವತೋ ಸಾವಕ ಸಂಘೋ, ಞಾಯಪಟಿಪನ್ನೋ ಭಗವತೋ ಸಾವಕ ಸಂಘೋ, ಸಾಮೀಚಿ ಪಟಿಪನ್ನೋ ಭಗವತೋ ಸಾವಕ ಸಂಘೋ, ಯದಿದಂ ಚತ್ತಾರಿ ಪುರಿಸಯುಗಾನಿ ಅಟ್ಠಪುರಿಸ ಪುಗ್ಗಲಾ ಏಸ ಭಗವತೋ ಸಾವಕ ಸಂಘೋ, ಆಹುನೆಯ್ಯೋ, ಪಾಹುನೆಯ್ಯೋ, ದಕ್ಖಿಣೆಯ್ಯೋ, ಅಞ್ಜಲಿಕರಣೀಯೋ, ಅನುತ್ತರಂ ಪುಞ್ಞಕ್ಖೆತ್ತಂ ಲೋಕಸ್ಸಾ' ತಿ.**

ಭಗವಂತನಾದ ಬುದ್ಧನಿಂದ ಸ್ಥಾಪಿತವಾದ ಈ ಶ್ರಾವಕ ಸಂಘವು ಸರಿಯಾದ ಮಾರ್ಗದಲ್ಲಿ ನೆಲೆಗೊಳಿಸಲ್ಪಟ್ಟಿದೆ.

ಭಗವಂತನಾದ ಬುದ್ಧನಿಂದ ಸ್ಥಾಪಿತವಾದ ಈ ಶ್ರಾವಕ ಸಂಘವು ನೇರವಾದ ಮಾರ್ಗದಲ್ಲಿ ನೆಲೆಗೊಂಡಿದೆ.

ಭಗವಂತನಾದ ಬುದ್ಧನಿಂದ ಸ್ಥಾಪಿತವಾದ ಈ ಶ್ರಾವಕ ಸಂಘವು ನ್ಯಾಯದ ಮಾರ್ಗದಲ್ಲಿ ನೆಲೆಗೊಂಡಿದೆ.

ಭಗವಂತನಾದ ಬುದ್ಧನಿಂದ ಸ್ಥಾಪಿತವಾದ ಈ ಶ್ರಾವಕ ಸಂಘವು ಸಮರ್ಪಕ ಮಾರ್ಗದಲ್ಲಿ ನೆಲೆಗೊಂಡಿದೆ.





ಭಗವಂತನಾದ ಬುದ್ಧನಿಂದ ಸ್ಥಾಪಿತವಾದ ಈ ಶ್ರಾವಕ ಸಂಘವು ನಾಲ್ಕು ಜೋಡಿ ಆರ್ಯ ವ್ಯಕ್ತಿಗಳು ಎಂದರೆ ಎಂಟು ಮಹಾ ಆಧ್ಯಾತ್ಮಿಕ ಚೇತನಗಳಿಂದ ಕೂಡಿದ್ದು, ಈ ಸಂಘವು ನಿವೇದನೆಯನ್ನು ಸ್ವೀಕರಿಸಲು ಮತ್ತು ಸತ್ಕಾರ ಹೊಂದಲು ಅರ್ಹವಾದುದು, ದಾನಕ್ಕೆ ಮತ್ತು ನಮಸ್ಕಾರ ಸ್ವೀಕಾರಕ್ಕೆ ಅರ್ಹವಾದುದು; ಈ ಲೋಕದಲ್ಲಿನ ಅಸಮಾನ ಪುಣ್ಯಕ್ಷೇತ್ರವೇ ಈ ಸಂಘ.

ಲೋಕೋತ್ತರ ಪಥದಲ್ಲಿರುವ ಆರ್ಯ ಶಿಷ್ಯರನ್ನೊಳಗೊಂಡ ಪವಿತ್ರ ಸಂಘವನ್ನು ಭಗವಾನರು ಸ್ಥಾಪಿಸಿದರು. ಈ ಆರ್ಯಸಂತರುಗಳ ಗುಣಗಳೇ ಈ ಧ್ಯಾನದ ವಿಷಯ. ಈ ಆರ್ಯರು ನಿಬ್ಬಾಣವನ್ನು ಕಂಡುಕೊಳ್ಳುವಲ್ಲಿ ಸಾಧಿಸಿದ ನಾಲ್ಕು ಲೋಕೋತ್ತರ ಹಂತಗಳನ್ನು ಈ ಧ್ಯಾನದಲ್ಲಿ ಹೇಳಲಾಗಿದೆ. ಈ ನಾಲ್ಕು ಹಂತಗಳು ಮತ್ತೂ ಮುಂದೆ ವಿಭಜಿಸಲ್ಪಟ್ಟು ಮಾರ್ಗ–ಜ್ಞಾನ ಮತ್ತು ಮಾರ್ಗ–ಫಲವೆಂಬುದಾಗಿ ಗುರುತಿಸಲಾಗಿದೆ. ಇವೆರಡೂ ಚಿತ್ತವು ಹೇಗೆ ಸೂಕ್ಷ್ಮವಾಗುತ್ತಾ ಹೋಗುತ್ತದೆಂಬುದನ್ನು ಮತ್ತು ಆ ಮೂಲಕ ಸಿಗುವ ಮುಕ್ತಿಯ ಆನಂದವನ್ನು ತಿಳಿಸುತ್ತವೆ. ಈ ರೀತಿಯಲ್ಲಿ ಬೆಳವಣಿಗೆಯಾಗುತ್ತಾ ಹೋಗುತ್ತಿದ್ದಂತೆ ಪಾರಮಾರ್ಥಿಕವಾಗಿ ಪರಿವರ್ತನೆಗೊಂಡ ಎಂಟು ಜನ ಆರ್ಯ ವ್ಯಕ್ತಿಗಳು ಉದಯಿಸಿ, ಪ್ರತಿ ಆರ್ಯ ವ್ಯಕ್ತಿಯು ಸಂಸಾರದಿಂದ ಬಿಡುಗಡೆಗೊಂಡ ಒಂದೊಂದು ವಿಭಿನ್ನ ಸ್ಥಿತಿಯನ್ನು ತಿಳಿಸುತ್ತದೆ. ಆ ವಿಭಿನ್ನ ಸ್ಥಿತಿಗಳೇ ನಿಬ್ಬಾಣ ಸಾಕ್ಷಾತ್ಕಾರದ ವಿಭಿನ್ನ ಹಂತಗಳು.

ಈ ಎಂಟು ಜನ ಸಂನ್ಯಾಸಿಗಳನ್ನೇ ಆರ್ಯ ವ್ಯಕ್ತಿಗಳೆಂದು ಕರೆಯುವುದು. ಏಕೆಂದರೆ ಇವರುಗಳೆಲ್ಲ ಲೋಕೋತ್ತರ ಹಂತವಾದ ಅಷ್ಟಾಂಗ ಮಾರ್ಗದಲ್ಲಿ ಸ್ಪಷ್ಟವಾಗಿ ನೆಲೆಗೊಂಡವರು. ಇದೇ ಸರಿಯಾದ ಮಾರ್ಗ. ಏಕೆಂದರೆ ಈ ಮಾರ್ಗದಲ್ಲಿ ಪ್ರಾಪಂಚಿಕ ವೈರುಧ್ಯಗಳು, ಗೊಂದಲಗಳು ಮತ್ತು ಇವುಗಳಿಗೆ ಸಂಬಂಧಪಟ್ಟ ಕೆಡಕುಗಳು ಇರುವುದಿಲ್ಲ. ಈ ಮಾರ್ಗ ನಿಬ್ಬಾಣದ ಉತ್ತಮ ಸಂಗತಿಗಳನ್ನು ತೋರಿಸುತ್ತದೆ. ಗುರಿ ಹೇಗೆ ಪರಿಶುದ್ಧವೂ, ಸಹಜತೆಯಿಂದ ಕೂಡಿರುತ್ತದೋ ಹಾಗೆಯೇ ಪವಿತ್ರ ದಾರಿಯೂ ಸಹ.

ಇದು ನೇರವಾದ ಮಾರ್ಗ. ಏಕೆಂದರೆ ಇದು ಎರಡು ಅತಿರೇಕಗಳನ್ನು ತೊರೆದು ಮಧ್ಯಮ ಮಾರ್ಗವನ್ನು ಕಂಡುಕೊಂಡು ಆ ಮೂಲಕ ನೇರವಾಗಿ ನಿಬ್ಬಾಣದತ್ತ ಮುಖ ಮಾಡಿರುತ್ತದೆ. ಇದು ಎಲ್ಲ ಮೋಸ ಮತ್ತು ಸುರುಳಿಯಂತೆ ಸುತ್ತಿಕೊಂಡ ಕಾರಣಾಧೀನ ಸ್ಥಿತಿಗಳಿಂದ ಮುಕ್ತವಾದಂಥದ್ದು.

ಇದು ನ್ಯಾಯವಾದ ಮಾರ್ಗ. ಏಕೆಂದರೆ ಎಲ್ಲ ವಾಮ ಮಾರ್ಗಗಳಿಂದ ಹೊರತಾದ, ನೆಚ್ಚಲಾರದ ಸಂಗತಿಗಳಿಂದ ಮುಕ್ತವಾದ ಮತ್ತು ನಿಬ್ಬಾಣದ ಸತ್ಯವನ್ನೇ ಸದಾ ಪ್ರತಿಫಲಿಸುವ ಮಾರ್ಗ. ಇದು ನ್ಯಾಯಯುತವಾದುದು. ಏಕೆಂದರೆ ಇದನ್ನು ಸಾಕ್ಷಾತ್ಕರಿಸಿಕೊಳ್ಳುವಂತಹುದು ಮತ್ತು ಈಗಲೇ ಕಂಡರಿಯುವಂತಹುದು. ಇದನ್ನು ಪರಿಶೀಲಿಸಬಹುದಾಗಿದ್ದು, ಸದಾ ಮೇಲುದಾರಿಗೆ ಕೊಂಡೊಯ್ಯುವಂತಹುದು.

ಇದು ಯೋಗ್ಯವಾದ ಮಾರ್ಗ. ಏಕೆಂದರೆ ಇದು ಆಗಿಯೇ ಆಗುವ ಖಂಡಿತವಾದ ಮಾರ್ಗ. ಇದರಲ್ಲಿ ನಿಬ್ಬಾಣದ ರಕ್ಷಣೆ ಇದೆ, ಪಾವಿತ್ರ್ಯವಿದೆ. ಸರಿಯಾದ, ನೇರವಾದ, ನ್ಯಾಯಯುತವಾದ ಮತ್ತು ಯೋಗ್ಯವಾದ ಈ ನಾಲ್ಕು ಗುಣಗಳೇ ನಿಬ್ಬಾಣ ಸ್ಥಿತಿಯ ಪ್ರತಿಬಿಂಬಗಳು.

ಲೋಕೋತ್ತರ ಸಾಧನೆಯ ನಾಲ್ಕು ಹಂತಗಳ ಪ್ರಕಾರ, ಪವಿತ್ರ ಸಂತರನ್ನು ನಾಲ್ಕು ರೀತಿಯಲ್ಲಿ ವರ್ಗೀಕರಿಸಲಾಗಿದೆ. ಮಾರ್ಗ ಮತ್ತು ಫಲಗಳನ್ನು ಸಾಧಿಸಿದ ಪ್ರತಿ ಸೋತಾಪನ್ನ, ಸಕಾದಗಾಮಿ, ಅನಾಗಾಮಿ ಮತ್ತು ಅರ್ಹತ. ಆದ್ದರಿಂದಲೇ ಪದಸಮುಚ್ಚಯ್ಯವಾದ 'ಎಂಟು ಆರ್ಯ ವ್ಯಕ್ತಿತ್ವಗಳುಳ್ಳ ನಾಲ್ಕು ಜೋಡಿ ವ್ಯಕ್ತಿಗಳು' ಎಂದು ಬಳಸಿರುವುದು; ಅವರೇ ಭಗವಾನರ ಆರ್ಯ ಶಿಷ್ಯರು.

ಬೌದ್ಧ ಸಮಾಜವೆಂದರೆ ಅದರಲ್ಲಿ ಬೌದ್ಧ ಭಿಕ್ಷು, ಭಿಕ್ಷುಣಿಯರು ಮತ್ತು ಉಪಾಸಕ/ಉಪಾಸಕಿಯರು ಸೇರಿಕೊಳ್ಳುತ್ತಾರೆ. ಇವರೆಲ್ಲರು ಪರಸ್ಪರ ಅವಲಂಬನೆ ಹಾಗು ಸೌಹಾರ್ದ, ಮೈತ್ರಿ ಮತ್ತು ಒಳ್ಳೆತನಗಳಿಂದ ಕೂಡಿದ ಆರ್ಯ ಬೋಧನೆಯ ಸಿದ್ಧಾಂತದ ಮೇಲೆ ಜೀವನವನ್ನು ನಡೆಸುತ್ತಾರೆ. ಈ ಪವಿತ್ರ ಪರಂಪರೆಯ ಸಂತರು ಮೇಲಿನ ಯಾವುದೇ ವರ್ಗಕ್ಕೂ ಸೇರಬಹುದು ಮತ್ತು ದಿವ್ಯಲೋಕಗಳ ಜೀವಿಗಳೂ ಈ ಸಂಘದಲ್ಲಿರುತ್ತಾರೆ.

ಸಂತರು ಪುಣ್ಯಗಳ ಕ್ಷೇತ್ರವಾಗಿರುವುದರಿಂದ ದಾನ, ಆತಿಥ್ಯ, ಪ್ರೀತಿ, ಗೌರವಗಳಿಗೆ ಅರ್ಹರು. ಯಾರು ಅರ್ಹರಾದ, ಪವಿತ್ರ ಜೀವಿಗಳಾದ ಇಂತಹ ಸಂತರಿಗೆ ದಾನಾದಿಗಳನ್ನು ನೀಡುತ್ತಾರೋ ಅವರ ಪಾರಮಾರ್ಥಿಕ ಬದುಕೇ ಶ್ರೀಮಂತವಾಗುತ್ತದೆ.

ಕ್ಷೇತ್ರ ಎಂಬ ಉಪಮೆಯನ್ನು ತುಂಬ ಸೂಕ್ತವಾಗಿಯೇ ಬಳಸಲಾಗಿದೆ. ಕ್ಷೇತ್ರವು ಬದುಕಿನ ಮೂಲ ಅವಶ್ಯಕತೆಗಳನ್ನು ಒದಗಿಸುವ ಸಂಪನ್ಮೂಲ; ಅದು ಅಭಿವೃದ್ಧಿ ಮತ್ತು ನಾಗರಿಕತೆಗಳ ನೆಲೆ. ಹೇಗೆ ನೆಲವನ್ನು ಮಾನವನ ಅವಶ್ಯಕತೆಗಳಾದ ದವಸಧಾನ್ಯ, ಹಣ್ಣು, ಹೂವುಗಳಿಗೆ ಬಳಸಿಕೊಳ್ಳಲಾಗುವುದೋ ಹಾಗೆಯೇ ಸಂಘವೆಂಬ ಪಾರಮಾರ್ಥಿಕ ಕ್ಷೇತ್ರವು ಜ್ಞಾನೋದಯದ ಸಾಧಕರಿಗೆ ಅವರ ಮುಕ್ತಿಗಾಗಿ ಅವಶ್ಯಕ. ಹೇಗೆ ವಾಣಿಜ್ಯ ಪ್ರಪಂಚದಲ್ಲಿ ಬಂಡವಾಳವೋ, ಹಾಗೆಯೇ ಬೌದ್ಧ ಧರ್ಮದ ಪಾರಮಾರ್ಥಿಕ ಬದುಕಿನಲ್ಲಿ ಪುಣ್ಯಾರ್ಜನೆ.

ಪುಣ್ಯವೆಂದರೆ ಶೀಲಪಾಲನೆ ಮತ್ತು ಪಾರಮಾರ್ಥಿಕ ಉನ್ನತಿ. ಸತ್ಯದ ಬೆಳಕನ್ನು ನೋಡಲು ಒಬ್ಬನು ಪುಣ್ಯವನ್ನು ಗಳಿಸಬೇಕು, ಆ ಮೂಲಕವೇ ಮುಕ್ತಿ. ಸದ್ಧಮ್ಮದ ಮೂಲಕವೇ ಒಬ್ಬನು ಪವಿತ್ರವಾದ ಮತ್ತು ಸಂಪದ್ಭರಿತವಾದ ಬದುಕನ್ನು ಬಾಳುತ್ತಾನೆ. ಪುಣ್ಯವನ್ನು ಅರ್ಜಿಸುವುದರಿಂದಲೇ ಎಲ್ಲ ಮಂಗಳಗಳು ಆಗುತ್ತವೆ. ಆದ್ದರಿಂದ ಪುಣ್ಯವು ಪ್ರಾಪಂಚಿಕ, ಸಂಪತ್ತನ್ನಷ್ಟೇ ಅಲ್ಲ, ಆಧ್ಯಾತ್ಮ ಪ್ರಗತಿಯನ್ನೂ ಕೊಡುತ್ತದೆ.





# ಚತುರಾರಖ್ಖಾ ಭಾವನಾ

## ನಾಲ್ಕು ರಕ್ಷಣಾ ಧ್ಯಾನಗಳು

**1. ಬುದ್ಧಾನುಸ್ಸತಿ :** ಬುದ್ಧನ ಅನನ್ಯ ಗುಣಗಳನ್ನು ಧ್ಯಾನಿಸುವುದು.

1. **ಬುದ್ಧಾನುಸ್ಸತಿ ಮೆತ್ತಾ ಚ**  
**ಅಸುಭಂ ಮರಣಾನುಸ್ಸತಿ**  
**ಇತಿ ಇಮಾ ಚತುರಾರಖ್ಖಾ**  
**ಭಿಕ್ಖು ಭಾವೆಯ್ಯ ಸೀಲವಾ.**

ಶೀಲವಂತನಾದ ಒಬ್ಬ ಭಿಕ್ಷುವು ಈ ನಾಲ್ಕು ರಕ್ಷಣಾ ಧ್ಯಾನಗಳನ್ನು ಮಾಡಬೇಕು. ಬುದ್ಧನ ಅಸಮಾನ ಗುಣಗಳ ಸ್ಮರಣೆ, ವಿಶ್ವ ಪ್ರೇಮದ ವೃದ್ಧಿ, ಅಶುಭ ಗ್ರಹಣಾ ಮತ್ತು ಸಾವಿನ ಸಂಗತಿ.

2. **ಅನಂತ – ವಿತ್ಥಾರ ಗುಣಂ**  
**ಗುಣತೊನುಸ್ಸಾರಂ ಮುನೀಂ**  
**ಭಾವೆಯ್ಯ ಬುದ್ಧಿಮಾ ಭಿಕ್ಖು**  
**ಬುದ್ಧಾನುಸ್ಸತಿಮಾದಿತೊ.**

ಬುದ್ಧನ ಅನನ್ಯ ಗುಣಗಳೊಂದಿಗೆ ಆರಂಭಿಸಿ ಅಥವಾ ಆ ಮುನಿಯ ಗುಣಗಳ ಮೇಲೆ ಧ್ಯಾನಿಸುತ್ತಾ ಪಾರಮಾರ್ಥಿಕ ಔನ್ನತ್ಯವನ್ನು ನೆನೆಯುತ್ತಲೇ, ಭಿಕ್ಖುವೊಬ್ಬನು ತನ್ನ ಧ್ಯಾನವನ್ನು ಮುಂದುವರಿಸುವನು.

3. **ಸಮಾಸನೆ ಕಿಲೇಸೆ ಸೊ**  
**ಏಕೊ ಸಬ್ಬೆ ನಿಘಾತಿಯಾ**  
**ಅಹ, ಸುಸುದ್ಧಾ–ಸನ್ತಾನೊ**  
**ಪೂಜಾನಂಚ ಸದಾರಹೊ**

ಎಲ್ಲ ಮುಕ್ತರಾದ ಸಂತರ ಪೈಕಿ ಈತನೊಬ್ಬನೇ ಎಲ್ಲ ಮಾನಸಿಕ ಕ್ಲೇಶಗಳನ್ನು ಗುರುತುಗಳ ಸಮೇತ ತೊಡೆದುಹಾಕಿದವನು. ತೆಂಗಿನ ಮರದ ಗರಿಗಳು ಬಿದ್ದುಹೋದಂತೆ ಅದರ ಕಾಂಡದ ಸುತ್ತ ಹೇಗೆ ಉಂಗುರಗಳು ಸೃಷ್ಟಿಯಾಗುತ್ತವೋ ಹಾಗೆ ಮಾನಸಿಕ ಕ್ಲೇಶಗಳೂ ಮನಸ್ಸಿನ ಮೇಲೆ ತಮ್ಮ ಗುರುತುಗಳನ್ನು ಬಿಡುತ್ತವೆ. ಒಬ್ಬ ಸಂತನಲ್ಲಿ ಈ ರೀತಿಯ ಗುರುತುಗಳು ಸಿಗಬಹುದು. ಆದರೆ ಬುದ್ಧ ಇವೆಲ್ಲ ಮೀರಿದವನು. ಹೀಗೆ ಪರಮ ಪವಿತ್ರ ಸ್ಥಿತಿಗೆ ಏರಿ ಎಲ್ಲ ಕಾಲಕ್ಕೂ ಪೂಜ್ಯನೀಯನು.

4. **ಸಬ್ಬಕಾಲಗತೆ ಧಮ್ಮೆ**  
**ಸಬ್ಬೇ ಸಮ್ಮಾ ಸಯಂ ಮುನೀ**

**ಸಬ್ಬಾಕಾರೇನ ಬುಜ್ಝಿತ್ವಾ**
**ಏಕೋ ಸಬ್ಬನ್ನುತಂ ಗತೋ.**

ಮುನಿಯು ಭೂತ ಭವಿಷ್ಯತ್ ವರ್ತಮಾನಗಳ ಎಲ್ಲ ಸಾಧ್ಯ ರೂಪಗಳ ಸಂಪೂರ್ಣ ಜ್ಞಾನವನ್ನು ತಾನೇ ಕಂಡುಕೊಂಡವನು. ಆತನೊಬ್ಬನೇ ಸರ್ವಜ್ಞ.

5. **ವಿಪಸ್ಸನಾದಿ ವಿಜ್ಜಾಹಿ**
**ಸೀಲಾದಿ ಚರಣೇಹಿ ಚ**
**ಸುಸಮಿದ್ದೇಹಿ ಸಂಪನ್ನೊ**
**ಗಗನಾಭೇಹಿ ನಾಯಕೊ.**

ವಿಪಸ್ಸನಾದಿ ವಿದ್ಯೆಗಳನ್ನು, ಶೀಲಗಳನ್ನು ಮೈಗೂಡಿಸಿಕೊಂಡಿರುವ ಬುದ್ಧ ಅಸಮಾನ ಸಾಧನೆಗಳನ್ನು ಮಾಡಿ ವಿಶಾಲ ಆಕಾಶದಂತೆ ಇರುವ ಮಹಾನಾಯಕ.

6. **ಸಮ್ಮಾಗತೋ ಸುಭಂ ಠಾನಂ**
**ಅಮೋಪವಚನೋ ಚ ಸೊ.**
**ತಿವಿಧಸ್ಸಾಪಿ ಲೊಕಸ್ಸ**
**ನಾತಾ ನಿರವಸೇಸತೊ.**

ಸಮ್ಮಾಗತನಾಗಿ ಶುಭ ಸ್ಥಾನವನ್ನು ಪಡೆದ ಬುದ್ಧ ಸತ್ಯದ ಪ್ರತಿರೂಪ. ಅವರ ಮಾತುಗಳು ಅಮೋಘ. ಮೂರು ಲೋಕಗಳಲ್ಲೂ ಇವರೇ ಸರ್ವಜ್ಞರು.

7. **ಅನೇಕೇಹಿ ಗುಣೋಗೇಹಿ**
**ಸಬ್ಬಸತ್ತುತ್ತಮೋ ಅಹು**
**ಅನೇಕೇಹಿ ಉಪಾಯೇಹಿ**
**ನರದಮ್ಮೆ ದಮೆಸಿ ಚ.**

ಅನೇಕ ಗುಣಗಳ ಗಣಿಯೇ ಆಗಿ, ಎಲ್ಲರಿಗೂ ಅವನ್ನು ಹಂಚಿ, ಯಾರೆಲ್ಲರನ್ನು ಮಣಿಸಬೇಕೊ ಅವರನ್ನು ಮಣಿಸಿದರು.

8. **ಏಕೋಸಬ್ಬಸ್ಸ ಲೋಕಸ್ಸ**
**ಸಬ್ಬಮತ್ಥಾನುಸಾಸಕೊ**
**ಭಾಗ್ಯ-ಇಸ್ಸಾರಿಯಾದಿನಂ**
**ಗುಣಾನಂ ಪರಮೊ ನಿಧಿ.**

ಉತ್ತಮ ಸಾಧನೆಯ ಕಡೆ ಕೊಂಡೊಯ್ಯುವ ಶ್ರೇಷ್ಠ ಮಾರ್ಗದರ್ಶಿ ಈತನೊಬ್ಬನೇ ಈ ಲೋಕದೊಳೆಲ್ಲ. ಎಲ್ಲ ಉತ್ತಮೋತ್ತಮ ಗುಣಗಳ, ಘನಶಕ್ತಿಗಳ, ಭಾಗ್ಯಗಳ ಕಾರಂಜಿ ಇವರು.





9. **ಪಜಸ್ಸಸಬ್ಬಧಮ್ಮೇಸು**
**ಕರುಣಾ ಸಬ್ಬಜಂತುಸು**
**ಅತ್ತತ್ಥಾನಂ ಪರತ್ಥಾನಂ**
**ಸಾಧಿಕಾ ಗುಣಜೆತ್ಥಿಕಾ**

ಎಲ್ಲ ವಿಷಯ ಹಾಗು ವಸ್ತುಗಳ ಬಗ್ಗೆ ಪರಿಪೂರ್ಣ ಜ್ಞಾನ ಹೊಂದಿ, ಎಲ್ಲ ಜೀವಿಗಳ ಮೇಲೂ ಅಪಾರ ಅನುಕಂಪವಿಟ್ಟುಕೊಂಡು ಶ್ರೇಷ್ಠವಾದುದನ್ನು ಸಾಧಿಸಿ ತನಗೂ ಒಳಿತು ಮಾಡಿಕೊಂಡು ಇತರರಿಗೂ ಶುಭವನ್ನುಂಟು ಮಾಡಿದರು.

10. **ದಯಾಯ ಪಾರಮಿ ಚಿತ್ವಾ**
**ಪಜ್ಞಾಯತ್ತಾನ ಮುದ್ಧರಿ**
**ಉದ್ಧರಿ ಸಬ್ಬಧಮ್ಮೇಚ**
**ದಯಾಯನ್ನೇಚ ಮುದ್ಧರಿ**

ದಯಾಪೂರಿತನಾಗಿ ಪಾರಮಿಗಳನ್ನು ಸಾಧಿಸಿ, ಪ್ರಜ್ಞೆಯ ಮೇರು ಶಿಖರವನ್ನೇರಿದರು. ಹೀಗೆ ಎಲ್ಲ ಜ್ಞಾನವನ್ನು ತನ್ನದಾಗಿಸಿಕೊಂಡು ದಯಾಪೂರಿತನಾಗಿಯೇ ಎಲ್ಲ ಜೀವಿಗಳನ್ನು ಮುಕ್ತಿಗೊಳಿಸಿದರು.

11. **ದಿಸ್ಸಮಾನೊಪಿ ತಾವಸ್ಸಾ**
**ರೂಪಕಾಯೊ ಅಚಿಂತಿಯೊ**
**ಅಸಾದಾರನ ಜಾಣದ್ಧೆ**
**ಧಮ್ಮಕಾಯೆ ಕಥಾವ ಕಾತಿ** ?

ಇವರ ಭೌತಿಕ ಶರೀರ ಎಲ್ಲರಿಗೂ ಕಾಣುವಂತಿದ್ದಾಗ್ಯೂ ಅಸಮಾನವೂ ಊಹೆಗೆ ನಿಲುಕದಿರುವಂತಹುದು. ಹೀಗಿರುವಾಗಿ ಅವರ ಧಮ್ಮಕಾಯದ ಬಗ್ಗೆ ಏನು ಹೇಳುವುದು? ಅದು ನಿಜವಾಗಿಯೂ ಅದ್ಭುತ ಮತ್ತು ವರ್ಣನಾತೀತ.

## ಮೆತ್ತಾ ಭಾವನಾ

### ವಿಶ್ವಮೈತ್ರಿ ಬೆಳೆಸಿಕೊಳ್ಳುವುದು

1. **ಅತ್ತುಪ್ಪಮಾಯ ಸಬ್ಬೇಸಂ**
**ಸತ್ತಾನಂ ಸುಖಕಾಮತಂ**
**ಪಸ್ಸಿತ್ವಾ ಕಮತೊ ಮೆತ್ತಂ**
**ಸಬ್ಬಸತ್ತೇಸು ಭಾವಯೆ**

ತಾನೇ ಸುಖಿಯಾಗಿದ್ದು ಬೇರೆ ಎಲ್ಲ ಜೀವಿಗಳೂ ಸುಖಿಯಾಗಿರುವಂತೆ ಬಯಸಲಿ. ಅವರೆಲ್ಲ ಉನ್ನತೋನ್ನತವಾಗಿ ಸುಖಿಯಾಗುತ್ತಿರುವುದನ್ನು ಕಂಡು ಒಬ್ಬನು ವಿಶ್ವಮೈತ್ರಿಯನ್ನು ಬಯಸಿ ಎಲ್ಲರು ಸುಖಿಯಾಗಿರುವಂತಾಗಲಿ.

2. **ಸುಖೀ ಭಾವೆಯ್ಯಂ ನಿದ್ದುಖ್ಖೋ**
**ಅಹಂ ನಿಚ್ಚಂ ಅಹಂ ವಿಯ**
**ಹಿತಾ ಚ ಮೆ ಸುಖೀ ಹೊಂತು**
**ಮಜ್ಝಹಟ್ಠಾ ಚಥಾ ವೆರಿನೊ**

ನಾನು ದುಃಖದಿಂದ ಬಿಡುಗಡೆಯಾಗಿ ಸುಖಿಯಾಗಿರಲು ಹೇಗೆ ಆಶಿಸುತ್ತೇನೋ, ಹಾಗೆಯೇ ಎಲ್ಲರೂ ಅಂದರೆ ಪ್ರೀತಿಸುವವರು, ದ್ವೇಷಿಸುವವರು, ತಟಸ್ಥರೂ – ಇವರೆಲ್ಲರೂ ಸುಖಿಯಾಗಿರಲಿ.

3. **ಇಮಾಂಹಿ ಗಾಮಖ್ಖೇತ್ತಾಮ್ಹಿ**
**ಸತ್ತಾ ಹೊನ್ತು ಸುಖೀ ಸದಾ**
**ತಥೋ ಪರನ್ನಾ ರಜ್ಜೇಸು**
**ಚಕ್ಕವಾಲೆಸು ಜನ್ತುನೊ**

ನಮ್ಮ ಗ್ರಾಮದಲ್ಲಿರುವ ಎಲ್ಲರೂ, ಅದರ ಸುತ್ತಮುತ್ತಲಿರುವವರು, ಜಿಲ್ಲೆ, ದೇಶದಲ್ಲಿರುವ ಎಲ್ಲರು ಅಷ್ಟೇ ಏಕೆ, ಚಕ್ರವಾಳದಲ್ಲಿರುವ ಎಲ್ಲ ಜೀವಿಗಳು ಸುಖದಿಂದ ಇರಲಿ.

4. **ಸಮಂತಾ ಚಕ್ಕ ವಾಲೆಸು**
**ಸತ್ತಾನಂತೇಸು ಪಾಣಿನೊ**
**ಸುಖಿನೊ ಪುಗ್ಗಲಾ ಭೂತಾ**
**ಅತಾಭಾವಗತಾ ಸಿಯುಂ**

ಈ ಚಕ್ರವಾಳದಲ್ಲಿರುವ ಎಲ್ಲ ಅಸಂಖ್ಯ ಜೀವಿಗಳು, ತಮ್ಮದೇ ಅಸ್ತಿತ್ವದಿಂದ ಇರುವ ಎಲ್ಲ ಭೂತಗಳು – ಎಲ್ಲ ಜೀವಿಗಳೂ ಸಂತೋಷದಿಂದ ಇರಲಿ.

5. **ತಥಾ ಇತ್ಥಿ ಪುಮಾ ಚೆವ**
**ಅರಿಯಾ ಅನಾರಿಯಾ ಪಿ ಚ**
**ದೇವಾ ನರಾ ಅಪಾಯಟ್ಠಾ**
**ತಥಾ ದಸ ದಿಸಾಸು ಚಾ ತಿ**

ಅದೇ ರೀತಿಯಲ್ಲಿ ಎಲ್ಲ ಹೆಣ್ಣು ಗಂಡುಗಳು, ಆರ್ಯರು–ಅನಾರ್ಯರು, ದೇವತೆಗಳು ಮತ್ತು ಮನುಷ್ಯರು, ಕೆಳಗಿನ ಲೋಕದ ನಿವಾಸಿಗಳು – ಇವರೆಲ್ಲರೂ ಎಂದಿಗೂ ಸುಖವಾಗಿರಲಿ.

– ೦ – ೦ –





## ಅಸುಭಾ ಸಞ್ಞಾ – ಮಲಿನತೆಗಳ ಗ್ರಹಿಕೆ

1. **ಅವಿಞ್ಞಾಣ ಸುಭನಿಭಂ**
**ಸವಿಞ್ಞಾಣ ಸುಭಂ ಇಮಂ**
**ಕಾಯಂ ಅಸುಭತೊ ಪಸ್ಸಂ**
**ಅಸುಭಂ ಭಾವಯೆ ಯತಿ**

ಹೇಗೆ ಒಬ್ಬನು ಆಕರ್ಷ ಸಂಗತಿಯೊಂದರಲ್ಲಿನ ಮಾಲಿನ್ಯವನ್ನು ಗ್ರಹಿಸುತ್ತಾನೋ, ಹಾಗೆಯೇ ಯಾವೆಲ್ಲ ಇಂದ್ರಿಯಗಳಿಂದೊಡಗೂಡಿದ ಸುಂದರ ಜೀವಿಗಳಲ್ಲಿ ಮಲಿನತೆ ಇರುವುದನ್ನು ಗಮನಿಸಬೇಕು. ದೇಹವೇ ಮಾಲಿನ್ಯದ ಗೂಡೆಂದು ಅರಿತು ಅದರಲ್ಲಿನ ಮಲಿನತೆಗಳನ್ನು ಗ್ರಹಿಸುತ್ತಾ ಹೋಗಬೇಕು.

2. **ವಣ್ಣ–ಸಂಠಾನ–ಗಂಧೇಹಿ**
**ಆಸಯೋಕಾಸತೊ ತಥಾ**
**ಪಟಿಕ್ಕುಲಾನಿ ಕಾಯೆ ಮೆ**
**ಕುಣಪಾನಿ ದ್ವಿಸೋಳಸ**

ಮೂವತ್ತೆರಡು ಭಾಗಗಳಿಂದ ಕೂಡಿದ ಈ ಶರೀರ ಮಲಿನತೆಗಳಿಂದಾಗಿಯೇ ಕೊಳೆತು ಹೋಗುವಂಥದ್ದು. ಹೀಗೆ ಒಬ್ಬನು ಈ ದೇಹದಲ್ಲಿನ ಅಶುಭ ಸಂಗತಿಗಳನ್ನು ಅವುಗಳ ಬಣ್ಣ, ರೂಪ, ವಾಸನೆ, ಇರುವ ಜಾಗಗಳಿಂದ ಗ್ರಹಿಸಬೇಕು.

3. **ಪತಿತಂಹಾಪಿ ಕುಣಪಾ**
**ಜೆಗುಚ್ಚಂ ಕಾಯನಿಸ್ಸಿತಂ**
**ಆಧಾರೊ ಹಿ ಸುಚಿ ತಸ್ಸ**
**ಕಾಯೊ ತು ಕುಣಪೆ ಠ್ಠಿತಂ**

ಮಲಿನಗಳು ಹೆಣಗಳಿರುವ ಸ್ಮಶಾನಕ್ಕಿಂತಲೂ ಅಸಹ್ಯಕರವಾದುವು. ಅಲ್ಲಿ ನೆಲ ಸಹಜವಾಗಿ ಶುದ್ಧವಾಗಿದ್ದರೆ, ಈ ದೇಹ ನಿರಂತರವಾಗಿ ನಾರುತ್ತಲೇ ಇದ್ದು, ಅದರೊಳಗೆ ಶುದ್ಧವಾವುದೂ ಇಲ್ಲ.

4. **ಮಿಳ್ಹೆ ಕಿಮಿ ವ ಕಾಯೊ ಯಂ**
**ಅಸುಚಿಮ್ಹಿ ಸಮುಟ್ಠಿತೊ**
**ಅಂತೊ ಅಸುಚಿ ಸಂಪುನ್ಣೊ**
**ಪುಣ್ಣ ವಚ್ಚಕುತಿ ವಿಯ**

ನಿತ್ಯ ನಶಿಸಿಹೋಗುವ ಈ ಶರೀರವನ್ನು ಶುಚಿ ಮಾಡುವುದು ಯಾವ ಹೋಲಿಕೆಗೆ ಬರುತ್ತದೆಂದರೆ ಚರಂಡಿಯೊಳಗಿರುವ ಅಸಂಖ್ಯ ಸೊಳ್ಳೆಗಳಂತೆ. ಈ ದೇಹ ಮಲದ ಗುಂಡಿಯಂತೆ.

5. **ಅಸುಚಿ ಸಂದತೆ ನಿಚ್ಚಂ**
**ಯಥಾ ಮೆದಕಥಾಲಿಕಾ**
**ನಾನಾ ಕಿಮಿ ಕುಲಾವಾಸೊ**
**ಪಕ್ಕಾ ಚಂದಾನಿಕಾ ವಿಯಾ**

ಯಾವಾಗಲು ಅಶುಚಿ ಹೊರಹೋಗುತ್ತಿರುವ ಈ ದೇಹ ಹೇಗೆಂದರೆ ಕಾವಲಿಯಿಂದ ಹರಿದುಹೋಗುವ ಕೊಬ್ಬು ಇರುವಂತೆ. ಹೇಗೆ ಹಳ್ಳಿಯೊಂದರ ಕೆರೆ ನಾರುತ್ತಿರುವಂತೆ ಈ ದೇಹವು ನಾನಾ ಹುಳಗಳ ಆಗರ.

6. **ಗಂಡಭೂತೋ ರೋಗಭೂತೋ**
**ವಣಭೂತೋ ಸಮುಸ್ಸಯೋ**
**ಅತಿಕಿಚ್ಚೋತಿ ಜೆಗುಚ್ಛೋ**
**ಪಭಿನ್ನ ಕುನಪೂಪಮೊ' ತಿ**

ಈ ದೇಹವೇ ಎಲ್ಲ ಖಾಯಿಲೆಗಳ ಸಂಪನ್ಮೂಲವಾಗಿದ್ದು, ಬೊಕ್ಕೆ ವ್ರಣಗಳ ಚೀಲವಾಗಿದೆ. ಉಪಚರಿಸಲು ಹೇಸಿಗೆಯಾಗುವ, ಆ ದೆಸೆಯಿಂದ ಹಿಮ್ಮೆಟ್ಟುವ ಈ ದೇಹ ಕೊಳೆತು ನಾರುವ ಹೆಣದಂತೆ.

## ಮರಣಾನುಸ್ಸತಿ
## ಮರಣದ ಬಗ್ಗೆ ಸ್ಮರಣೆ

1. **ಪವಾತ-ದೀಪ ತುಲ್ಯಾಯ**
**ಸಾಯುಸಂತತಿಯಾಕ್ಖಯಂ**
**ಪರೂಪಮಾಯ ಸಂಪಸ್ಸಂ**
**ಭಾವಯೆ ಮರಣಾಸ್ಸತಿಂ**

ಬದುಕು ಗಾಳಿಯಿಂದ ನಂದಿಹೋಗುವ ದೀಪದಂತೆ. ಯಾವಾಗ ಚೈತನ್ಯವು ನಿಂತು ಹೋಗುತ್ತದೋ ಬದುಕೂ ನಿಂತು ಹೋಗುತ್ತದೆ. ಬೇರೆಯವರು ಸಾಯುತ್ತಿರುವುದನ್ನು ನೋಡಿ, ತಾನೂ ಸಾಯುವವನೇ ಎಂಬುದನ್ನು ಧ್ಯಾನಿಸಿ ಅರಿಯಬೇಕು.

2. **ಮಹಾಸಂಪತ್ತಿ - ಸಂಪತ್ತಾ**
**ಯಥಾ ಸತ್ತಾ ಮತಾ ಇಧಾ**
**ತಥಾ ಆಹಂ ಮರಿಸ್ಸಾಮಿ**
**ಮರಣಂ ಮಮ ಹೆಸ್ಸತಿ**

ಈ ಜಗತ್ತಿನಲ್ಲಿ ಮಹಾ ಮಹಾ ಸಂಪತ್ತುಳ್ಳವರೂ ಸತ್ತರು. ಹಾಗೆಯೇ ನಾನೂ ಸಾಯಬೇಕಾಗುತ್ತದೆ. ಮರಣವು ನನ್ನನ್ನು ಬಿಡುವುದಿಲ್ಲ.





3. **ಉಪ್ಪತ್ತಿಯಾ ಸಹೆವೇದಂ**
**ಮರಣಂ ಆಗಾತಂ ಸದಾ**
**ಮರಣತ್ಥಾಯ ಓಕಾಸಂ**
**ವಧಕೊ ವಿಯ ಏಸತಿ**

ಕೊಲೆಗಾರನೊಬ್ಬ ತನ್ನ ಬೇಟೆಯನ್ನು ಹೊಂಚು ಹಾಕುತ್ತಿದ್ದು ಅವಕಾಶ ಸಿಕ್ಕ ತಕ್ಷಣವೇ ಹೇಗೆ ಸಾಯಿಸುತ್ತಾನೋ, ಹಾಗೆಯೇ ಹುಟ್ಟಿನೊಂದಿಗೆಯೇ ಸಾವು ತಳಕು ಹಾಕಿಕೊಂಡು ಬಂದಿದೆ.

4. **ಈಸಕಂ ಅನಿವಟ್ಟಾನತಂ**
**ಸತತಂ ಗಮನುಸ್ಸಕಂ**
**ಜೀವಿತಂ ಉದಯಾ ಅತ್ಥಂ**
**ಸುರಿಯೊ ವಿಯ ಧಾವತಿ**

ಹೇಗೆ ಸೂರ್ಯನು ಅಸ್ತಂಗತನಾಗಲು ಹುಟ್ಟುತ್ತಾನೋ, ಹಾಗೆಯೇ ನಿಲ್ಲದೆಯೇ ನಿರಂತರ ಚಲನಶೀಲವಾದ ಸಾವು ಹಿಂಬಾಲಿಸಿ ಬದುಕನ್ನು ಮುಗಿಸುತ್ತದೆ !

5. **ವಿಜ್ಜುಬುಬ್ಬುಲಾ ಉಸ್ಸಾವ**
**ಜಲರಾಜಿ ಪರಿಕ್ಖಯಂ**
**ಘಾತಕೋವ ರಿಪೂತಸ್ಸಾ**
**ಸಬತ್ಥಾಪಿ ಅವಾರಿಯೊ**

ನೀರ ಗುಳ್ಳೆಗಳು ಒಡೆಯುತ್ತವೆ. ಮಂಜಿನ ಹನಿಗಳು ಒಣಗುತ್ತವೆ. ನೀರ ಮೇಲೆ ಎಳೆದ ಗೆರೆ ಮಾಯವಾಗುತ್ತದೆ. ಬೇಟೆ ಶತ್ರುವಿಗೆ ಬಲಿಯಾಗುತ್ತದೆ. ಹೀಗೆ ನಿಜವಾಗಿಯು ಸಾವು ಅನಿವಾರ್ಯ.

6. **ಸೂಯಸತ್ಥಾಮ - ಪುನ್ನಿದ್ಧೀ**
**ಬುದ್ಧೀವುದ್ಧಿ ಜಿನದ್ವಯಂ**
**ಘಾತೆಸಿ ಮರಣಂ ಖಿಪ್ಪಂ**
**ಕಾತು ಮಾದಿಸಕೆ ಕಥಾ**

ಸ್ವಯಂ ಜಾಗ್ರತರು, ಸಮ್ಮಾಸಂಬುದ್ಧರು, ಪಚ್ಚೇಕ ಬುದ್ಧರು, ಮಹಾಜ್ಞಾನವನ್ನು, ಅಪಾರ ಪುಣ್ಯವನ್ನು, ಪವಾಡಶಕ್ತಿಗಳನ್ನು, ಪ್ರಸಿದ್ಧಿಯನ್ನು ಅಸಂಖ್ಯ ಅನುಯಾಯಿಗಳನ್ನು ಪಡೆದೆಲ್ಲ ಮಹಾ ಪುರುಷರು ಸತ್ತುಹೋದರು. ಹೀಗಿರಲು ನನ್ನಂತಹವರ ಮಾತೇಕೆ?

7. **ಪಚ್ಚಯಾನಾಂಚ ವೇಕಲ್ಯಾ**
**ಬಾಹಿರಜ್ಝತ್ತುಪದ್ದವಾ**
**ಮರಾಮೋರಂ ನಿಮೆಸಾಪಿ**
**ಮರಮಾನೊ ಆನುಖ್ಖಾನನ್ತಿ**

ಹಲವಾರು ಕಾರಣಗಳು, ನಿಯಮಗಳಿಗೆ ಒಳಗಾಗಿ–ಅವು ಬಾಹ್ಯವಾಗಿರಲಿ ಅಥವಾ ಆಂತರಿಕವಾಗಿರಲಿ. ಜೀವ ಹಿಡಿದುಕೊಂಡಿರುವ ನಾವು ಅಥವಾ ನಾನಾ ವ್ಯಾಕುಲಗಳಿಗೆ ಸಿಲುಕಿರುವ ನಾವು ನಿಮಿಷಾರ್ಧದಲ್ಲಿ ಸಾಯುತ್ತೇವೆ. ನಿಜವಾಗಿಯೂ ನಾವು ಪ್ರತಿಕ್ಷಣವೂ ಸಾಯುತ್ತಿದ್ದೇವೆ.

– ೦ – ೦ –

## ಅಭಿಣ್ಹಂ ಪಚ್ಚವೇಖ್ಖಿತಬ್ಬಂ – ವಾಸ್ತವತೆಗಳ ನಿರಂತರ ಸ್ಮರಣೆ

**ಪಂಚಿಮಾನಿ ಭಿಕ್ಕವೆ ಥಾನಾನಿ ಅಭಿನ್ಹಂ ಪಚ್ಚವೇಖ್ಖೀತಬ್ಬಾನಿ ಇತ್ಥಿಯಾ ವಾ ಪುರಿಸೇನ ವಾ ಗಹಟ್ಠೇನ ವಾ ಪಬ್ಬಜಿತೇನ ವಾ. ಕತಮಾನಿ ಪಂಚ?**

ಭಿಕ್ಖುಗಳೇ, ಈ ಐದು ವಾಸ್ತವತೆಗಳನ್ನು ಹೆಂಗಸರು, ಗಂಡಸರು, ಕುಟುಂಬಿಗಳು, ಸಂನ್ಯಾಸಿಗಳು ಮೇಲಿಂದ ಮೇಲೆ ಧ್ಯಾನಿಸುತ್ತಿರಬೇಕು. ಯಾವುವು ಈ ಐದು ?

**ಜರಾಧಮ್ಮೋಮ್ಹಿ; ಜರಂ ಅನತಿತೊ'ತಿ ಅಭಿಜಂ ಪಚ್ಚವೇಕ್ಖ ತಬ್ಬಂ**

"ನಾನು ಮುದಿತನಕ್ಕೆ ಒಳಗಾಗುವವನು. ನಾನು ಮುದಿತನದಿಂದ ಹೊರತಲ್ಲ". ಹೀಗೆ ಇದನ್ನು ಪದೇ ಪದೇ ಧ್ಯಾನಿಸುತ್ತಿರಬೇಕು.

**ಬ್ಯಾಧಿಧಮ್ಮೋವ್ಹಿ; ಬ್ಯಾಧಿಂ ಅನತಿತೊ'ತಿ ಅಭಿನ್ಹಂಪಚ್ಚವೇಕ್ಖಿತಬ್ಬಂ**

"ನಾನು ರೋಗ ಧರ್ಮಕ್ಕೆ ಒಳಪಟ್ಟವನು, ರೋಗ ಧರ್ಮವನ್ನು ಮೀರಿ ಹೋಗಲಾರೆ". ಇದನ್ನು ಪದೇ ಪದೇ ಧ್ಯಾನಿಸುತ್ತಿರಬೇಕು.

**ಮರಣಧಮೋಮ್ಹಿ 'ಮರಣಂ ಅನತಿತೊ'ತಿ ಅಭಿನ್ಹಂ ಪಚ್ಚವೇಕ್ಖಿತಬ್ಬಂ**

"ನಾನು ಮರಣ ಧರ್ಮಕ್ಕೆ ಒಳಪಟ್ಟವನು, ನಾನು ಮರಣವನ್ನು ಮೀರಿ ಹೋಗಲಾರೆ". ಇದನ್ನು ಪದೇ ಪದೇ ಧ್ಯಾನಿಸುತ್ತಿರಬೇಕು.

**ಸಬ್ಬೇಹಿ ಮೆ ಪಿಯೇಹಿ ಮನಾಪೇಹಿ**
**ನಾನಾಭಾವೋ ವಿನಾಭಾವೊ ತಿ**
**ಅಭಿಣ್ಹಂ ಪಚ್ಚವೇಕ್ಖಿ ತಬ್ಬಂ**

"ಬದಲಾವಣೆಗಳು ಅನಿವಾರ್ಯವಾಗಿ ಬರುತ್ತವೆ. ಪ್ರೀತಿಪಾತ್ರರಾದವರು, ಬೇಕಾದವರು ದೂರವಾಗುತ್ತಾರೆ". ಇದನ್ನು ಪದೇ ಪದೇ ಧ್ಯಾನಿಸುತ್ತಿರಬೇಕು.

**ಕಮ್ಮಸ್ಸಕೊಮ್ಹಿ ಕಮ್ಮದಾಯಾದೊ**
**ಕಮ್ಮಯೋನಿ ಕಮ್ಮಬಂಧು ಕಮ್ಮಾಪಟಿಸರಣೊ**
**ಯಂ ಕಮ್ಮಂ ಕರಿಸ್ಸಾಮಿ ಕಲ್ಯಾನಂ ವಾ**
**ಪಾಪಕಂ ವಾ ತಸ್ಸ ದಾಯಾದೊ ಭವಿಸ್ಸಾಮೀತಿ**
**ಅಭಿಣ್ಹಂ ಪಚ್ಚವೇಕ್ಖಿತಬ್ಬಂ.**





"ನನ್ನ ಕರ್ಮಕ್ಕೆ ನಾನೇ ಒಡೆಯ, ನನ್ನ ಕರ್ಮಕ್ಕೆ ನಾವೇ ವಾರಸುದಾರ. ಕರ್ಮ ಗರ್ಭದಿಂದಲೇ ನಾನು ಹೊರಬಂದವನು. ನನ್ನ ಕರ್ಮವೇ ಬಂಧುಬಳಗ. ನನ್ನ ಕರ್ಮವೇ ನನಗೆ ರಕ್ಷಣೆ. ನಾನು ಯಾವುದೇ ಕರ್ಮ ಮಾಡಲಿ – ಅದು ಒಳ್ಳೆಯದಿರಲಿ, ಕೆಟ್ಟದಿರಲಿ, ಅವಕ್ಕೇ ನಾನೇ ವಾರಸುದಾರ". ಇದನ್ನು ಪದೇ ಪದೇ ಧ್ಯಾನಿಸುತ್ತಿರಬೇಕು.

**ಇಮಾನಿ ಖೊ, ಭಿಕ್ಖುವೇ, ಪನ್ಚ ಥಾನಾನಿ ಅಭಿನ್ಹಂ ಪಚ್ಚವೇಕ್ಖಿತಬ್ಬಂ ಇತ್ಥಿಯಾ ವಾ ಪುರಿಸೇನ ವಾ ಗಹಠ್ಠೇನ ವಾ ಪಬ್ಬಜಿತೆನ ವಾ.**

ಭಿಕ್ಖುಗಳೇ, ಇವೇ ಆ ಐದು ವಾಸ್ತವಗಳು. ಇವನ್ನು ಪ್ರತಿಯೊಬ್ಬರೂ ಹೆಂಗಸರು ಮತ್ತು ಗಂಡಸರು, ಗೃಹಸ್ಥರು ಸಂತರೂ, ಪದೇ ಪದೇ ಧ್ಯಾನಿಸುತ್ತಿರಬೇಕು.

– ೦ – ೦ –

## ಪ್ರಶ್ನೆಗಳು

1. ತ್ರಿರತ್ನಗಳ ಮೇಲೆ ಆಧಾರವಾಗಿರುವ ಬೌದ್ಧ ಭಕ್ತಿಯ ಬಗ್ಗೆ ಒಂದು ಪ್ರಬಂಧವನ್ನು ಬರೆಯಿರಿ.
2. ಭಕ್ತಿಪೂರ್ಣವಾದ ಈ ಧ್ಯಾನಗಳ ಮಹತ್ವವೇನು ? ಸಾಧಕನೊಬ್ಬನು ಬುದ್ಧ, ಧಮ್ಮ ಮತ್ತು ಸಂಘಗಳಲ್ಲಿನ ಗುಣಗಳನ್ನು ನಿರಂತರ ಸ್ಮರಣೆ ಮಾಡುವುದರಿಂದ ಏನಾಗುತ್ತದೆ? ಪ್ರತಿಯೊಂದು ಗುಣದ ಹಿಂದಿರುವ ಮಹತ್ವವನ್ನು ವಿವರಿಸಿ.
3. ತ್ರಿರತ್ನಗಳ ಬಗೆಗೆ ಇರುವ ಸಂಬಂಧಪಟ್ಟ ಗ್ರಂಥಭಾಗವನ್ನು ಉದ್ಧರಿಸಿ ಬರೆಯಿರಿ.
4. ನಾಲ್ಕು ರಕ್ಷಣಾ ಧ್ಯಾನಗಳ ಮೇಲೆ ಒಂದು ಪ್ರಬಂಧವನ್ನು ಬರೆಯಿರಿ :
   ಅ) ಬುದ್ಧನ ಉತ್ತಮೋತ್ತಮ ಗುಣಗಳು
   ಆ) ವಿಶ್ವಮೈತ್ರಿ
   ಇ) ಅಶುಭಗಳ ಗ್ರಹಿಕೆ
   ಈ) ಮರಣಾನುಸ್ಸತಿ
5. ಪ್ರತಿಯೊಂದು ಧ್ಯಾನದ ತಂತ್ರಭಾಗವನ್ನು ಸ್ಪಷ್ಟವಾಗಿ ಬರೆಯಿರಿ.
6. ನಿಮಗೆ ತಿಳಿದಿರುವ ರೀತಿಯಲ್ಲಿ ಈ ಧ್ಯಾನಗಳ ಉದ್ದೇಶವೇನು ? ನಿಮ್ಮ ಸಾಧನೆಯ ಹಿನ್ನೆಲೆಯಲ್ಲಿ ವಿವರಿಸಿ ಮತ್ತು ಅವು ಪಾರಮಾರ್ಥಿಕವಾಗಿ ಹೇಗೆ ರಕ್ಷಣೆಯನ್ನು ಒದಗಿಸುತ್ತವೆ?